ಶನಿವಾರ, ಮಾರ್ಚ್ 26, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸಾಯೋ ಆಟ**

ಮೈಸೂರಿನ ನಿರಂತರ ಫೌಂಡೇಷನ್ ಆಯೋಜಿಸಿರುವ ನಿರಂತರ ರಂಗ ಉತ್ಸವದಲ್ಲಿ ಶುಕ್ರವಾರ ದ.ರಾ.ಬೇಂದ್ರೆ ಅವರ 'ಸಾಯೋ ಆಟ' ನಾಟಕವನ್ನು ಕಲಾವಿದರು ಪ್ರದರ್ಶಿಸಿದರು



www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



**ಭೂಮಿಕಾ**
ಚಿಕ್ಕ ಮಕ್ಕಳಿಗೆ ಅಡುಗೆ ಕಲಿಸುವುದು ತಪ್ಪಲ್ಲ. ಆದರೆ ಈ ಕಲಿಕೆ ಮಕ್ಕಳ ವಯೋಮಾನಕ್ಕೆ ತಕ್ಕಂತೆ ಇರಬೇಕು. ಜೊತೆಗೆ ಸುರಕ್ಷತಾ ಕ್ರಮಗಳ ಅರಿವೂ ಇರಬೇಕು

**ಚರ್ಚೆ** ಶಾಲಾಪಠ್ಯದಲ್ಲಿ ಭಗವದ್ಗೀತೆ ಅಳವಡಿಸಲು ಹೊರಟ ಸರ್ಕಾರದ ಕ್ರಮ ಸರಿಯೇ? 11

ಚೀನಾದಲ್ಲಿ ಶಿಕ್ಷಣ: ಯುಜಿಸಿ ಸಲಹೆ 13

‘ಸ್ವಾಮೀಜಿಗಳು ತಲೆಗೆ ಬಟ್ಟೆ ಹಾಕಲ್ವಾ’ 6

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 57,362 ▼ | 17,153 ▼ | ₹53,580 (ಬೆಂಗಳೂರು) ▲ | ₹70,700 (ಬೆಂಗಳೂರು) ▲ | 76.24 ▲ |

## ರಂಗನಾಥ್ ಖಾತೆಗೆ ₹ 12 ಕೋಟಿ

ಬೆಂಗಳೂರು: ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ ಹುದ್ದೆಯಲ್ಲಿದ್ದ ಅವಧಿಯಲ್ಲಿ ಸರ್ಕಾರಿ ಜಮೀನುಗಳನ್ನು ಅಕ್ರಮವಾಗಿ ಪರಭಾರೆ ಮಾಡಿರುವ ಆರೋಪ ಎದುರಿಸುತ್ತಿರುವ ಕೆಎಎಸ್ ಅಧಿಕಾರಿ ಕೆ. ರಂಗನಾಥ್ ಮತ್ತು ಅವರ ಕುಟುಂಬದ ಸದಸ್ಯರ ಯಲಹಂಕ ಉಪನಗರದ ಅರುಣಾ ಸಹಕಾರ ಬ್ಯಾಂಕ್ ಖಾತೆಗಳಿಗೆ ಹಲವರಿಂದ ₹ 12 ಕೋಟಿಗೂ ಹೆಚ್ಚು ಜಮೆ ಆಗಿರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪತ್ತೆಮಾಡಿದೆ. 7

### ಒಳ ಪುಟ



ಸಜೀವ ದಹನ ಪ್ರಕರಣದ ತನಿಖೆ ಸಿಬಿಐಗೆ 8

### ಚಿನಕುರಳಿ

ಪ್ರಕಾಶ್ ಶೆಟ್ಟಿ




ಗಡಿಯುದ್ಧಕ್ಕೂ ಶಾಂತಿ ನೆಲೆಸದೇ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಯಾಗದು

# ಚೀನಾಕ್ಕೆ ಭಾರತ ಸ್ಪಷ್ಟ ನುಡಿ

ನವದೆಹಲಿ (ಪಿಟಿಐ): ಭಾರತ–ಚೀನಾದ ಗಡಿಯುದ್ಧಕ್ಕೂ ಶಾಂತಿ, ಸೌಹಾರ್ದದ ಪರಿಸ್ಥಿತಿ ನೆಲೆಸದೇ ಉಭಯ ದೇಶಗಳ ನಡುವೆ ದ್ವಿಪಕ್ಷೀಯ ಬಾಂಧವ್ಯ ಮತ್ತು ಮಾತುಕತೆ ಸಹಜ ಸ್ಥಿತಿಗೆ ಮರಳುವುದು ಸಾಧ್ಯವೇ ಇಲ್ಲ ಎಂದು ಭಾರತ ಪ್ರತಿಪಾದಿಸಿದೆ.

ಪೂರ್ವ ಲಡಾಖ್ ಒಳಗೊಂಡಂತೆ ಉಭಯ ದೇಶಗಳ ಗಡಿರೇಖೆಯುದ್ದಕ್ಕೂ ನಿಯೋಜಿಸಿದ್ದ, ಬಾಕಿ ಉಳಿದಿರುವ ಸೇನೆಯನ್ನು ಹಿಂಪಡೆಯುವ ಪ್ರಕ್ರಿಯೆಯನ್ನು ಚೀನಾ ಆದಷ್ಟು ಶೀಘ್ರ ಪೂರ್ಣಗೊಳಿಸಬೇಕು ಎಂದೂ ತನ್ನ ನಿಲುವನ್ನು ಪುನರುಚ್ಚರಿಸಿದೆ.

ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರ ಜೊತೆಗೆ ಶುಕ್ರವಾರ ಇಲ್ಲಿ ನಡೆದ ಮೂರು ಗಂಟೆಗಳ ಸುದೀರ್ಘ ಮಾತುಕತೆಯ ಸಂದರ್ಭದಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾರತದ ನಿಲುವನ್ನು ಸ್ಪಷ್ಟಪಡಿಸಿದರು.

ವಾಂಗ್ ಯಿ ಅವರ ಭೇಟಿ ಪೂರ್ವ ಯೋಜಿತವಾಗಿರಲಿಲ್ಲ. ಕಾಬೂಲ್‌ನಿಂದ ಗುರುವಾರ ಸಂಜೆ ನವದೆಹಲಿಗೆ ಆಗಮಿಸಿದ್ದರು. ಎರಡು ವರ್ಷದ ಹಿಂದೆ ನಡೆದಿದ್ದ ಸೇನಾ ತುಕಡಿಗಳ ಸಂಘರ್ಷದ ನಂತರ, ಚೀನಾದ ಉನ್ನತ ಪ್ರತಿನಿಧಿಯೊಬ್ಬರ ಪ್ರಥಮ ಭೇಟಿ ಇದಾಗಿತ್ತು.

ದ್ವಿಪಕ್ಷೀಯ ಮಾತುಕತೆ ಹಾಗೂ ಸೌಹಾರ್ದ ಸಂಬಂಧ ಬಲಪಡಿಸಲು ಉಭಯತ್ರರು ಬದ್ಧರಾಗಿದ್ದರೆ. ಸೇನಾ ತುಕಡಿ ಹಿಂಪಡೆಯುವ ಬಗ್ಗೆ ನಡೆದಿರುವ ಮಾತುಕತೆಗೆ ಪೂರ್ಣ ಬದ್ಧರಾಗಿರಬೇಕು ಎಂದು ಸಭೆಯ ನಂತರ ಜೈಶಂಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರೊಂದಿಗೆ ಸಚಿವ ಎಸ್.ಜೈಶಂಕರ್ –ಪಿಟಿಐ ಚಿತ್ರ

ಭಾರತ–ಚೀನಾ ಬಾಂಧವ್ಯ ಕುರಿತ ಪ್ರಸ್ತುತ ಈಗಿನ ಸ್ಥಿತಿಯನ್ನು ‘ಪ್ರಗತಿಯಲ್ಲಿದೆ’ ಎಂದು ಬಣ್ಣಿಸಿದ ಅವರು, 2020ರ ಏಪ್ರಿಲ್‌ನಲ್ಲಿ ಪೂರ್ವ ಲಡಾಖ್ ಗಡಿಯಲ್ಲಿ ಚೀನಾದ ಕ್ರಿಯೆಯಿಂದಾಗಿ ಉಭಯ ದೇಶಗಳ ನಡುವಿನ ಬಾಂಧವ್ಯವು ಹದಗೆಟ್ಟಿದೆ ಎಂದು ಹೇಳಿದರು.

ಉಭಯ ದೇಶಗಳ ನಡುವೆ ನಡೆದಿರುವ ಸೇನೆ ಮತ್ತು ರಾಜತಾಂತ್ರಿಕ ಹಂತದ ಸರಣಿ ಮಾತುಕತೆಯನ್ನು ಉಲ್ಲೇಖಿಸಿದ ಸಚಿವರು, ಮಾತುಕತೆ ನಂತರ ಗಡಿಯಿಂದ ಸೇನಾ ತುಕಡಿಗಳನ್ನು ಹಿಂಪಡೆಯುವುದರಲ್ಲಿ ಕೆಲ ಪ್ರಗತಿ ಕಾಣಿಸಿದೆ. ಸೇನೆ ಹಿಂಪಡೆಯುವುದು ಸೇರಿದಂತೆ ಒಟ್ಟು ಪ್ರಕ್ರಿಯೆಯನ್ನು ಚುರುಕುಗೊಳಿಸುವ ಕುರಿತೇ ವಾಂಗ್ ಯಿ ಜೊತೆಗೆ ಚರ್ಚೆ ನಡೆಯಿತು ಎಂದು ಹೇಳಿದರು.

8ನೇ ಪುಟ ನೋಡಿ

## ವಾಂಗ್ ಯಿ ಮೂರು ಅಂಶಗಳ ಸೂತ್ರ

ಬೀಜಿಂಗ್ (ಪಿಟಿಐ): ಭಾರತ–ಚೀನಾ ದ್ವಿಪಕ್ಷೀಯ ಒಪ್ಪಂದದಲ್ಲಿ ಅಭಿವೃದ್ಧಿ ಕುರಿತಂತೆ ‘ಸ್ಪಷ್ಟ ಗುರಿಯತ್ತ’ ಸಾಗಲು ಉಭಯ ದೇಶಗಳು ಗಮನ ಕೇಂದ್ರೀಕರಿಸಬೇಕು ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಶುಕ್ರವಾರ ಪ್ರತಿಪಾದಿಸಿದರು.

ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋವಲ್ ಜೊತೆಗೆ ಚರ್ಚೆ ನಡೆಸಿದ್ದ ಅವರು, ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಮೂರು ಅಂಶಗಳ ಸೂತ್ರ ಪ್ರಸ್ತಾಪಿಸಿದ್ದಾಗಿ ಹೇಳಿದರು.

ಮೊದಲಿಗೆ ಉಭಯ ರಾಷ್ಟ್ರಗಳು ದೀರ್ಘಾವಧಿಯ ದೃಷ್ಟಿಕೋನ ಹೊಂದಿರಬೇಕು. ಎರಡನೆಯದಾಗಿ, ಪರಸ್ಪರರ ಅಭಿವೃದ್ಧಿಯನ್ನು ಗುರುತಿಸಿ, ಇಬ್ಬರೂ ಗೆಲ್ಲುವ ಮನಸ್ಥಿತಿ ಹೊಂದಿರಬೇಕು. ಮೂರನೆಯದಾಗಿ ಸಹಕಾರ ಧೋರಣೆಯೊಂದಿಗೆ ಉಭಯ ದೇಶಗಳು ಬಹುಹಂತದ ಪ್ರಕ್ರಿಯೆಯಲ್ಲಿ ಭಾಗಿಯಾಗಬೇಕು ಎಂದು ಹೇಳಿದ್ದಾಗಿ ಸರ್ಕಾರದ ಸುದ್ದಿ ಸಂಸ್ಥೆ ಕ್ಸಿನ್‌ಹುಅ ವರದಿ ಮಾಡಿದೆ.

ಉಭಯ ದೇಶಗಳ ಬಾಂಧವ್ಯದಲ್ಲಿ ಗಡಿ ಕುರಿತ ತಮ್ಮ ಭಿನ್ನಾಭಿಪ್ರಾಯಗಳನ್ನು ಪ್ರತ್ಯೇಕವಾಗಿ ನೋಡಬೇಕು. ಭಾರತ–ಚೀನಾ ಒಪ್ಪಂದಗಳ ವಿಷಯದಲ್ಲಿ ಗುರಿ ಸಾಧನೆಗೆ ಬದ್ಧರಾಗಿರಬೇಕು ಎಂದರು.

## ಎಸ್ಸೆಸ್ಸೆಲ್ಸಿ ಪರೀಕ್ಷೆ: ಹಿಜಾಬ್‌ಗೆ ಅವಕಾಶ ಇಲ್ಲ

ಬೆಂಗಳೂರು: ಇದೇ 28ರಿಂದ ಆರಂಭವಾಗಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆ ವೇಳೆಯೂ ಹಿಜಾಬ್‌ಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಹೀಗಾಗಿ, ಹಿಜಾಬ್ ಧರಿಸಿ ಬರುವ ವಿದ್ಯಾರ್ಥಿನಿಯರಿಗೆ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ. 5

## ಎರಡನೇ ಅವಧಿಗೆ ಸಿ.ಎಂ: ಯೋಗಿ ಹೆಗ್ಗಳಿಕೆ

ಲಖನೌ: ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಭಾರಿ ಗೆಲುವಿನ ಕಡೆ ಮುನ್ನಡೆಸಿದ್ದ ಯೋಗಿ ಆದಿತ್ಯನಾಥ ಅವರು, ಎರಡನೇ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ಈ ಮೂಲಕ, ಎರಡನೇ ಅವಧಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾದರು. 8

## ಮುಂಬೈನಲ್ಲಿ ಐಪಿಎಲ್ ಉತ್ಸವ ಇಂದಿನಿಂದ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಹದಿನೈದನೇ ಆವೃತ್ತಿಯು ಶನಿವಾರ ಆರಂಭವಾಗಲಿದೆ.

ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರನ್ನರ್ಸ್ ಅಪ್ ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಚೆನ್ನೈ ತಂಡಕ್ಕೆ ರವೀಂದ್ರ ಜಡೇಜ ಮತ್ತು ಕೋಲ್ಕತ್ತಕ್ಕೆ ಶ್ರೇಯಸ್ ಅಯ್ಯರ್ ನಾಯಕರಾಗಿದ್ದಾರೆ.

ಈ ಸಲದ ಐಪಿಎಲ್‌ನಲ್ಲಿ ಎರಡು ಹೊಸ ತಂಡಗಳು ಸೇರ್ಪಡೆಯಾಗಿವೆ. ಅದರಿಂದಾಗಿ ಒಟ್ಟು ಹತ್ತು ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ಮುಂಬೈನಲ್ಲಿ ಮೂರು ಮತ್ತು ಪುಣೆಯಲ್ಲಿ ಒಂದು ಕ್ರೀಡಾಂಗಣದಲ್ಲಿ ಲೀಗ್ ಹಂತದ ಪಂದ್ಯಗಳು ನಡೆಯಲಿವೆ. ಮೇ 29ರಂದು ಫೈನಲ್ ಪಂದ್ಯ ಆಯೋಜನೆಗೊಳ್ಳುವುದು. 14






## ಮೇಲ್ಸೇತುವೆಗಳ ಸ್ಥಿತಿಗತಿ ಅಧ್ಯಯನ: ತಜ್ಞರ ತಂಡ ಕಳುಹಿಸಲು ಮನವಿ

ನವದೆಹಲಿ: ಕರ್ನಾಟಕ ಸೇರಿದಂತೆ ದೇಶದ ವಿವಿಧೆಡೆ ಇರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಮೇಲ್ಸೇತುವೆಗಳ ಸ್ಥಿತಿಗತಿಯ ಅಧ್ಯಯನಕ್ಕೆ ತಜ್ಞರ ತಂಡವನ್ನು ನೇಮಿಸುವಂತೆ ಬಿಜೆಪಿ ಸದಸ್ಯ ಕೆ.ಸಿ. ರಾಮಮೂರ್ತಿ ಕೇಂದ್ರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಮನವಿ ಮಾಡಿದರು.

ಶುಕ್ರವಾರ ರಾಜ್ಯಸಭೆಯಲ್ಲಿ ಶೂನ್ಯವೇಳೆ ವಿಷಯ ಪ್ರಸ್ತಾಪಿಸಿದ ಅವರು, ದೇಶದ ವಿವಿಧೆಡೆ ಮೇಲ್ಸೇತುವೆಗಳ ಕುಸಿತದಿಂದ ಜೀವಹಾನಿಗೂ, ಆರ್ಥಿಕ ಹಿನ್ನಡೆಗೂ ಕಾರಣವಾಗುತ್ತಿದ್ದು, ಸುರಕ್ಷತೆಗೆ ಗಮನ ಹರಿಸಬೇಕು ಎಂದು ಕೋರಿದರು.

12 ವರ್ಷಗಳ ಹಿಂದಷ್ಟೇ ನಿರ್ಮಿಸಲಾಗಿರುವ ಬೆಂಗಳೂರಿನ ನಾಗಸಂದ್ರ–ಗೊರಗುಂಟೆಪಾಳ್ಯ ಮೇಲ್ಸೇತುವೆಯ 8ನೇ ಮೈಲಿಯಲ್ಲಿರುವ 102 ಮತ್ತು 103ನೇ ಕಂಬಗಳ ನಡುವೆ ತಪಾಸಣೆ ನಡೆಸಿದ ವೇಳೆ ಕಂಬಗಳಿಗೆ ಬಳಸಿರುವ ಕಬ್ಬಿಣ ತುಕ್ಕು ಹಿಡಿದಿದ್ದು ಪತ್ತೆಯಾಗಿದೆ. ಮೇಲ್ಸೇತುವೆಯ ಸುರಕ್ಷತೆಗೆ ಪೂರಕವಾಗಿರುವ ಕೇಬಲ್‌ಗಳ ಸ್ಥಿತಿ ಹದಗೆಟ್ಟಿರುವ ಕಾರಣದಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಭಾರಿ ವಾಹನಗಳ ಸಂಚಾರವನ್ನು ಸ್ಥಗಿತಗೊಳಿಸಿದೆ ಎಂದರು.

ರಾಜಧಾನಿ ಬೆಂಗಳೂರಿನಿಂದ ರಾಜ್ಯದ ಇತರ ಜಿಲ್ಲೆಗಳಿಗೆ ಮಾತ್ರವಲ್ಲದೆ, ಬೇರೆಬೇರೆ ರಾಜ್ಯಗಳ ನಡುವೆ ಸಂಪರ್ಕ ಕಲ್ಪಿಸುತ್ತ ಆರ್ಥಿಕ ಜೀವನಾಡಿಯಾಗಿರುವ ಈ ಮೇಲ್ಸೇತುವೆಯ ಮೇಲೆ ತೆರಳಲು ವಾಹನ ಸವಾರರು ಭಯ ಪಡುವಂತಾಗಿದೆ ಎಂದು ಅವರು ಹೇಳಿದರು.



ಭಾರಿ ವಾಹನಗಳ ಓಡಾಟ ಯಥೇಚ್ಛ • ದಂಡ ವಿಧಿಸಿದರೂ ಸುತ್ತಾಟ • ಪಾಲನೆಯಾಗದ ಆದೇಶ

# ರಶೀದಿ ಬಳಸಿ ಅಕ್ರಮವಾಗಿ ಸಂಚಾರ

• ಸಂತೋಷ ಜಿಗಳಿಕೊಪ್ಪ



ನಾಯಂಡಹಳ್ಳಿ ಮೇಲ್ಸೇತುವೆಯಲ್ಲಿ ಶುಕ್ರವಾರ ಸರಕು ತುಂಬಿದ್ದ ಲಾರಿಯೊಂದು ಸಂಚರಿಸಿತು ಚಿತ್ರ: ರಂಜು ಪಿ

**ಬೆಂಗಳೂರು:** ನಗರದಲ್ಲಿ ನಿರ್ಬಂಧಿತ ಅವಧಿಯಲ್ಲಿ ಭಾರಿ ವಾಹನಗಳ 'ಅಕ್ರಮ' ಸಂಚಾರ ಮುಂದುವರಿದಿದ್ದು, ದಟ್ಟಣೆ ಅವಧಿಯಲ್ಲಿ (ಪೀಕ್ ಅವರ್) ಪ್ರಮುಖ ರಸ್ತೆಯಲ್ಲಿ ಸಂಚರಿಸಲು ಜನಸಾಮಾನ್ಯರು ಭಯಪಡುವಂತಾಗಿದೆ. ನಿತ್ಯವೂ ಆದೇಶ ಉಲ್ಲಂಘಿಸುತ್ತಿರುವ ಭಾರಿ ವಾಹನಗಳ ಚಾಲಕರು, ಸಂಚಾರ ಪೊಲೀಸರು ವಿಧಿಸುವ ದಂಡಕ್ಕೂ ಕ್ಯಾರೆ ಎನ್ನುತ್ತಿಲ್ಲ.

ಭಾರಿ ವಾಹನಗಳ ಕೆಲ ಚಾಲಕರ ಅಜಾಗರೂಕತೆ ಹಾಗೂ ಅತೀ ವೇಗದ ಚಾಲನೆಯಿಂದ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ಸಂಚಾರ ಪೊಲೀಸರು ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದಾರೆ. ಭಾರಿ ವಾಹನಗಳ ಸಂಚಾರಕ್ಕೆ ಅವಧಿ ನಿಗದಿಪಡಿಸಿ 2015ರಲ್ಲಿ ಆದೇಶ ಹೊರಡಿಸಿದ್ದು, ಇದರ ಪಾಲನೆ ಮಾತ್ರ ಆಗುತ್ತಿಲ್ಲವೆಂಬ ಆರೋಪಗಳು ಕೇಳಿಬರುತ್ತಿವೆ.

ಬಳ್ಳಾರಿ ರಸ್ತೆ, ತುಮಕೂರು ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಮಾಗಡಿ ರಸ್ತೆ, ಸರ್ಜಾಪುರ ರಸ್ತೆ, ಕೋಲಾರ ರಸ್ತೆ ಹಾಗೂ ಇತರೆ ಗಡಿ ರಸ್ತೆಗಳ ಮೂಲಕ ಭಾರಿ ವಾಹನಗಳು ಬೆಂಗಳೂರು ಪ್ರವೇಶಿಸುತ್ತಿವೆ. ಜೊತೆಗೆ, ನಗರದಿಂದಲೂ ಗಡಿ ರಸ್ತೆಗಳ ಮೂಲಕ ವಾಹನಗಳು ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಸಂಚರಿಸುತ್ತಿವೆ.

ಕಟ್ಟಡ ನಿರ್ಮಾಣ ಸಾಮಗ್ರಿ, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸಿಲಿಂಡರ್, ಕೃಷಿ ಉತ್ಪನ್ನಗಳು, ವೈದ್ಯಕೀಯ ಸಲಕರಣೆಗಳು, ಹೊಸ ವಾಹನಗಳು, ಆಟೊಮೊಬೈಲ್ ಸಾಮಗ್ರಿಗಳು, ಬಟ್ಟೆ ಸೇರಿದಂತೆ ಎಲ್ಲ

ಪ್ರಯಾಣ ಪ್ರಯಾಸ

ಬಗೆಯ ವಸ್ತುಗಳನ್ನು ದೊಡ್ಡ ಗಾತ್ರದ ಭಾರಿ ವಾಹನಗಳಲ್ಲಿ ಸಾಗಿಸಲಾಗುತ್ತಿದೆ.

ನಗರದಲ್ಲಿ ದಟ್ಟಣೆ ಇರುವ ಸಂದರ್ಭದಲ್ಲಿ ಭಾರಿ ವಾಹನಗಳು ಬಂದರೆ, ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತದೆ. ಭಾರಿ ವಾಹನಗಳ ಚಾಲಕರು ಸ್ವಲ್ಪ ನಿರ್ಲಕ್ಷ್ಯ ವಹಿಸಿದರೂ ಅಪಘಾತಗಳು ಸಂಭವಿಸಿ, ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಾರೆ. ಇದನ್ನು ಮನಗಂಡಿದ್ದ ಹೈಕೋರ್ಟ್, ಭಾರಿ ವಾಹನಗಳ ಸಂಚಾರಕ್ಕೆ ನಿಯಮ ರೂಪಿಸುವಂತೆ ಸೂಚನೆ ನೀಡಿತ್ತು.

ಪೊಲೀಸ್ ಕಮಿಷನರ್ ಆಗಿದ್ದ ಎಂ.ಎನ್. ರೆಡ್ಡಿ ಅವರು 2014ರಲ್ಲಿ ನಿಯಮಾವಳಿ ರೂಪಿಸಿ ಭಾರಿ ವಾಹನಗಳ ಸಂಚಾರಕ್ಕೆ ಲಗಾಮು ವಿಧಿಸಿದ್ದರು. ವಾಹನಗಳ ಮಾಲೀಕರಿಂದ ದೂರುಗಳು ಬಂದಿದ್ದರಿಂದ, 2015ರಲ್ಲಿ ಕೆಲ ತಿದ್ದುಪಡಿ ಮೂಲಕ ಹೊಸ ಆದೇಶ ಜಾರಿಗೆ ತರಲಾಗಿದೆ. ಆದರೆ, ಇದರಲ್ಲಿರುವ ನಿಯಮಗಳನ್ನು ಯಾರೊಬ್ಬರೂ ಪಾಲಿಸುತ್ತಿಲ್ಲವೆಂದು ಜನರು ದೂರುತ್ತಿದ್ದಾರೆ.

**ದಂಡ ಕಟ್ಟಿ ಸಂಚಾರ:** 'ಭಾರಿ ವಾಹನಗಳನ್ನು ಗಡಿಭಾಗದಲ್ಲಿ ತಪಾಸಣೆ ನಡೆಸುವ ಜವಾಬ್ದಾರಿಯನ್ನು ಆಯಾ ಸಂಚಾರ ಠಾಣೆ ಪೊಲೀಸರಿಗೆ ವಹಿಸಲಾಗಿದೆ. ಠಾಣೆ ಸರಹದ್ದಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ, ಎಲ್ಲ ವಾಹನಗಳನ್ನು ತಡೆದು ತಪಾಸಣೆ ಮಾಡುತ್ತಿದ್ದಾರೆ' ಎಂದು ಸಂಚಾರ ವಿಭಾಗದ ಇನ್‌ಸ್ಪೆಕ್ಟರೊಬ್ಬರು ಹೇಳಿದರು.

'2015ರ ಆದೇಶ ಉಲ್ಲಂಘಿಸುವ ಭಾರಿ ವಾಹನಗಳಿಗೆ ದಂಡ ವಿಧಿಸಲಾಗುತ್ತಿದೆ. ಅಂಥ ವಾಹನಗಳನ್ನು ನಿರ್ಬಂಧಿತ ಅವಧಿ ಮುಗಿಯುವವರೆಗೂ ರಸ್ತೆ ಬದಿ ನಿಲ್ಲಿಸಲಾಗುತ್ತಿದೆ. ಆದರೆ, ಕೆಲ ಚಾಲಕರು ತಪ್ಪಿಸಿಕೊಂಡು ನಗರದೊಳಗೆ ಪ್ರವೇಶಿಸುತ್ತಿದ್ದಾರೆ. ಮಾರ್ಗಮಧ್ಯೆ ಯಾರಾದರೂ ಪೊಲೀಸರು ತಡೆದರೆ, ದಂಡದ ರಶೀದಿ ತೋರಿಸಿ ಪಾರಾಗುತ್ತಿದ್ದಾರೆ. ಇಂಥವರ ವಿರುದ್ಧ ಕಠಿಣ ಕ್ರಮಕ್ಕೆ ಚಿಂತನೆ ನಡೆದಿದೆ' ಎಂದೂ ತಿಳಿಸಿದರು.

**ತಪ್ಪೊಪ್ಪಿಗೆ ನೀಡಿ ದಂಡ ಪಾವತಿ:** 'ಕೆಲವೆಡೆ ಭಾರಿ ವಾಹನಗಳನ್ನು ಜಪ್ತಿ ಸಹ ಮಾಡಲಾಗಿದೆ. ಅದರ ಚಾಲಕರು ಹಾಗೂ ಮಾಲೀಕರು, ನ್ಯಾಯಾಲಯದಲ್ಲಿ ತಪ್ಪೊಪ್ಪಿಕೊಂಡು ದಂಡ ಪಾವತಿಸಿ ವಾಹನ ಬಿಡಿಸಿಕೊಂಡು ಹೋಗುತ್ತಿದ್ದಾರೆ. ಆ ಪೈಕಿ ಬಹುತೇಕರು, ಪದೇ ಪದೇ ನಿಯಮ ಉಲ್ಲಂಘಿಸಿ ಸಿಕ್ಕಿಬೀಳುತ್ತಿದ್ದಾರೆ. ಅಂಥವರ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ಮಾಹಿತಿ ನೀಡಲಾಗುತ್ತಿದೆ' ಎಂದು ಸಂಚಾರ ವಿಭಾಗದ ಸಬ್ ಇನ್‌ಸ್ಪೆಕ್ಟರೊಬ್ಬರು ಹೇಳಿದರು.

'ಸಂಚಾರ ವಿಭಾಗದಲ್ಲಿ ಅಗತ್ಯಕ್ಕೆ ತಕ್ಕಷ್ಟು ಸಿಬ್ಬಂದಿ ಇಲ್ಲ. ಗಣ್ಯ ವ್ಯಕ್ತಿಗಳ ಸಂಚಾರ, ಸಿಗ್ನಲ್ ಹಾಗೂ ಇತರೆ ಕೆಲಸಕ್ಕೂ ಸಿಬ್ಬಂದಿ ಸಾಲುವುದಿಲ್ಲ. ಮೋಟಾರು ವಾಹನಗಳ ಕಾಯ್ದೆ ಜಾರಿ ಜವಾಬ್ದಾರಿಯೂ ನಮ್ಮ ಮೇಲಿದೆ. ಹೀಗಾಗಿ, ಭಾರಿ ವಾಹನಗಳ ಸಂಚಾರದ ಮೇಲೆ ಹೆಚ್ಚು ನಿಗಾ ವಹಿಸಲು ಆಗುತ್ತಿಲ್ಲ' ಎಂದೂ ಅವರು ತಿಳಿಸಿದರು.

### ವಿಧಾನಸೌಧ ಸುತ್ತಮುತ್ತ ನಿರ್ಬಂಧ


ವಿಧಾನಸೌಧ ಸುತ್ತಮುತ್ತಲಿನ 2 ಕಿ.ಮೀ ವ್ಯಾಪ್ತಿ ಪ್ರದೇಶದಲ್ಲಿ ಮೂರೂವರೆ ಟನ್‌ಗಿಂತ ಹೆಚ್ಚು ಭಾರ ಹೊರುವ ಭಾರಿ ವಾಹನಗಳ ಸಂಚಾರವನ್ನು 24 ಗಂಟೆಯೂ ನಿರ್ಬಂಧಿಸಲಾಗಿದೆ. ಇಷ್ಟಾದರೂ ಕೆಲ ಚಾಲಕರು, ಭಾರಿ ವಾಹನಗಳನ್ನು ಚಲಾಯಿಸಿಕೊಂಡು ಬರುತ್ತಿದ್ದಾರೆ. ಅಂಥವರಿಗೆ ಪೊಲೀಸರು ದಂಡ ವಿಧಿಸುತ್ತಿದ್ದಾರೆ.

### 'ಹಣ ಕೊಟ್ಟು ಪಾರಾಗುವ ಚಾಲಕರು'

'ಕೆಲ ಠಾಣೆಗಳ ಸಿಬ್ಬಂದಿ, ಭಾರಿ ವಾಹನಗಳ ಚಾಲಕರಿಂದ ಹಣ ಪಡೆದು ಬಿಟ್ಟು ಕಳುಹಿಸುತ್ತಿದ್ದಾರೆ. ಇಂಥ ಸಿಬ್ಬಂದಿಯಿಂದ ಇತರೆ ಪೊಲೀಸರಿಗೂ ಕೆಟ್ಟ ಹೆಸರು ಬರುತ್ತಿದೆ. ಚಾಲಕರೂ ನಿರ್ಬಂಧಿತ ಅವಧಿಯಲ್ಲಿ ರಾಜಾರೋಷವಾಗಿ ನಗರದಲ್ಲಿ ಸುತ್ತಾಡುತ್ತಿದ್ದಾರೆ' ಎಂದು ಪೊಲೀಸ್ ಸಿಬ್ಬಂದಿಯೊಬ್ಬರು ಹೇಳಿದರು.

**ಭಾರಿ ವಾಹನಗಳು**
ಮಲ್ಟಿ ಆಕ್ಸಲ್, ಆರ್ಟಿಕ್ಯುಲೇಟೆಡ್, ಟ್ರಕ್ ಹಾಗೂ ಲಾರಿಗಳು

**ಲಘು ವಾಹನಗಳು**
ನಾಲ್ಕು ಚಕ್ರ ಹಾಗೂ ಮೂರು ಚಕ್ರ ಗೂಡ್ಸ್ ವಾಹನಗಳು




## ನಾಳೆ ವಿಶ್ವ ರಂಗಭೂಮಿ ದಿನ

**ಬೆಂಗಳೂರು:** ಕರ್ನಾಟಕ ನಾಟಕ ಅಕಾಡೆಮಿ, ರಂಗಚಂದಿರ ಟ್ರಸ್ಟ್ ಹಾಗೂ ಶ್ರೀರಾಂಪುರ ಟೆಲಿಕಾಂ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ 'ವಿಶ್ವ ರಂಗಭೂಮಿ ದಿನ' ಕಾರ್ಯಕ್ರಮವನ್ನು ಮಾ.27ರಂದು ಸಂಜೆ 5 ಗಂಟೆಗೆ ಟೆಲಿಕಾಂ ಬಡಾವಣೆಯ ಬಯಲು ರಂಗ-ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ನಾಟಕ ಅಕಾಡೆಮಿ ಅಧ್ಯಕ್ಷ ಭೀಮಸೇನ ಅವರು ಉದ್ಘಾಟಿಸಲಿದ್ದು, ಕಲಾ ನಿರ್ದೇಶಕ ಶಶಿಧರ್ ಅಡಪ ಹಾಗೂ ರಂಗ ಸಂಘಟಕ ಸಿ.ಕೆ.ಗುಂಡಣ್ಣ ಅವರಿಗೆ ರಂಗ ಗೌರವ ನಡೆಯಲಿದೆ.

ಕಾರ್ಯಕ್ರಮದ ಅಂಗವಾಗಿ ರಂಗ ತಜ್ಞರಿಗೆ ಗೌರವ, ರಂಗಗೀತೆಗಳು ಹಾಗೂ ರಂಗಚಂದಿರ ತಂಡದಿಂದ 'ಬಿದ್ದೂರಿನ ಬಿಗ್ ಬೆನ್' ಹಾಸ್ಯ ನಾಟಕ ಪ್ರದರ್ಶನವೂ ಇರಲಿದೆ.

ಕಾರ್ಮಿಕರಿಂದ ಎರಡು ದಿನ ಕೆಲಸ ಸ್ಥಗಿತ: ಜೆಸಿಟಿಯು

## 28ರಿಂದ ಸಾರ್ವತ್ರಿಕ ಮುಷ್ಕರ



ವರಲಕ್ಷ್ಮಿ

**ಬೆಂಗಳೂರು:** ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿರೋಧಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು (ಜೆಸಿಟಿಯು) ಮಾ.28 ಮತ್ತು 29ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ. ಕಾರ್ಮಿಕರು ಕಾರ್ಖಾನೆಗಳಲ್ಲಿ ಎರಡೂ ದಿನ ಕೆಲಸ ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಐಟಿಯು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ,'28ರಂದು ತಾಲ್ಲೂಕು ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ಪ್ರತಿಭಟನೆ ಹಾಗೂ ಗ್ರಾಮೀಣ ಬಂದ್ ಇರಲಿದೆ. ಬ್ಯಾಂಕ್, ವಿಮೆ, ಆದಾಯ ತೆರಿಗೆ, ಅಂಚೆ ಸೇರಿದಂತೆ ಎಲ್ಲ ರೀತಿಯ ಕೇಂದ್ರ ಸೇವೆಗಳು ಎರಡೂ ದಿನ ಸ್ಥಗಿತಗೊಳ್ಳಲಿವೆ. ಮುಷ್ಕರದ ಭಾಗವಾಗಿ 29ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಿದ್ದೇವೆ' ಎಂದರು.

'ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಿ, ವಿದ್ಯುತ್ ಮಸೂದೆ (ತಿದ್ದುಪಡಿ) ಹಿಂಪಡೆಯಬೇಕು. ಯಾವುದೇ ಕಾರಣಕ್ಕೂ ಖಾಸಗೀಕರಣಕ್ಕೆ ಅವಕಾಶ ನೀಡಬಾರದು. ರೈತರಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸಬೇಕು. ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದು ಮಾಡಿ, ಹಳೆ ಪಿಂಚಣಿ ವ್ಯವಸ್ಥೆ ಮತ್ತೆ ಜಾರಿ ಜಾರಿ ಮಾಡಬೇಕು' ಎಂದು ಒತ್ತಾಯಿಸಿದರು.

ಟಿಯುಸಿಸಿ ಸಂಘಟನೆ ಅಧ್ಯಕ್ಷ ಶಿವಶಂಕರ್,'ನರೇಗಾಗೆ ಹೆಚ್ಚಿನ ಅನುದಾನ ನೀಡಿ, ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೆ ವಿಸ್ತರಿಸಬೇಕು. ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರಿಗೆ ಜೀವನಯೋಗ್ಯ ವೇತನ ಮತ್ತು ಭದ್ರತೆ ಒದಗಿಸಬೇಕು. ಆಶಾ ಕಾರ್ಯಕರ್ತರಿಗೆ ಕನಿಷ್ಠ ವೇತನ ನೀಡಬೇಕು. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರ ಅಬಕಾರಿ ಸುಂಕ ಕಡಿಮೆ ಮಾಡಬೇಕು. ಬೆಲೆ ಏರಿಕೆ ನಿಯಂತ್ರಣಕ್ಕಾಗಿ ಅಗತ್ಯ ಪರಿಹಾರ ಕ್ರಮಗಳನ್ನು ಘೋಷಿಸಬೇಕು' ಎಂದರು.

## 27ರಂದು 'ಹೊನಲು' ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋಣನಕುಂಟೆಯ 'ಈ ಹೊತ್ತಿಗೆ' ಟ್ರಸ್ಟ್ ಇದೇ 27ರಂದು 'ಹೊನಲು' ಕಾರ್ಯಕ್ರಮ ಹಮ್ಮಿಕೊಂಡಿದೆ. 2021 ಹಾಗೂ 2022ನೇ ಸಾಲಿನ ಕಥೆ ಹಾಗೂ ಕಾವ್ಯ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

'ಇತ್ತೀಚೆಗೆ ನಿಧನರಾಗಿದ್ದ ಚೆನ್ನವೀರ ಕಣವಿ ಹಾಗೂ ಚಂದ್ರಶೇಖರ ಪಾಟೀಲ (ಚಂಪಾ) ಅವರಿಗೆ ನುಡಿನಮನ ಸಲ್ಲಿಸುವ ಸಲುವಾಗಿ 'ಚೆನ್ನವೀರ ಕಾವ್ಯ ಕಣವಿ' ಹೆಸರಿನ ಗೋಷ್ಠಿ ಹಾಗೂ ಚಂಪಾ ಅವರ 'ಅಪ್ಪ' ನಾಟಕ ವಾಚನ ಹಮ್ಮಿಕೊಳ್ಳಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಆರ್ಯ ಈಡಿಗ ನಿಗಮ ಸ್ಥಾಪನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಈಡಿಗ ಸಮುದಾಯ ಅಭಿವೃದ್ಧಿಗಾಗಿ ಸರ್ಕಾರ 'ಆರ್ಯ ಈಡಿಗ ಅಭಿವೃದ್ಧಿ ನಿಗಮ' ಸ್ಥಾಪಿಸಬೇಕು' ಎಂದು ರಾಜ್ಯ ನಾಮಧಾರಿ ಯುವ ವೇದಿಕೆಯ ಅಧ್ಯಕ್ಷ ಗಜಾನನ ಕೆ.ನಾಯ್ಕ ಆಗ್ರಹಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,'ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹುಸಂಖ್ಯೆಯಲ್ಲಿರುವ ನಾಮಧಾರಿ ಜಾತಿಯವರನ್ನು ಹಿಂದುಳಿದ ವರ್ಗಗಳ ಈಡಿಗ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆ. ರಾಜ್ಯದಲ್ಲಿ ಈಡಿಗ ಸಮುದಾಯದ 60 ಲಕ್ಷಕ್ಕೂ ಹೆಚ್ಚು ಮಂದಿ ಇದ್ದಾರೆ. ಆದರೆ, ಸಮುದಾಯದ ಬಹುತೇಕರು ಇನ್ನೂ ಬಡತನ ರೇಖೆಗಿಂತ ಕೆಳಗೆ ಇದ್ದಾರೆ' ಎಂದರು.

'ಸಮುದಾಯಕ್ಕೆ 2ಎ ಮೀಸಲಾತಿ ನೀಡಲಾಗಿದೆ. ಆದರೆ, 2ಎ ವರ್ಗದಲ್ಲಿ ಸಾಕಷ್ಟು ಜಾತಿಗಳಿದ್ದು, ಸೂಕ್ತ ಪ್ರಮಾಣದಲ್ಲಿ ಮೀಸಲಾತಿ ಸಿಗುತ್ತಿಲ್ಲ. ಅನೇಕರು ಜೀವನ ನಿರ್ವಹಣೆಗೂ ಪರದಾಡುತ್ತಿದ್ದಾರೆ. ಸ್ವಂತ ಮನೆ ಇಲ್ಲ ಕುಟುಂಬಗಳು ಸಾಕಷ್ಟಿವೆ' ಎಂದರು.

'ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿರುವ ಈಡಿಗ ಸಮುದಾಯಕ್ಕೆ ನಿಗಮ ಸ್ಥಾಪಿಸಿ, ಸಮರ್ಪಕ ಅನುದಾನ ನೀಡಬೇಕು. ಇದರಿಂದ ಸಮುದಾಯ ಅಭಿವೃದ್ಧಿ ಹೊಂದಲಿದೆ' ಎಂದರು.

### ಕರ್ನಾಟಕ ಚಿತ್ರಕಲಾ ಪರಿಷತ್ತು ಆಯೋಜನೆ ● 4 ಲಕ್ಷ ಮಂದಿ ಭೇಟಿ ನಿರೀಕ್ಷೆ

# ಕುಮಾರಕೃಪಾ ರಸ್ತೆಯಲ್ಲಿ 'ಚಿತ್ರಸಂತೆ' ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾವಿರಾರು ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವ ಹಾಗೂ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೆ ಅವಕಾಶ ಒದಗಿಸುವ 'ಚಿತ್ರಸಂತೆ'ಯನ್ನು ಕರ್ನಾಟಕ ಚಿತ್ರಕಲಾ ಪರಿಷತ್ತು ಇದೇ ಭಾನುವಾರ ಕುಮಾರಕೃಪಾ ರಸ್ತೆಯಲ್ಲಿ ಹಮ್ಮಿಕೊಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಳಿಗ್ಗೆ 10.30ಕ್ಕೆ ಚಿತ್ರಸಂತೆಗೆ ಚಾಲನೆ ನೀಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು 'ಕಲಾ ಪ್ರದರ್ಶನ' ಉದ್ಘಾಟಿಸಲಿದ್ದಾರೆ. ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಅಮೃತ ಮಹೋತ್ಸವದ ಅಂಗವಾಗಿ ಈ ಬಾರಿ ಚಿತ್ರಸಂತೆಯನ್ನು ಸ್ವಾತಂತ್ರ್ಯ ಯೋಧರಿಗೆ ಸಮರ್ಪಿಸಲಾಗಿದೆ. ಪರಿಷತ್ತಿನ 12 ಗ್ಯಾಲರಿಗಳಲ್ಲಿ ಆಯ್ದ ಕಲಾವಿದರ ಕಲಾಕೃತಿಗಳು 10 ದಿನಗಳವರೆಗೆ ಪ್ರದರ್ಶನ ಕಾಣಲಿವೆ. ಚಿತ್ರಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಚಿತ್ರಸಂತೆ ನಡೆಯುವ ಸ್ಥಳದಲ್ಲಿ ಕಲಾ ಪ್ರದರ್ಶನ ನೀಡಲಿದ್ದಾರೆ.

ಕೋವಿಡ್ ಕಾರಣ ಕಳೆದ ವರ್ಷ ನಡೆದ 18ನೇ ಚಿತ್ರಸಂತೆ ಆನ್‌ಲೈನ್‌ಗೆ ಸೀಮಿತವಾಗಿತ್ತು. ಈ ವರ್ಷ ಜನವರಿ ಮೊದಲ ವಾರ ನಡೆಯಬೇಕಾದ 19ನೇ ಚಿತ್ರಸಂತೆಯು ಕೋವಿಡ್ ಮೂರನೇ ಅಲೆಯ ಕಾರಣ ಮುಂದೂಡಲ್ಪಟ್ಟಿತ್ತು. ಕೋವಿಡ್ ನಿಯಂತ್ರಣದಿಂದಾಗಿ ಭೌತಿಕವಾಗಿ ಆಯೋಜಿಸಲಾಗುತ್ತಿದೆ.

**4 ಲಕ್ಷ ಜನ ನಿರೀಕ್ಷೆ:** 'ಚಿತ್ರಸಂತೆಗೆ 4 ಲಕ್ಷ ಜನ ಭೇಟಿ ನೀಡುವ ನಿರೀಕ್ಷೆ ಇದೆ. ಮೈಸೂರು ಸಾಂಪ್ರದಾಯಿಕ, ರಾಜಸ್ಥಾನಿ, ಮಧುಬನಿ ಸೇರಿದಂತೆ ವಿವಿಧ ಶೈಲಿಯ ಕಲಾಕೃತಿಗಳು ಪ್ರದರ್ಶನ ಕಾಣಲಿವೆ. 17ನೇ ಚಿತ್ರಸಂತೆಯಲ್ಲಿ ₹ 3 ಕೋಟಿಗೂ ಅಧಿಕ ಮೊತ್ತದ ಕಲಾಕೃತಿಗಳು ಮಾರಾಟವಾಗಿದ್ದವು. ಆನ್‌ಲೈನ್ ವೇದಿಕೆಯಲ್ಲಿ ನಡೆದ 18ನೇ ಚಿತ್ರಸಂತೆಯನ್ನು 11.39 ಲಕ್ಷ ಮಂದಿ ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಿಸಿದ್ದರು. 1.58 ಲಕ್ಷ ಜನ ವೆಬ್‌ಪೋರ್ಟಲ್‌ಗೆ ಭೇಟಿ ನೀಡಿದ್ದರು' ಎಂದು ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದ್ದಾರೆ.

'ಹಿರಿಯ ಕಲಾವಿದರು ಹಾಗೂ ಅಂಗವಿಕಲರಿಗೆ ಪರಿಷತ್ತಿನ ಆವರಣದಲ್ಲಿಯೇ ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಆವರಣದ ಒಳಗಡೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಎರಡು ಎಟಿಎಂ ಯಂತ್ರಗಳು ಹಾಗೂ ಹೊರಗಡೆ ಕೆನರಾ ಬ್ಯಾಂಕ್‌ನ ಒಂದು ಸಂಚಾರಿ ಎಟಿಎಂ ಇರಲಿದೆ. ಈ ಚಿತ್ರಸಂತೆಯಲ್ಲಿ ₹ 100 ರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಕಲಾಕೃತಿಗಳು ಇರಲಿವೆ. ಕಲಾವಿದರಿಂದ ನೇರವಾಗಿ ಕಲಾಕೃತಿಗಳನ್ನು ಖರೀದಿಸಬಹುದು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

**1,500 ಕಲಾವಿದರು ಭಾಗಿ:** ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿದಂತೆ ವಿವಿಧ ರಾಜ್ಯಗಳ ಕಲಾವಿದರು ಪಾಲ್ಗೊಳ್ಳುತ್ತಿದ್ದಾರೆ.



ಕರ್ನಾಟಕ ಚಿತ್ರಕಲಾ ಪರಿಷತ್ತು

### ವಾಹನಗಳ ಸಂಚಾರ ನಿಷೇಧ

ಚಿತ್ರಸಂತೆ ಪ್ರಯುಕ್ತ ಭಾನುವಾರ ಬೆಳಿಗ್ಗೆ 6ರಿಂದ ರಾತ್ರಿ 9 ಗಂಟೆಯವರೆಗೆ ಕುಮಾರಕೃಪಾ ರಸ್ತೆಯಲ್ಲಿ ಎಲ್ಲ ಮಾದರಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ವಿಂಡ್ಸರ್ ಮ್ಯಾನರ್ ವೃತ್ತದಿಂದ ಎಂ.ಬಿ. ಆರಾಧ್ಯ ವೃತ್ತದವರೆಗೆ ಎರಡು ಕಡೆ ವಾಹನ ಸಂಚಾರಕ್ಕೆ ಅವಕಾಶ ಇರುವುದಿಲ್ಲ. ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಪರ್ಯಾಯ ಮಾರ್ಗ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗುತ್ತದೆ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

ಮೌರ್ಯ ವೃತ್ತ ಮತ್ತು ಆನಂದರಾವ್ ವೃತ್ತದ ಕಡೆಯಿಂದ ಬರುವ ವಾಹನಗಳು ರೇಸ್ ವ್ಯೂ ಜಂಕ್ಷನ್ ಮೂಲಕ ಕುಮಾರಕೃಪಾ ರಸ್ತೆಗೆ ಬರುವುದನ್ನು ನಿರ್ಬಂಧಿಸಲಾಗುತ್ತದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳು ಟ್ರಿಲೈಟ್ ಜಂಕ್ಷನ್-ಬಸವೇಶ್ವರ ವೃತ್ತ-ಹಳೆ ಹೈಗೌಂಡ್ಸ್ ಜಂಕ್ಷನ್--ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಸಾಗಲು ಅನುವು ಮಾಡಿಕೊಡಲಾಗುತ್ತದೆ ಎಂದು ಹೇಳಿದ್ದಾರೆ.

ಟಿ.ಚೌಡಯ್ಯ ರಸ್ತೆಯಲ್ಲಿ ಪಿಜಿ ಹಳ್ಳಿ ಕಡೆಯಿಂದ ಬರುವ ವಾಹನಗಳು ವಿಂಡ್ಸರ್ ಮ್ಯಾನರ್ ವೃತ್ತದ ಬಳಿ ಬಲ ತಿರುವು ಪಡೆದು, ಕುಮಾರ ಕೃಪಾ ರಸ್ತೆಗೆ ಪ್ರವೇಶಿಸದಂತೆ ನಿರ್ಬಂಧಿಸಲಾಗುತ್ತದೆ. ಟಿ.ಚೌಡಯ್ಯ ರಸ್ತೆಯಲ್ಲಿ ನೇರವಾಗಿ ಸಾಗಿ, ಹಳೆ ಹೈಗ್ರೌಂಡ್ಸ್ ಜಂಕ್ಷನ್, ಎಲ್.ಆರ್.ಡಿ.ಇ, ಬಸವೇಶ್ವರ ವೃತ್ತ–ರೇಸ್ ಕೋರ್ಸ್ ರಸ್ತೆ ಮೂಲಕ ಮುಂದೆ ಸಾಗಲು ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಟಿ.ಚೌಡಯ್ಯ ರಸ್ತೆಯಲ್ಲಿ ಹೈಗೌಂಡ್ ಜಂಕ್ಷನ್‌ನಿಂದ ಬರುವ ವಾಹನಗಳು ವಿಂಡ್ಸರ್ ಮ್ಯಾನರ್ ವೃತ್ತದ ಬಳಿ ಎಡ ತಿರುವು ಪಡೆದು, ಕುಮಾರ ಕೃಪಾ ರಸ್ತೆಗೆ ಬರಲು ಅವಕಾಶ ಇರುವುದಿಲ್ಲ. ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳು ನೇರವಾಗಿ ಸಾಗಿ, ಆರ್‌ಪಿ ರಸ್ತೆ ಮೂಲಕ ಮುಂದೆ ಸಾಗಲು ಅನುವು ಮಾಡಿಕೊಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

### ವಾಹನಗಳಿಗೆ ನಿಲುಗಡೆ ವ್ಯವಸ್ಥೆ

- **ರೈಲ್ವೆ ಪ್ಯಾರಲಲ್ ರಸ್ತೆ:** ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ
- **ಕ್ರೆಸೆಂಟ್ ರಸ್ತೆ:** ಗುರುರಾಜ ಕಲ್ಯಾಣ ಮಂಟಪದಿಂದ ಜನಾರ್ದನ್ ಹೋಟೆಲ್‌ವರೆಗೆ ರಸ್ತೆಯ ಪಶ್ಚಿಮ ಭಾಗದಲ್ಲಿ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ
- **ಕೆ.ಕೆ. ರಸ್ತೆ:** ಕ್ರೆಸೆಂಟ್ ರಸ್ತೆ ಜಂಕ್ಷನ್‌ನಿಂದ ಜ್ಯುಡಿಷಿಯಲ್ ಅಕಾಡೆಮಿ ಕ್ರಾಸ್ ವರೆಗೆ ಕ್ರೆಸೆಂಟ್ ರಸ್ತೆಯ ಪಶ್ಚಿಮ ಭಾಗದಲ್ಲಿ ದ್ವಿಚಕ್ರ ವಾಹನಗಳ ನಿಲುಗಡೆಗೆ ಅವಕಾಶ
- **ರೇಸ್‌ಕೋರ್ಸ್ ರಸ್ತೆ:** ಟ್ರಿಲೈಟ್ ಜಂಕ್ಷನ್‌ನಿಂದ ಮೌರ್ಯ ಜಂಕ್ಷನ್‌ವರೆಗೆ ರಸ್ತೆಯ ಪೂರ್ವ ಭಾಗದಲ್ಲಿ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ
- ಬಿ.ಡಿ.ಎ ಆವರಣ ನಿಲುಗಡೆ ಸ್ಥಳದಲ್ಲಿ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ



ಡಾ.ಎ.ರವೀಂದ್ರ (ಮಧ್ಯ) ಮಾತನಾಡಿದರು. (ಎಡದಿಂದ) ಸಾರ್ವಜನಿಕ ಆಡಳಿತ ಕೇಂದ್ರದ (ಪಿಎಸಿ) ನಿರ್ದೇಶಕ ಜಿ.ಗುರುಚರಣ್, ಸ್ಕಿಲ್ ಕೌನ್ಸಿಲ್ ಫಾರ್ ಗ್ರೀನ್ ಜಾಬ್ಸ್‌ನ ಉಪಾಧ್ಯಕ್ಷೆ ಸಂಗೀತ ಪಾತ್ರಾ, ಕೌಶಲ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಸೆಲ್ವಕುಮಾರ್ ಹಾಗೂ ಎಸ್‌ಸಿಜಿಜೆ ಮಾಜಿ ಮುಖ್ಯಸ್ಥ ಕೃಷ್ಣ ಇದ್ದರು —ಪ್ರಜಾವಾಣಿ ಚಿತ್ರ

# 'ಕೌಶಲ ಇಲ್ಲದಿದ್ದರೆ ಕೆಲಸ ಸಿಗುವುದು ಕಷ್ಟ'

**ಬೆಂಗಳೂರು:** 'ಗುಣಮಟ್ಟದ ತರಬೇತಿಯೊಂದಿಗೆ ಆಯಾ ಕ್ಷೇತ್ರಗಳಲ್ಲಿ ಕೌಶಲ ಸಾಧಿಸಬೇಕು. ಕೌಶಲ ಇಲ್ಲದಿದ್ದರೆ ಕೆಲಸ ಸಿಗುವುದು ಕಷ್ಟ' ಎಂದು ಸುಸ್ಥಿರ ಅಭಿವೃದ್ಧಿ ಕೇಂದ್ರದ (ಸಿಎಸ್‌ಡಿ) ಮುಖ್ಯಸ್ಥ ಡಾ.ಎ.ರವೀಂದ್ರ ಅಭಿಪ್ರಾಯಪಟ್ಟರು.

ಗ್ರೀನ್ ಸ್ಕಿಲ್ಸ್ ಅಕಾಡೆಮಿಯು ಸಿಎಸ್‌ಡಿ, ಎನ್.ಎಸ್.ಡಿ.ಸಿ ಹಾಗೂ ಎಚ್‌ಸಿಎಲ್ ಫೌಂಡೇಷನ್ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಹಸಿರು ಉದ್ಯೋಗ ಮೇಳ ಮತ್ತು ವಾಣಿಜ್ಯೋದ್ಯಮ ಸಮ್ಮೇಳನ–2022'ದಲ್ಲಿ ಮಾತನಾಡಿದರು.

'ಒಂದೆಡೆ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ಮತ್ತೊಂದೆಡೆ ಕೌಶಲಾಧಾರಿತ ಕೆಲಸಗಾರರ ಕೊರತೆ ಕಾಡುತ್ತಿದೆ. ಇವುಗಳ ನಡುವಣ ಅಂತರ ಕಡಿಮೆ ಮಾಡಬೇಕು. ಜಗತ್ತಿನ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿವೆ. ಅದಕ್ಕೆ ಅನುಗುಣವಾಗಿ ಕೌಶಲಗಳನ್ನು ಕರಗತಮಾಡಿಕೊಂಡಿರುವ ಮಾನವ ಸಂಪನ್ಮೂಲ ಸಜ್ಜುಗೊಳಿಸುವುದು ಹಸಿರು ಉದ್ಯೋಗ ಮೇಳದ ಆಶಯ' ಎಂದರು.

ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಸೆಲ್ವಕುಮಾರ್, 'ಕೈಗಾರಿಕಾ ವಲಯದ ಬೇಡಿಕೆಗೆ ಅನುಸಾರವಾಗಿ ಕೌಶಲಯುಕ್ತ ಉದ್ಯೋಗಿಗಳನ್ನು ರೂಪಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಹಿಂದೆ ಬೀಳುತ್ತಿವೆ. ಹೀಗಾಗಿ ಕೈಗಾರಿಕೆಗಳಲ್ಲಿ ಲಭ್ಯವಿರುವ ಕೆಲಸಕ್ಕೆ ಪೂರಕವಾದ ಕೋರ್ಸ್ ಆರಂಭಿಸಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ' ಎಂದು ಹೇಳಿದರು.

ಎಸ್‌ಸಿಜಿಜೆಯ ಮಾಜಿ ಮುಖ್ಯಸ್ಥ ಕೃಷ್ಣ, 'ಕೃತಕ ಬುದ್ಧಿಮತ್ತೆ, ಯಂತ್ರಗಳ ಕಲಿಕೆ, ಸೈಬರ್ ಭದ್ರತೆ ಕುರಿತು ಅರಿಯಲು ಈಗಿನ ಮಕ್ಕಳು ಆಸಕ್ತರಾಗಿದ್ದಾರೆ. ಆ ದಿಸೆಯಲ್ಲಿ ಅವರಿಗೆ ಶಿಕ್ಷಣ ನೀಡಬೇಕು' ಎಂದರು.

ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಗೌಡ, ಎಚ್‌ಸಿಎಲ್ ಫೌಂಡೇಷನ್‌ನ ಗೌರವ್ ಹಾಗೂ ಸಿಎಸ್‌ಡಿ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಶ್ರೀನಿವಾಸ್ ಇದ್ದರು.

## ರೌಡಿ ಶಿವು ಬಂಧನ

**ಬೆಂಗಳೂರು:** ಅಪರಾಧ ಕೃತ್ಯಗಳಲ್ಲಿ ಸಕ್ರಿಯವಾಗಿ ಜನರಲ್ಲಿ ಭಯವನ್ನುಂಟು ಮಾಡುತ್ತಿದ್ದ ರೌಡಿ ಜಿ. ಶಿವ ಅಲಿಯಾಸ್ ಕರಿಯ ಶಿವು (31) ಎಂಬಾತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ.

'ರಾಜಗೋಪಾಲನಗರ ಠಾಣೆ ರೌಡಿ ಪಟ್ಟಿಯಲ್ಲಿ ಶಿವು ಹೆಸರಿದೆ. 2013ರಿಂದ ಸುಲಿಗೆ, ಕೊಲೆ ಯತ್ನ ಸೇರಿ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.



## ಹಸಿ ಕರಗ ಮಂಟಪ ನಿರ್ಮಾಣ

**ಬೆಂಗಳೂರು:** ನಗರದ ಕರಗ ಮಹೋತ್ಸವದ ಪೂಜಾ ಸ್ಥಳವಾದ ಕಂಠೀರವ ಕ್ರೀಡಾಂಗಣದ ಆವರಣದಲ್ಲಿರುವ ಹಸಿ ಕರಗ ಮಂಟಪವನ್ನು ಅಭಿವೃದ್ಧಿಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಧರಿಸಿದೆ. ಇದಕ್ಕಾಗಿ ಸುಮಾರು ₹4 ಕೋಟಿ ಮಂಜೂರಾತಿಗೆ ಬಿಡಿಎ ಅನುಮೋದನೆ ನೀಡಿದೆ.

ಈ ನಿರ್ಧಾರ ಕೈಗೊಂಡಿದ್ದಕ್ಕೆ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಮತ್ತು ಆಯುಕ್ತ ಎಂ.ಬಿ.ರಾಜೇಶ್ ಗೌಡ ಅವರನ್ನು ಶುಕ್ರವಾರ ವಹ್ನಿಕುಲ ಕ್ಷತ್ರಿಯ ಸಮಾಜದ ಮುಖಂಡರು ಸನ್ಮಾನಿಸಿದರು.

ವಿಧಾನಪರಿಷತ್ ಸದಸ್ಯ ಪಿ.ಆರ್. ರಮೇಶ್, ತಿಗಳರ ಸಂಘದ ಸುಬ್ಬಣ್ಣ, ಲಕ್ಷ್ಮಣ್, ಲೋಕೇಶ್, ಕೃಷ್ಣಮೂರ್ತಿ, ಯಾದಗಿರಿ ರಾಮಚಂದ್ರ, ಸುರೇಶ್, ಜಯರಾಜ್ ಇದ್ದರು.

**ಏನೇನು ಅಭಿವೃದ್ಧಿ?:** ಹಸಿ ಕರಗ ಮಂಟಪ ಅಭಿವೃದ್ಧಿ, ಕಲ್ಯಾಣಿ ಜೀರ್ಣೋದ್ಧಾರ, ಬೃಂದಾವನ, ಧ್ಯಾನ ಮಂದಿರ, ಭಕ್ತರು ಕುಳಿತುಕೊಳ್ಳಲು ವ್ಯವಸ್ಥೆ, ದೀಪಾಲಂಕಾರ ವ್ಯವಸ್ಥೆ ಸೇರಿದಂತೆ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.

ಸಂಜೆಯ ವೇಳೆ ತಡೆಯಾಜ್ಞೆ ಆದೇಶದ ಪ್ರತಿ ಪಡೆದ ತನಿಖಾಧಿಕಾರಿಗಳು

# ತಹಶೀಲ್ದಾರರನ್ನು ವಿಚಾರಣೆಗೆ ಕರೆದೊಯ್ಯಲು ಪರದಾಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಮುಂಡಗೋಡ: 'ಸುಳ್ಳು ಮಾಹಿತಿ ನೀಡಿ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ' ಎಂಬ ಆರೋಪದ ಮೇಲೆ, ಇಲ್ಲಿನ ತಹಶೀಲ್ದಾರ್ ಶ್ರೀಧರ ಮುಂದಲಮನಿ ಅವರ ವಿಚಾರಣೆಗೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶುಕ್ರವಾರ ಮುಂದಾದರು. ಆದರೆ, ಅವರನ್ನು ಕರೆದುಕೊಂಡು ಹೋಗಲು ಸಾಧ್ಯವಾಗದೇ ಸಂಜೆಯವರೆಗೂ ವಸತಿಗೃಹದ ಎದುರುಗಡೆಯೇ ಕಾದು ಕುಳಿತಿದ್ದರು.

ಕಲಬುರಗಿಯ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಸ್.ಪಿ ಜಿ.ಕೆ. ರಶ್ಮಿ ನೇತೃತ್ವದ ಪೊಲೀಸರ ತಂಡವು ಶುಕ್ರವಾರ ನಸುಕಿನಲ್ಲೇ ತಹಶೀಲ್ದಾರ್ ವಸತಿಗೃಹಕ್ಕೆ ಬಂದಿದ್ದರು. ಆದರೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ಪಡೆದಿರುವುದಾಗಿ ಶ್ರೀಧರ ಅವರು ತನಿಖಾಧಿಕಾರಿಗಳಿಗೆ ಹೇಳಿದರು. ಮನೆಯ ಬಾಗಿಲು ಹಾಕಿಕೊಂಡು ಒಳಗಡೆಯೇ ಕುಳಿತರು.

2014ನೇ ಸಾಲಿನ ಕೆ.ಎ.ಎಸ್ ಅಧಿಕಾರಿ ಆಗಿರುವ ಶ್ರೀಧರ ಮುಂದಲಮನಿ ಅವರ ವಿರುದ್ಧ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪೊಲೀಸ್ ಠಾಣೆಯಲ್ಲಿ ಫೆ.12ರಂದು ಪ್ರಕರಣ ದಾಖಲಿಸಲಾಗಿತ್ತು.

ಅದರಲ್ಲಿ, 'ಸುಳ್ಳು ಮಾಹಿತಿ ನೀಡಿ ಪರಿಶಿಷ್ಟ ಪಂಗಡದ ವಾಲ್ಮೀಕಿ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ಎಸ್.ಟಿ ಮೀಸಲಾತಿ ಅಡಿಯಲ್ಲಿ ಗ್ರೇಡ್–2 ತಹಶೀಲ್ದಾರ್ ಆಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ನೈಜ ಪರಿಶಿಷ್ಟ ಪಂಗಡದ ಜನಾಂಗದವರಿಗೆ ಮತ್ತು ಸರ್ಕಾರಕ್ಕೆ ಮೋಸ ಮಾಡಿದ್ದಾರೆ' ಎಂದು ಆರೋಪಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ವಿಚಾರಣೆಗೆ ಕರೆದುಕೊಂಡು ಹೋಗಲು ಕಲಬುರ್ಗಿಯ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬಂದಿದ್ದರು.

ಮಧ್ಯಾಹ್ನದ ನಂತರ ವಸತಿಗೃಹದ ಬಾಗಿಲು ತೆರೆದ ಶ್ರೀಧರ ಅವರು, 'ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು- (ಶುಕ್ರವಾರ) ಹೈಕೋರ್ಟ್‌ನಿಂದ ತಡೆ ಯಾಜ್ಞೆ ಸಿಕ್ಕಿದೆ. ಸಂಜೆಯ ವೇಳೆಗೆ ಆದೇಶದ ಪ್ರತಿ ಬರುವ ಸಾಧ್ಯತೆಯಿದೆ' ಎಂದರು. ಸಂಜೆಯವರೆಗೂ ತಹಶೀಲ್ದಾರ್ ವಸತಿ ಗೃಹದ ಮುಂಭಾಗದಲ್ಲಿ ಬೀಡುಬಿಟ್ಟಿದ್ದ ಕಲಬುರಗಿಯ ತನಿಖಾಧಿಕಾರಿಗಳು, ತಡೆಯಾಜ್ಞೆ ಆದೇಶ ಪ್ರತಿಯನ್ನು ಪಡೆದ ಬಳಿಕವೇ ಅಲ್ಲಿಂದ ತೆರಳಿದರು.

## 'ನಾನು ತಪ್ಪು ಮಾಡಿಲ್ಲ'



'ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ತಂದಿದ್ದೆ. ಆದರೆ, ಅದೇ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಪೊಲೀಸರು ಏಕಾಏಕಿ ಯಾವುದೇ ಮಾಹಿತಿ ನೀಡದೇ ನಸುಕಿನ ವೇಳೆ ಮನೆಗೆ ಬಂದರು. ಮಾಹಿತಿ ಬರಬೇಕಿದೆ ಎಂದು ಹೇಳಿದರು. ಈ ಹಿಂದೆಯೇ ತಡೆಯಾಜ್ಞೆ ತಂದಿರುವ ಬಗ್ಗೆ ಮನವರಿಕೆ ಮಾಡಲು ಪ್ರಯತ್ನಿಸಿದೆ. ಮಧ್ಯಾಹ್ನದ ವೇಳೆಗೆ ತಡೆಯಾಜ್ಞೆಯ ಪ್ರತಿ ಸಿಕ್ಕಿದೆ. ನಾನು ಯಾವುದೇ ತಪ್ಪು ಮಾಡಿಲ್ಲ. ಕಾನೂನಿನ ಅಡಿಯಲ್ಲಿಯೇ ಪ್ರಕರಣವನ್ನು ಎದುರಿಸುವೆ' ಎಂದು ತಹಶೀಲ್ದಾರ್ ಶ್ರೀಧರ ಮುಂದಲಮನಿ ಪ್ರತಿಕ್ರಿಯಿಸಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ

# ಶೇ 8ರಷ್ಟು ಪ್ರಕರಣಗಳಲ್ಲಷ್ಟೆ ಶಿಕ್ಷೆ!

ಪ್ರಜಾವಾಣಿ ವಾರ್ತೆ

| ವರ್ಷ | ವಿಲೇವಾರಿ | ಶಿಕ್ಷೆ | ದೋಷಮುಕ್ತ | ಇತರ |
|---|---|---|---|---|
| 2019 | 1,569 | 88 | 1,179 | 302 |
| 2020 | 819 | 69 | 611 | 139 |
| 2021 | 1,650 | 97 | 1,362 | 191 |

**ಬೆಂಗಳೂರು:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ 2019ರಿಂದ 2021ರ ಅವಧಿಯಲ್ಲಿ ರಾಜ್ಯದ ನ್ಯಾಯಾಲಯಗಳಲ್ಲಿ ವಿಲೇವಾರಿಯಾಗಿರುವ ಪ್ರಕರಣಗಳಲ್ಲಿ ಸರಾಸರಿ ಶೇಕಡ 8ರಷ್ಟು ಮೊಕದ್ದಮೆಗಳಲ್ಲಿ ಮಾತ್ರ ಅಪರಾಧ ಸಾಬೀತಾಗಿದೆ!

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಪ್ರಶ್ನೆಗೆ ಶುಕ್ರವಾರ ಉತ್ತರ ನೀಡಿದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಈ ಮಾಹಿತಿ ನೀಡಿದರು. 2019 ಮತ್ತು 2021ರಲ್ಲಿ ತಲಾ ಶೇ 7ರಷ್ಟು ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿದೆ. 2020ರಲ್ಲಿ ಈ ಪ್ರಮಾಣ ಶೇ 10ರಷ್ಟಿತ್ತು.

2019ರ ಆರಂಭದಲ್ಲಿ 5,434 ಪ್ರಕರಣಗಳು ಬಾಕಿ ಇದ್ದವು. ಮೂರು ವರ್ಷಗಳ ಅವಧಿಯಲ್ಲಿ ವಿವಿಧ ನ್ಯಾಯಾಲಯಗಳಲ್ಲಿ 4,038 ಪ್ರಕರಣಗಳು ವಿಲೇವಾರಿಯಾಗಿವೆ. 2021ರ ಅಂತ್ಯದಲ್ಲಿ 6,834 ಪ್ರಕರಣಗಳು ಬಾಕಿ ಉಳಿದಿದ್ದವು ಎಂದು ತಿಳಿಸಿದರು.

‘ವಿಲೇವಾರಿಯಾದ ಪ್ರಕರಣಗಳಲ್ಲಿ ಶೇ 7ರಿಂದ 8ರಷ್ಟರಲ್ಲಿ ಮಾತ್ರ ಶಿಕ್ಷೆ ಆಗುವುದಾದರೆ ದೌರ್ಜನ್ಯಕ್ಕೆ ಒಳಗಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಹೇಗೆ ನ್ಯಾಯ ಸಿಗುತ್ತದೆ. ಹೆಚ್ಚಿನ ಪ್ರಕರಣಗಳಲ್ಲಿನ ಶಿಕ್ಷೆಯಾಗುವಂತೆ ಮಾಡಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ವೆಂಕಟೇಶ್ ಆಗ್ರಹಿಸಿದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ತನಿಖೆಯ ಮೇಲೆ ನಿಗಾ ಇಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮೂರು ತಿಂಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರೂ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ’ ಎಂದು ಸಚಿವರು ತಿಳಿಸಿದರು.

ದೌರ್ಜನ್ಯಕ್ಕೊಳಗಾಗಿ ಮೃತಪಟ್ಟವರಲ್ಲಿ 99 ಜನರ ಕುಟುಂಬದ ಸದಸ್ಯರಿಗೆ ಸರ್ಕಾರದಿಂದ ಉದ್ಯೋಗ ನೀಡಲಾಗಿದೆ. 148 ಪ್ರಕರಣಗಳಲ್ಲಿ ಉದ್ಯೋಗ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

## ‘ಜನತಾ ಜಲಧಾರೆ ಜಾಗೃತಿ ಅಭಿಯಾನ’

**ಹುಬ್ಬಳ್ಳಿ:** ‘ರಾಜ್ಯದ 51 ಸ್ಥಳಗಳಲ್ಲಿನ ನೀರನ್ನು ಕಲಶದಲ್ಲಿ ಸಂಗ್ರಹಿಸಿ, ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಇಟ್ಟು ಮುಂದಿನ ಚುನಾವಣೆವರೆಗೆ ಪೂಜೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ರಾಜ್ಯದ 15 ಸ್ಥಳಗಳಿಂದ 15 ವಾಹನಗಳಲ್ಲಿ ಒಂದೇ ದಿನ ‘ಜನತಾ ಜಲಧಾರೆ’ ವಾಹನ ಹೊರಟು ರಾಜ್ಯದಾದ್ಯಂತ ಜಾಗೃತಿ ಮೂಡಿಸಲಿವೆ. ಅಧಿವೇಶನದ ನಂತರ ಏಪ್ರಿಲ್ 9 ಅಥವಾ 11ರಂದು ಯೋಜನೆಗೆ ಚಾಲನೆ ನೀಡಲಾಗುವುದು ಎಂದರು.

## ‘ವಿಹಾರ ಕೇಂದ್ರ’ ಕ್ಲಬ್ ಮೇಲೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬನಶಂಕರಿ 6ನೇ ಹಂತದ ಹೊಸಕೆರೆಹಳ್ಳಿ ವೃತ್ತದಲ್ಲಿರುವ ‘ಗಿರಿನಗರ ವಿಹಾರ ಕೇಂದ್ರ’ ಕ್ಲಬ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಜೂಜಾಟದಲ್ಲಿ ತೊಡಗಿದ್ದ 23 ಮಂದಿಯನ್ನು ಬಂಧಿಸಿದ್ದಾರೆ.

‘ಸದಸ್ಯರಲ್ಲದವರು ಕ್ಲಬ್‌ನಲ್ಲಿ ಜೂಜು ಆಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ದಾಳಿ ಮಾಡಿ 23 ಮಂದಿಯನ್ನು ಬಂಧಿಸಲಾಗಿದ್ದು ₹ 1.70 ಲಕ್ಷ ನಗದು ಜಪ್ತಿ ಮಾಡಲಾಗಿದೆ. ಆರೋಪಿಗಳ ವಿರುದ್ಧ ಗಿರಿನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

# ಎಸ್ಸೆಸ್ಸೆಲ್ಸಿ ಪರೀಕ್ಷೆ: ಹಿಜಾಬ್‌ಗೆ ಅವಕಾಶ ಇಲ್ಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇದೇ 28ರಿಂದ ಆರಂಭವಾಗಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆ ವೇಳೆಯೂ ಹಿಜಾಬ್‌ಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಹೀಗಾಗಿ, ಹಿಜಾಬ್ ಧರಿಸಿ ಬರುವ ವಿದ್ಯಾರ್ಥಿನಿಯರಿಗೆ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ.

‘ಎಸ್ಸೆಸ್ಸೆಲ್ಸಿ ಪರೀಕ್ಷೆ ವೇಳೆಯೂ ಹೈಕೋರ್ಟ್‌ನ ಆದೇಶ ಪಾಲಿಸಬೇಕು’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ಹಿಜಾಬ್ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಈ ವಿಷಯದ ಬಗ್ಗೆ ಅನಗತ್ಯ ಗೊಂದಲಗಳನ್ನು ಸೃಷ್ಟಿಸುವುದು ಬೇಡ. ಕೋವಿಡ್ ನಂತರ ಮೊದಲ ಬಾರಿ ವಿದ್ಯಾರ್ಥಿಗಳು ಸಹ ಉತ್ಸಾಹದಿಂದ ಪರೀಕ್ಷೆ ಬರೆಯಲು ಸಜ್ಜಾಗಿದ್ದಾರೆ. ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷೆಗೆ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಸಭೆಗಳನ್ನು ನಡೆಸಿ ಎಲ್ಲ ರೀತಿಯ ಸಿದ್ಧತೆಗಳನ್ನು ಕೈಗೊಂಡಿದ್ದಾರೆ’ ಎಂದು ವಿವರಿಸಿದರು.

**8.73 ಲಕ್ಷ ವಿದ್ಯಾರ್ಥಿಗಳು:** ಎಸ್ಸೆಸ್ಸೆಲ್ಸಿ ಪರೀಕ್ಷೆ ಇದೇ 28ರಿಂದ ಏಪ್ರಿಲ್ 11ರ ವರೆಗೆ ನಡೆಯಲಿದ್ದು, ರಾಜ್ಯದಾದ್ಯಂತ ಒಟ್ಟು 15,387 ಶಾಲೆಗಳ 8,73,846 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. 3,444 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದೆ.

ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಬಹು ಆಯ್ಕೆ ಪ್ರಶ್ನೆಗಳನ್ನು ಕೈಬಿಡಲು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್‌ಇಇಬಿ) ನಿರ್ಧರಿಸಿದೆ.

ಅಕ್ರಮಗಳನ್ನು ತಡೆಯಲು ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಸೂಚಿಸಲಾಗಿದೆ. ಈ ಬಗ್ಗೆ ಈಗಾಗಲೇ ಇಲಾಖೆಯು ಸುತ್ತೋಲೆ ಹೊರಡಿಸಿದೆ. ಶಾಲಾ ಸಂಚಿತ ನಿಧಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ₹40 ಸಾವಿರ ವೆಚ್ಚದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಸಿಸಿಟಿವಿ ದೃಶ್ಯಾವಳಿಗಳನ್ನು ಜಿಲ್ಲಾಮಟ್ಟದ ಸಮಿತಿಗಳಿಗೆ ಪ್ರತಿ ದಿನ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ ಎಂದು ಸಚಿವರು ತಿಳಿಸಿದರು.

| ವಿದ್ಯಾರ್ಥಿಗಳ ಸಂಖ್ಯೆ | |
|---|---|
| ಬಾಲಕರು | 4,52,732 |
| ಬಾಲಕಿಯರು | 4,21,110 |
| ತೃತೀಯ ಲಿಂಗಿಗಳು | 4 |

| ಸಿಬ್ಬಂದಿ ವಿವರ | |
|---|---|
| ಪರೀಕ್ಷಾ ಕೊಠಡಿಗಳ ಸಂಖ್ಯೆ | 45,289 |
| ಮುಖ್ಯ ಅಧೀಕ್ಷಕರು | 3,444 |
| ಕೊಠಡಿ ಮೇಲ್ವಿಚಾರಕರು | 49,817 |
| ಸ್ಥಾನಿಕ ಜಾಗೃತ ದಳದವರು | 3,444 |
| ಪೊಲೀಸರು | 3,444 |

## 'ಸ್ವಾಮೀಜಿಗಳಿಗೆ ಅವಮಾನ ಮಾಡಿಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ನಮ್ಮ ತಾಯಂದಿರು ಸೇರಿದಂತೆ ಸಾಮಾನ್ಯವಾಗಿ ಎಲ್ಲರೂ ತಲೆಮೇಲೆ ಬಟ್ಟೆ ಹಾಕಿಕೊಳ್ಳುತ್ತಾರೆ ಎಂದು ಹೇಳಿದ್ದೇನೆಯೇ ಹೊರತು ಸ್ವಾಮೀಜಿಗಳಿಗೆ ಅವಮಾನ ಮಾಡಿಲ್ಲ, ಅಗೌರವ ತೋರಿಲ್ಲ. ಅನಗತ್ಯವಾಗಿ ನನ್ನ ಹೇಳಿಕೆ ತಿರುಚಲಾಗಿದೆ' ಎಂದು ಸಿದ್ದರಾಮಯ್ಯ ಟ್ವೀಟ್ ಮೂಲಕ ಸ್ಪಷ್ಟನೆ ನೀಡಿದ್ದಾರೆ.

'ಸರ್ವ ಜಾತಿಗಳ ಸ್ವಾಮೀಜಿಗಳ ಬಗ್ಗೆ ಗೌರವವಿದೆ. ಯಾರ ಬಗ್ಗೆಯೂ ಅಗೌರವದಿಂದ ನಡೆದುಕೊಂಡಿಲ್ಲ ಎನ್ನುವುದು ರಾಜ್ಯದ ಜನತೆಗೆ ಗೊತ್ತಿದೆ. ರಾಜಕೀಯ ವಿರೋಧಿಗಳು ದುರುದ್ದೇಶದಿಂದ ನನ್ನ ಹೇಳಿಕೆಯನ್ನು ತಿರುಚಿ ಅಪಪ್ರಚಾರ ಮಾಡುತ್ತಿದ್ದಾರೆ' ಎಂದಿದ್ದಾರೆ.

ರಾಜ್ಯದಲ್ಲಿ ಹಿಜಾಬ್ ವಿವಾದ ಹುಟ್ಟುಹಾಕಿದ್ದೇ ಬಿಜೆಪಿಯವರು: ಸಿದ್ದರಾಮಯ್ಯ ದೂರು

# 'ಸ್ವಾಮೀಜಿಗಳು ತಲೆಗೆ ಬಟ್ಟೆ ಹಾಕಲ್ವಾ'

ಪ್ರಜಾವಾಣಿ ವಾರ್ತೆ

ಮೈಸೂರು: 'ಜೈನ ಹೆಣ್ಣುಮಕ್ಕಳು, ಕೆಲವೆಡೆ ಹಿಂದೂ ಮಹಿಳೆಯರು ತಲೆ ಮೇಲೆ ಸೆರಗು ಹಾಕಲ್ವಾ, ಸ್ವಾಮೀಜಿಗಳು ಕೂಡಾ ತಲೆ ಮೇಲೆ ಬಟ್ಟೆ ಹಾಕಲ್ವಾ, ಮುಸ್ಲಿಂ ಹೆಣ್ಣುಮಕ್ಕಳು ತಲೆ ಮೇಲೆ ಬಟ್ಟೆ ಹಾಕಿಕೊಂಡರೆ ನಿಮಗೇನು ತೊಂದರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಮುಸ್ಲಿಂ ಹೆಣ್ಣುಮಕ್ಕಳು ಶಾಲಾ ಸಮವಸ್ತ್ರದ ಬಣ್ಣದ ದುಪ್ಪಟ್ಟಾ ಧರಿಸಿ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಬೇಕೆಂದು ಕೇಳುತ್ತಿದ್ದಾರೆ. ಅದರಲ್ಲಿ ತಪ್ಪೇನಿದೆ?' ಎಂದರು.

'ರಾಜ್ಯದಲ್ಲಿ ಹಿಜಾಬ್ ವಿವಾದ ಹುಟ್ಟುಹಾಕಿದ್ದೇ ಬಿಜೆಪಿಯವರು. ಎರಡೂ ಧರ್ಮದವರನ್ನು ಕರೆದು ಚರ್ಚಿಸಿ ಗೊಂದಲಕ್ಕೆ ತೆರೆ ಎಳೆಯಬಹುದಿತ್ತು. ಉದ್ದೇಶಪೂರ್ವಕವಾಗಿ ದೊಡ್ಡದಾಗಿಸಿದ್ದಾರೆ' ಎಂದು ದೂರಿದರು.

**ಅಮಾನವೀಯ:** 'ಜಾತ್ರೆಗಳಲ್ಲಿ ಯಾರಿಗೆ ಬೇಕಾದರೂ ವ್ಯಾಪಾರ ಮಾಡಲು ಸಂವಿಧಾನ ಅವಕಾಶ ನೀಡಿದೆ. ಮುಸ್ಲಿಮರ ವ್ಯಾಪಾರಕ್ಕೆ ನಿರ್ಬಂಧ ಹೇರುತ್ತಿರುವುದು ಅಮಾನವೀಯ. ಮುಸ್ಲಿಂ ವರ್ತಕರನ್ನು ಬಹಿಷ್ಕರಿಸುವಂತೆ ಬಿಜೆಪಿಯವರೇ ವಿವಿಧ ಸಂಘಟನೆಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

'ಶಸ್ತ್ರಕ್ರಿಯೆ ವೇಳೆ ರಕ್ತದ ಅಗತ್ಯ ಬಿದ್ದಾಗ ಜೀವ ಉಳಿಸಿಕೊಳ್ಳಲು ಯಾವುದೇ ಜಾತಿಯವನ ರಕ್ತವನ್ನಾದರೂ ದೇಹಕ್ಕೆ ಸೇರಿಸಿಕೊಳ್ಳುತ್ತೇವೆ. ನಮ್ಮ ಜಾತಿಯವನ ರಕ್ತವೇ ಬೇಕು ಎಂದು ಕೇಳುತ್ತೇವಾ? ಆದರೆ ಗುಣಮುಖವಾದ ಬಳಿಕ ನೀನು ಹಿಂದೂ, ಮುಸ್ಲಿಂ, ಸಿಖ್ ಎಂದು ಹೇಳುವುದು ಅಮಾನವೀಯ. ನಮಗೆ ಬೇಕಿರುವುದು ಮನುಷ್ಯತ್ವ' ಎಂದರು.


**ಮುಂದಿನ ಚುನಾವಣೆಯೇ ಕೊನೆ:** 'ಮುಂದಿನ ಚುನಾವಣೆಯೇ ನನ್ನ ಕೊನೆಯ ಚುನಾವಣೆ. ಮತ್ತೆ ಚುನಾವಣಾ ರಾಜಕಾರಣ ಮಾಡುವುದಿಲ್ಲ. ಆದರೆ, ಸಕ್ರಿಯ ರಾಜಕಾರಣದಲ್ಲಿ ಇರುತ್ತೇನೆ' ಎಂದು ಸಿದ್ದರಾಮಯ್ಯ ಅವರು ಹೇಳಿದರು.

ಕೊನೆಯ ಚುನಾವಣೆಯಲ್ಲಿ ಎಲ್ಲಿಂದ ಸ್ಪರ್ಧಿಸುತ್ತೀರಿ ಎಂಬ ಪ್ರಶ್ನೆಗೆ, 'ವರುಣಾ, ಹುಣಸೂರು, ಚಾಮರಾಜಪೇಟೆ, ಬಾದಾಮಿ, ಕೋಲಾರ, ಹೆಬ್ಬಾಳ, ಕೊಪ್ಪಳ, ಚಾಮುಂಡೇಶ್ವರಿ... ಹೀಗೆ ವಿವಿಧೆಡೆ ಸ್ಪರ್ಧಿಸುವಂತೆ ಜನ ಆಹ್ವಾನಿಸುತ್ತಿದ್ದಾರೆ. ಎಲ್ಲಿಂದ ಸ್ಪರ್ಧಿಸಬೇಕೆಂದು ತೀರ್ಮಾನಿಸಿಲ್ಲ. ಚುನಾವಣೆಗೆ ಇನ್ನೂ ಒಂದು ವರ್ಷ ಇದ್ದು, ಮುಂದೆ ಸೂಕ್ತ ನಿರ್ಧಾರ ಕೈಗೊಳ್ಳುತ್ತೇನೆ' ಎಂದು ಉತ್ತರಿಸಿದರು.

## ಸಿದ್ದರಾಮಯ್ಯ ಹೇಳಿಕೆಯಿಂದ ಕಾಂಗ್ರೆಸ್ ಘನತೆಗೆ ಧಕ್ಕೆ

ದಾವಣಗೆರೆ: 'ಹಿಜಾಬ್‌ಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು ಆಡಿರುವ ಮಾತು ಕಾಂಗ್ರೆಸ್ ಪಕ್ಷದ ಘನತೆಗೆ ಧಕ್ಕೆ ತರುವಂತಿದೆ. ಈ ಹಿಂದೆ ವೀರಶೈವ ಲಿಂಗಾಯತ ಧರ್ಮವನ್ನು ಇಬ್ಭಾಗ ಮಾಡಲು ಪ್ರಯತ್ನಿಸಿದಾಗ ಕಾಂಗ್ರೆಸ್ ಬಹಳ ದೊಡ್ಡ ಪೆಟ್ಟನ್ನು ತಿಂದಿತ್ತು. ಮತ್ತೆ ಇಂತಹ ವಿವಾದಗಳ ಮೂಲಕ ಜನರ ಭಾವನೆಗಳನ್ನು ಕೆಡಿಸುವುದು ಒಳ್ಳೆಯದಲ್ಲ' ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಪ್ರತಿಕ್ರಿಯಿಸಿದ್ದಾರೆ.

ಜಿಲ್ಲೆಯ ಹೂವಿನಮಡು ಗ್ರಾಮದಲ್ಲಿ ಶುಕ್ರವಾರ ಮಾತನಾಡಿದ ಸ್ವಾಮೀಜಿ, 'ಒಂದು ವರ್ಷದಲ್ಲಿ ಮತ್ತೆ ಚುನಾವಣೆ ಬರಲಿದೆ. ಹೀಗಾಗಿ ತಮ್ಮ ಮಾತಿನ ಬಗ್ಗೆ ಸಿದ್ದರಾಮಯ್ಯ ಆತ್ಮಾವಲೋಕನ ಮಾಡಿಕೊಂಡು ಮತ್ತೆ ಇಂಥ ತಪ್ಪು ಆಗದಂತೆ ಎಚ್ಚರ ವಹಿಸಲಿ' ಎಂದು ಎಚ್ಚರಿಸಿದರು.


ರಂಭಾಪುರಿ ಸ್ವಾಮೀಜಿ

'ರಾಜಕೀಯ ಲಾಭಕ್ಕಾಗಿ ಹಾಗೂ ಜನರನ್ನು ಓಲೈಸುವುದಕ್ಕಾಗಿ ಇಂತಹ ಕ್ಷುಲ್ಲಕ ಹೇಳಿಕೆಗಳನ್ನು ಕೊಡುವುದರಿಂದ ಸಮಾಜದಲ್ಲಿ ಜಾತಿ-ಜಾತಿಗಳ ಮಧ್ಯೆ ಸಂಘರ್ಷ ನಡೆಯಲಿಕ್ಕೆ ಕಾರಣವಾಗುತ್ತಿದೆ. ಇದಕ್ಕೆ ಖಂಡಿತವಾಗಿಯೂ ಅವಕಾಶ ಕೊಡಬಾರದು' ಎಂದು ಹೇಳಿದರು.

'ಅವರವರ ಧರ್ಮದ ಆಚರಣೆ ಅವರಿಗೆ ಬಿಟ್ಟಿದ್ದು. ಮನೆಯಲ್ಲಿ ಧರ್ಮದ ಆಚರಣೆ ಮಾಡುವುದಕ್ಕೆ ಯಾರದ್ದೂ ಅಭ್ಯಂತರವಿಲ್ಲ. ಆದರೆ, ಸಾರ್ವಜನಿಕ ಬದುಕಿನಲ್ಲಿ, ಶೈಕ್ಷಣಿಕ ವ್ಯವಸ್ಥೆಯಲ್ಲಿ ನಿಗದಿಪಡಿಸಿದ ಸಮವಸ್ತ್ರ ಧರಿಸಿ ಬರಬೇಕು ಎಂದು ಸರ್ಕಾರ, ನ್ಯಾಯಾಲಯದ ಆದೇಶ ಇದ್ದಾಗಲೂ ಕೆಲವರು ಪ್ರಚೋದನಕಾರಿ ಹೇಳಿಕೆ ಕೊಡುತ್ತಿರುವುದು ಒಳ್ಳೆಯದಲ್ಲ' ಎಂದು ಅಭಿಪ್ರಾಯಪಟ್ಟರು.

## ಕಿಷ್ಕಿಂದ ಸ್ವಾಮೀಜಿ ಆಕ್ರೋಶ

ಕುಂದಾಪುರ: ಸ್ವಾಮೀಜಿಗಳ ಶಿರವಸ್ತ್ರದ ಬಗ್ಗೆ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರು ನೀಡುರುವ ಹೇಳಿಕೆಗೆ ಕಿಷ್ಕಿಂದದ ಗೋವಿಂದ ಸರಸ್ವತಿ ಸ್ವಾಮೀಜಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೊಲ್ಲೂರಿನಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರಿಗೆ ಹಿಜಾಬ್ ಹಾಗೂ ಸನ್ಯಾಸಿಗಳ ಶಿರವಸ್ತ್ರದ ನಡುವಿನ ವ್ಯತ್ಯಾಸ ಗೊತ್ತಿಲ್ಲವೇ? ತಲೆಯ ಮೇಲಿನ ಬಟ್ಟೆ ತೆಗೆಯಲು ಸನ್ಯಾಸಿಗಳು ಕಾಲೇಜಿಗೆ ಹೋಗುವವರೇ' ಎಂದು ಪ್ರಶ್ನಿಸಿದ್ದಾರೆ.

5,000 ವರ್ಷಗಳಿಗೂ ಕಡಿಮೆ ಇತಿಹಾಸವಿರುವ ಇಸ್ಲಾಂ ಮತದವರು ಮಾಡುವ ನಾಟಕಕ್ಕೆ ಇವರೆಲ್ಲ ಸೂತ್ರಧಾರರಾಗುತ್ತಿದ್ದಾರೆ ಎಂದೂ ಹೇಳಿದ್ದಾರೆ.

## 'ರುಮಾಲು ಗೊಡವೆ ನಿಮಗೇಕೆ'

ಕೊಪ್ಪಳ: 'ಈ ರೀತಿಯ ವ್ಯಂಗ್ಯದ ಮಾತುಗಳು ಸಿದ್ದರಾಮಯ್ಯ ಅವರಿಗೆ ಶೋಭೆ ತರುವುದಿಲ್ಲ' ಎಂದು ಕನಕಗಿರಿಯ ಸುವರ್ಣಗಿರಿ ವಿರಕ್ತಮಠದ ಡಾ.ಚನ್ನಮಲ್ಲ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಶುಕ್ರವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಹಿಜಾಬ್ ಸಮರ್ಥಿಸಿಕೊಳ್ಳುವ ಭರದಲ್ಲಿ ಆಡಬಾರದ ಮಾತು ಆಡುತ್ತಾರೆ. ನಮ್ಮ ತಲೆಯ ಮೇಲಿನ ಬಟ್ಟೆ ತೆಗೆಯಲು ನಾವೇನು ಶಾಲೆಗೆ ಹೊರಟು ನಿಂತಿಲ್ಲ. ಶಿಸ್ತು ಪಾಲಿಸಲು ಸಮವಸ್ತ್ರ ಕಡ್ಡಾಯ ಮಾಡಿದೆ. ಅದನ್ನು ಪಾಲಿಸಬೇಕು. ನ್ಯಾಯಾಂಗ, ಸಂವಿಧಾನಕ್ಕೆ ಗೌರವ ಕೊಡಬೇಕು' ಎಂದರು.

ಹೆಬ್ಬಾಳದ ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ, ಮೈನಳ್ಳಿಯ ಶಿವಸಿದ್ಧೇಶ್ವರ ಶ್ರೀ, ಬಸಲಿಂಗೇಶ್ವರ ಸ್ವಾಮೀಜಿ, ಚಳಿಗೇರಿಯ ವೀರ ಸಂಗಮೇಶ್ವರ ಶಿವಾಚಾರ್ಯರು ಸಿದ್ದರಾಮಯ್ಯನವರ ಹೇಳಿಕೆಗೆ ಅಸಮಾಧಾನ ವ್ಯಕ್ತಪಡಿಸಿದರು.

## ಸುದ್ದಿ 2 ನಿಮಿಷ

### ಮಹಾರಾಷ್ಟ್ರ: ಕರ್ನಾಟಕ ಸಿ.ಎಂ ವಿರುದ್ಧ ಖಂಡನಾ ನಿರ್ಣಯ ಅಂಗೀಕಾರ


ಮುಂಬೈ (ಪಿಟಿಐ): ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವಿರುದ್ಧ ಮಹಾರಾಷ್ಟ್ರ ವಿಧಾನ ಪರಿಷತ್ತು ಶುಕ್ರವಾರ ಸರ್ವಾನುಮತದಿಂದ ಖಂಡನಾ ನಿರ್ಣಯವನ್ನು ಅಂಗೀಕರಿಸಿದೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಿನ ಗಡಿ ವಿವಾದವು ಇನ್ನು ಮುಂದೆ ಇರುವುದಿಲ್ಲ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರು ನೀಡಿರುವ ಹೇಳಿಕೆಯನ್ನು ವಿಧಾನ ಪರಿಷತ್ ಸದಸ್ಯರು ವಿರೋಧಿಸಿದ್ದಾರೆ.

ಅಕ್ಕಲಕೋಟೆ ಮತ್ತು ಸೊಲ್ಲಾಪುರದಂತಹ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ನೀಡಲಾಯಿತು. ಆದ್ದರಿಂದ ಬೆಳಗಾವಿ, ಕಾರವಾರ ಮತ್ತು ನೆರೆಯ ಪ್ರದೇಶಗಳನ್ನು ಕರ್ನಾಟಕಕ್ಕೆ ನೀಡಲಾಗಿದೆ ಎಂದು ಬೊಮ್ಮಾಯಿ ಅವರು ನೀಡಿದ ಹೇಳಿಕೆಯನ್ನು ಶಿವಸೇನಾ ಶಾಸಕ ದಿವಾಕರ್ ರಾವುತೆ ಅವರು ವಿಧಾನ ಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿದರು.

ವಿಷಯದ ಗಂಭೀರತೆಯನ್ನು ಪರಿಗಣಿಸಿ ಸಭಾಪತಿ ರಾಮರಾಜೇ ನಾಯ್ಕ್ -ನಿಂಬಾಳ್ಕರ್, 'ಕರ್ನಾಟಕ ಸರ್ಕಾರ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹೇಳಿಕೆಗಳನ್ನು ಖಂಡಿಸುವ ಪ್ರಸ್ತಾವವನ್ನು ನಾನು ಮುಂದಿಡುತ್ತೇನೆ. ಮಹಾರಾಷ್ಟ್ರ-ಕರ್ನಾಟಕ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ನಡೆಯುತ್ತಿದ್ದು, ಪ್ರಕರಣದ ಮೇಲೆ ಪ್ರಭಾವ ಬೀರುವ ಹೇಳಿಕೆ ನೀಡಬಾರದಿತ್ತು' ಎಂದು ಹೇಳಿದರು.

ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.



### ನಕಲಿ ಶಿಕ್ಷಕ ಲಕ್ಷ್ಮಣೇಗೌಡ ಓದಿದ್ದು 8ನೇ ತರಗತಿ!

ಹುಣಸೂರು: 'ನಕಲಿ ಶಿಕ್ಷಕ ಲಕ್ಷ್ಮಣೇಗೌಡ 8ನೇ ತರಗತಿಗೆ ದಾಖಲಾದ ದಾಖಲೆ ಮಾತ್ರ ಶಿಕ್ಷಣ ಇಲಾಖೆಯಲ್ಲಿದ್ದು, ಎಸ್ಸೆಸ್ಸೆಲ್ಸಿ ಪಾಸಾದ ಬಗ್ಗೆ ಯಾವುದೇ ದಾಖಲೆ ಇಲ್ಲ' ಎಂದು ದೂರುದಾರ ಇಂಟೆಕ್ ರಾಜು ತಿಳಿಸಿದರು.

'ಸಹೋದರನ ಅಂಕಪಟ್ಟಿ, ಶಾಲಾ ದಾಖಲೆಗಳನ್ನು ಸೇವೆಗೆ ಸೇರುವ ಸಮಯದಲ್ಲಿ ಇಲಾಖೆಗೆ ನೀಡಿದ ಲಕ್ಷ್ಮಣೇಗೌಡ ನಂತರ ಹಿಂಪಡೆದಿದ್ದು, ಇಲಾಖೆ ಅಧಿಕಾರಿಗಳು ಆರೋಪಿಯ ಶಿಕ್ಷಣದ ಹಿನ್ನೆಲೆ ಪರಿಶೀಲಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಶುಕ್ರವಾರ ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ಹುಣಸೂರು ಕ್ಷೇತ್ರ ಶಿಕ್ಷಣಾಧಿಕಾರಿ ಸಕಾಲಕ್ಕೆ ಕ್ರಮ ವಹಿಸಿದ್ದರೆ ಮೂರು ವರ್ಷದ ಹಿಂದೆಯೇ ಆರೋಪಿಯನ್ನು ವಶಕ್ಕೆ ಪಡೆಯಬಹುದಾಗಿತ್ತು. ಆದರೆ ಇಲಾಖೆಯೇ ಆರೋಪಿಗೆ ಜಾಮೀನು ಪಡೆದುಕೊಳ್ಳಲು ಪರೋಕ್ಷ ಸಹಕಾರ ನೀಡಿತ್ತು' ಎಂದು ಆರೋಪಿಸಿದರು.'ಪ್ರಕರಣದ ತನಿಖೆಯಲ್ಲಿ ವಿಳಂಬ ಧೋರಣೆ ಅನುಸರಿಸಿದ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಉಪ ನಿರ್ದೇಶಕರಿಗೆ ಪತ್ರ ಬರೆದಿರುವೆ' ಎಂದು ಹೇಳಿದರು.

## ಏ. 1ಕ್ಕೆ ಶಾ ತುಮಕೂರಿಗೆ

ತುಮಕೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಏ. 1ರಂದು ನಗರಕ್ಕೆ ಭೇಟಿ ನೀಡಲಿದ್ದು, ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಚಿವರ ಭೇಟಿ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳುವ ಬಗ್ಗೆ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಚರ್ಚಿಸಲಾಯಿತು.

## ಪರೀಕ್ಷೆ ಇಲ್ಲದೇ ಫಲಿತಾಂಶ: ತನಿಖೆಗೆ ದ್ವಿಸದಸ್ಯ ಸಮಿತಿ

ಶಿವಮೊಗ್ಗ: ಪರೀಕ್ಷೆ ಇಲ್ಲದೇ ದೂರ ಶಿಕ್ಷಣ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಿದ ಕುವೆಂಪು ವಿಶ್ವವಿದ್ಯಾಲಯದ ನಿರ್ಧಾರಗಳನ್ನು ಪರಿಶೀಲಿಸಿ, ವರದಿ ನೀಡಲು ರಾಜ್ಯ ಸರ್ಕಾರ ದ್ವಿಸದಸ್ಯ ಸಮಿತಿ ರಚಿಸಿದೆ. ಸಮಿತಿಯು ಮಾರ್ಚ್ 26ರಿಂದ ಕಾರ್ಯ ಆರಂಭಿಸಲಿದೆ. ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲಕೃಷ್ಣ ಜೋಷಿ, ಬೆಂಗಳೂರು ನಗರ ವಿ.ವಿ ಕುಲಸಚಿವ ಶ್ರೀಧರ್ ಅವರ ನೇತೃತ್ವದ ತಂಡ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲಿದೆ. 2019–20ನೇ ಸಾಲಿನ ದೂರ ಶಿಕ್ಷಣ ಫಲಿತಾಂಶ, ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ ನಿರ್ಣಯಗಳು, ಕೆಲವು ಕೇಂದ್ರಗಳ ಫಲಿತಾಂಶ ಪ್ರಕಟಿಸಿ, ಕೆಲವು ಕೇಂದ್ರಗಳ ಫಲಿತಾಂಶ ತಡೆಹಿಡಿದಿರುವುದರ ಹಿಂದೆ ಅಕ್ರಮ ಸಾಧ್ಯತೆಗಳ ಬಗ್ಗೆ ಈ ತಂಡ ಪರಿಶೀಲಿಸಲಿದೆ. ಕೋವಿಡ್ ಸಮಯದ ನಿಯಮಗಳ ಸಡಿಲಿಕೆ ಬಳಸಿಕೊಂಡ ವಿಶ್ವವಿದ್ಯಾಲಯ ಮೂರು ವರ್ಷಗಳ ನಂತರ ಪರೀಕ್ಷೆ ನಡೆಸದೇ ಫಲಿತಾಂಶ ಪ್ರಕಟಿಸಿತ್ತು.

# ಬಪ್ಪ ಬ್ಯಾರಿಗೆ ಜೀವ ತುಂಬಿದ ಶೇಣಿ

ಮಂಗಳೂರು: ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನವನ್ನು 'ಬಪ್ಪ ಬ್ಯಾರಿ' ಎಂಬ ಮುಸ್ಲಿಂ ವರ್ತಕ ಮರು ನಿರ್ಮಾಣ ಮಾಡಿದ್ದರು ಎಂಬ ಪ್ರತೀತಿ ಇದೆ. ಆ ಕಾರಣಕ್ಕೆ ಅವರ ಕುಟುಂಬಸ್ಥರಿಗೆ ಮೊದಲ ಪ್ರಸಾದ ನೀಡುವ ಸಂಪ್ರದಾಯ ಈಗಲೂ ಈ ದೇವಸ್ಥಾನದಲ್ಲಿದೆ.

'ಬಪ್ಪ ಬ್ಯಾರಿ'ಯ ಹೆಸರನ್ನು ನಾಡಿನ ಮೂಲೆಮೂಲೆಗಳಿಗೂ ಪರಿಚಯಿಸಿದ್ದು 'ಬಪ್ಪನಾಡು ಕ್ಷೇತ್ರ ಮಹಾತ್ಮೆ' ಎಂಬ ಯಕ್ಷಗಾನ ಪ್ರಸಂಗ. ಹಿರಿಯ ಯಕ್ಷಗಾನ ಕಲಾವಿದ ಶೇಣಿ ಗೋಪಾಲಕೃಷ್ಣ ಭಟ್ಟರು, ಬಪ್ಪ ಬ್ಯಾರಿಯ ಪಾತ್ರಕ್ಕೆ ಜೀವ ತುಂಬಿದವರು. ಅವರ ಕಾಲಾನಂತರ ಅನೇಕ ಕಲಾವಿದರು ಬಪ್ಪ ಬ್ಯಾರಿಯ ಪಾತ್ರ ಮಾಡಿದ್ದರೂ, ಶೇಣಿಯವರ 'ಬಪ್ಪ ಬ್ಯಾರಿ'ಯ ಛಾಯೆಯಿಂದ ಹೊರಬರಲು ಸಾಧ್ಯವಾಗಿಲ್ಲ ಎನ್ನುತ್ತಾರೆ ಪ್ರೇಕ್ಷಕರು.

ಈ ಯಕ್ಷಗಾನ ಪ್ರಸಂಗದಲ್ಲಿ ಬಪ್ಪ ಬ್ಯಾರಿ ಮತ್ತು ಭಾಗವತರ ಮಧ್ಯೆ ನಡೆಯುವ ಸಂವಾದದ ಒಂದು ತುಣುಕು ಹೀಗಿದೆ (ಪ್ರಸಂಗ - ಬಪ್ಪನಾಡು ಕ್ಷೇತ್ರ ಮಹಾತ್ಮೆ, ಭಾಗವತರು - ಅಗರಿ ಶ್ರೀನಿವಾಸ ಭಾಗವತರು).

ಯಕ್ಷಗಾನ ಪ್ರಸಂಗ ತುಳು ಭಾಷೆಯಲ್ಲಿದೆ. ಬಪ್ಪ ಬ್ಯಾರಿಯ ಮಾತುಗಳು ಆರಂಭವಾಗುವುದು ಮಲೆಯಾಳ ಭಾಷೆಯಲ್ಲಿ (ಬಪ್ಪ ಮೂಲತಃ ಕೇರಳದವರು).


ಶೇಣಿ ಗೋಪಾಲಕೃಷ್ಣ ಭಟ್ಟ

**ಬಪ್ಪ ಬ್ಯಾರಿ:** ನಾನು ಬಪ್ಪ ಬ್ಯಾರಿ, ಕೇರಳ ನಾಡಿನ ಪೊನ್ನಾನಿ ನನ್ನ ಹುಟ್ಟೂರು. ಸಣ್ಣವನಿದ್ದಾಗ ಸಮುದ್ರದಲ್ಲಿ ಮಂಜಿ (ದೋಣಿ) ಮಗುಚಿ ಎಲ್ಲರೂ ನೀರು ಪಾಲಾದರೂ ನಾನು ಬದುಕಿ ಮೂಲ್ಕಿ ತೀರಕ್ಕೆ ಬಂದು ಸೇರಿದೆ. ಹೇಗೆ...?

**ಭಾಗವತರು:** ಈಜಿ

**ಬಪ್ಪ ಬ್ಯಾರಿ :** ನಿಮ್ಮದು ತಮಾಷೆ. ಸಮುದ್ರವೆಂದರೆ ನಿಮ್ಮ ತೋಟದ ಕೆರೆಯೋ ಸ್ವಾಮಿ ಈಜಿ ಪಾರಾಗಲು? ನಾನು ಬದುಕಿದ್ದು ಅಲ್ಲಾಹನ ಕುದ್ರತ್‌ನಿಂದ, ಯಾವುದರಿಂದ?

**ಭಾಗವತರು:** ಕುದುರೆಯಿಂದ

**ಬಪ್ಪ ಬ್ಯಾರಿ:** ಕುದುರೆಯಲ್ಲ ಸ್ವಾಮಿ, ಕುದ್ರತ್‌ನಿಂದ–ಅಲ್ಲಾನ ದಯೆಯಿಂದ. ನಾನು ಸಮುದ್ರದಿಂದ ಪಾರಾದೆನೇನೊ ಅಹುದು, ಆದರೆ ಉಡಲು ಬಟ್ಟೆ, ಹೊಟ್ಟೆಗಿಷ್ಟು ಗಂಜಿ, ತಲೆ ಮೇಲೆ ಒಂದು ಮಾಡು (ಸೂರು) ಬೇಡವೇ? ಊರ ಬಲ್ಲಾಳರನ್ನು ಕೇಳಿದೆ. ಒಂದಿಷ್ಟು ಜಾಗ ಕೊಟ್ಟರೆ ಒಂದು ಅಂಗಡಿ ನಡೆಸಿ ಬದುಕಿಕೊಂಡೇನು. ನಾವು ಬ್ಯಾರಿಗಳು ವ್ಯಾಪಾರ ಮಾಡಿ ಬದುಕುವವರು. ದೇವರ ದಯೆಯಿಂದ ಈಗ ಈ ಸ್ಥಿತಿಗೆ ಬಂದಿದ್ದೇನೆ'

**ಭಾಗವತರು:** ಹೋ ಬಪ್ಪ ಸಾಹುಕಾರರು

**ಬಪ್ಪ ಬ್ಯಾರಿ:** ಯಾರು ಸಾಹುಕಾರರು ಸ್ವಾಮಿ ಈ ಜಗತ್ತಿನಲ್ಲಿ, ಮೇಲಿನವನೊಬ್ಬನೇ. ನಾವು ಸಾಯುವಾಗ ದೊಡ್ಡ ಬಂಗಲೆ, ಆಸ್ತಿ ಮಾಡಿದುದನ್ನು ಯಾರೂ ಮಾತಾಡುವುದಿಲ್ಲ. ಮನುಷ್ಯ ಹೇಗೆ ಬದುಕಿದ? ನಾಲ್ಕು ಜನರಿಗೆ ಬೇಕಾದವನಾಗಿದ್ದನೋ ಎಂದು ಕೇಳುತ್ತಾರೆ. ನೀವು ನೋಡಿರಬಹುದು ನಾವು ಮಾತನಾಡುವಾಗ 'ನಾನು, ನನ್ನದು' ಎಂದು ಹೇಳುವ ಪದ್ಧತಿಯಿಲ್ಲ. 'ನಾವು, ನಮ್ಮದು' ಎಂದೇ ಹೇಳುತ್ತೇವೆ. ನಾವು ಎಂದರೆ...

**ಭಾಗವತರು:** ನೀವು ಮತ್ತು ಹೆಂಡತಿ– ಮಕ್ಕಳು

**ಬಪ್ಪ ಬ್ಯಾರಿ:** ನಿಮ್ಮದು ತಮಾಷೆ ನೋಡಿ, 'ಅಲ್ಲಾಹನ ದಯೆಯಿಂದ' ಅಂತ ಹೇಳುತ್ತಿದ್ದೆ. ನಾವು ಅಲ್ಲಾ ಅಲ್ಲಾ ಅಂತ, ನೀವು ರಾಮ ರಾಮ ಅಂತ ಹೇಳುತ್ತೀರಿ. ಎಲ್ಲಾ ಒಂದೇ, ಕೆಲವು ಕಿಡಿಗೇಡಿಗಳು, ನೀವು ರಾಮ ಎನ್ನುವಾಗ ಇವರು ದೇವರು ಅಲ್ಲ ಅಂತ ಹೇಳುತ್ತಿದ್ದಾರೆ ಎನ್ನುವರು. 'ಲಾ ಇಲಾಹಿ ಇಲ್ಲಲ್ಲಾಹ' ಎಂದರೆ ಏನು ಸ್ವಾಮಿ? ದೇವರನ್ನು ಬಿಟ್ಟರೆ ಬೇರೆ ಗತಿಯಿಲ್ಲಾ ಅಂದಲ್ಲವೇ? ಮತ್ತೆ ಈ ಜಾತಿಯೆಲ್ಲಾ ಯಾಕೆ? ಅದು ನಮಗೆ ಒಂದು ನೈತಿಕ ಪರಿಧಿ, ಬೇಲಿ ಇದ್ದ ಹಾಗೆ. ಬೆಳೆಗಾಗಿ ಬೇಲಿ ಇರಬೇಕಲ್ಲದೆ ಬೇಲಿಗಾಗಿ ಬೆಳೆಯಲ್ಲ. ದೇವರು ತಂದೆ, ಧರ್ಮ ತಾಯಿ ಇದ್ದಂತೆ. ತಾಯಿ ಹೇಳಿದರಲ್ಲವೆ ತಂದೆಯ ಗುರುತು? ನನ್ನ ತಾಯಿ ನಿಮ್ಮ ತಾಯಿಯಲ್ಲ (ತುಳು ಸಂಭಾಷಣೆಯಲ್ಲಿ ಶೇಣಿಯವರು ಇಲ್ಲಿ 'ಎಂಕಪ್ಪೆ ಈರಪ್ಪೆ ಅತ್ತ್' ಎಂಬ ಪನ್ ತರುತ್ತಾರೆ. ಅಂದರೆ ನನ್ನ ತಾಯಿ ನಿನ್ನ ತಾಯಿ ಅಲ್ಲ ಎಂದು ಅರ್ಥ. ಮತ್ತೊಂದು ಅರ್ಥ – 'ವೆಂಕಪ್ಪ ವೀರಪ್ಪ ಅಲ್ಲ' ಎಂಬುದು). ಆದರೆ, ತಂದೆ (ದೇವರು) ಎಲ್ಲರಿಗೂ ಒಬ್ಬನಲ್ಲವೆ? ಬ್ಯಾರಿಗೊಬ್ಬ, ಭಟ್ರಗೊಬ್ಬ, ಪೊರ್ಬು (ಕ್ರಿಶ್ಚಿಯನ್) ಗೊಬ್ಬ ದೇವರಿದ್ದಾನೆಯೆ? ಇಲ್ಲ. ಮಳೆ ಬಂದರೆ ನಿಮ್ಮ ತೋಟಕ್ಕೆ, ನನ್ನ ಗದ್ದೆಗೆ, ಪೊರ್ಬುವಿನ ಅಂಗಳಕ್ಕೆ ಸಮವಾಗಿ ಬೀಳುವುದಿಲ್ಲವೆ? ಬರಗಾಲ ಬಂದರೆ ಎಲ್ಲರಿಗೂ ಒಂದೇ ತರಹ ಅಲ್ಲವೆ? ನಮ್ಮದು ಚಂದದ ಊರು. ಇಲ್ಲಿ ಎಷ್ಟು ಭಾಷೆಗಳು. ಎಷ್ಟು ವ್ಯತ್ಯಾಸ ನೋಡಿ. ಕನ್ನಡದಲ್ಲಿ ತಾಯಿಗೆ ಅಮ್ಮ ಅಂದ್ರೆ, ತುಳುವಿನಲ್ಲಿ ಅಪ್ಪೆ ಅನ್ನುತ್ತಾರೆ. ಅದೇ ತಂದೆಗೆ ಕನ್ನಡದಲ್ಲಿ ಅಪ್ಪ ಎಂದೂ, ತುಳುವಿನಲ್ಲಿ ಅಮ್ಮೆ ಎಂದೂ ಹೇಳುವರು. ನನ್ನ ಹೆಸರು ಬಪ್ಪ, ಕೊಂಕಣಿ ಭಾಷೆಯಲ್ಲಿ ತಂದೆ ಎಂದಾಗುತ್ತದೆ...

ಹೀಗೆ ಬಪ್ಪ ಬ್ಯಾರಿಯ ಮಾತುಗಳು ಅಧ್ಯಾತ್ಮವನ್ನು ಹಳ್ಳಿಯ ಜನಸಾಮಾನ್ಯರ ಎದೆಗೆ ಇಳಿಸುವ ರೀತಿಯಲ್ಲಿ ಸಾಗುತ್ತದೆ.


ರಿಪ್ಪನ್‌ಪೇಟೆಯಲ್ಲಿ ಶುಕ್ರವಾರ ಹೊಂಬುಜ ಪದ್ಮಾವತಿ ಅಮ್ಮನವರ ಮಹಾ ರಥೋತ್ಸವಕ್ಕೆ ಮಠದ ಪೀಠಾಧಿಕಾರಿ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಚಾಲನೆ ನೀಡಿದರು.

# ಗೋವು ಸಮ್ಮೇಳನ: ಮುಸ್ಲಿಂ ವರ್ತಕರ ಅಂಗಡಿ ತೆರವು

ಪ್ರಜಾವಾಣಿ ವಾರ್ತೆ

ಶನಿವಾರಸಂತೆ (ಕೊಡಗು): ಸಮೀಪದ ತಪೋವನ ಕ್ಷೇತ್ರದ ಮನೇಹಳ್ಳಿ ಮಠದ ಬಿಲ್ವ ಗೋಶಾಲೆಯ ದಶಮಾನೋತ್ಸವದ ಅಂಗವಾಗಿ ಆಯೋಜಿಸಿದ್ದ 'ಕುಲ ಗೋವು ಸಮ್ಮೇಳನ'ದಲ್ಲಿ ಮುಸ್ಲಿಂ ಸಮುದಾಯದವರಿಗೆ ವ್ಯಾಪಾರ ನಡೆಸಲು ಬಜರಂಗ ದಳದ ಕಾರ್ಯಕರ್ತರು ಅವಕಾಶ ನೀಡಲಿಲ್ಲ. ರಸ್ತೆ ಬದಿ ಹಾಗೂ ಮೈದಾನದಲ್ಲಿ ಹಾಕಿದ್ದ ಅಂಗಡಿಗಳನ್ನು ಕಾರ್ಯಕರ್ತರು ಶುಕ್ರವಾರ ತೆರವುಗೊಳಿಸಿದರು. ಮಕ್ಕಳ ಆಟಿಕೆ ವಸ್ತು, ಕಬ್ಬಿನ ಹಾಲು, ತಿಂಡಿ–ತಿನಿಸುಗಳ ಮಳಿಗೆಗಳನ್ನು ಮುಸ್ಲಿಂ ವರ್ತಕರು ಹಾಕಿದ್ದರು.

'ಗೋವು ಹತ್ಯೆ ಮಾಡುವರು ಗೋವು ಸಮ್ಮೇಳನಕ್ಕೆ ಏಕೆ ಬರಬೇಕು. ಅವರಿಗೆ ಅವಕಾಶ ನೀಡುವುದಿಲ್ಲ' ಎಂದು ಕಾರ್ಯಕತರು ಆಕ್ರೋಶ ಹೊರಹಾಕಿದರು. 'ಹಿಂದೂಗಳು ನಡೆಸುವ ಜಾತ್ರೆಯ ವೇಳೆ ಮುಸ್ಲಿಂ ವರ್ತಕರಿಗೆ ಅವಕಾಶ ನೀಡುವುದಿಲ್ಲ. ಬೇಕಿದ್ದರೆ ಅವರ ಧಾರ್ಮಿಕ ಸ್ಥಳಗಳ ಬಳಿ ವ್ಯಾಪಾರ ಮಾಡಿಕೊಳ್ಳಲಿ' ಎಂದು ಸೋಮವಾರಪೇಟೆ ತಾಲ್ಲೂಕು ಸಂಚಾಲಕ ಜೀವನ್ ಆಗ್ರಹಿಸಿದರು.


ಗೋವು ಸಮ್ಮೇಳನದಲ್ಲಿ ಹಾಕಲಾಗಿದ್ದ ಅಂಗಡಿಗಳನ್ನು ಖಾಲಿ ಮಾಡಿಕೊಂಡು ಹೊರಟ ಮುಸ್ಲಿಂ ವರ್ತಕರು

**ಹಾಸನ ಜಿಲ್ಲೆಯಲ್ಲಿ ನಡೆಯುವ ಜಾತ್ರೆಗಳಲ್ಲಿ ಹಿಂದೂಯೇತರರು ವ್ಯಾಪಾರ ವಹಿವಾಟು ನಡೆಸಲು ಅವಕಾಶವಿದೆ. ಅವರಿಗೆ ಅಡ್ಡಿಪಡಿಸದಂತೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗೆ ಸೂಚಿಸುತ್ತೇನೆ**

**ಎಚ್‌.ಡಿ.ರೇವಣ್ಣ,** ಶಾಸಕ

ಬಜರಂಗದಳ ಮುಖಂಡರಾದ ಜೀವನ್ ನೇಗಳ್ಳೆ, ಮಧು ಕಿಬ್ಬೆಟ್ಟ, ಪ್ರದೀಪ್, ಪಿ.ಕೆ.ರವಿ, ತನ್ಮಯ್, ಸತ್ಯ, ವಿಶ್ವ, ನಿಶ್ಚಿತ್, ಯಶು, ಮಂಜೇಶ, ದರ್ಶನ್ ಹಾಜರಿದ್ದರು.

## 'ದೇವಾಲಯ ಮಳಿಗೆ ಹಿಂದೂಗಳಿಗೆ ಮಾತ್ರ'

ಮಂಡ್ಯ: 'ನಗರದ ಲಕ್ಷ್ಮೀಜನಾರ್ದನಸ್ವಾಮಿ ದೇವಾಲಯಕ್ಕೆ ಸೇರಿದ ನಿವೇಶನ ಹಾಗೂ ಅಂಗಡಿ ಮಳಿಗೆಗಳಲ್ಲಿ ವ್ಯಾಪಾರ ನಡೆಸಲು ಹಿಂದೂಗಳಿಗೆ ಮಾತ್ರ ಬಾಡಿಗೆ ನೀಡಬೇಕು, ಅನ್ಯ ಧರ್ಮೀಯರು ವಹಿವಾಟು ನಡೆಸಲು ಅವಕಾಶ ನೀಡಬಾರದು' ಎಂದು ಒತ್ತಾಯಿಸಿ ಬಜರಂಗಸೇನೆ ಕಾರ್ಯಕರ್ತರು ಶುಕ್ರವಾರ ತಹಶೀಲ್ದಾರ್ ಚಂದ್ರಶೇಖರ್ ಶಂ. ಗಾಳಿ ಅವರಿಗೆ ಮನವಿ ಸಲ್ಲಿಸಿದರು.

'ದೇವಾಲಯದ ಜಾಗ ಹಾಗೂ ಮಳಿಗೆಗಳನ್ನು ಹಿಂದೂಯೇತರರಿಗೆ ಬಾಡಿಗೆ, ಭೋಗ್ಯಕ್ಕೆ ನೀಡಿರುವುದನ್ನು ಕೂಡಲೇ ವಾಪಸ್ ಪಡೆಯಬೇಕು. ಧಾರ್ಮಿಕ ದತ್ತಿ ಇಲಾಖೆಯ ನಿಯಮಗಳ ಪ್ರಕಾರ ಹಿಂದೂಗಳಿಗೆ ಮಾತ್ರ ಮಳಿಗೆಗಳು ದೊರೆಯಬೇಕು. ಇನ್ನು ಮುಂದೆ ಅನ್ಯ ಧರ್ಮೀಯರು ದೇವಾಲಯದ ಜಾಗ, ಮಳಿಗೆ ಪಡೆಯುವ ಹರಾಜಿನಲ್ಲಿ ಭಾಗವಹಿಲು ಅವಕಾಶ ನೀಡಬಾರದು' ಎಂದು ಒತ್ತಾಯಿಸಿದರು.

## 'ಹಿಂದೂ ವರ್ತಕರ ಬಳಿಯಷ್ಟೇ ವಸ್ತು ಖರೀದಿಸಿ'

ಕಲಬುರಗಿ: ಹಿಂದೂ ಧರ್ಮದ ವಿರೋಧಿಗಳಾದ ಅನ್ಯ ಕೋಮಿನ ವರ್ತಕರ ಬಳಿ ಯಾವುದೇ ರೀತಿಯ ವ್ಯಾಪಾರ ಮಾಡಬೇಡಿ ಎಂದು ಹಿಂದೂ ಮಹಿಳಾ ಜಾಗೃತಿ ವೇದಿಕೆಯವರು ಇಲ್ಲಿನ ಶರಣಬಸವೇಶ್ವರ ಜಾತ್ರೆಗೆ ಬಂದಿದ್ದ ಹಿಂದೂಗಳಿಗೆ ಶುಕ್ರವಾರ ಮನವಿ ಮಾಡಿದರು.


ಜಾತ್ರೆಯಲ್ಲಿ ಮಹಿಳೆಯರಿಗೆ ಅರಿಸಿನ– ಕುಂಕುಮ ಹಚ್ಚಿ, ಹೂವು, ಬಳೆ ನೀಡಿದ ವೇದಿಕೆ ಕಾರ್ಯಕರ್ತೆಯರು, 'ಏನನ್ನೇ ಖರೀದಿ ಮಾಡುವ ಮುನ್ನ ಯಾರ ಬಳಿ ಖರೀದಿಸುತ್ತಿದ್ದೀರಿ ಎಂಬುದನ್ನು ಖಚಿತ ಮಾಡಿಕೊಳ್ಳಿ' ಎಂದು ತಿಳಿಸಿದರು.

ವೇದಿಕೆಯ ನಾಯಕಿ ದಿವ್ಯಾ ಹಾಗರಗಿ, 'ಹಲವು ವರ್ಷಗಳಿಂದ ಒಂದು ಕೋಮಿನವರು ಹಿಂದೂಗಳ ಮೇಲೆ ದೌರ್ಜನ್ಯ ನಡೆಸುತ್ತಲೇ ಇದ್ದಾರೆ. ಅವರ ಬಳಿ ನಾವು ಯಾವುದೇ ವಸ್ತು ಖರೀದಿಸಿದರೂ ಹಣ ಕೆಟ್ಟ ಕೆಲಸಗಳಿಗೆ ಹೋಗುತ್ತದೆ. ನಮ್ಮ ವಿರುದ್ಧವೇ ಬಾಂಬ್, ತಲವಾರ್‌ಗಳನ್ನು ತಯಾರು ಮಾಡುತ್ತಾರೆ. ಹಾಗಾಗಿ, ಹಿಂದೂಗಳು ಹಿಂದೂ ವರ್ತಕರ ಬಳಿಯಷ್ಟೇ ಖರೀದಿ ಮಾಡಬೇಕು. ಮಾರುಕಟ್ಟೆಗಳಿಗೆ ಹೋಗಿ ವಸ್ತು ಖರೀದಿಸುವವರಲ್ಲಿ ಮಹಿಳೆಯರೇ ಹೆಚ್ಚು. ಹಾಗಾಗ, ಅವರಲ್ಲಿ ಅರಿವು ಮೂಡಿಸಲಾಗುತ್ತಿದೆ' ಎಂದರು.

ಕಾರ್ಯಕರ್ತೆಯರಾದ ಭಾಗೀರಥಿ ಗುನ್ನಾಪುರ, ಶ್ವೇತಾ ಸಿಂಗ್, ಜ್ಯೋತಿ, ಸಂಗೀತಾ, ರೇವತಿ ಇದ್ದರು.

## ಮಾರ್ಚ್ 16 ಕ್ಕೆ ರೇಣುಕಾಚಾರ್ಯರ ಜಯಂತಿ

ಬೆಂಗಳೂರು: ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಪ್ರತಿ ವರ್ಷ ಮಾರ್ಚ್ 16 ರಂದು ರಾಜ್ಯದಾದ್ಯಂತ ಸರ್ಕಾರದ ವತಿಯಿಂದ ಆಚರಿಸಲು ನಿರ್ಧಾರ ಕೈಗೊಳ್ಳಲಾಗಿದ್ದು, ಈ ಸಂಬಂಧ ಸರ್ಕಾರಿ ಆದೇಶ ಹೊರಡಿಸಲಾಗಿದೆ.


ರೇಣುಕಾಚಾರ್ಯರು

ರೇಣುಚಾಚಾರ್ಯರು ಸಿದ್ಧಾಂತ ಶಿಖಾಮಣಿಯಂತಹ ಮಹಾನ್ ಗ್ರಂಥವನ್ನು ಕೊಡುಗೆಯಾಗಿ ನೀಡಿದ್ದಾರೆ. ಸಾಮರಸ್ಯ, ಸಹಬಾಳ್ವೆ, ಸೌಹಾರ್ದತೆಯ ಬದುಕನ್ನು ಬೋಧಿಸಿದ್ದಾರೆ. ದಕ್ಷಿಣ ಭಾರತದಾದ್ಯಂತ ಲಕ್ಷಾಂತರ ಭಕ್ತ ಸಮೂಹವನ್ನು ರೇಣುಕಾಚಾರ್ಯರು ಹೊಂದಿದ್ದಾರೆ. ಇವರ ಜಯಂತಿ ಆಚರಿಸುವಂತೆ ಕಲಬುರಗಿಯ ಅಖಿಲ ಭಾರತ ವೀರಶೈವ ಮಹಾಸಭಾವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಮನವಿ ಸಲ್ಲಿಸಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಸಂಬಂಧ ಆದೇಶ ಹೊರಡಿಸಿದೆ.

## ಮತೀಯ ಸಂಘರ್ಷ ತಾರಕಕ್ಕೆ ಏರಿದ್ದು ನೋವಿನ ಸಂಗತಿ

ರಿಪ್ಪನ್‌ಪೇಟೆ: 'ಸಕಲ ಜೀವರಾಶಿಯಲ್ಲಿ ದೈವತ್ವವನ್ನು ಕಾಣುವುದು ಜೈನ ಸಂಸ್ಕೃತಿಯ ಪರಂಪರೆ. ವರ್ತಮಾನದ ಕಾಲಘಟ್ಟದಲ್ಲಿ ಮತೀಯ ಸಂಘರ್ಷಗಳು ತಾರಕಕ್ಕೆ ಏರಿದ್ದು ನೋವಿನ ಸಂಗತಿಯಾಗಿದೆ' ಎಂದು ಹೊಂಬುಜ ಮಠದ ಪೀಠಾಧಿಕಾರಿ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಹೇಳಿದರು.

ಶುಕ್ರವಾರ ಮಠದಲ್ಲಿ ನಡೆದ ಮಹಾರಥೋತ್ಸವದಲ್ಲಿ ಮಾತನಾಡಿದ ಅವರು, 'ವಿವಿಧತೆಯಲ್ಲಿ ಏಕತೆ ಕಾಣುವುದು ಭಾರತೀಯ ಸಂಸ್ಕೃತಿ. ಈ ನಿಟ್ಟಿನಲ್ಲಿ ಪ್ರತಿಯೊಂದು ಧರ್ಮದವರು ಇತರ ಧರ್ಮಗಳನ್ನು ಗೌರವಿಸುವ ಪರಿಪಾಠ ಬೆಳೆಸಿಕೊಳ್ಳಬೇಕು. ಧರ್ಮದಲ್ಲಿ ರಾಜಕೀಯ ಬೆರೆಯಬಾರದು' ಎಂದರು.

'ದೇಶದ ಹಿತದೃಷ್ಟಿಯಿಂದ ಸ್ವಾಮೀಜಿಗಳು ಉದ್ವೇಗದ ಮಾತಿನಿಂದ ಇತರ ಧರ್ಮಗಳ ಭಾವನೆಗಳಿಗೆ ಧಕ್ಕೆ ತರಬಾರದು. ಸಹಬಾಳ್ವೆ, ಸಹೋದರತ್ವ ಗಟ್ಟಿಗೊಳಿಸಬೇಕು' ಎಂದರು.

ಕಂಬದಹಳ್ಳಿ ಮಠದ ಪೀಠಾಧಿಕಾರಿ ಭಾನುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ, ಆರತಿ ಹಳ್ಳಿಯ ಮಠದ ಸಿದ್ಧಾಂತ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಹಾಗೂ ಇಂಪಾಲದ ವಿಜಯ್ ಪಾಟ್ನಿ ಇದ್ದರು.

ದೇಣಿಗೆ: ನಿವೃತ್ತ ಉಪನ್ಯಾಸಕ ಪ್ರೊ ಜೀವಂಧರ ಕುಮಾರ್ ಹೋತಪೇಟಿ ಅವರಿಗೆ 'ಸಿದ್ಧಾಂತ ಕೀರ್ತಿ' ಪ್ರಶಸ್ತಿಯ ಜೊತೆಯಲ್ಲಿ ನೀಡಿದ್ದ ₹ 51 ಸಾವಿರ ನಗದು ಪುರಸ್ಕಾರವನ್ನು ಅವರು ಮರಳಿ ಹೊಂಬುಜ ಮಠದ ಸಿದ್ಧಾಂತ ಕೀರ್ತಿ ಗ್ರಂಥಮಾಲೆಗೆ ದೇಣಿಗೆಯಾಗಿ ಸಮರ್ಪಿಸಿದರು.

## 'ಸಂಕುಚಿತ ಮನೋಭಾವ ಬಿಡಬೇಕು'



ಏಕತೆ, ಸೌಹಾರ್ದತೆಯ ಚಿಂತನೆಗಳು ಪ್ರತಿಯೊಬ್ಬ ಮಾನವನಲ್ಲೂ ಇದ್ದರೆ ಲೋಕ ರಾಮರಾಜ್ಯದತ್ತ ಹೋಗುತ್ತದೆ. ನಾವು ಸಂಕುಚಿತ ಮನೋಭಾವದಿಂದ ಇದ್ದರೆ ಕೆಟ್ಟ ದಾರಿಗೆ ಹೋಗುತ್ತದೆ. ಸಾಮರಸ್ಯ, ಸಮಾನತೆ ಮತ್ತು ಏಕತೆಯ ಬಗ್ಗೆ ವಿಶಾಲ ಮನೋಹೃದಯದಿಂದ ಪ್ರತಿಯೊಬ್ಬ ಮನುಷ್ಯ ಚಿಂತಿಸಿದಾಗ ಯಾವುದೇ ವಿರೋಧಾಭಾಸ ಬರುವುದಿಲ್ಲ. ನಮ್ಮ ಮತ ಮೇಲು, ನಮ್ಮ ವಿಚಾರಧಾರೆಗಳು ಮೇಲು ಎಂದು ಸಂಕುಚಿತ ಮನೋಭಾವದಿಂದ ನೋಡಿದಾಗ ಮಾತ್ರ ವೈಮನಸ್ಸಿಗೆ ಕಾರಣವಾಗುತ್ತದೆ. ಎಲ್ಲಾ ಧರ್ಮಗಳು ಮನುಕುಲದ ಒಳಿತಿಗಾಗಿ ಇರುವುದು, ಎಲ್ಲಾ ವಿಚಾರಧಾರೆಗಳೂ ಮಾನವ ಕಲ್ಯಾಣಕ್ಕಾಗಿ ಇರುವುದು ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಪರಸ್ಪರ ದ್ವೇಷ ಬಿಟ್ಟು ಶಾಂತಿ ಮತ್ತು ಸೌಹಾರ್ದದಿಂದ ಒಟ್ಟಾಗಿ ಬದುಕೋಣ.

**ವಿಖ್ಯಾತಾನಂದ ಸ್ವಾಮೀಜಿ,** ಆರ್ಯ ಈಡಿಗ ಮಹಾ ಸಂಸ್ಥಾನ, ಸೋಲೂರು

## 'ವ್ಯತ್ಯಾಸ ಇದ್ದರೂ ಒಗ್ಗೂಡಬೇಕು'



ಭಾರತ ಎಂದರೆ ವಿವಿಧತೆಯಿಂದ ಕೂಡಿದ ಜಾತ್ಯತೀತ ರಾಷ್ಟ್ರ. ಹಲವು ಮತಗಳು, ವಿಭಿನ್ನ ಸಂಸ್ಕೃತಿ, ಪರಂಪರೆ, ಆಚಾರ –ವಿಚಾರಗಳನ್ನು ಹೊಂದಿರುವ ವಿಶಿಷ್ಟ ರಾಷ್ಟ. ಭಗವಾನ್ ಬುದ್ಧನಿಂದ ಆದಿಯಾಗಿ ಋಷಿಮುನಿಗಳು, ಬಸವಣ್ಣ, ದಾಸ ಶ್ರೇಷ್ಠರು, ಅಂಬೇಡ್ಕರ್ ಅವರು ಸಹಬಾಳ್ವೆಯಿಂದ ಬದುಕಬೇಕು ಎಂದು ಸಾರಿದ್ದಾರೆ. ಇಸ್ಲಾಂ ಎಂದರೆ ಶಾಂತಿ, ಎಲ್ಲರನ್ನೂ ಪ್ರೀತಿಸು ಎಂಬುದು ಕ್ರೈಸ್ತ ಧರ್ಮದ ಸಂದೇಶ. ಹಿಂದೂ ಎಂದರೆ ಎಲ್ಲರನ್ನು ಒಳಗೊಳ್ಳುವುದು. ಅಂಗೈನಲ್ಲಿರುವ ಬೆರಳುಗಳಂತೆ ಧರ್ಮಗಳ ನಡುವೆ ವ್ಯತ್ಯಾಸ ಇದ್ದರೂ ಊಟ ಮಾಡುವಾಗ ಎಲ್ಲ ಬೆರಳುಗಳೂ ಒಗ್ಗೂಡುತ್ತವೆ. ವೈಯಕ್ತಿಕ ಹಿತಾಸಕ್ತಿಗೆ ಸಮಾಜದ ಸಮಾರಸ್ಯವನ್ನು ಯಾರೂ ಹಾಳು ಮಾಡಬಾರದು. ನಾವೆಲ್ಲರೂ ಒಂದು ಎಂಬ ವಿಶಾಲ ಭಾವನೆ ಬೆಳೆಸಿಕೊಳ್ಳಬೇಕು.

**ಪ್ರಸನ್ನಾನಂದ ಸ್ವಾಮೀಜಿ,** ಮಹರ್ಷಿ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ

## ವರವರ ರಾವ್ ಬಂಧನವಿಲ್ಲ: ಸ್ಪಷ್ಟನೆ

ಬೆಂಗಳೂರು: 'ಭೀಮಾ–ಕೋರೆಗಾಂವ್ ಪ್ರಕರಣದಲ್ಲಿ ಜಾಮೀನು ಪಡೆದಿರುವ ತೆಲುಗಿನ ಕ್ರಾಂತಿಕಾರಿ ಕವಿ ವರವರ ರಾವ್ (82) ಅವರ ಜಾಮೀನು ಷರತ್ತು ಸಡಿಲಿಸುವಂತೆ ಕೋರಿ ಮುಂಬೈನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ತನಕ ರಾಜ್ಯ ಪೊಲೀಸರು ಅವರನ್ನು ಬಂಧಿಸುವುದಿಲ್ಲ' ಎಂದು ರಾಜ್ಯ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ತಿಳಿಸಿದೆ.

ಮಧುಗಿರಿಯ 4ನೇ ಹೆಚ್ಚುವರಿ ಸೆಷನ್ಸ್ ಕೋರ್ಟ್ 2022ರ ಫೆಬ್ರುವರಿ 11ರಂದು ಹೊರಡಿಸಿರುವ ಜಾಮೀನು ರಹಿತ ಬಂಧನದ ವಾರೆಂಟ್ ರದ್ದುಕೋರಿ ವರವರ ರಾವ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿದ ವೇಳೆ ರಾಜ್ಯ ಪ್ರಾಸಿಕ್ಯೂಷನ್ ಪರ ವಕೀಲ ಹೆಗಡೆ ಈ ಕುರಿತಂತೆ ಸ್ಪಷ್ಟಪಡಿಸಿದರು.

'ಮುಂಬೈನ ಎನ್‌ಐಎ ವಿಶೇಷ ನ್ಯಾಯಾಲಯದ ವ್ಯಾಪ್ತಿಯನ್ನು ತೊರೆಯಬಾರದು ಎಂಬ ಷರತ್ತಿನ ಮೇಲೆ ಬಾಂಬೆ ಹೈಕೋರ್ಟ್, ರಾವ್ ಅವರಿಗೆ ವೈದ್ಯಕೀಯ ಚಿಕಿತ್ಸೆ ಆಧಾರದಲ್ಲಿ ಜಾಮೀನು ನೀಡಿದೆ. ಹೀಗಾಗಿ, ಅವರ ಜಾಮೀನು ಷರತ್ತು ಸಡಿಲಿಸುವಂತೆ ಕೋರುವತನಕ ರಾಜ್ಯ ಪೊಲೀಸರು ಅವರನ್ನು ಬಂಧಿಸುವುದಿಲ್ಲ' ಎಂದು ಹೆಗಡೆ ವಿವರಿಸಿದರು. ಈ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ ವರವರ ರಾವ್ ಸಲ್ಲಿಸಿದ್ದ ಅರ್ಜಿಯನ್ನು ವಿಲೇವಾರಿ ಮಾಡಿದೆ.

'ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೆಂಕಟಮ್ಮನ ಹಳ್ಳಿಯಲ್ಲಿ ನಕ್ಸಲರು 2005ರಲ್ಲಿ ಕೆಎಸ್‌ಆರ್‌ಪಿ ಪೊಲೀಸ್ ತುಕಡಿ ಮೇಲೆ ದಾಳಿ ನಡೆಸಿದಾಗ ಆರು ಜನ ಪೊಲೀಸರು ಸಾವನ್ನಪ್ಪಿದ್ದರು. ಇದಕ್ಕೆ ರಾವ್ ಅವರ ಪ್ರಚೋದನಕಾರಿ ಭಾಷಣವೂ ಕಾರಣ' ಎಂಬ ಆರೋಪದಡಿ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಸಿದ್ದರಾಮನಹುಂಡಿಯಲ್ಲಿ ಜಾತ್ರಾ ಸಂಭ್ರಮ

## ಸಿದ್ದರಾಮಯ್ಯ ವೀರ ಮಕ್ಕಳ ಕುಣಿತ

ಪ್ರಜಾವಾಣಿ ವಾರ್ತೆ

ಮೈಸೂರು: ಸ್ವಗ್ರಾಮ ಸಿದ್ದರಾಮನಹುಂಡಿಯಲ್ಲಿ ಗುರುವಾರ ರಾತ್ರಿ ನಡೆದ ಸಿದ್ದರಾಮೇಶ್ವರ ಜಾತ್ರೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ನೂರಾರು ಗ್ರಾಮಸ್ಥರ ನಡುವೆ ಸುಮಾರು 40 ನಿಮಿಷ ವೀರಕುಣಿತ ಮಾಡಿ ಸಂಭ್ರಮಿಸಿದರು. ಅವರ ಕುಣಿತದ ದೃಶ್ಯಗಳು ಫೇಸ್‌ಬುಕ್ ಹಾಗೂ ಟ್ವಿಟರ್‌ನಲ್ಲಿ ಚರ್ಚೆಗೆ ದಾರಿ ಮಾಡಿದ್ದವು.

ಅವರ ಪುತ್ರ ಡಾ.ಯತೀಂದ್ರ ತಮ್ಮ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿರುವ ವಿಡಿಯೊವನ್ನು 1.11 ಲಕ್ಷಕ್ಕೂ ಅಧಿಕ ಮಂದಿ ವೀಕ್ಷಿಸಿದ್ದರು. 741 ಮಂದಿ ರಿಟ್ವೀಟ್ ಮಾಡಿದ್ದರೆ, 5 ಸಾವಿರಕ್ಕೂ ಅಧಿಕ ಮಂದಿ ಲೈಕ್ ಮಾಡಿದ್ದರು.

ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಸಚಿವ ಮುರುಗೇಶ್ ನಿರಾಣಿ, 'ಜಾತ್ರೆಗಳೆಂದರೆ ಹಾಗೆ ಸಂಭ್ರಮ, ಸಡಗರ, ಸಂತೋಷ ಮನೆ ಮಾಡಿರುತ್ತದೆ. ನಾವು ಎಷ್ಟೇ ಎತ್ತರಕ್ಕೆ ಬೆಳೆದರೂ ನಮ್ಮ ಬೇರನ್ನು ಎಂದಿಗೂ ಮರೆಯಬಾರದು. ಸಿದ್ದರಾಮೇಶ್ವರ ದೇವರ ಜಾತ್ರೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅವರು ವೀರ ಕುಣಿತಕ್ಕೆ ಹೆಜ್ಜೆ ಹಾಕಿದ್ದನ್ನು ಕಂಡು ನಮ್ಮೂರಿನ ಜಾತ್ರೆ ನೆನಪಾಯಿತು' ಎಂದಿದ್ದಾರೆ.


ಮೈಸೂರು ತಾಲ್ಲೂಕಿನ ಸ್ವಗ್ರಾಮ ಸಿದ್ದರಾಮನಹುಂಡಿಯಲ್ಲಿ ಗುರುವಾರ ರಾತ್ರಿ ಜಾತ್ರೆಯಲ್ಲಿ ಸಿದ್ದರಾಮಯ್ಯ ಅವರಿಂದ ವೀರ ಕುಣಿತ

ಕೆಲವರು 'ಇದು ಚುನಾವಣಾ ಗಿಮಿಕ್, ಹಿಂದೂ ವಿರೋಧಿ ಅಲ್ಲ ಎಂದು ಜನರನ್ನು ನಂಬಿಸುವ ಪ್ರಯತ್ನ' ಎಂದು ಪ್ರತಿಕ್ರಿಯಿಸಿದ್ದಾರೆ.

**ನನ್ನನ್ನು ಬಿಡಲಿಲ್ಲ; ಯತೀಂದ್ರ**

'ಅಪ್ಪ ಪ್ರತಿ ಜಾತ್ರೆಯಲ್ಲೂ ಕುಣಿಯುತ್ತಾರೆ. 6 ವರ್ಷಗಳಿಂದ ಜಾತ್ರೆ ನಡೆದಿರಲಿಲ್ಲ. ಈ ವಯಸ್ಸಲ್ಲಿ ಕುಣಿದಿರುವುದು ಅಚ್ಚರಿ ಮೂಡಿಸಿದೆ. ಈ ವರ್ಷ ಆಡುವುದಿಲ್ಲ ಎಂದಿದ್ದರು. ನಾನು ಚಿಕ್ಕವನಿದ್ದಾಗಲೇ ಕುಣಿತಕ್ಕೆ ಬಿಟ್ಟಿರಲಿಲ್ಲ. ಅವರು ಕುಣಿತ ಮೊದಲು ಕಲಿತು, ನಂತರ ಶಾಲೆಗೆ ಸೇರಿದ್ದರು' ಎಂದು ಪುತ್ರ, ಶಾಸಕ ಡಾ.ಯತೀಂದ್ರ ಹೇಳಿದರು. ಸಿದ್ದರಾಮೇಶ್ವರ ಜಾತ್ರೆ 2016ರ ನಂತರ ದೇಗುಲದ ನವೀಕರಣ ಹಾಗೂ ಕೋವಿಡ್ ಕಾರಣಗಳಿಂದ ನಡೆದಿರಲಿಲ್ಲ.

ಪರಿಷತ್‌ನಲ್ಲೂ ಪ್ರತಿಧ್ವನಿಸಿದ 'ಪ್ರಜಾವಾಣಿ'ಯ 'ಕಾಸು ಕೊಟ್ಟರಷ್ಟೇ ಪೊಲೀಸ್ ಬಾಸ್' ವರದಿ

# ಠಾಣೆಗಳು ಬಿಕರಿಗೆ: ಹರಿಪ್ರಸಾದ್ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಕ್ಕಪೇಟೆ, ಉಪ್ಪಾರಪೇಟೆ ಸೇರಿದಂತೆ ಕೆಲವು ಪೊಲೀಸ್ ಠಾಣೆಗಳಿಗೆ ಲಂಚ ಕೊಟ್ಟು ವರ್ಗಾವಣೆ ಮಾಡಿಸಿಕೊಳ್ಳುವುದು ಹಿಂದೆ ಕೇಳಿದ್ದೆವು. ಈ ಸರ್ಕಾರ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳನ್ನೂ ಬಿಕರಿಗಿಟ್ಟಿದೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ವಾಗ್ದಾಳಿ ನಡೆಸಿದರು.

ಪೊಲೀಸ್ ಇಲಾಖೆಯಲ್ಲಿ ಲಂಚದ ಹಾವಳಿ ಮತ್ತು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಕುರಿತು ನಿಯಮ 68ರ ಅಡಿಯಲ್ಲಿ ಶುಕ್ರವಾರ ಚರ್ಚೆ ಆರಂಭಿಸಿದ ಅವರು, 'ಹಣ ಕೊಡದೆ ಪೊಲೀಸ್ ಅಧಿಕಾರಿಗಳ ವರ್ಗಾವಣೆ ಆಗುತ್ತಿಲ್ಲ. ಲಂಚ ಕೊಟ್ಟು ಠಾಣೆಗೆ ಬಂದವರು ಅದನ್ನು ವಾಪಸ್ ಪಡೆಯಲು ಅಕ್ರಮಕ್ಕೆ ಇಳಿಯುತ್ತಾರೆ. ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು 'ಪ್ರಜಾವಾಣಿ' ಎಳೆ ಎಳೆಯಾಗಿ ಬಿಡಿಸಿಟ್ಟಿದೆ' ಎಂದು ಪತ್ರಿಕೆಯನ್ನು ಪ್ರದರ್ಶಿಸಿದರು.

ಪ್ರತಿ ಠಾಣೆಗೂ ದರ ಪಟ್ಟಿ ನಿಗದಿಯಾಗಿದೆ. ನಿಗದಿತ ಮೊತ್ತ ಕೊಟ್ಟವರಷ್ಟೇ ಅಲ್ಲಿಗೆ ಹೋಗಲು ಎಂಬ ಸಾಧ್ಯವಿದೆ. ರಾಜ್ಯದಲ್ಲಿರುವ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು 'ಎಕ್ಸಿಕ್ಯುಟಿವ್' ಹುದ್ದೆಗಳಿಗೆ ನಿಯೋಜಿಸುವುದೇ ಇಲ್ಲ. ಹಿಂದೆ ಮಾಧ್ಯಮಗಳಲ್ಲಿ ವರದಿಯಾದರೆ ಸರ್ಕಾರ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳುತ್ತಿತ್ತು. ಇದು ದಪ್ಪ ಚರ್ಮದ ಸರ್ಕಾರ. ಏನು ಹೇಳಿದರೂ ಮುಟ್ಟುವುದಿಲ್ಲ ಎಂದು ಟೀಕಿಸಿದರು.

'ಮಾಮೂಲಿ' ಎನ್ನುವುದು ಇಡೀ ಪೊಲೀಸ್ ಇಲಾಖೆಯನ್ನು ಆವರಿಸಿಕೊಂಡಿದೆ. ಮದ್ಯದಂಗಡಿಗಳಲ್ಲಿ ಲಂಚ ಪಡೆಯಲು ಪೊಲೀಸರು ಸರದಿಯಲ್ಲಿ ಹೋಗುತ್ತಾರೆ. ಲಂಚ ಕೊಟ್ಟರೆ ತಡ ರಾತ್ರಿವರೆಗೂ ಹೋಟೆಲ್ ನಡೆಸಬಹುದು ಎಂಬ ಸ್ಥಿತಿ ಇದೆ. ಇಲಾಖೆಯಲ್ಲಿ ಸುಧಾರಣೆ ಎನ್ನುವುದು ಮರೀಚಿಕೆಯಾಗಿಯೇ ಉಳಿದಿದೆ ಎಂದರು.

'ಪೊಲೀಸರು ಲಂಚ ತಿನ್ನುವ ನಾಯಿಗಳು' ಎಂದು ನೀವೇ ಬೈದಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿಲ್ಲವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಪ್ರಶ್ನಿಸಿದರು.

ನಿಷ್ಠೆ ಬದಲಾಗಿದೆ: 'ಪೊಲೀಸರು ಸಂವಿಧಾನ ಮತ್ತು ರಾಷ್ಟ್ರಧ್ವಜಕ್ಕೆ ನಿಷ್ಠರಾಗಿರಬೇಕು. ಆದರೆ, ಈಗ ಪೊಲೀಸರು ಪಕ್ಷ ಮತ್ತು ಬೇರೆ ಧ್ವಜಕ್ಕೆ ನಿಷ್ಠರಾದಂತೆ ಕಾಣುತ್ತಿದೆ. ಕರ್ನಾಟಕ ಪ್ರಗತಿಶೀಲ ರಾಜ್ಯ. ಉತ್ತರ ಪ್ರದೇಶ, ಬಿಹಾರ ರಾಜ್ಯಗಳಂತೆ ಇಲ್ಲಿನ ಪೊಲೀಸ್ ಇಲಾಖೆ ಆಗಬಾರದು' ಎಂದು ಹರಿಪ್ರಸಾದ್ ಹೇಳಿದರು.


ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿದರು – ಪ್ರಜಾವಾಣಿ ಚಿತ್ರ

## 'ನಾಯಕರೇ ರಕ್ಷಣೆಗೆ ನಿಂತಿದ್ದರು'

'ಮುಖ್ಯಮಂತ್ರಿ ಮನೆಯ ಭದ್ರತೆಗೆ ನಿಯೋಜಿಸಿದ ಪೊಲೀಸರೇ ಗಾಂಜಾ ಮಾರಾಟ ಮಾಡಿ ಸಿಕ್ಕಿ ಬೀಳುತ್ತಾರೆ. ಪ್ರಕರಣದಲ್ಲಿ ಹಿರಿಯ ಪೊಲೀಸ್ ಅಧಿಕಾರಿಯನ್ನು ಅಮಾನತು ಮಾಡಲಾಗುತ್ತದೆ. ಆಗ ರಾಜಕೀಯ ನಾಯಕರೇ ಗೃಹ ಸಚಿವ ಆರಗ ಜ್ಞಾನೇಂದ್ರರ ಮನೆಗೆ ಹೋಗಿ ಅಧಿಕಾರಿಯನ್ನು ಅಮಾನತು ಮಾಡದಂತೆ ಒತ್ತಡ ಹೇರಿದ್ದರು. ಇಂತಹವರನ್ನು ರಾಜಕೀಯದಿಂದಲೇ ಹೊರಗಟ್ಟಬೇಕು' ಎಂದು ಬಿ.ಕೆ. ಹರಿಪ್ರಸಾದ್ ಹೇಳಿದರು.

**ಪೊಲೀಸ್ ಇಲಾಖೆಯಲ್ಲಿ ಲಂಚದ ಹಾವಳಿ ಇರುವುದಕ್ಕೆ ಸ್ಪಷ್ಟವಾದ ಸಾಕ್ಷ್ಯ ಕೊಡಬೇಕು. ಈ ವಿಚಾರದಲ್ಲಿ ಕಾಂಗ್ರೆಸ್‌ನವರು ಪದವಿ ಪಡೆದವರು**

**ಜೆ.ಸಿ. ಮಾಧುಸ್ವಾಮಿ,** ಕಾನೂನು ಸಚಿವ

**ಪೊಲೀಸ್ ಇಲಾಖೆಯಲ್ಲಿ ಲಂಚ ಹಿಂದೆಯೂ ಇತ್ತು. ಆದರೆ, ಈಗ ವಿಪರೀತ ಜಾಸ್ತಿ ಆಗಿದೆ. ಪತ್ರಿಕೆಗಳಲ್ಲಿ ಪ್ರಕಟವಾದುದರಲ್ಲಿ ನಿಜವೇ ಇದೆ.**

**ಮರಿತಿಬ್ಬೇಗೌಡ,** ಜೆಡಿಎಸ್ ಸದಸ್ಯ

# ಬಿಸಿಯೂಟಕ್ಕಾಗಿ ಕಿ.ಮೀ.ಗಟ್ಟಲೆ ನಡೆಯುವ ಗರ್ಭಿಣಿಯರು!

ಬೆಂಗಳೂರು: 'ಮಲೆನಾಡು ಭಾಗದಲ್ಲಿ ಗರ್ಭಿಣಿಯರು, ಬಾಣಂತಿಯರು 'ಮಾತೃಪೂರ್ಣ' ಯೋಜನೆಯಡಿ ಮಧ್ಯಾಹ್ನದ ಬಿಸಿಯೂಟ ಸೇವನೆಗೆ ಕಿ.ಮೀ.ಗಟ್ಟಲೆ ದೂರ ನಡೆದು ಹೋಗಬೇಕಾಗಿದೆ. ಇದರಿಂದ ಗರ್ಭಪಾತವಾದ ನಿದರ್ಶನಗಳೂ ಇವೆ' ಎಂದು ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಹೇಳಿದರು.

ವಿಧಾನಸಭೆಯಲ್ಲಿ ಶುಕ್ರವಾರ ಇಲಾಖೆಗಳ ಅನುದಾನಗಳ ಬೇಡಿಕೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗರ್ಭಿಣಿಯರು ಬಿಸಿಯೂಟಕ್ಕಾಗಿ ಪ್ರತಿ ದಿನ 2 ರಿಂದ 3 ಕಿ.ಮೀ ದೂರ ನಡೆದು ಹೋಗಬೇಕಾಗಿದೆ. ಇದರಿಂದ ತೊಂದರೆ ಆಗಿದ್ದು, ಅವರ ಮನೆಯಲ್ಲೇ ಊಟ ಪೂರೈಕೆ ಮಾಡಲು ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದರು.

ರಾಜೇಗೌಡರ ಮಾತನ್ನು ಸಮರ್ಥಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ರಾಜ್ಯದ ಬಹುತೇಕ ಕಡೆಗಳಲ್ಲಿ ಇದೇ ಸ್ಥಿತಿ ಇದೆ. ಮನೆಗೆ ಊಟ ಪೂರೈಸಿದರೆ ಗಂಡ, ಮಕ್ಕಳು ಇತರರೂ ಊಟ ಮಾಡುತ್ತಾರೆ ಎಂಬ ಕಾರಣಕ್ಕೆ ನಿಲ್ಲಿಸಲಾಗಿದೆ ಎನ್ನುತ್ತಾರೆ ಅಧಿಕಾರಿಗಳು. ಇದನ್ನು ನಂಬಲಾದೀತೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಮಾತನಾಡಿ, 'ಇಲಾಖೆ ಕೆಟ್ಟು ಹೋಗಿದೆ. ಅಲ್ಲಿರುವ ಕೆಲವರು ಕಸಾಯಿಖಾನೆಗಳಲ್ಲಿ ಇರುವುದಕ್ಕೂ ಲಾಯಕ್ಕಿಲ್ಲ' ಎಂದು ಕಿಡಿಕಾರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್, 'ಮಾತೃಪೂರ್ಣ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿನ ಗುಡ್ಡುಗಾಡು ಪ್ರದೇಶದ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಅಂಗನವಾಡಿ ಕೇಂದ್ರದಲ್ಲಿ ಬಿಸಿಯೂಟ ತಯಾರಿಸಿ ನೀಡುವ ಬದಲು ವಿತರಣೆ, ಇತರೆ ವೆಚ್ಚ ಗಳು ಸೇರಿ ಯೋಜನಾ ಘಟಕ ವೆಚ್ಚ ₹21 ಗಳಂತೆ ಆಹಾರ ಸಾಮಗ್ರಿಗಳನ್ನು ತಿಂಗಳಿಗೊಮ್ಮೆ ವಿತರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ' ಎಂದರು.

ವಿಧಾನ ಪರಿಷತ್‌ನಲ್ಲಿ 'ಪ್ರಜಾವಾಣಿ' ವರದಿ ಪ್ರಸ್ತಾಪ

# ಆಧಾರ್ ದತ್ತಾಂಶ ಕಳವು: ಪ್ರಕರಣದ ವರ್ಗಾವಣೆ ಇಲ್ಲ– ಆರಗ ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೊಡಿಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಆಧಾರ್ ದತ್ತಾಂಶ ಕೇಂದ್ರದಲ್ಲಿ ನಡೆದಿರುವ ಬಹುಕೋಟಿ ಮೌಲ್ಯದ ಕಂಪ್ಯೂಟರ್ ಚಿಪ್‌ಗಳ ಕಳವು ಪ್ರಕರಣದ ತನಿಖೆಯನ್ನು ಸ್ಥಳೀಯ ಪೊಲೀಸರೇ ನಡೆಸುತ್ತಾರೆ. ಉನ್ನತ ಸಂಸ್ಥೆಗಳಿಗೆ ತನಿಖೆ ವರ್ಗಾಯಿಸುವ ಅಗತ್ಯ ಇಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಪ್ರಕರಣದ ಕುರಿತು 'ಪ್ರಜಾವಾಣಿ'ಯ ಫೆಬ್ರುವರಿ 21ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಆಧಾರ್ ದತ್ತಾಂಶ ಕೇಂದ್ರಕ್ಕೆ ಕನ್ನ!' ವಿಶೇಷ ವರದಿಯನ್ನು ಆಧರಿಸಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ವಿಧಾನ ಪರಿಷತ್‌ನ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದರು. ಪ್ರಕರಣದ ತನಿಖೆ ಸಮರ್ಪಕವಾಗಿ ನಡೆಯದ ಕಾರಣ, ಕೇಂದ್ರ ತನಿಖಾ ಸಂಸ್ಥೆಗಳಿಗೆ ಶಿಫಾರಸು ಮಾಡುವಂತೆ ಆಗ್ರಹಿಸಿದ್ದರು.

ಈ ಬಗ್ಗೆ ಶುಕ್ರವಾರ ಸದನದಲ್ಲಿ ಉತ್ತರ ಮಂಡಿಸಿದ ಗೃಹ ಸಚಿವರು, 'ಆಧಾರ್ ದತ್ತಾಂಶ ಕೇಂದ್ರದಲ್ಲಿ ₹ 2 ಕೋಟಿ ಮೌಲ್ಯದ ಕಂಪ್ಯೂಟರ್ ಚಿಪ್‌ಗಳು ಕಳುವಾಗಿರುವ ಕುರಿತು ಎಚ್.ಪಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ವಿಜಯಕುಮಾರ್ ಎನ್. ಎಂಬುವವರು 2021ರ ಸೆಪ್ಟೆಂಬರ್ 17ರಂದು ದೂರು ನೀಡಿದ್ದರು. ಈ ಕುರಿತು ತನಿಖೆ ನಡೆಯುತ್ತಿದೆ' ಎಂದರು.

ಈವರೆಗೆ ಪ್ರಾಥಮಿಕ ಮಾಹಿತಿ ಸಂಗ್ರಹಿಸುವ ಕೆಲಸ ಮಾತ್ರ ನಡೆದಿದೆ. ಹೆಚ್ಚಿನ ಮಾಹಿತಿ ಒದಗಿಸುವಂತೆ ದೂರುದಾರ ವಿಜಯಕುಮಾರ್, ಆಧಾರ್ ದತ್ತಾಂಶ ಕೇಂದ್ರದ ಭದ್ರತಾ ಉಸ್ತುವಾರಿ ಹೊತ್ತಿರುವ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ ಅಧಿಕಾರಿ ಹಾಗೂ ಆಧಾರ್ ಉಪ ಮಹಾ ನಿರ್ದೇಶಕರಿಗೆ ನೋಟಿಸ್ ನೀಡಲಾಗಿದೆ. ಅವರಿಂದ ಮಾಹಿತಿ ಬಂದ ಬಳಿಕ ತನಿಖೆ ಮುಂದುವರಿಯಲಿದೆ ಎಂದು ಅವರು ತಿಳಿಸಿದರು.

ಆಧಾರ್ ದತ್ತಾಂಶ ಸೋರಿಕೆಯಾಗಿಲ್ಲ. ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಕೃತ್ಯಗಳೂ ನಡೆದಿರುವುದು ಕಂಡುಬಂದಿಲ್ಲ ಎಂದು ಹೇಳಿದರು.

## ಟಿಪ್ಪು ಕುರಿತ ಪಠ್ಯ ಕೈಬಿಡದಂತೆ ಆಗ್ರಹ

ಬೆಂಗಳೂರು: ಟಿಪ್ಪು ಸುಲ್ತಾನ್ ಕುರಿತ ವಿಷಯಗಳನ್ನು ಪಠ್ಯಕ್ರಮದಿಂದ ತೆಗೆದುಹಾಕುವ ತೀರ್ಮಾನವನ್ನು ಕೈಬಿಡಬೇಕು ಎಂದು ಕಾಂಗ್ರೆಸ್ ಸದಸ್ಯ ಸಲೀಂ ಅಹ್ಮದ್ ಸರ್ಕಾರವನ್ನು ಒತ್ತಾಯಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ಟಿಪ್ಪು ಸುಲ್ತಾನ್ ದೂರದೃಷ್ಟಿಯ, ಸರ್ವಧರ್ಮ ಸಹಿಷ್ಣು, ವೈಜ್ಞಾನಿಕ ಮನೋಭಾವದ ಪ್ರಗತಿಪರ ಆಡಳಿತಗಾರರಾಗಿದ್ದರು. ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರೊಂದಿಗೆ ಹೋರಾಡುತ್ತಲೇ ರಣಾಂಗಣದಲ್ಲಿ ಮಡಿದ ಮೊದಲ ರಾಜ. ಮೈಸೂರು ಹುಲಿ ಎಂದು ಖ್ಯಾತಿ ಪಡೆದಿದ್ದ ಅವರ ಇತಿಹಾಸವನ್ನು ಸಂಪೂರ್ಣವಾಗಿ ಮಕ್ಕಳಿಗೆ ತಿಳಿಸುವುದು ಸರ್ಕಾರದ ಕರ್ತವ್ಯ' ಎಂದರು.

'ಈಗ ಟಿಪ್ಪು ಅವರಿಗೆ ಸಂಬಂಧಿಸಿದ ಪಠ್ಯವನ್ನು ಕೈಬಿಡಲಾಗುತ್ತದೆ ಎಂಬ ಚರ್ಚೆ ನಡೆಯುತ್ತಿದೆ. ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಟ್ಟುಕೊಂಡು ಪಠ್ಯಪುಸ್ತಕ ಪರಿಶೀಲನಾ ಸಮಿತಿ ತಯಾರು ಮಾಡಿರುವ ವರದಿಯನ್ನು ಜಾರಿಗೊಳಿಸುವ ನಿರ್ಧಾರವನ್ನು ಬದಲಿಸಬೇಕು' ಎಂದು ಆಗ್ರಹಿಸಿದರು.

ಮತಾಂತರ ನಿಷೇಧ ಅಸಾಂವಿಧಾನಿಕ: ವಿನಿಶಾ ನೆರೋ

# ಮತಾಂತರ ಕಾಯ್ದೆ: ಕಾಂಗ್ರೆಸ್–ಬಿಜೆಪಿ ವಾಗ್ವಾದ

ಪ್ರಜಾವಾಣಿ ವಾರ್ತೆ


ವಿನಿಶಾ ನೆರೋ

ಬೆಂಗಳೂರು: ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಿರುವುದು ಅಸಾಂವಿಧಾನಿಕ ಎಂದು ಕಾಂಗ್ರೆಸ್‌ನ ಆಂಗ್ಲೊ– ಇಂಡಿಯನ್ ಸದಸ್ಯೆ ವಿನಿಶಾ ನೆರೋ ವಿಧಾನಸಭೆಯಲ್ಲಿ ಹೇಳಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದಕ್ಕೆ ಕಾರಣವಾಯಿತು.

ಶುಕ್ರವಾರ ವಿವಿಧ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವ ಸಂದರ್ಭದಲ್ಲಿ ಅವರು ಆಂಗ್ಲೊ– ಇಂಡಿಯನ್ ಸದಸ್ಯರ ಸದಸ್ಯತ್ವ ರದ್ದುಗೊಳಿಸುವುದು ಮತ್ತು ಮತಾಂತರ ನಿಷೇಧ ಕಾಯ್ದೆ ಮಾಡಿರುವುದು ಸಂವಿಧಾನ ಬಾಹಿರ ಎಂದು ಹೇಳಿದರು.

ವಿನಿಶಾ ನೆರೋ ಅವರ ಹೇಳಿಕೆಗೆ ಬಿಜೆಪಿಯ ಪಿ.ರಾಜೀವ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮತಾಂತರ ನಿಷೇಧ ಮಸೂದೆಯನ್ನು ವಿಧಾನಸಭೆಯಲ್ಲಿ ಬಹುಮತದಿಂದ ಅಂಗೀಕಾರ ಮಾಡಲಾಗಿದೆ. ಆದ್ದರಿಂದ ಸಂವಿಧಾನ ಬಾಹಿರ ಎಂದು ಹೇಳುವುದು ತಪ್ಪು. ಇವರ ಪ್ರಕಾರ ಈ ಸದನ ಸಂವಿಧಾನ ಬಾಹಿರ ನಿರ್ಧಾರ ಕೈಗೊಂಡಿದೆಯೇ ಎಂದು ಪ್ರಶ್ನಿಸಿದರು. ಬಿಜೆಪಿ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ವಿನಿಶಾ ಅವರ ನೆರವಿಗೆ ಧಾವಿಸಿದ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ವಿನಿಶಾ ಅವರ ಹೇಳಿಕೆಯನ್ನು ರಾಜೀವ್ ತಪ್ಪಾಗಿ ಅರ್ಥೈಸಿದ್ದಾರೆ. ಆಂಗ್ಲೊ– ಇಂಡಿಯನ್ ಸದಸ್ಯತ್ವ ರದ್ದುಗೊಳಿಸಿರುವುದು ಸಂವಿಧಾನ ಬಾಹಿರ ಎಂದು ಹೇಳಿದ್ದಾರೆಯೇ ಹೊರತು ಮತಾಂತರ ನಿಷೇಧ ಕಾಯ್ದೆಯ ಬಗ್ಗೆ ಹೇಳಿಲ್ಲ ಎಂದು ಹೇಳಿದರು.

ಕಾಂಗ್ರೆಸ್ ಸದಸ್ಯರ ಸಮಜಾಯಿಷಿ ಒಪ್ಪದ ರಾಜೀವ್, ಸದಸ್ಯರು ಮಾತನಾಡಿರುವ ಕಡತವನ್ನು ತೆಗೆದು ನೋಡಿ. ಮತಾಂತರ ನಿಷೇಧ ಕಾಯ್ದೆ ಅಸಾಂವಿಧಾನಿಕ ಎಂದೇ ಹೇಳಿದ್ದಾರೆ. ಸದನದ ತೀರ್ಮಾನವನ್ನು ವಿರೋಧಿಸುವುದು, ಸದನಕ್ಕೆ ಮಾಡುವ ಅಪಮಾನ. ಅವರು ಹೇಳಿರುವ ಮಾತುಗಳನ್ನು ಕಡತದಿಂದ ತೆಗೆಯಬೇಕು ಎಂದು ಒತ್ತಾಯಿಸಿದರು.

ರಾಜೀವ್ ಮಾತಿನ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಪ್ರಿಯಾಂಕ್ ಖರ್ಗೆ, ವಿರೋಧ ಪಕ್ಷಗಳ ವಿರೋಧದ ಮಧ್ಯೆ ಮತ್ತು ಸಭಾತ್ಯಾಗ ಮಾಡಿದಾಗ ಮತಾಂತರ ನಿಷೇಧ ಮಸೂದೆಗೆ ಒಪ್ಪಿಗೆ ಪಡೆಯಲಾಯಿತು. ಇದಕ್ಕೆ ಸದನದ ಒಪ್ಪಿಗೆ ಇರಲಿಲ್ಲ. ಆದ್ದರಿಂದ ಅಸಾಂವಿಧಾನಿಕ ಎಂದು ಹೇಳಿದ್ದರಲ್ಲಿ ತಪ್ಪಿಲ್ಲ ಎಂದರು.

ಆಗ ಸಮಜಾಯಿಷಿ ನೀಡಿದ ವಿನಿಶಾ ನೆರೋ, 'ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿದ್ದಾರೆ. ಆಂಗ್ಲೊ– ಇಂಡಿಯನ್ ಸದಸ್ಯತ್ವ ರದ್ದುಪಡಿಸಿರುವುದು ಅಸಾಂವಿಧಾನಿಕ ಮಾತ್ರ ಎಂದು ಹೇಳಿದ್ದೇನೆ' ಎಂದರು. ಈ ಮಾತನ್ನು ಒಪ್ಪದ ರಾಜೀವ್, 'ಮತಾಂತರ ಕಾಯ್ದೆ ಬಗ್ಗೆಯೇ ಮಾತನಾಡಿದ್ದು, ಕಡತ ತೆಗೆಸಿ ನೋಡಿ' ಎಂದು ಪಟ್ಟು ಹಿಡಿದರು. ಕಡತ ನೋಡುವುದಾಗಿ ಉಪಸಭಾಧ್ಯಕ್ಷ ಆನಂದ ಮಾಮನಿ ಭರವಸೆ ನೀಡಿದ ಬಳಿಕ ರಾಜೀವ್ ಸುಮ್ಮನಾದರು.

## 'ಸಚಿವರು, ಶಾಸಕರ ಪತ್ರ ನನ್ನ ಬಳಿ ಇದೆ'

'ಕ್ರೈಸ್ತರು ನಡೆಸುವ ಶಾಲೆಗಳಲ್ಲಿ ಸೀಟು ಕೊಡಿಸಿ ಎಂದು ಎಷ್ಟೊ ಸಚಿವರು ಮತ್ತು ಶಾಸಕರು ನನಗೆ ಪತ್ರ ಕೊಡುತ್ತಾರೆ. ಆ ಪತ್ರಗಳು ನನ್ನ ಬಳಿ ಇವೆ. ಕ್ರೈಸ್ತರು ಎಂದರೆ ಮತಾಂತರ ಮಾಡುವವರಲ್ಲ. ಅವರು ಪ್ರೀತಿ ಹಂಚುವವರು, ಶಿಕ್ಷಣ ಮತ್ತು ಆರೋಗ್ಯದ ವಿಚಾರದಲ್ಲಿ ಸೇವೆ ಸಲ್ಲಿಸುವವರು' ಎಂದು ವಿನಿಷಾ ನಿರೋ ಹೇಳಿದರು.

'ಕ್ರೈಸ್ತರು ನಡೆಸುವ ಶಾಲೆಗಳಲ್ಲಿ ಶಿಕ್ಷಣ ವ್ಯವಸ್ಥೆ ಉತ್ತಮವಾಗಿರುವುದರಿಂದಲೇ ಜನ ಬರುತ್ತಾರೆ. ಆದರೆ, ಕ್ರೈಸ್ತ ಸಮುದಾಯದ ಅಭಿವೃದ್ಧಿಗೆ ಅನುದಾನ ಕಡಿತ ಮಾಡಲಾಗಿದೆ. ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ನೆರವಿನ ಪ್ರಮಾಣ ತಗ್ಗಿಸಲಾಗಿದೆ. ಚರ್ಚ್‌ಗಳ ಮೇಲೆ ದಾಳಿ ಹೆಚ್ಚಾಗಿದೆ. ನಮ್ಮ ಆಹಾರ ಪದ್ಧತಿಗೆ ವಿರುದ್ಧವಾದ ಕಾನೂನು ರೂಪಿಸಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

# ಕುರುಬರ ಸಂಘದಲ್ಲಿ ಅವ್ಯವಹಾರ ಆರೋಪ: ಇದೇ 29ಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಪ್ರದೇಶ ಕುರುಬರ ಸಂಘದ ಆಡಳಿತ ಮಂಡಳಿಯಿಂದ ಭಾರಿ ಅವ್ಯವಹಾರ ಮತ್ತು ಅಕ್ರಮ ನಡೆದಿದೆ. ಇದನ್ನು ಖಂಡಿಸಿ ಸಂಘದ ಚುನಾಯಿತ ನಿರ್ದೇಶಕರಿಂದ ಮಾ.29ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಸಂಘದ ನಿರ್ದೇಶಕ ಟಿ.ಬಿ.ಬಳಗಾವಿ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂಘವು ಶತಮಾನ ಪೂರೈಸಿದೆ. ಸರ್ಕಾರದಲ್ಲಿ ಮೂರು ಮಂದಿ ಪ್ರಭಾವಿ ಮಂತ್ರಿಗಳಿದ್ದರೂ ಆಡಳಿತ ಮಂಡಳಿಯವರು ಸಮಾಜದ ಅಭಿವೃದ್ಧಿ ಮಾಡದೆ, ರಾಜಕೀಯ ಮುಖಂಡರ ಚೇಲಾಗಳಾಗಿ ವೈಯಕ್ತಿಕ ಅಭಿವೃದ್ಧಿಯಲ್ಲಿ ತೊಡಗಿದ್ದಾರೆ' ಎಂದು ಆರೋಪಿಸಿದರು.

'ಗಾಂಧಿನಗರದಲ್ಲಿರುವ ಸಂಘದ ಕಟ್ಟಡ ಮತ್ತು ಶ್ರೀನಿವಾಸನಗರ ಆಸ್ತಿಗೆ 2008ರಿಂದ ಈವರೆಗೆ ಸುಮಾರು ₹2.50 ಕೋಟಿ ಕಂದಾಯ ಪಾವತಿ ಬಾಕಿ ಉಳಿಸಿಕೊಂಡು, ಹರಾಜಿನ ದುಸ್ಥಿತಿಗೆ ತಂದಿದ್ದಾರೆ. ಬಿಡಿಎ ವತಿಯಿಂದ ಶ್ರೀನಿವಾಸನಗರದಲ್ಲಿ ಮಂಜೂರಾಗಿದ್ದ ಸಿ.ಎ.ನಿವೇಶನ ಪ್ರಸ್ತುತ ಸಂಘದ ಆಸ್ತಿಯಾಗಿ ಉಳಿದಿಲ್ಲ' ಎಂದರು.

'3 ವರ್ಷಗಳಿಂದ ಸರ್ವ ಸದಸ್ಯರ ಸಭೆ ಕರೆದಿಲ್ಲ. ಕಟ್ಟಡ ಬಾಡಿಗೆ ವಸೂಲಿ ಬಗ್ಗೆ ಹಾಗೂ ಕರಾರು ಪತ್ರಗಳ ಬಗ್ಗೆ ನಿಖರ ಮಾಹಿತಿ ನೀಡಿಲ್ಲ. ಸದಸ್ಯತ್ವದಿಂದ ಬಂದ ಹಣವನ್ನು ಜಿಲ್ಲಾ ಸಂಘಗಳಿಗೆ ಬೈಲಾ ಪ್ರಕಾರ ವಿತರಿಸದೆ, ಇಷ್ಟಾನುಸಾರ ಹಂಚಿಕೆ ಮಾಡಿದ್ದಾರೆ. ಅವ್ಯವಹಾರಗಳ ಬಗ್ಗೆ ಮಾಹಿತಿ ಕೋರಿದ ಸದಸ್ಯರನ್ನು ನಿಯಮಬಾಹಿರವಾಗಿ ಅಮಾನತು ಮಾಡಿ ದಬ್ಬಾಳಿಕೆ ನಡೆಸುತ್ತಿದ್ದಾರೆ. ಬನಶಂಕರಿಯ ಕಲ್ಯಾಣ ಮಂಟಪದ ಹಣಕಾಸಿನ ಖರ್ಚುವೆಚ್ಚದ ಬಗ್ಗೆ ಲೆಕ್ಕ ಕೇಳಿದ್ದಕ್ಕೆ ಸಂಘದ ಅಧ್ಯಕ್ಷರು ಬೆದರಿಕೆ ಹಾಕಿದರು' ಎಂದು ಅವರು ಆರೋಪಿಸಿದರು.

'ಸಂಘದ ಹಾಸ್ಟೆಲ್‌ಗಳಲ್ಲಿ ಕನಿಷ್ಠ ಸೌಕರ್ಯಗಳನ್ನು ಒದಗಿಸಿಲ್ಲ. ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನಿಲ್ಲಿಸಿದ್ದಾರೆ. ಹಳೆಯ ಬೈಲಾ ತಿದ್ದುಪಡಿಗೆ ಈವರೆಗೆ ಮುಂದಾಗಿಲ್ಲ. ಕನಕ ಭವನದಿಂದ ಬಂದ ಬಾಡಿಗೆಯನ್ನು ಸಂಘದ ಖಜಾಂಚಿ ಮತ್ತು ಪ್ರಧಾನ ಕಾರ್ಯದರ್ಶಿ ದುರುಪಯೋಗ ಪಡಿಸಿಕೊಂಡಿದ್ದಾರೆ' ಎಂದರು.

## 'ಆರೋಪಗಳು ನಿರಾಧಾರ'

'ಸಂಘದ ಆಡಳಿತ ಮಂಡಳಿ ಮೇಲೆ ಮಾಡಿರುವ ಆರೋಪಗಳು ನಿರಾಧಾರ. ಸಂಘದಲ್ಲಿ ಅಕ್ರಮಗಳು ನಡೆದಿಲ್ಲ. ಕೋವಿಡ್‌ನಿಂದಾಗಿ ಸರ್ವಸದಸ್ಯರ ಸಭೆ ನಡೆಯಲಿಲ್ಲ. ಆದರೆ, ಕಾರ್ಯಕಾರಿ ಸಮಿತಿ ಸಭೆ ನಡೆದಿದೆ. ಆರೋಪ ಮಾಡಿರುವವರಿಗೆ ಅಗತ್ಯ ಮಾಹಿತಿಗಳನ್ನು ನೀಡಿದ್ದೇವೆ' ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಪ್ರಭಾರ ಅಧ್ಯಕ್ಷ ಬಿ.ಸುಬ್ರಹ್ಮಣ್ಯ 'ಪ್ರಜಾವಾಣಿ'ಗೆ ತಿಳಿಸಿದರು.

## ಕೆಪಿಎಸ್‌ಸಿ: ತ್ವರಿತ ವಿಚಾರಣೆಗೆ ಕೆಎಟಿಗೆ ನಿರ್ದೇಶನ

ಬೆಂಗಳೂರು: ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ 2011ನೇ ಸಾಲಿನಲ್ಲಿ ನಡೆಸಲಾಗಿದ್ದ ಪರೀಕ್ಷೆಯಲ್ಲಿ ಅಂತಿಮ ಪಟ್ಟಿಯಲ್ಲಿದ್ದ 362 ಅಭ್ಯರ್ಥಿಗಳ ಆಯ್ಕೆಯನ್ನು ಸಿಂಧುಗೊಳಿಸಿ; ಅವರಿಗೆ ನೇಮಕಾತಿ ಆದೇಶ ನೀಡುವ ಸಂಬಂಧದ, ಕಾಯ್ದೆ' ಜಾರಿಗೆ ತಡೆ ಕೋರಿರುವ ಅರ್ಜಿಗಳನ್ನು ತ್ವರಿತವಾಗಿ ಪರಿಶೀಲಿಸುವಂತೆ ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ (ಕೆಎಟಿ) ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಎ.ಟಿ.ಶ್ರೀನಿವಾಸ್ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ಇದೇ ವಿಚಾರಕ್ಕೆ ಸಂಬಂಧಿಸಿದ ಅರ್ಜಿಗಳು ಕೆಎಟಿ ಮುಂದೆ ಇದೇ 28ರಂದು ವಿಚಾರಣೆಗೆ ಬರಲಿವೆ. ಹಾಗಾಗಿ, ಕೆಎಟಿಯಲ್ಲಿನ ಅರ್ಜಿಗಳು ಮೊದಲು ತೀರ್ಮಾನವಾಗಲಿ. ಆನಂತರ ಹೈಕೋರ್ಟ್ ಆ ಬಗ್ಗೆ ವಿಚಾರಣೆಗೆ ಕೈಗೆತ್ತಿಕೊಳ್ಳುವುದು ಸೂಕ್ತ' ಎಂದು ಪೀಠಕ್ಕೆ ಕೋರಿದರು. ವಿಚಾರಣೆಯನ್ನು ಏಪ್ರಿಲ್ 4ಕ್ಕೆ ಮುಂದೂಡಲಾಯಿತು.

## ನ್ಯಾಯಮೂರ್ತಿಗಳಿಗೆ ಬೆದರಿಕೆ: ಪೊಲೀಸ್ ಕಸ್ಟಡಿಗೆ ಆರೋಪಿ

ಬೆಂಗಳೂರು: ಹಿಜಾಬ್ ವಿಚಾರವಾಗಿ ತೀರ್ಪು ನೀಡಿದ್ದ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಬಂಧಿಸಿರುವ ತಮಿಳುನಾಡಿನ ಎಸ್. ಜಮಾಲ್ ಮುಹಮ್ಮದ್ ಉಸ್ಮಾನಿ (44) ಅವರನ್ನು ಬೆಂಗಳೂರು ಪೊಲೀಸರು ಕಸ್ಟಡಿಗೆ ಪಡೆದಿದ್ದಾರೆ.

ಮಾರ್ಚ್ 17ರಂದು ಮಧುರೈನಲ್ಲಿ ನಡೆದ ಸಮಾವೇಶದಲ್ಲಿ ಭಾಷಣ ಮಾಡಿದ್ದ ಆರೋಪಿಗಳು, ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆಯೊಡ್ಡಿದ್ದರು. ಈ ಬಗ್ಗೆ ತಮಿಳುನಾಡು ಹಾಗೂ ಕರ್ನಾಟಕ ಎರಡೂ ರಾಜ್ಯಗಳ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು.

ಪ್ರಕರಣದ ಆರೋಪಿಗಳು ಎನ್ನಲಾದ 'ತಮಿಳುನಾಡಿನ ತೌಹೀದ್ ಜಮಾತ್ (ಟಿ.ಎನ್.ಟಿ.ಜೆ)' ಮುಸ್ಲಿಂ ಸಂಘಟನೆಯ ಮುಖಂಡ ಆರ್. ರಹಮತ್– ಉಲ್ಲಾ ಹಾಗೂ ಎಸ್. ಜಮಾಲ್ ಮುಹಮ್ಮದ್ ಉಸ್ಮಾನಿ (44) ಇಬ್ಬರನ್ನೂ ತಮಿಳುನಾಡು ಪೊಲೀಸರು ಬಂಧಿಸಿದ್ದರು. ಈ ಪೈಕಿ ಜಮಾಲ್ ಮುಹಮ್ಮದ್ ಉಸ್ಮಾನಿ ಅವರನ್ನು ಬಾಡಿ ವಾರೆಂಟ್ ಮೇಲೆ ಬೆಂಗಳೂರು ಪೊಲೀಸರು ಕಸ್ಟಡಿಗೆ ಪಡೆದು, ನಗರಕ್ಕೆ ಶುಕ್ರವಾರ ಕರೆತಂದಿದ್ದಾರೆ.

'ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಹೆಚ್ಚಿನ ವಿಚಾರಣೆಗಾಗಿ ಅವರನ್ನು ಮುಂದಿನ ಎಂಟು ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

## 'ಮಲೆನಾಡು ಕರ್ನಾಟಕ' ಘೋಷಣೆಗೆ ಒತ್ತಾಯ

ಬೆಂಗಳೂರು: ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕದಂತೆ ಮಲೆನಾಡಿನ ಜಿಲ್ಲೆಗಳನ್ನು ಸೇರಿಸಿ ಮಲೆನಾಡು ಕರ್ನಾಟಕ ಎಂದು ಘೋಷಿಸಿ ಈ ಭಾಗದ ಅಭಿವೃದ್ಧಿಗೆ ಹೆಚ್ಚಿನ ಅನುದಾನವನ್ನು ನೀಡಬೇಕು ಎಂದು ಜೆಡಿಎಸ್‌ನ ಎಚ್.ಕೆ.ಕುಮಾರಸ್ವಾಮಿ ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ, ವಿವಿಧ ಇಲಾಖೆಗಳ ಅನುದಾನಗಳ ಬೇಡಿಕೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ರಾಜ್ಯದ ಇತರ ಭಾಗಗಳ ಅಭಿವೃದ್ಧಿಗೆ ಒತ್ತು ನೀಡಿರುವುದನ್ನು ಸ್ವಾಗತಿಸುತ್ತೇನೆ. ನಮ್ಮ ಭಾಗದಲ್ಲಿ ಅತಿ ಹೆಚ್ಚು ಮಳೆ ಆಗುವುದರಿಂದ ಪ್ರತಿ ವರ್ಷವೂ ರಸ್ತೆಗಳು ಹಾಳಾಗುತ್ತಿವೆ. ಇದಲ್ಲದೇ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಆಗಬೇಕಾಗಿದೆ' ಎಂದರು.

ಕೆಎಎಸ್ ಅಧಿಕಾರಿ ಕೆ. ರಂಗನಾಥ್ ಮೇಲೆ ಎಸಿಬಿ ದಾಳಿ

# ಸಹಕಾರ ಬ್ಯಾಂಕ್ ಖಾತೆಗೆ ₹ 12 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ ಹುದ್ದೆಯಲ್ಲಿದ್ದ ಅವಧಿಯಲ್ಲಿ ಸರ್ಕಾರಿ ಜಮೀನುಗಳನ್ನು ಅಕ್ರಮವಾಗಿ ಪರಭಾರೆ ಮಾಡಿರುವ ಆರೋಪ ಎದುರಿಸುತ್ತಿರುವ ಕೆಎಎಸ್ ಅಧಿಕಾರಿ ಕೆ. ರಂಗನಾಥ್ ಮತ್ತು ಅವರ ಕುಟುಂಬದ ಸದಸ್ಯರು ಯಲಹಂಕ ಉಪನಗರದ ಅರುಣಾ ಸಹಕಾರ ಬ್ಯಾಂಕ್ ಖಾತೆಗಳಿಗೆ ಹಲವರಿಂದ ₹ 12 ಕೋಟಿಗೂ ಹೆಚ್ಚು ಸಂದಾಯ ಆಗಿರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪತ್ತೆಮಾಡಿದೆ.

37 ಎಕರೆ 10 ಗುಂಟೆ ಸರ್ಕಾರಿ ಜಮೀನುಗಳ ಪರಭಾರೆಯಲ್ಲಿನ ಅಕ್ರಮದ ಕುರಿತು ಸರ್ಕಾರದ ಆದೇಶದಂತೆ ಎಫ್‌ಐಆರ್ ದಾಖಲಿಸಿಕೊಂಡಿರುವ ಎಸಿಬಿ, ರಂಗನಾಥ್ ವಿರುದ್ಧ ತನಿಖೆ ಆರಂಭಿಸಿದೆ. ಬೆಂಗಳೂರು ನಗರ ಹಾಗೂ ದೊಡ್ಡಬಳ್ಳಾಪುರದ ಏಳು ಸ್ಥಳಗಳ ಮೇಲೆ ಶುಕ್ರವಾರ ದಾಳಿಮಾಡಿ, ಶೋಧ ನಡೆಸಲಾಗಿದೆ.


ಕೆ. ರಂಗನಾಥ್

'ಅರುಣಾ ಸಹಕಾರ ಬ್ಯಾಂಕ್‌ನಲ್ಲಿ ರಂಗನಾಥ್, ಅವರ ಪತ್ನಿ, ಕುಟುಂಬದ ಇತರ ಸದಸ್ಯರು, ಪತ್ನಿಯ ಸಂಬಂಧಿಕರ ಹೆಸರಿನಲ್ಲಿ ಹಲವು ಖಾತೆಗಳನ್ನು ತೆರೆಯಲಾಗಿದೆ. ಈ ಖಾತೆಗಳಿಗೆ ಹಲವರು ಹಣ ಸಂದಾಯ ಮಾಡಿದ್ದಾರೆ. ಹಲವು ಬಾರಿ ಅನಾಮಿಕರ ಹೆಸರಿನಲ್ಲೂ ಹಣ ಸಂದಾಯವಾಗಿರುವುದು ಕಂಡುಬಂದಿದೆ' ಎಂದು ಮೂಲಗಳು ತಿಳಿಸಿವೆ.

ಸಹಕಾರ ಬ್ಯಾಂಕ್ ಖಾತೆಗಳಿಗೆ ಸಂದಾಯವಾದ ಹಣವನ್ನು ಕೆಲವೇ ದಿನಗಳಲ್ಲಿ ನಗದೀಕರಿಸಲಾಗಿದೆ. ₹ 12 ಕೋಟಿಗೂ ಹೆಚ್ಚು ಪಡೆದಿರುವ ಮಾಹಿತಿ ತನಿಖೆ ವೇಳೆ ಪತ್ತೆಯಾಗಿದೆ ಎಂಬ ಮಾಹಿತಿ ಲಭಿಸಿದೆ.

ನ್ಯಾಯಾಂಗ ಬಡಾವಣೆಯಲ್ಲಿರುವ ರಂಗನಾಥ್ ಮನೆ, ದೊಡ್ಡಬಳ್ಳಾಪುರ ಪಟ್ಟಣದ ದತ್ತಾತ್ರೇಯ ಕಲ್ಯಾಣ ಮಂಟಪ ರಸ್ತೆಯಲ್ಲಿರುವ ಮನೆ, ಅಲ್ಲಿನ ಕನಕ ಟ್ರಸ್ಟ್ ಕಚೇರಿ, ಅಕ್ಷರ ಪಬ್ಲಿಕ್ ಶಾಲೆ ಹಾಗೂ ಬೆಂಗಳೂರಿನ ನಾಗರಭಾವಿಯಲ್ಲಿರುವ ಸಂಬಂಧಿಕರ ಮನೆಗಳಲ್ಲಿ ಶೋಧ ನಡೆಸಲಾಗಿದೆ. ಕಂದಾಯ ಭವನದಲ್ಲಿರುವ ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ ಕಚೇರಿಯಲ್ಲೂ ಶೋಧ ನಡೆಸಲಾಗಿದೆ. ದೊಡ್ಡಬಳ್ಳಾಪುರದಲ್ಲಿ ರಂಗನಾಥ್ ಜತೆ ನಂಟು ಹೊಂದಿರುವ ಎರಡು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ.

**16 ಕಡತ ವಶಕ್ಕೆ:** ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ ಕಚೇರಿಯಿಂದ ಎಸಿಬಿ ಅಧಿಕಾರಿಗಳು 16 ಕಡತಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯು ಭೂ ಮಾಫಿಯಾದೊಂದಿಗೆ ಕೈ ಜೋಡಿಸಿ ಅಕ್ರಮವಾಗಿ ಸರ್ಕಾರಿ ಜಮೀನು ಪರಭಾರೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ತನಿಖೆ ನಡೆಸುವುದಕ್ಕಾಗಿ ಈ ಕಡತಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

2020ರ ಮಾರ್ಚ್ 26ರಿಂದ ಜೂನ್ 20ರವರೆಗಿನ ಅವಧಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ತಹಶೀಲ್ದಾರ್ ಮೂಲಕ ವರದಿ ಪಡೆಯದೇ ಅಕ್ರಮವಾಗಿ 37 ಎಕರೆ 10 ಗುಂಟೆ ಸರ್ಕಾರಿ ಗೋಮಾಳ ಜಮೀನನ್ನು ಖಾಸಗಿಯವರಿಗೆ ಪರಭಾರೆ ಮಾಡಿ ಆದೇಶ ಹೊರಡಿಸಿರುವ ಆರೋಪ ರಂಗನಾಥ್ ಮೇಲಿದೆ. ಈ ಕುರಿತು 'ಪ್ರಜಾವಾಣಿ'ಯ ಫೆಬ್ರುವರಿ 18ರಂದು ವಿಶೇಷ ವರದಿ ಪ್ರಕಟಿಸಿತ್ತು. ಮಾರ್ಚ್ 17ರಂದು ಅವರನ್ನು ಸೇವೆಯಿಂದ ಅಮಾನತು ಮಾಡಿದ್ದ ರಾಜ್ಯ ಸರ್ಕಾರ, ಆರೋಪಗಳ ಕುರಿತು ತನಿಖೆ ನಡೆಸುವಂತೆ ಎಸಿಬಿಗೆ ಆದೇಶಿಸಿತ್ತು.

ಎಸಿಬಿ ಬೆಂಗಳೂರು ನಗರ ಘಟಕದ 42 ಅಧಿಕಾರಿಗಳು ಮತ್ತು ಸಿಬ್ಬಂದಿ ಶೋಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

## ಆಸ್ತಿ ದಾಖಲೆಗಳು ವಶಕ್ಕೆ

ಕೆ. ರಂಗನಾಥ್, ಅವರ ಕುಟುಂಬದ ಸದಸ್ಯರು ಮತ್ತು ಬೇನಾಮಿಗಳೆಂದು ಶಂಕಿಸಿರುವ ಕೆಲವು ವ್ಯಕ್ತಿಗಳ ಹೆಸರಿನಲ್ಲಿರುವ ಸ್ಥಿರಾಸ್ತಿ, ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಕುರಿತು ಹೆಚ್ಚಿನ ಪರಿಶೀಲನೆ ನಡೆಯುತ್ತಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರ ಪ್ರದೇಶ: ಮುಖ್ಯಮಂತ್ರಿಯಾಗಿ ಆದಿತ್ಯನಾಥ, ಸಚಿವರಾಗಿ 52 ಶಾಸಕರ ಪ್ರಮಾಣ ವಚನ

# ಎರಡನೇ ಅವಧಿಗೆ ಸಿಎಂ: ಯೋಗಿ ಹೆಗ್ಗಳಿಕೆ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಭಾರಿ ಗೆಲುವಿನ ಕಡೆ ಮುನ್ನಡೆಸಿದ್ದ ಯೋಗಿ ಆದಿತ್ಯನಾಥ ಅವರು, ಎರಡನೇ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ಈ ಮೂಲಕ, ಎರಡನೇ ಅವಧಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಿಜೆಪಿಯ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾದರು. 37 ವರ್ಷಗಳ ಬಳಿಕ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಯೋಗಿ ಮುಂದುವರೆದಿದ್ದಾರೆ.

ಇಲ್ಲಿಯ ಅಟಲ್ ಬಿಹಾರಿ ವಾಜಪೇಯಿ ಇಕಾನಾ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಅವರು ಆದಿತ್ಯನಾಥ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ ಸಿಂಗ್, ಬಿಜೆಪಿ ಆಡಳಿತ ಇರುವ ರಾಜ್ಯಗಳ ಹಲವು ಮುಖ್ಯಮಂತ್ರಿಗಳು, ಬಿಜೆಪಿಯ ಹಿರಿಯ ನಾಯಕರು ಮತ್ತು ಹಿಂದಿ ಚಿತ್ರರಂಗದ ಕೆಲ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಆದಿತ್ಯನಾಥ ಅವರ ಜೊತೆ ಇಬ್ಬರು ಉಪ ಮುಖ್ಯಮಂತ್ರಿಗಳು, 16 ಸಂಪುಟ ದರ್ಜೆ ಸಚಿವರು ಸೇರಿ 50 ಸಚಿವರು ಪ್ರಮಾಣ ವಚನ ಸ್ವೀಕರಿಸಿದರು. ಕಳೆದ ಅವಧಿಯಲ್ಲಿ ಉಪ ಮುಖ್ಯಮಂತ್ರಿ ಆಗಿದ್ದ ಕೇಶವ್ ಪ್ರಸಾದ್ ಮೌರ್ಯ ಮತ್ತು ಬಿಜೆಪಿ ಹಿರಿಯ ಬ್ರಜೇಶ್ ಪಾಠಕ್ ಅವರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.



ಪ್ರಮಾಣ ವಚನ ಸ್ವೀಕಾರದ ನಂತರ ಸಹಿ ಮಾಡಿದ ಯೋಗಿ ಆದಿತ್ಯನಾಥ —ಪಿಟಿಐ ಚಿತ್ರ

> **ರಾಜ್ಯವು ಐದು ವರ್ಷಗಳ ವಿಕಾಸ ಯಾತ್ರೆಯ ಹಲವು ಮೈಲುಗಲ್ಲುಗಳನ್ನು ನೋಡಿದೆ. ಯೋಗಿ ನಾಯಕತ್ವದಲ್ಲಿ ರಾಜ್ಯವು ಅಭಿವೃದ್ಧಿಯ ಮತ್ತೊಂದು ಅಧ್ಯಾಯ ಬರೆಯಲಿದೆ**
> **ನರೇಂದ್ರ ಮೋದಿ**, ಪ್ರಧಾನಿ

> **ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಉತ್ತರ ಪ್ರದೇಶ ಸರ್ಕಾರವು ಬಡವರ ಕಲ್ಯಾಣಕ್ಕೆ ಹೊಸ ಆಯಾಮ ನೀಡುತ್ತದೆ ಎಂಬ ವಿಶ್ವಾಸ ನನಗೆ ಇದೆ**
> **ಅಮಿತ್ ಶಾ**, ಕೇಂದ್ರ ಗೃಹ ಸಚಿವ

ಬಿಜೆಪಿಯ ಮಿತ್ರಪಕ್ಷಗಳಾದ ನಿಶಾದ್ ಪಕ್ಷದ ಸಂಜಯ್ ನಿಶಾದ್ ಮತ್ತು ಅಪ್ನಾ ದಳದ ಆಶೀಶ್ ಪಟೇಲ್ ಅವರಿಗೆ ಸಂಪುಟ ದರ್ಜೆಯ ಸಚಿವ ಸ್ಥಾನ ನೀಡಲಾಗಿದೆ. ಪ್ರಧಾನಿ ಮೋದಿ ಅವರ ಆಪ್ತರು ಎಂದೇ ಗುರುತಾಗಿರುವ ಮಾಜಿ ಐಎಎಸ್ ಅಧಿಕಾರಿ ಅರವಿಂದ್ ಕುಮಾರ್ ಶರ್ಮಾ ಮತ್ತು ಮಾಜಿ ಐಪಿಎಸ್ ಅಧಿಕಾರಿ ಅಸೀಮ್ ಅರುಣ್ ಅವರಿಗೆ ಯೋಗಿ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ದಾನಿಷ್ ಆಜಾದ್ ಅವರು ಈ ಸಂಪುಟದಲ್ಲಿ ಸ್ಥಾನ ಪಡೆದ ಏಕೈಕ ಮುಸ್ಲಿಂ ಪ್ರತಿನಿಧಿಯಾಗಿದ್ದಾರೆ.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ 22 ಶಾಸಕರು ಈ ಅವಧಿಯಲ್ಲಿಯೂ ಸಚಿವ ಸ್ಥಾನ ಪಡೆದಿದ್ದಾರೆ. ಈ ಹಿಂದೆ ಸಚಿವರಾಗಿದ್ದ ಸಿದ್ಧಾರ್ಥ್ ನಾಥ್ ಸಿಂಗ್, ಶ್ರೀಕಾಂತ್ ಶರ್ಮ ಮತ್ತು ದಿನೇಶ್ ಶರ್ಮಾ ಅವರನ್ನು ಈ ಬಾರಿ ಸಂಪುಟದಿಂದ ಕೈಬಿಡಲಾಗಿದೆ. ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಮತ್ತು ಬಹುಜನ ಸಮಾಜ ಪಕ್ಷದ ಅಧ್ಯಕ್ಷೆ ಮಾಯಾವತಿ ಅವರನ್ನು ಸಮಾರಂಭಕ್ಕೆ ಆಹ್ವಾನಿಸಲಾಗಿತ್ತು ಆದರೆ ಅವರು ಹಾಜರಾಗಿರಲಿಲ್ಲ.



ಗೋರಖಪುರದಲ್ಲಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಬುಲ್ಡೋಜರ್ ಮೆರವಣಿಗೆ ನಡೆಸಿದರು —ಪಿಟಿಐ ಚಿತ್ರ

### ಬುಲ್ಡೋಜರ್‌ಗಳಿಗೆ ಆರತಿ

ಹೊಸದಾಗಿ ಚುನಾಯಿತವಾಗಿರುವ ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ಪ್ರಮಾಣ ವಚನ ಸ್ವೀಕರಿಸುವ ದಿನ ರಾಜ್ಯದಾದ್ಯಂತ ಬಿಜೆಪಿ ಬೆಂಬಲಿಗರು, ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಯೋಗಿ ಆದಿತ್ಯನಾಥ ಅವರ ಹಿಂದಿನ ಸರ್ಕಾರವು, ಬುಲ್ಡೋಜರ್ ಸರ್ಕಾರವೆಂದೇ ಖ್ಯಾತವಾಗಿತ್ತು. ಹೀಗಾಗಿ ಬಿಜೆಪಿ ಕಾರ್ಯಕರ್ತರು ರಾಜ್ಯದ ಹಲವೆಡೆ ಶುಕ್ರವಾರ ಬುಲ್ಡೋಜರ್‌ಗಳಿಗೆ ಆರತಿ ಮಾಡಿದರು. ಕ್ರಿಮಿನಲ್ ಆರೋಪ ಹೊತ್ತಿದ್ದವರಿಗೆ ಸೇರಿದ ಆಸ್ತಿಗಳನ್ನು ಬುಲ್ಡೋಜರ್ ಹರಿಸಿ ನೆಲಸಮ ಮಾಡಿಸಿದ್ದ ಕಾರಣ ಆದಿತ್ಯನಾಥ ಅವರನ್ನು ಬುಲ್ಡೋಜರ್ ಬಾಬಾ ಎಂದು ಕರೆಯಲಾಗುತ್ತದೆ. ಲಖನೌನ ಕೆಲವು ಬೆಂಬಲಿಗರು 'ಬುಲ್ಡೋಜರ್ ಬಾಬಾ ಜಿಂದಾಬಾದ್' ಎಂದು ಘೋಷಣೆ ಕೂಗುತ್ತಾ ಬುಲ್ಡೋಜರ್‌ಗಳ ಮೆರವಣಿಗೆ ನಡೆಸಿದರು.

### ಸಂಪುಟ ರಚನೆಯಲ್ಲಿ ಜಾತಿ ಸಮೀಕರಣ

ಲಖನೌ: ಯೋಗಿ ಆದಿತ್ಯನಾಥ ಅವರ ಸಂಪುಟದಲ್ಲಿ ಎಲ್ಲಾ ಸಮುದಾಯಗಳಿಗೂ ಪ್ರಾತಿನಿಧ್ಯ ನೀಡುವ ಮೂಲಕ ಬಿಜೆಪಿಯು 2024ರ ಲೋಕಸಭಾ ಚುನಾವಣೆಯ ಮೇಲೆ ಕಣ್ಣಿಟ್ಟಿದೆ. ಯೋಗಿ ಸಂಪುಟದಲ್ಲಿ ಬ್ರಾಹ್ಮಣರು, ಜಾಟರು, ಪರಿಶಿಷ್ಟ ಜಾತಿಗಳು, ಇತರೆ ಹಿಂದುಳಿದ ವರ್ಗಗಳಿಗೆ ಸಿಂಹಪಾಲು ದೊರೆತಿದೆ. ಮುಸ್ಲಿಮರಿಗೂ ಒಂದು ಸಚಿವ ಸ್ಥಾನ ದೊರೆತಿದೆ. ಈ ಮೂಲಕ ಬಿಜೆಪಿ ಜಾತಿ ಸಮೀಕರಣ ನಡೆಸಿದೆ.

ಪರಿಶಿಷ್ಟ ಜಾತಿಗಳಿಗೆ, ಬ್ರಾಹ್ಮಣರಿಗೆ ಮತ್ತು ಜಾಟರಿಗೆ ತಲಾ ಎಂಟು ಸಚಿವ ಸ್ಥಾನಗಳನ್ನು ನೀಡಲಾಗಿದೆ. ವಿಧಾನಸಭಾ ಚುನಾವಣೆಗೂ ಮುನ್ನ ಈ ಸಮುದಾಯದ ನಾಯಕರು ಬಿಜೆಪಿಯಿಂದ ದೂರ ಸರಿದಿದ್ದರು. ಇವರಿಗೆ ಹೆಚ್ಚು ಪ್ರಾತಿನಿಧ್ಯ ನೀಡುವ ಮೂಲಕ ಈ ಸಮುದಾಯಗಳನ್ನು ಸಮಾಧಾನಪಡಿಸಲು ಬಿಜೆಪಿ ಮುಂದಾಗಿದೆ.ಈ ಹಿಂದೆ ಉಪ ಮುಖ್ಯಮಂತ್ರಿಯಾಗಿದ್ದ ಹಿಂದುಳಿದ ವರ್ಗಗಳ ಕೇಶವ ಪ್ರಸಾದ್ ಮೌರ್ಯ ಅವರು ಚುನಾವಣೆಯಲ್ಲಿ ಸೋತರೂ, ಅದೇ ಹುದ್ದೆಯಲ್ಲಿ ಅವರನ್ನು ಮುಂದುವರೆಸಲಾಗಿದೆ.

## ಸುದ್ದಿ 2 ನಿಮಿಷ

### 'ವಿಮಾನಯಾನ ವಲಯಕ್ಕೆ ಪ್ರತಿವರ್ಷ 120 ವಿಮಾನಗಳ ಸೇರ್ಪಡೆ'

ಹೈದರಾಬಾದ್ (ಪಿಟಿಐ): ಮುಂದಿನ ದಿನಗಳಲ್ಲಿ ಭಾರತೀಯ ವಿಮಾನಯಾನ ವಲಯಕ್ಕೆ ಪ್ರತಿವರ್ಷ 110 ರಿಂದ 120 ವಿಮಾನಗಳು ಸೇರ್ಪಡೆಗೊಳ್ಳುವ ನಿರೀಕ್ಷೆಯಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಶುಕ್ರವಾರ ಹೇಳಿದರು.

ವಿಂಗ್ ಇಂಡಿಯಾ 2022ರ ವಿಮಾನದವೊಂದರ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಮಾನ ಪ್ರಯಾಣಿಕರ ಸಂಖ್ಯೆ ಮತ್ತೆ ಹೆಚ್ಚುತ್ತಿದೆ. ಮುಂದಿನ ವರ್ಷದ ಹೊತ್ತಿಗೆ ದೇಶೀಯ ಪ್ರಯಾಣಿಕರ ಸಂಖ್ಯೆ 4.10 ಲಕ್ಷಕ್ಕೆ ಏರಿಕೆಯಾಗುವ ನಿರೀಕ್ಷೆಯಿದೆ. 2024-25ರ ವೇಳೆಗೆ ವಿಮಾನಯಾನ ಕ್ಷೇತ್ರವು ಹೆಚ್ಚು ವಿಸ್ತಾರಗೊಳ್ಳಲಿದೆ ಎಂದು ಸಿಂಧಿಯಾ ವಿಶ್ವಾಸ ವ್ಯಕ್ತಪಡಿಸಿದರು.



### ಪಾಕ್ ಜೈಲಿನಲ್ಲಿ 577 ಭಾರತೀಯ ಮೀನುಗಾರರು: ಸಚಿವ

ನವದೆಹಲಿ: ಪಾಕಿಸ್ತಾನದ ವಶದಲ್ಲಿ ಎಷ್ಟು ಮಂದಿ ಭಾರತೀಯ ಮೀನುಗಾರರಿದ್ದಾರೆ ಎಂಬ ಮಾಹಿತಿಯನ್ನು ಕೇಂದ್ರ ಸರ್ಕಾರವು ಲೋಕಸಭೆಗೆ ಶುಕ್ರವಾರ ನೀಡಿದೆ. ಅಲ್ಲದೇ, ಮೀನುಗಾರರ ಬಂಧನ ಮತ್ತು ಅವರ ದೋಣಿಗಳನ್ನು ವಶಪಡಿಸಿಕೊಂಡಿರುವ ಘಟನೆಗಳನ್ನು ಭಾರತ ನಿರಂತರವಾಗಿ ಪಾಕಿಸ್ತಾನದೊಂದಿಗೆ ಪ್ರಸ್ತಾಪಿಸುತ್ತಲೇ ಬರುತ್ತಿದೆ ಎಂದು ಸರ್ಕಾರ ಹೇಳಿದೆ.

'ಜನವರಿ 1 ರಂದು ವಿನಿಮಯ ಮಾಡಿಕೊಂಡ ಪಟ್ಟಿಗಳ ಪ್ರಕಾರ, ಭಾರತೀಯರು ಅಥವಾ ಭಾರತೀಯರೆಂದು ನಂಬಲಾದ 577 ಮೀನುಗಾರರನ್ನು ಬಂಧಿಸಿರುವುದಾಗಿ ಪಾಕಿಸ್ತಾನ ಒಪ್ಪಿಕೊಂಡಿದೆ' ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್ ಅವರು ಪ್ರಶ್ನೋತ್ತರ ಅವಧಿಯಲ್ಲಿ ಹೇಳಿದರು.

'ಭಾರತ-ಪಾಕಿಸ್ತಾನದ ನಡುವೆ 2008ರ ಮೇ 21ರಂದು 'ದೂತವಾಸ ಪ್ರವೇಶ ಒಪ್ಪಂದ' ಆಗಿದೆ. ಅದರ ಪ್ರಕಾರ ಎರಡೂ ದೇಶಗಳ ಜೈಲುಗಳಲ್ಲಿ ಇರುವ ಎರಡೂ ಕಡೆಗಳ ನಾಗರಿಕರ, ಮೀನುಗಾರರ ಪಟ್ಟಿಗಳನ್ನು ಪ್ರತಿ ವರ್ಷದ ಜನವರಿ 1 ಮತ್ತು ಜುಲೈ 1 ರಂದು ವಿನಿಮಯ ಮಾಡಿಕೊಳ್ಳಲಾಗುತ್ತದೆ' ಎಂದು ಮುರಳೀಧರನ್ ಲೋಕಸಭೆಗೆ ತಿಳಿಸಿದರು.

ಕಲ್ಕತ್ತ ಹೈಕೋರ್ಟ್ ಆದೇಶ: ಸಂಪೂರ್ಣ ಸಹಕಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ

# ಸಜೀವ ದಹನ ಪ್ರಕರಣದ ತನಿಖೆ ಸಿಬಿಐಗೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಿರ್‌ಭೂಮ್‌ನಲ್ಲಿನ ಸಜೀವ ದಹನ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಕಲ್ಕತ್ತ ಹೈಕೋರ್ಟ್ ಶುಕ್ರವಾರ ಆದೇಶ ನೀಡಿದೆ. ಪ್ರಕರಣದ ತನಿಖೆಗೆ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸಿಲ್ಲ. ಹೀಗಾಗಿ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸುತ್ತಿರುವುದಾಗಿ ಹೈಕೋರ್ಟ್ ಹೇಳಿದೆ.

ಶುಕ್ರವಾರ ಸಂಜೆಯೇ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ. ಶನಿವಾರದಿಂದ ತನಿಖೆ ಆರಂಭಿಸುವುದಾಗಿ ಹೇಳಿದೆ.

ಮಾರ್ಚ್ 22ರ ಮಂಗಳವಾರ ಬಿರ್‌ಭೂಮ್ ಜಿಲ್ಲೆಯ ರಾಮ್‌ಪುರಹಾಟ್‌ನ ಟಿಎಂಸಿ ಪಂಚಾಯಿತಿ ಸದಸ್ಯನ ಹತ್ಯೆ ನಡೆದಿತ್ತು. ಅದರ ಬೆನ್ನಲ್ಲೇ ಪಕ್ಕದ ಬೋಗ್‌ತುಇ ಗ್ರಾಮದಲ್ಲಿ ಹತ್ತಕ್ಕೂ ಹೆಚ್ಚು ಮನೆಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದರು. ಈ ಕೃತ್ಯದಲ್ಲಿ 8 ಜನರು ಮೃತಪಟ್ಟಿದ್ದರು. ಈ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರವು ಎಸ್‌ಐಟಿ ರಚಿಸಿತ್ತು. ತನಿಖೆಯನ್ನು ಸಿಬಿಐ ಅಥವಾ ಎನ್‌ಐಎಗೆ ವರ್ಗಾಯಿಸಬೇಕು ಎಂದು ಕೋರಿ ಹಲವರು ಕಲ್ಕತ್ತ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಗಳನ್ನು ವಜಾ ಮಾಡಿದ್ದ ಹೈಕೋರ್ಟ್, ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಿಕೊಂಡಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಎಲ್ಲಾ ಮಾಹಿತಿಗಳನ್ನು ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಮತ್ತು ಎಸ್‌ಐಟಿಗೆ ಸೂಚನೆ ನೀಡಿತ್ತು. ಹೀಗೆ ಸಲ್ಲಿಸಲಾಗಿದ್ದ ವರದಿಯನ್ನು ಶುಕ್ರವಾರ ಪರಿಶೀಲಿಸಿದ ಹೈಕೋರ್ಟ್, ತೀವ್ರ ಅಸಮಾಧಾನ ವ್ಯಕ್ತಪಡಿಸಿತು. 'ಮಾರ್ಚ್ 22ರಂದೇ ಎಸ್‌ಐಟಿ ರಚಿಸಲಾಗಿದೆ. ಆದರೆ ಈವರೆಗೆ ತನಿಖೆಯಲ್ಲಿ ಈವರೆಗೆ ಯಾವುದೇ ಪ್ರಗತಿಯಾಗಿಲ್ಲ. ಇದು ಭಯಾನಕ ಕೃತ್ಯವಾಗಿದ್ದು, ಇಂತಹ ಪ್ರಕರಣದಲ್ಲೂ ಎಸ್‌ಐಟಿ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡಿಲ್ಲ. ತನಿಖೆಗೆ ಎಸ್‌ಐಟಿ ಪರಿಣಾಮಕಾರಿಯಾದ ಯಾವುದೇ ಕೊಡುಗೆಯನ್ನು ನೀಡಿಲ್ಲ' ಎಂದು ಹೈಕೋರ್ಟ್ ಪೀಠವು ಹೇಳಿದೆ.

'ಸಿಬಿಐ ಈ ಪ್ರಕರಣದ ತನಿಖೆ ನಡೆಸಲಿದೆ. ಎಸ್‌ಐಟಿ ಈವರೆಗೆ ಸಂಗ್ರಹಿಸಿರುವ ಎಲ್ಲಾ ಸಾಕ್ಷ್ಯಗಳು, ಬಂಧಿಸಿರುವ ಆರೋಪಿಗಳು, ತನಿಖೆಯ ವರದಿಗಳನ್ನು ಶೀಘ್ರವೇ ಸಿಬಿಐಗೆ ವರ್ಗಾಯಿಸಬೇಕು. ತನಿಖೆಗೆ ರಾಜ್ಯ ಸರ್ಕಾರವೂ ಸಂಪೂರ್ಣ ಸಹಕಾರ ನೀಡಬೇಕು' ಎಂದು ಸೂಚನೆ ನೀಡಿದೆ. 'ಸಿಬಿಐ ತಕ್ಷಣವೇ ತನಿಖೆ ಆರಂಭಿಸಬೇಕು. ಪ್ರಕರಣದ ಮುಂದಿನ ವಿಚಾರಣೆ ಏಪ್ರಿಲ್ 7ರಂದು ನಡೆಯಲಿದೆ. ಅಂದು ತನಿಖೆಯ ಪ್ರಗತಿ ವರದಿಯನ್ನು ಸಲ್ಲಿಸಬೇಕು' ಎಂದೂ ಸೂಚನೆ ನೀಡಿದೆ.

**ವಿರೋಧ ಪಕ್ಷಗಳ ಸ್ವಾಗತ:** ಪ್ರಕರಣದ ತನಿಖೆಯನ್ನು ಹೈಕೋರ್ಟ್ ಸಿಬಿಐಗೆ ವಹಿಸಿದ್ದನ್ನು ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಸ್ವಾಗತಿಸಿವೆ. ಟಿಎಂಸಿ ಸಹ ಹೈಕೋರ್ಟ್‌ನ ಆದೇಶವನ್ನು ಸ್ವಾಗತಿಸಿದೆ. ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದೆ.

'ತನಿಖೆಯನ್ನು ಸಿಬಿಐ ನಡೆಸುವುದರಲ್ಲಿ ನಮಗೆ ಯಾವುದೇ ಆಕ್ಷೇಪವಿಲ್ಲ. ಆದರೆ, ಈ ಕೃತ್ಯದ ಹಿಂದೆ ಬಹುದೊಡ್ಡ ಸಂಚು ನಡೆದಿದೆ ಎಂಬ ಸತ್ಯವನ್ನು ಮರೆಮಾಚಲು, ಸಿಬಿಐ ತನಿಖೆ ಬಳಕೆಯಾಗಬಾರದು' ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ಅವರು ಹೇಳಿದ್ದಾರೆ.



ಬೋಗ್‌ತುಇ ಗ್ರಾಮದಲ್ಲಿ ಬೆಂಕಿಗೆ ಆಹುತಿಯಾಗಿದ್ದ ಮನೆಗಳಿಂದ ಸಿಎಫ್‌ಎಸ್‌ಎಲ್ ತಜ್ಞರ ತಂಡವು ಗುರುವಾರ ಮಾದರಿಗಳನ್ನು ಸಂಗ್ರಹಿಸಿತು —ಪಿಟಿಐ ಚಿತ್ರ

> **ಕರ್ತವ್ಯದ ವಿಚಾರವೇ ಬೇರೆ. ಆದರೆ, ನಾನು ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರದ್ದು ಸೋದರ–ಸೋದರಿ ಸಂಬಂಧ. ನಾವು ಆಪ್ತವಾಗೇ ಇದ್ದೇವೆ**
> **ಜಗದೀಪ್ ಧನಕರ್,** ಪಶ್ಚಿಮ ಬಂಗಾಳ ರಾಜ್ಯಪಾಲ

### ರಾಜ್ಯಸಭೆ, ವಿಧಾನಸಭೆಯಲ್ಲೂ ಗದ್ದಲ

ಪಶ್ಚಿಮ ಬಂಗಾಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ ಎಂಬುದನ್ನು ಸಜೀವ ದಹನ ಪ್ರಕರಣವು ಸಾಬೀತು ಮಾಡಿದೆ. ರಾಜ್ಯ ಸರ್ಕಾರವನ್ನು ವಜಾ ಮಾಡಿ, ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂದು ಟಿಎಂಸಿ ಸಂಸದೆ ರೂಪಾ ಗಂಗೂಲಿ ಅವರು ಶುಕ್ರವಾರ ರಾಜ್ಯಸಭೆಯಲ್ಲಿ ಆಗ್ರಹಿಸಿದ್ದಾರೆ.

ರಾಜ್ಯಸಭಾ ಕಲಾಪದ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ರೂಪಾ ಅವರು, ' ನಮಗೆ ಜೀವಿಸುವ ಹಕ್ಕಿದೆ. ಆದರೆ, ಪಶ್ಚಿಮ ಬಂಗಾಳದಲ್ಲಿ ಜನಿಸಿದ್ದೇ ದೊಡ್ಡ ಅಪರಾಧವೆಂಬಂತಾಗಿದೆ. ಅಲ್ಲಿ ಜನರನ್ನು ಸಜೀವವಾಗಿ ಸುಡಲಾಗುತ್ತಿದೆ. ಅಲ್ಲಿನ ಪೊಲೀಸರ ಮೇಲೆ ನಮಗೆ ಯಾವುದೇ ನಂಬಿಕೆ ಇಲ್ಲ. ಸಜೀವವಾಗಿ ಸುಡುವ ಮುನ್ನ, ಜನರನ್ನು ತೀವ್ರವಾಗಿ ಥಳಿಸಲಾಗಿದೆ' ಎಂದು ಹೇಳಿದರು. ಆಗ ಟಿಎಂಸಿ ಸಂಸದರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಆಗ ರಾಜ್ಯಸಭಾ ಕಲಾಪವನ್ನು ಕೆಲಕಾಲ ಮುಂದೂಡಲಾಯಿತು.

**ಮಮತಾ ಹೇಳಿಕೆಗೆ ಒತ್ತಾಯ:** ಪಶ್ಚಿಮ ಬಂಗಾಳ ವಿಧಾನಸಭೆಯಲ್ಲೂ ಈ ಪ್ರಕರಣವು ಜೋರು ಸದ್ದು ಮಾಡಿದೆ. 'ಘಟನೆ ಸಂಬಂಧ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸದನದಲ್ಲಿ ಹೇಳಿಕೆ ನೀಡಬೇಕು' ಎಂದು ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಶುಕ್ರವಾರ ಆಗ್ರಹಿಸಿದರು. ಟಿಎಂಸಿ ಸದಸ್ಯರು ಇದಕ್ಕೆ ವಿರೋಧ ವ್ಯಕ್ತಪಡಿಸಿದ ಕಾರಣ, ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

### ತಜ್ಞರ ತಂಡದಿಂದ ಮಾದರಿ ಸಂಗ್ರಹ

ಬೋಗ್‌ತುಯಿಯಲ್ಲಿ ಎಂಟು ಜನರು ಸಜೀವ ದಹನಕ್ಕೆ ತುತ್ತಾದ ಮನೆಗಳಿಗೆ ದೆಹಲಿಯ ಕೇಂದ್ರೀಯ ವಿಧಿ-ವಿಜ್ಞಾನ ಪ್ರಯೋಗಾಲಯದ (ಸಿಎಫ್‌ಎಸ್‌ಎಲ್) ತಜ್ಞರ ತಂಡವು ಶುಕ್ರವಾರ ಭೇಟಿ ನೀಡಿತ್ತು. ಬೆಂಕಿಗೆ ಆಹುತಿಯಾದ ಮನೆಗಳಿಂದ ಮಾದರಿಗಳನ್ನು ಈ ತಂಡವು ಸಂಗ್ರಹಿಸಿದೆ.

ಘಟನಾ ಸ್ಥಳದಿಂದ ಮಾದರಿಗಳನ್ನು ತಕ್ಷಣವೇ ಸಂಗ್ರಹಿಸಿ ಎಂದು ಕಲ್ಕತ್ತ ಹೈಕೋರ್ಟ್, ದೆಹಲಿಯ ಸಿಎಫ್‌ಎಸ್‌ಎಲ್‌ಗೆ ಬುಧವಾರ ಆದೇಶಿಸಿತ್ತು.

### ವಿವರ ಬಹಿರಂಗ ಕೋರಿ ಅರ್ಜಿ: ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಪಿ.ಎಂ ಕೇರ್ಸ್ ನಿಧಿಯ ಖಾತೆ, ವೆಚ್ಚದ ವಿವರಗಳನ್ನು ಬಹಿರಂಗಪಡಿಸುವಂತೆ ಮತ್ತು ಅದರ ಲೆಕ್ಕ ಪರಿಶೋಧನೆಯನ್ನು ಮಹಾಲೇಖಪಾಲರ (ಸಿಎಜಿ) ವ್ಯಾಪ್ತಿಗೆ ತರುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಈ ವಿಚಾರವಾಗಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಮರುಪರಿಶೀಲನಾ ಅರ್ಜಿ ಸಲ್ಲಿಸುವಂತೆ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ.ಆರ್.ಗವಾಯಿ ಅವರನ್ನೊಳಗೊಂಡ ನ್ಯಾಯಪೀಠವು ಅರ್ಜಿದಾರರಿಗೆ ಸೂಚಿಸಿದೆ. ಅರ್ಜಿದಾರರ ಪರವಾಗಿ ಹಿರಿಯ ವಕೀಲ ದೇವದತ್ತ ಕಾಮತ್ ಅವರು ಹಾಜರಾಗಿದ್ದರು.

### 'ರೈಲು ಪ್ರಯಾಣಿಕರಿಂದ ಪ್ರತಿ ಕಿ.ಮೀಗೆ 48 ಪೈಸೆ ಸಂಗ್ರಹ'

ನವದೆಹಲಿ: ರೈಲು ಪ್ರಯಾಣ ದರ ಮತ್ತು ಸೇವಾ ವೆಚ್ಚವು ಪ್ರತಿ ಕಿ.ಮೀ.ಗೆ ಅಂದಾಜು ₹1.16 ತಗಲುತ್ತದೆ, ಆದರೆ ಪ್ರಯಾಣಿಕರಿಗೆ ಪ್ರತಿ ಕಿ.ಮೀಗೆ ಕೇವಲ 48 ಪೈಸೆ ವಿಧಿಸಲಾಗುತ್ತದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ರಾಜ್ಯಸಭೆಯಲ್ಲಿ ಹೇಳಿದ್ದಾರೆ.

ಪ್ರಯಾಣ ದರಕ್ಕೆ ಅಂದಾಜು ₹62 ಸಾವಿರ ಕೋಟಿ ಸಾಮಾಜಿಕ ಬಾಧ್ಯತೆಯ ಸಬ್ಸಿಡಿ ನೀಡಲಾಗುತ್ತದೆ ಎಂದೂ ಸಚಿವರು ತಿಳಿಸಿದ್ದಾರೆ.



### ಹಿಜಾಬ್: ವೈಯಕ್ತಿಕ ಮಾಹಿತಿ ಸೋರಿಕೆ– ರಾಜ್ಯಸಭೆಯಲ್ಲಿ ಪ್ರಸ್ತಾಪ

ನವದೆಹಲಿ (ಪಿಟಿಐ): ಹಿಜಾಬ್ ವಿಷಯಕ್ಕೆ ಸಂಬಂಧಿಸಿ ಉಡುಪಿಯಲ್ಲಿ ಮೊದಲು ಪ್ರತಿಭಟಿಸಿದ ವಿದ್ಯಾರ್ಥಿನಿಯರ ವೈಯಕ್ತಿಕ ಮಾಹಿತಿ ಸೋರಿಕೆಯಾಗಿದ್ದ ವಿಷಯ ರಾಜ್ಯಸಭೆಯಲ್ಲಿ ಶುಕ್ರವಾರ ಪ್ರಸ್ತಾಪಗೊಂಡು, ಚರ್ಚೆಗೆ ಕಾರಣವಾಯಿತು.

ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಟಿಎಂಸಿ ಸಂಸದೆ ಮೌಸಮ್ ನೂರ್, 'ವೈಯಕ್ತಿಕ ಮಾಹಿತಿ ಹಕ್ಕುಗಳ ರಕ್ಷಣೆಗೆ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಹಿಜಾಬ್ ವಿವಾದ ಭುಗಿಲೆದ್ದ ವೇಳೆಯೇ, ಕನಿಷ್ಠ ಆರು ಜನ ವಿದ್ಯಾರ್ಥಿನಿಯರಿಗೆ ಸಂಬಂಧಿಸಿದ ವೈಯಕ್ತಿಕ ವಿವರಗಳನ್ನು ಸೋರಿಕೆ ಮಾಡಲಾಗಿದ್ದು, ಈ ಮಾಹಿತಿಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಲಾಗಿದೆ' ಎಂದರು.



ಮೌಸಮ್ ನೂರ್

'ವಿದ್ಯಾರ್ಥಿನಿಯರ ಹೆಸರು, ವಿಳಾಸ ಮತ್ತಿತರ ವೈಯಕ್ತಿಕ ವಿವರಗಳನ್ನು ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. ಇದು ಅವರ ಖಾಸಗಿತನದ ಉಲ್ಲಂಘನೆಯಾಗಿದೆ' ಎಂದೂ ಹೇಳಿದರು.



'ದಿ ಕಾಶ್ಮೀರ್ ಫೈಲ್ಸ್' ಚಿತ್ರ ಯುಟ್ಯೂಬ್‌ಗೆ ಹಾಕಿ: ದೆಹಲಿ ಸಿ.ಎಂ

# ಕೇಜ್ರಿವಾಲ್ ಹೇಳಿಕೆ: ಬಿಜೆಪಿ ವಿರೋಧ

ನವದೆಹಲಿ/ಭೋಪಾಲ್/ಪಣಜಿ/ಅಹಮದಾಬಾದ್ (ಪಿಟಿಐ): 'ದಿ ಕಾಶ್ಮೀರ್ ಫೈಲ್ಸ್' ಚಲನಚಿತ್ರವನ್ನು ಯುಟ್ಯೂಬ್‌ಗೆ ಅಪ್‌ಲೋಡ್ ಮಾಡಿ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಗುರುವಾರ ನೀಡಿದ್ದ ಹೇಳಿಕೆಗೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಈ ಹೇಳಿಕೆ ವಿರುದ್ಧ ಪ್ರತಿಭಟನೆ ನಡೆದಿದೆ.

ಈ ಚಲನಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡಬೇಕು ಎಂಬ ಒತ್ತಾಯಕ್ಕೆ ಕೇಜ್ರಿವಾಲ್ ಪ್ರತಿಕ್ರಿಯೆ ನೀಡಿದ್ದರು. 'ತೆರಿಗೆ ವಿನಾಯಿತಿ ನೀಡುವ ಬದಲು, ಚಲನಚಿತ್ರವನ್ನು ಯುಟ್ಯೂಬ್‌ಗೆ ಅಪ್‌ಲೋಡ್ ಮಾಡಿಬಿಡಿ. ಜನರೆಲ್ಲರೂ ಉಚಿತವಾಗಿ ಚಲನಚಿತ್ರ ನೋಡುತ್ತಾರೆ' ಎಂದು ಕೇಜ್ರಿವಾಲ್ ಹೇಳಿದ್ದರು.

ಕೇಜ್ರಿವಾಲ್ ಅವರ ಈ ಹೇಳಿಕೆಯನ್ನು ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಖಂಡಿಸಿದ್ದಾರೆ. ಗೋವಾ ನಿಯೋಜಿತ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಸಹ ಟೀಕಿಸಿದ್ದಾರೆ.

ಕೇಜ್ರಿವಾಲ್ ಹೇಳಿಕೆಗೆ ವ್ಯಾಪಕ ಟೀಕೆ ವ್ಯಕ್ತವಾಗುತ್ತಿರುವ ಸಂದರ್ಭದಲ್ಲೇ ಎಎಪಿ ನಾಯಕ ಸಂಜಯ್ ಸಿಂಗ್, 'ಕಾಶ್ಮೀರಿ ಪಂಡಿತರ ಪುನರ್ವಸತಿಗಾಗಿ ದೇಶದ ಎಲ್ಲಾ ಸಂಸದರು ತಮ್ಮ ಪ್ರದೇಶಾಭಿವೃದ್ಧಿ ನಿಧಿಯಿಂದ ತಲಾ ₹5 ಕೋಟಿ ನೀಡಬೇಕು' ಎಂದು ಹೇಳಿದ್ದಾರೆ. ಬಿಜೆಪಿ ನಾಯಕರು ಈ ಹೇಳಿಕೆಯನ್ನೂ ಟೀಕಿಸಿದ್ದಾರೆ.

ಎಎಪಿ ನಾಯಕರ ಈ ಹೇಳಿಕೆಗಳ ವಿರುದ್ಧ ಗುಜರಾತ್‌ನ ಅಹಮದಾಬಾದ್‌ನಲ್ಲಿ, ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದ್ದಾರೆ.

### ನಿರ್ದೇಶಕರಿಗೆ ಸಿ.ಎಂ ಶ್ಲಾಘನೆ

'ದಿ ಕಾಶ್ಮೀರ್ ಫೈಲ್ಸ್' ಚಿತ್ರದ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಅವರು, ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೋಪಾಲ್‌ನಲ್ಲಿ ಶುಕ್ರವಾರ ಭೇಟಿ ಮಾಡಿದರು.

ಈ ಬಳಿಕ ವರದಿಗಾರರೊಂದಿಗೆ ಮಾತನಾಡಿದ ಚೌಹಾಣ್, 'ಈ ಸಿನಿಮಾದ ಮೂಲಕ ಕಾಶ್ಮೀರಿ ಪಂಡಿತರು ಅನುಭವಿಸಿದ ನೋವು, ಸಂಕಷ್ಟಗಳ ಬಗ್ಗೆ ಜಗತ್ತಿಗೆ ತಿಳಿಯಿತು. ಕಾಶ್ಮೀರಿ ಪಂಡಿತರು ಎದುರಿಸಿದ ನೋವಿನ ಬಗ್ಗೆ ಜಗತ್ತಿಗೆ ಅರಿವಿರಲಿಲ್ಲ. ಇದನ್ನು ಎಲ್ಲರಿಗೆ ತಿಳಿಯುವಂತೆ ಮಾಡಿದ ನಿಮ್ಮ ಧೈರ್ಯಕ್ಕೆ ನನ್ನ ಸೆಲ್ಯೂಟ್' ಎಂದು ಅವರು ಶ್ಲಾಘಿಸಿದ್ದಾರೆ.

### 'ಭೋಪಾಲಿ ಎಂದರೆ ಸಲಿಂಗಕಾಮಿ'

'ಭೋಪಾಲಿ ಎಂದರೆ ಸಲಿಂಗಕಾಮಿ' ಎಂದು ವಿವೇಕ್ ಅಗ್ನಿಹೋತ್ರಿ ಅವರು ಈ ಹಿಂದೆ ನೀಡಿದ್ದ ಹೇಳಿಕೆಯೊಂದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಟೀಕೆ ವ್ಯಕ್ತವಾಗಿದೆ.

'ದಿ ಕಾಶ್ಮೀರ್ ಫೈಲ್ಸ್' ಚಿತ್ರ ಕುರಿತು ಮೂರು ವಾರಗಳ ಹಿಂದೆ, ಹಿಂದಿ ಸುದ್ದಿವಾಹಿನಿಯೊಂದಕ್ಕೆ ವಿವೇಕ್ ಸಂದರ್ಶನ ನೀಡಿದ್ದರು. ಆಗ, 'ನಾನು ಭೋಪಾಲ್‌ನವನು. ಇಲ್ಲಿನವರನ್ನು ಭೋಪಾಲಿಗಳು ಎಂದು ಕರೆಯುತ್ತಾರೆ. ಭೋಪಾಲಿ ಎಂದರೆ ಸಲಿಂಗಕಾಮಿಗಳು ಎಂದರ್ಥ' ಎಂದು ಹೇಳಿಕೆ ನೀಡಿದ್ದರು. ಶುಕ್ರವಾರ ಅವರು ಭೋಪಾಲ್‌ಗೆ ಭೇಟಿ ನೀಡುವ ಮುನ್ನ ಈ ಹೇಳಿಕೆ ಚರ್ಚೆಗೆ ಬಂದಿದೆ. ಈ ಹೇಳಿಕೆ ವಿರುದ್ಧ ಭೋಪಾಲ್‌ನ ಜನತೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿವೇಕ್ ಅವರು ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

> **ಈ ಹಿಂದೆ ಹಲವು ಬಾಲಿವುಡ್ ಸಿನೆಮಾಗಳಿಗೆ ಕೇಜ್ರಿವಾಲ್ ತೆರಿಗೆ ವಿನಾಯಿತಿ ನೀಡಿದ್ದರು. ಆದರೆ ದಿ ಕಾಶ್ಮೀರ್ ಫೈಲ್ಸ್‌ಗೆ ತೆರಿಗೆ ವಿನಾಯಿತಿ ನೀಡಲು ನಿರಾಕರಿಸುತ್ತಿದ್ದಾರೆ**
> **ಪ್ರಮೋದ್ ಸಾವಂತ್,** ಗೋವಾ ನಿಯೋಜಿತ ಮುಖ್ಯಮಂತ್ರಿ

> **ಕಾಶ್ಮೀರಿ ಜನರು ಸತ್ತಾಗ ಇವರು ನಗುತ್ತಿದ್ದರು. ಹಿಂದೂ ವಿರೋಧಿಗಳು ಹೀಗೇ ಇರುತ್ತಾರೆ. ಇವರೆಲ್ಲಾ ನಾಚಿಕೆಯೇ ಇಲ್ಲದ ಅರಾಜಕತಾವಾದಿಗಳು**
> **ಬಿ.ಎಲ್.ಸಂತೋಷ್,** ಬಿಜೆಪಿ ಪ್ರಧಾನ ಕಾರ್ಯದರ್ಶಿ

> **ನರಮೇಧಕ್ಕೆ ಸಂಬಂಧಿಸಿದ ವಸ್ತುಸಂಗ್ರಹಾಲಯ ಸ್ಥಾಪಿಸುವಂತೆ ಚಿತ್ರದ ನಿರ್ದೇಶಕ ಸಲಹೆ ನೀಡಿದ್ದಾರೆ. ಅದಕ್ಕಾಗಿ ನಾವು ಭೋಪಾಲ್‌ನಲ್ಲಿ ಜಾಗ ನೀಡುತ್ತೇವೆ**
> **ಶಿವರಾಜ್ ಸಿಂಗ್ ಚೌಹಾಣ್** ಮಧ್ಯಪ್ರದೇಶ ಮುಖ್ಯಮಂತ್ರಿ

### ಚೀನಾಕ್ಕೆ ಭಾರತ ಸ್ಪಷ್ಟ ನುಡಿ

ಒಂದನೇ ಪುಟದಿಂದ

ಉಭಯ ದೇಶಗಳ ನಡುವಿನ ಸಂಬಂಧ ಸೌಹಾರ್ದವಾಗಿದೆಯೇ ಎಂದು ನೀವು ಪ್ರಶ್ನಿಸಿದರೆ, ನನ್ನ ಉತ್ತರ 'ಇಲ್ಲ' ಎಂಬುದೇ ಆಗಿದೆ. ಸೇನೆ ಮತ್ತು ರಾಜತಾಂತ್ರಿಕ ಹಂತದ ಚರ್ಚೆಗಳು ಸಕಾರಾತ್ಮಕ ಫಲಿತಾಂಶ ನೀಡಿವೆ. ಆದರೆ, ಸೌಹಾರ್ದ ವಾತಾವರಣ ಮೂಡಿಲ್ಲ.ಗಡಿ ಭಾಗದಲ್ಲಿ ಅಸಹಜವಾದ ಸ್ಥಿತಿ ಇದ್ದಾಗ, ಒಟ್ಟು ಸಂಬಂಧ ಸಹಜವಾಗಿರಲು ಸಾಧ್ಯವೇ ಇಲ್ಲ ಎಂದೂ ಪ್ರಶ್ನಿಸಿದರು.

ಭಾರತದ ಜೊತೆಗಿನ ಸಂಬಂಧವನ್ನು ಸಹಜ ಸ್ಥಿತಿಗೆ ತರುವ ಕುರಿತಂತೆ ವಾಂಗ್ ಯಿ ಮಾತನಾಡಿದರು. ಭಾರತ ಕೂಡ ಮತ್ತು ಸ್ಥಿರ ಮತ್ತು ಆಶಾದಾಯಕ ಸಂಬಂಧ ಬಯಸುತ್ತದೆ ಎಂದು ನಾನು ಪ್ರತಿಕ್ರಿಯಿಸಿದ್ದೇನೆ ಎಂದರು.

### ಶೃಂಗಸಭೆಗೆ ಪ್ರಧಾನಿ

ನವದೆಹಲಿ (ಪಿಟಿಐ): ಚೀನಾದ ಆತಿಥ್ಯದಲ್ಲಿ ನಡೆಯಲಿರುವ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸುವಿಕೆಯನ್ನು ಭಾರತ ಇನ್ನು ದೃಢಪಡಿಸಿಲ್ಲ. ಭಾರತ ಮತ್ತು ಚೀನಾ ಹೊರತುಪಡಿಸಿ ಬ್ರೆಜಿಲ್, ರಷ್ಯಾ, ದಕ್ಷಿಣ ಆಫ್ರಿಕಾ 'ಬ್ರಿಕ್ಸ್' ಸಮೂಹದ ಸದಸ್ಯ ರಾಷ್ಟ್ರಗಳಾಗಿವೆ. ವಾಂಗ್ ಯಿ ಭೇಟಿ ವೇಳೆ ಸಚಿವ ಜೈಶಂಕರ್ ಅವರು ಪ್ರಧಾನಿ ಭೇಟಿ ಕುರಿತು ಏನೂ ಹೇಳಿಲ್ಲ. ಅಫ್ಗಾನಿಸ್ತಾನ ಕುರಿತ ವಿದೇಶಾಂಗ ಸಚಿವರ ಸಭೆಗೆ ಭಾರತಕ್ಕೆ ಆಹ್ವಾನ ನೀಡಿರಲಿಲ್ಲ ಎಂದರು.

# ರಾಜಮೌಳಿಯ ಮತ್ತೊಂದು ಮಾಯಾದರ್ಪಣ

**ನಾವು ನೋಡಿದ ಸಿನಿಮಾ**

**ಆರ್‌ಆರ್‌ಆರ್ (ತೆಲುಗು)**
- **ನಿರ್ಮಾಣ:** ಡಿ.ವಿ.ವಿ ದಾನಯ್ಯ
- **ನಿರ್ದೇಶನ:** ಎಸ್.ಎಸ್. ರಾಜಮೌಳಿ
- **ತಾರಾಗಣ:** ಜೂನಿಯರ್ ಎನ್‌ಟಿಆರ್, ರಾಮ್ ಚರಣ್, ಅಜಯ್ ದೇವಗನ್, ಆಲಿಯಾ ಭಟ್

ಜೂನಿಯರ್ ಎನ್‌ಟಿಆರ್ ಭುಜದ ಮೇಲೆ ರಾಮ್ ಚರಣ್. ಅಟ್ಟಾಡಿಸಿಕೊಂಡು ಬರುವ ಬ್ರಿಟಿಷ್ ಪೊಲೀಸರನ್ನು ಇಬ್ಬರೂ ಸೇರಿ ಚಿಂದಿ ಚಿಂದಿ ಮಾಡುವ ಪರಿಗೆ ಕಣ್ಣು ಎವೆಯಿಕ್ಕದೆ ತೆರೆದುಕೊಂಡೇ ಇರುತ್ತದೆ. ಹುಲಿಯ ಬಾಯಿಗೆ ಇನ್ನೇನು ಜೂನಿಯರ್ ಎನ್‌ಟಿಆರ್ ಸಿಲುಕಿಯೇ ಬಿಟ್ಟರು ಎನ್ನುವಷ್ಟರಲ್ಲಿ ಊಹಿಸಲಾರದ್ದು ನಡೆಯುತ್ತದೆ. ಹುಲಿಯ ಕಣ್ಣಲ್ಲಿ ಕಣ್ಣಿಟ್ಟು ಅವರು ನೋಡುವಾಗ ನಮ್ಮಂಥ ನೋಡುಗರಿಗೆ ರೋಮಾಂಚನ. ಸೇತುವೆ ಮೇಲೆ ಗೂಡ್ಸ್ ರೈಲಿನಲ್ಲಿ ತೈಲ ಸೋರಿಕೆಯಾಗಿ ಒಂದೊಂದೇ ಬೋಗಿ ಹೊತ್ತಿ ಉರಿಯುತ್ತಾ ಅಡಿಯಲ್ಲಿನ ನದಿಗೆ ಬೀಳುತ್ತಿವೆ. ಆ ಬೆಂಕಿಯ ಕೆನ್ನಾಲಿಗೆಯಿಂದ ಪಾರಾಗಿ ಬದುಕಲೆಂದು ನದಿಯಲ್ಲಿ ತೆಪ್ಪ ನಡೆಸುವ ಬಾಲಕನೊಬ್ಬ ಮೊರೆ ಇಡುತ್ತಾನೆ. ಜೂನಿಯರ್ ಎನ್‌ಟಿಆರ್ ಹಾಗೂ ರಾಮ್ ಚರಣ್ ಇಬ್ಬರೂ ಒಂದಾಗುತ್ತಾರೆ. ಕುದುರೆ ಮೇಲೆ ಒಬ್ಬರು. ಬುಲೆಟ್ ಬೈಕ್ ಮೇಲೆ ಇನ್ನೊಬ್ಬರು. ಇಬ್ಬರೂ ಬಾಲಕನ ಕಾಪಾಡಲು ಗಾಳಿಯಲ್ಲಿ ತೇಲಾಡುತ್ತಾ ಮಾಡುವ ಸಾಹಸದ ದೃಶ್ಯ ನೋಡಿದಾಗ ರೋಮಾಂಚನವಾಗದೇ ಇದ್ದರೆ ನಾವು ಅರಸಿಕರೇ ಸರಿ.

ಬಹು ನಿರೀಕ್ಷಿತ 'ಆರ್‌ಆರ್‌ಆರ್' ಚಿತ್ರವನ್ನು ನಿರ್ದೇಶಕ ರಾಜಮೌಳಿ ಎಂದಿನ ತಮ್ಮ ರುಜುವಿನೊಂದಿಗೆ ತೋರುತ್ತಾರೆ. ಕಥನದ ಬಿಂದುಗಳನ್ನು ಅಲ್ಲಲ್ಲಿ ಇಟ್ಟು, ಒಂದನ್ನೊಂದು ಸಂಪರ್ಕಿಸುತ್ತಲೇ ಅವರು ಮೂಡಿಸುವ ದೃಶ್ಯದ ರಂಗವಲ್ಲಿಯೇ ಬೆರಗು. ಜನಪದ, ಫ್ಯಾಂಟಸಿ, ಸಸ್ಪೆನ್ಸ್ ಥ್ರಿಲ್ಲರ್, ಪುರಾಣದ ಉಪಕಥೆಗಳ ಮುರಿದು ಕಟ್ಟುವ ಜಾಣ್ಮೆ... ಹೀಗೆ ಎಲ್ಲವನ್ನೂ ಒಂದು ಸೂತ್ರದಲ್ಲಿ ಪೋಣಿಸಿದ ಚಿತ್ರವಿದು. ಮನರಂಜನೆಯ ಸಮುದ್ರದಲ್ಲಿ ಅದ್ದಿ ಅದ್ದಿ ತೆಗೆಯಬೇಕೆಂಬ ಉಮೇದಿಗೆ ತಂದೆ ಕೆ.ವಿ. ವಿಜಯೇಂದ್ರ ಪ್ರಸಾದ್ ಬರೆದ ಕಥೆ ರಾಜಮೌಳಿ ಅವರಿಗೆ ವರದಾನವಾಗಿದೆ. ಈ ಅಪ್ಪ–ಮಗ ದೊಡ್ಡ ಭಿತ್ತಿಯ ಮೇಲೆ ಚಿತ್ರಕಥೆಯನ್ನು ರೋಮಾಂಚನಕಾರಿಯಾಗಿ ತೋರುವ ಮಾರ್ಗಗಳನ್ನು ಕಂಡುಕೊಂಡು ಗೆಲ್ಲಲು ಆರಂಭಿಸಿ ದಶಕಗಳೇ ಆಗಿವೆ.



'ಆರ್‌ಆರ್‌ಆರ್'ನಲ್ಲಿ ರಾಮ್ ಚರಣ್, ಜೂನಿಯರ್ ಎನ್‌ಟಿ.ಆರ್

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ನಡೆದ ಕಥೆಯನ್ನು ಎತ್ತಿಕೊಂಡು ರಾಜಮೌಳಿ ಅದಕ್ಕೆ ಕಲ್ಪನೆಯ ರೆಕ್ಕೆಪುಕ್ಕ ಕಟ್ಟಿದ್ದಾರೆ. ಬ್ರಿಟಿಷ್ ಅಧಿಕಾರಿಗಳು, ಸ್ತ್ರೀ ಪಾತ್ರಗಳು ತುಂಬಾ ಸಹಜವಾಗಿ ಪ್ರಕಟವಾಗುತ್ತಾರೆ.

ಚಿತ್ರದ ಶಿಲ್ಪ ಪಕ್ಕಾ ಕಮರ್ಷಿಯಲ್. ರಾಮ್ ಚರಣ್‌ಗೆ ಒಂದು ಅದ್ದೂರಿ ಪ್ರವೇಶಿಕೆ. ಜೂನಿಯರ್ ಎನ್‌ಟಿಆರ್‌ಗೆ ಅದಕ್ಕಿಂತ ಭಿನ್ನವಾದ ರೋಮಾಂಚನಕಾರಿ ಪ್ರವೇಶಿಕೆ. ಇಬ್ಬರ ಪಾತ್ರದ ರೂಹಿನಲ್ಲೂ ಅಜಗಜಾಂತರ. ಆ ಇಬ್ಬರಲ್ಲೂ ಸ್ನೇಹ ಮೂಡಿಸುವ ನಿರ್ದೇಶಕರು, ಅದು ಯಾವಾಗ ದ್ವೇಷವಾದೀತೋ ಎಂದು ನೋಡುಗರ ಎದೆಬಡಿತ ಪದೇ ಪದೇ ಹೆಚ್ಚಾಗುವಂತೆ ಮಾಡುತ್ತಾರೆ. ಆದರೆ, ದ್ವೇಷ ಮೂಡದಂತೆ ಸಾವಧಾನದಿಂದ ಚಿತ್ರಕಥೆಗೆ ಅನಿರೀಕ್ಷಿತ ತಿರುವುಗಳನ್ನು ಒದಗಿಸುತ್ತಾರೆ. ಸ್ನೇಹಿತರ ಕಥೆಗೆ ದೇಶಭಕ್ತಿಯ ರಸವನ್ನೂ ಸವರುತ್ತಾರೆ. ಮುಖ್ಯ ಕಥನದೊಳಗೆ ಉಪಕಥೆಗಳನ್ನೂ ಹೇಳುವುದರಲ್ಲಿ ರಾಜಮೌಳಿ ನಿಸ್ಸೀಮರು. ಆ ತಂತ್ರ ಇಲ್ಲಿಯೂ ಮುಂದುವರಿದಿದೆ. ಇಬ್ಬರೂ ಕಥಾನಾಯಕರ ಹಿನ್ನೆಲೆಯನ್ನು ಅವರು ಚೂರುಚೂರೇ ಬಿಚ್ಚಿಡುತ್ತಾ, ಅವರಿಬ್ಬರ ವರ್ತನೆಗೆ ಸಮರ್ಥನೆಯನ್ನು ಕೊಡುವ ರೀತಿ ಇದಕ್ಕೆ ಸಾಕ್ಷಿ.

ಎಂ.ಎಂ. ಕೀರವಾಣಿ ಹಿನ್ನೆಲೆ ಸಂಗೀತ ಸಿನಿಮಾದ ಮುಖ್ಯ ಪಾತ್ರವೇ ಹೌದು. 'ಜನನಿ' ಹಾಡಿನ ಶಾಸ್ತ್ರೀಯ ಪಲುಕುಗಳು ಹೃದಯದ ತಂತಿ ಮೀಟಿದರೆ, 'ನಾಟು ನಾಟು' ಹಾಡಿನ ನೃತ್ಯ ಲಾಲಿತ್ಯ ಟ್ರೆಂಡ್ ಆಗಬಲ್ಲ ಎಲ್ಲ ಗುಣಲಕ್ಷಣ ಹೊಂದಿದೆ. ಕೆ.ಕೆ. ಸೆಂಥಿಲ್ ಕುಮಾರ್ ಕ್ಯಾಮೆರಾ ಝೂಮ್ ಔಟ್ ಆಗುತ್ತಾ ತೋರುವ ದೃಶ್ಯಭಿತ್ತಿ ಬರೀ ತೋರಿಕೆಗಷ್ಟೆ ಅಲ್ಲದೆ ಕಥಾಕೇಂದ್ರದ ನಾಡಿಮಿಡಿತ ಹೇಳುವುದಕ್ಕೂ ಬಳಕೆಯಾಗಿದೆ. ಅವರ ಲೈಟಿಂಗ್, ಮಸೂರದ ತಾತ್ವಿಕತೆಯ ಕುರಿತು ಪ್ರತ್ಯೇಕ ಪ್ರಬಂಧವನ್ನೇ ಬರೆಯಬಹುದಾದಷ್ಟು ಸರಕು ಚಿತ್ರದಲ್ಲಿ ಇಡುಕಿರಿದಿದೆ.

ಜೂನಿಯರ್ ಎನ್‌ಟಿಆರ್ ತಾವು ಎಂತಹ ನಿಯಂತ್ರಿತ ನಟ ಎನ್ನುವುದನ್ನು ಚಿತ್ರದುದ್ದಕ್ಕೂ ಸಾರಿದ್ದಾರೆ. ಅವರ ಕಣ್ನೋಟ, ಆಂಗಿಕ ಅಭಿನಯ, ಭಾವ ತೀವ್ರ ದೃಶ್ಯಗಳಲ್ಲಿನ ಸಹಜತೆಗೆ ಹ್ಯಾಟ್ಸಾಫ್. ರಾಮ್ ಚರಣ್ ಮಿತಿಯನ್ನು ಅರಿತಿರುವ ನಿರ್ದೇಶಕರು, ದೃಢ ಕಾಯವನ್ನೇ ಬಂಡವಾಳವಾಗಿಸಿ ಅವರ ಪಾತ್ರದ ಗ್ರಾಫ್ ಮೂಡಿಸಿದ್ದಾರೆ. ಅಜಯ್ ದೇವಗನ್ ಹಾಗೂ ಆಲಿಯಾ ಭಟ್ ಪಾತ್ರಗಳಿಗೆ ಹೆಚ್ಚು ಅವಕಾಶವಿಲ್ಲದಿದ್ದರೂ ಅವು ಕಥನದ ತಿರುವಿನ ಪ್ರಮುಖ ಬಿಂದುಗಳಾಗಿವೆ. ಸಾಮಾನ್ಯವಾಗಿ ರಾಜಮೌಳಿ ಸಿನಿಮಾಗಳಲ್ಲಿ ಸ್ತ್ರೀ ಪಾತ್ರಗಳಿಗೆ ಹೆಚ್ಚು ಕಥನಾವಕಾಶ ಇರುತ್ತದೆ. ಈ ಸಿನಿಮಾದಲ್ಲಿ ಆ ವಿಷಯದಲ್ಲಿ ಯಾಕೋ ಅವರು ಹಿಂದೆ ಬಿದ್ದಿದ್ದಾರೆ.

ನೂರಾಎಂಬತ್ತಾರು ನಿಮಿಷ ಕೂರಿಸಿಕೊಂಡು, 'ಮನರಂಜನೆಯ ರಸಪಾಕದಲ್ಲಿ ಮೀಯಿಸುತ್ತೇನೆ' ಎಂಬ ದೊಡ್ಡ ಮಟ್ಟದ ಆತ್ಮವಿಶ್ವಾಸ ರಾಜಮೌಳಿ ಅವರಿಗೆ ಯಾಕೆ ಇದೆ ಎನ್ನುವುದಕ್ಕೆ ಈ ಸಿನಿಮಾದಲ್ಲಿ ಕಾರಣಗಳು ಸಿಗುತ್ತವೆ. ತರ್ಕಮುಖಿಯಾಗಳಾಗದೆ, ಮನರಂಜನಾಸುಖಿಗಳಾಗಬೇಕು. ಹಾಗಾದಲ್ಲಿ 'ಆರ್‌ಆರ್‌ಆರ್'ನಲ್ಲಿನ ನೀರು–ಬೆಂಕಿಯ ಆಟ, ರಾಮ–ಭೀಮನ ಕಥಾಸಮೀಕರಣ ಬರೀ ಮೆಟಫರ್ ಆಗದೆ ಫ್ಯಾಂಟಸಿಯೂ ಆಗಿರುವ ಕಥನಾವಕಾಶ ಖುಷಿ ಕೊಡುತ್ತದೆ.


**ವಿಶಾಖ ಎನ್.**

### ಪೋಸ್ಟ್‌ಮ್ಯಾನ್‌ಗೆ 2ನೇ ರ್‍ಯಾಂಕ್, ಸೆಕ್ಯೂರಿಟಿ ಗಾರ್ಡ್‌ಗೆ 3ನೇ ರ್‍ಯಾಂಕ್

# ಬಡತನದಲ್ಲೂ ಗ್ರಾಮೀಣ ಪ್ರತಿಭೆಗಳ ಸಾಧನೆ

ಪ್ರಜಾವಾಣಿ ವಾರ್ತೆ


ಕೆ.ಪಿ. ಸಂಜಯ್


ಕೆ. ರಾಮಚಂದ್ರಪ್ಪ

**ಬೆಂಗಳೂರು:** ಗ್ರಾಮೀಣ ಪ್ರದೇಶದ ಬಡ ಕುಟುಂಬದ ಈ ಪ್ರತಿಭೆಗಳು ದುಡಿಮೆ ಜತೆ ಪದವಿ ಪಡೆದು ರ್‍ಯಾಂಕ್ ಗಳಿಸಿದವರು. ಓದುವ ಛಲ ಮತ್ತು ಸಾಧಿಸುವ ತುಡಿತದಿಂದ ಜೀವನದಲ್ಲಿ ಯಶಸ್ವಿನ ಮಾರ್ಗವನ್ನು ಕಂಡುಕೊಂಡಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯಲ್ಲಿ ಎರಡನೇ ರ್‍ಯಾಂಕ್ ಪಡೆದಿರುವ ಕೆ.ಪಿ. ಸಂಜಯ್ ಮತ್ತು ಮೂರನೇ ರ್‍ಯಾಂಕ್ ಪಡೆದಿರುವ ಕೆ. ರಾಮಚಂದ್ರಪ್ಪ ಅವರು ತಮಗೆ ಎದುರಾದ ಸವಾಲುಗಳು, ಸಂಕಷ್ಟಗಳ ನಡುವೆಯೂ ಓದುವುದನ್ನು ಮುಂದುವರಿಸಿದವರು. ಮಾ.11ರಂದು ನಡೆಯಲಿರುವ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ ಇವರು ಚಿನ್ನದ ಪದಕಗಳನ್ನು ಪಡೆಯಲಿದ್ದಾರೆ.

ನಗರದ ಸಂಕಂದಕಟ್ಟೆ ಪ್ರದೇಶದ ವಿಶ್ವನೀಡಂ ಅಂಚೆ ಶಾಖೆಯಲ್ಲಿ ಪೋಸ್ಟ್‌ಮ್ಯಾನ್ ಆಗಿ ಕೆಲಸ ಮಾಡುತ್ತಿರುವ 25 ವರ್ಷದ ಕೆ.ಪಿ. ಸಂಜಯ್, ವಿ.ವಿ. ಪುರಂ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದಿದ್ದಾರೆ. ಶೇ 91.75ರಷ್ಟು ಅಂಕಗಳಿಸಿ ವಿಶ್ವವಿದ್ಯಾಲಯಕ್ಕೆ ಎರಡನೇ ರ್‍ಯಾಂಕ್ ಗಳಿಸಿದ್ದಾರೆ. ಇದೇ ಕಾಲೇಜಿನಲ್ಲಿ ಪಿಯುಸಿ ಮುಗಿಸಿದ್ದ ಸಂಜಯ್, ಶೇ 87ರಷ್ಟು ಅಂಕ ಪಡೆದಿದ್ದರು.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕಾರಕಟ್ಟೆ ಗ್ರಾಮದ ಸಂಜಯ್, ಪೋಸ್ಟ್‌ಮ್ಯಾನ್ ಕೆಲಸ ಮಾಡುತ್ತ ಓದಿನ ಜತೆಗೆ, ಕುಟುಂಬದ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದ್ದಾರೆ. ತಂಗಿ ಬಿ.ಇ. (ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ಎಂಜಿನಿಯರಿಂಗ್) ಓದಲು ಸಹ ಸಂಪೂರ್ಣ ನೆರವಾಗಿದ್ದಾರೆ. ಸಂಜಯ್ ಮತ್ತೆ ತಮ್ಮ ಓದು ಮುಂದುವರಿಸಿ ಅಧಿಕಾರಿಯಾಗುವ ಗುರಿ ಹೊಂದಿದ್ದಾರೆ.

'ತಂದೆ ಅನಕ್ಷರಸ್ಥ, ತಾಯಿ ಎಸ್ಸೆಸ್ಸೆಲ್ಸಿ ಮುಗಿಸಿದ್ದಾರೆ. ನಮಗಿರುವುದು 30 ಗುಂಟೆ ಜಾಗ. ಮನೆಯಲ್ಲಿ ಬಡತನದಿಂದಾಗಿ ಓದುವುದು ಕಷ್ಟವಾಗಿತ್ತು. ಹೀಗಾಗಿ, ಬೇಗ ಕೆಲಸಕ್ಕೆ ಸೇರಿದೆ. ಐಟಿಐ ಮಾಡಿ, ಪಿಯುಸಿ ಓದಿದೆ. ಪೋಸ್ಟ್‌ಮ್ಯಾನ್ ಕೆಲಸ ಜತೆ ಸಂಜೆ ಕಾಲೇಜಿಗೆ ಹೋಗಿ ಪದವಿ ಮುಗಿಸಿದ್ದೇನೆ. ರ್‍ಯಾಂಕ್ ಪಡೆಯಬೇಕು ಎನ್ನುವುದು ನನ್ನ ಛಲವಾಗಿತ್ತು. ಕೆಪಿಎಸ್‌ಸಿ ಪರೀಕ್ಷೆ ಬರೆದು ಸರ್ಕಾರದಲ್ಲಿ ಅಧಿಕಾರಿಯಾಗುವ ಬಯಕೆ ಇದೆ. ಅಂಚೆ ಶಿಕ್ಷಣ ಮೂಲಕ ಓದು ಮುಂದುವರಿಸುತ್ತೇನೆ. ಜತೆ, ಜತೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಚಿಂಗ್ ಪಡೆಯಲು ಉದ್ದೇಶಿಸಿದ್ದೇನೆ' ಎಂದು ಸಂಜಯ್ ಹೇಳುತ್ತಾರೆ.

'ಕಾಲೇಜು ಪ್ರಾಂಶುಪಾಲರಾದ ಶ್ರೀಧರ್, ಅಧ್ಯಾಪಕರಾದ ಜಯರಾಮ್ ಹಾಗೂ ಅಂಚೆ ಇಲಾಖೆಯ ಅಧಿಕಾರಿಗಳು ಮತ್ತು ನೌಕರರು ಪ್ರೋತ್ಸಾಹ, ಮಾರ್ಗದರ್ಶನ ನೀಡಿದ್ದಾರೆ. ರ್‍ಯಾಂಕ್ ಪಡೆದಿದ್ದಕ್ಕೆ ಅಂಚೆ ಇಲಾಖೆ ಗೌರವಿಸಿದ್ದು ಹೆಮ್ಮೆಯ ಕ್ಷಣ' ಎಂದು ನೆನಪಿಸಿಕೊಳ್ಳುತ್ತಾರೆ.

**ಶಿಕ್ಷಣಗಾಗಿ ಬಯಕೆ:** ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಅಜ್ಜಯನಹಟ್ಟಿಯ ಗ್ರಾಮದ ಕೆ. ರಾಮಚಂದ್ರಪ್ಪ ಅವರ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಬಡ ಕುಟುಂಬದಲ್ಲಿ ಬೆಳೆದ ರಾಮಚಂದ್ರಪ್ಪ ಅವರಿಗೆ ಶಿಕ್ಷಣ ಪಡೆಯುವುದಕ್ಕಿಂತಲೂ ದುಡಿಯುವುದು ಅನಿವಾರ್ಯವಾಗಿತ್ತು.

ನಗರದ ವಿ.ವಿ. ಪುರ ಕಲಾ ಮತ್ತು ವಾಣಿಜ್ಯ ಪದವಿ (ಹಗಲು) ಕಾಲೇಜಿನಲ್ಲಿ ಅಧ್ಯಯನ ಮಾಡಿರುವ ರಾಮಚಂದ್ರಪ್ಪ ಅವರು, ಬಿ.ಎ. ಪದವಿಯಲ್ಲಿ ಶೇ 89.83ರಷ್ಟು ಅಂಕ ಗಳಿಸಿ ಮೂರನೇ ರ್‍ಯಾಂಕ್ ಪಡೆದಿದ್ದಾರೆ. ರಾತ್ರಿ ಹೊತ್ತಿನಲ್ಲಿ ಸೆಕ್ಯೂರಿಟಿ ಗಾರ್ಡ್ ಮತ್ತು ಸಮಾರಂಭಗಳಲ್ಲೂ ಊಟ ಬಡಿಸುವ ಕೆಲಸಗಳನ್ನು ಮಾಡುತ್ತಾ ಅಧ್ಯಯನ ಕೈಗೊಂಡಿದ್ದರು.

'ನನ್ನ ತಂದೆ-ತಾಯಿ ಅನಕ್ಷರಸ್ಥರು. ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಕಷ್ಟದಾಯಕವಾಗಿತ್ತು. ಜಮೀನು ಸಹ ಇಲ್ಲ. ಎಸ್ಸೆಸ್ಸೆಲ್ಸಿ ಮುಗಿದ ತಕ್ಷಣ ಓದು ನಿಲ್ಲಿಸಿ ದುಡಿಯಬೇಕು ಎಂದು ಹೇಳಿದ್ದರು. ನಮ್ಮ ಚಿಕ್ಕಪ್ಪ ಬೆಂಗಳೂರಿಗೆ ಕರೆದುಕೊಂಡು ಬಂದು ಕಾಲೇಜಿಗೆ ಸೇರಿಸಿದರು. ಜೀವನದಲ್ಲಿ ಏನಾದರೂ ಸಾಧಿಸಬೇಕು ಎನ್ನುವ ಗುರಿಯೊಂದಿಗೆ ರಾತ್ರಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತ ಓದು ಮುಂದುವರಿಸಿದೆ. ಕೆಲ ಬಾರಿ ಸಮಾರಂಭಗಳಲ್ಲಿ ಊಟ ಬಡಿಸುವ ಕೆಲಸಕ್ಕೆ ಹೋಗುತ್ತಿದ್ದೆ. ಪಿಯುಸಿಯಲ್ಲೂ ಶೇ 93ರಷ್ಟು ಅಂಕ ಪಡೆದಿದ್ದೆ' ಎಂದು ರಾಮಚಂದ್ರಪ್ಪ ತಾವು ಬೆಳೆದು ಬಂದ ಪರಿಸ್ಥಿತಿಯನ್ನು ವಿವರಿಸುತ್ತಾರೆ.

'ಈಗ ಬಿ.ಇಡಿ. ಪದವಿಯ ವಿಜಯ ಶಿಕ್ಷಕರ ಮಹಾವಿದ್ಯಾಲಯಕ್ಕೆ ಸೇರಿದ್ದೇನೆ. ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆಯನ್ನು ಸಹ ಕೈಗೊಂಡಿದ್ದೇನೆ. ಸರ್ಕಾರಿ ಅಧಿಕಾರಿ ಅಥವಾ ಶಿಕ್ಷಕನಾಗಬೇಕು ಎನ್ನುವ ಗುರಿ ಹೊಂದಿದ್ದೇನೆ. ನನ್ನ ಓದಿಗೆ ಹಿಂದುಳಿದ ವರ್ಗಗಳ ಇಲಾಖೆಯ ವಸತಿ ನಿಲಯ ವಾರ್ಡನ್ ನರಸಿಂಹರಾಜು, ಕಾಲೇಜು ಪ್ರಾಂಶುಪಾಲರಾದ ಈಶ್ವರರೆಡ್ಡಿ ಮತ್ತು ಅಧ್ಯಾಪಕರು ಸ್ಫೂರ್ತಿ ನೀಡಿ, ಮಾರ್ಗದರ್ಶನ ನೀಡಿದ್ದಾರೆ' ಎಂದು ಸ್ಮರಿಸಿಕೊಳ್ಳುತ್ತಾರೆ.

**ಸಂಜಯ್ ಪಿಯುಸಿನಲ್ಲಿ 9ನೇ ರ್‍ಯಾಂಕ್ ಬಂದಿದ್ದ. ಅಧ್ಯಾಪಕರು ಮತ್ತು ಕಾಲೇಜು ವತಿಯಿಂದ ಮಾರ್ಗದರ್ಶನ, ನೆರವು ನೀಡಿದ್ದೇವೆ. ನಮಗೂ, ಕಾಲೇಜಿಗೂ ಹೆಮ್ಮೆಯಾಗಿದೆ**

**ಡಾ. ಶ್ರೀಧರ್**, ವಿ.ವಿ. ಪುರಂ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜಿನ ಪ್ರಾಂಶುಪಾಲ

**ರಾಮಚಂದ್ರ ಐಎಎಸ್ ಮಾಡುವ ಗುರಿ ಹೊಂದಿದ್ದಾನೆ. ಕಾಲೇಜಿನ ಇತಿಹಾಸದಲ್ಲೇ ಮೊದಲ ಬಾರಿ ರ್‍ಯಾಂಕ್ ದೊರೆತಿದೆ. ನಮ್ಮೆಲ್ಲರಿಗೂ ಹೆಮ್ಮೆಯಾಗಿದೆ**

**ಡಾ.ಸಿ.ಎಂ. ಈಶ್ವರರೆಡ್ಡಿ**, ವಿ.ವಿ. ಪುರಂ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ

### ವಿಧಾನಪರಿಷತ್‌ನಲ್ಲಿ ಸಾರಿಗೆ ಸಚಿವ ಶ್ರೀರಾಮುಲು ಭರವಸೆ

# ವಾಹನಗಳ ನೋಂದಣಿಯಲ್ಲಿ ಅಕ್ರಮ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದುಬಾರಿ ಬೆಲೆಯ ಐಷಾರಾಮಿ ಕಾರುಗಳ ನೋಂದಣಿಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಿಐಡಿ ತನಿಖೆಗೆ ಆದೇಶಿಸಲಾಗುತ್ತದೆ ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ಸದಸ್ಯ ಸಿ.ಎನ್. ಮಂಜೇಗೌಡ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, 'ಕೋರಮಂಗಲ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿ ವ್ಯಾಪ್ತಿಯಲ್ಲಿ 124 ದುಬಾರಿ ದರದ ಕಾರುಗಳ ನೋಂದಣಿಯಲ್ಲಿ ತೆರಿಗೆ ವಂಚಿಸಿರುವುದು ಇಲಾಖಾ ಮಟ್ಟದ ತನಿಖೆಯಲ್ಲಿ ಪತ್ತೆಯಾಗಿದೆ. ಕೆಲವು ವಾಹನಗಳ ನೋಂದಣಿಗೆ ಸಂಬಂಧಿಸಿ ದಾಖಲೆಗಳೇ ಕಚೇರಿಯಿಂದ ನಾಪತ್ತೆಯಾಗಿವೆ. ಈ ಕಾರಣದಿಂದ ತನಿಖೆಗೆ ಅಡಚಣೆ ಉಂಟಾಗಿದೆ' ಎಂದರು.

ಕೋರಮಂಗಲ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಐಷಾರಾಮಿ ವಾಹನಗಳ ನೋಂದಣಿಯಲ್ಲಿ ತೆರಿಗೆ ವಂಚನೆ ಆಗುತ್ತಿರುವ ದೂರುಗಳು ಬಂದಿದ್ದವು. 2015ರಿಂದ 2021 ರವರೆಗಿನ ನೋಂದಣಿ ಕುರಿತು ತನಿಖೆ ನಡೆಸಲಾಗಿದೆ. ಈ ಅವಧಿಯಲ್ಲಿ ಪತ್ತೆಯಾಗಿರುವ ಪ್ರಕರಣಗಳಲ್ಲಿ 13 ವಾಹನಗಳನ್ನು ವಶಪಡಿಸಿಕೊಂಡು, ₹ 1.64 ಕೋಟಿ ತೆರಿಗೆ ವಸೂಲಿ ಮಾಡಲಾಗಿದೆ ಎಂದು ವಿವರಿಸಿದರು.

**ತನಿಖೆ ಆಗ್ರಹ:** 'ಕಡತಗಳೇ ನಾಪತ್ತೆಯಾಗಿವೆ ಎಂದರೆ ಯಾರು ಹೊಣೆ? ಇಲಾಖೆಯ ಅಧಿಕಾರಿಗಳಿಂದಲೇ ತನಿಖೆ ನಡೆಸಿದರೆ ಸತ್ಯ ಹೊರಬರಲು ಸಾಧ್ಯವೇ? ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು' ಎಂದು ಮಂಜೇಗೌಡ ಆಗ್ರಹಿಸಿದರು.

**ಎಚ್‌ಎಸ್‌ಆರ್‌ಪಿ ತ್ವರಿತ ವಿತರಣೆಗೆ ಕ್ರಮ:** ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಶ್ರೀರಾಮುಲು, 'ರಾಜ್ಯದಲ್ಲಿ ಮೂರು ವರ್ಷಗಳ ಅವಧಿಯಲ್ಲಿ 26.65 ಲಕ್ಷ ಅತಿ ಭದ್ರತಾ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ವಿತರಿಸಲಾಗಿದೆ. 61,509 ಎಚ್‌ಎಸ್‌ಆರ್‌ಪಿ ನೋಂದಣಿ ಫಲಕಗಳ ವಿತರಣೆ ಬಾಕಿ ಇದೆ' ಎಂದು ತಿಳಿಸಿದರು.

ಎಚ್‌ಎಸ್‌ಆರ್‌ಪಿ ಅಳವಡಿಕೆಯಲ್ಲಿ ಸಾರಿಗೆ ಇಲಾಖೆ ಯಾವುದೇ ಪಾತ್ರವಿಲ್ಲ. ವಾಹನ ತಯಾರಕರು ಮತ್ತು ವಿತರಕರ ಮೂಲಕವೇ ನೋಂದಣಿ ಫಲಕದ ಅಳವಡಿಕೆಯು ನಡೆಯುತ್ತಿದೆ. ಕೆಲವರಿಗೆ ವಿಳಂಬವಾಗಿ ನೋಂದಣಿ ಫಲಕ ದೊರಕುತ್ತಿರುವುದು ಗಮನಕ್ಕೆ ಬಂದಿದೆ. ಈ ಕುರಿತು ಸಭೆ ನಡೆಸಿ, ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಲಾಗುವುದು ಎಂದು ಅವರು ಭರವಸೆ ನೀಡಿದರು.

### 'ಕ್ರೀಡಾ ತರಬೇತುದಾರರ ಕಾಯಂ ಅಸಾಧ್ಯ'




ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರ ಸೇವೆಯನ್ನು ಕಾಯಂಗೊಳಿಸಲು ಸಾಧ್ಯವಿಲ್ಲ ಎಂದು ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವ ಕೆ.ಸಿ. ನಾರಾಯಣ ಗೌಡ ಹೇಳಿದರು.

ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಮತ್ತು ಬಿಜೆಪಿಯ ಎಸ್.ವಿ. ಸಂಕನೂರ ಪ್ರಶ್ನೆಗೆ ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಉತ್ತರಿಸಿದ ಅವರು, 'ಗುತ್ತಿಗೆ ನೌಕರರ ಸೇವೆ ಕಾಯಮಾತಿ ಕುರಿತು ಸುಪ್ರೀಂಕೋರ್ಟ್ ತೀರ್ಪು ಪಾಲಿಸುವುದು ಕಡ್ಡಾಯ. ಕ್ರೀಡಾ ತರಬೇತುದಾರರ ಸೇವೆಯನ್ನು ಕಾಯಂಗೊಳಿಸುವುದು ತೀರ್ಪಿನ ಉಲ್ಲಂಘನೆಯಾಗುತ್ತದೆ' ಎಂದರು.

ಇಲಾಖೆಯಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲಾಗುತ್ತಿದೆ. ಜಿಲ್ಲೆ ಮತ್ತು ತಾಲ್ಲೂಕು ಹಂತದಲ್ಲಿ 211 ಕೋಚ್ ಕಂ ವಾರ್ಡನ್‌ಗಳ ಕಾಯಂ ಹುದ್ದೆಗಳನ್ನು ಸೃಜಿಸಲಾಗುತ್ತಿದೆ. ಶೀಘ್ರದಲ್ಲೇ ಈ ಕುರಿತು ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದು ತಿಳಿಸಿದರು.

ವಿಜಯನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ 29 ಜಿಲ್ಲೆಗಳಲ್ಲಿ ಜಿಲ್ಲಾ ಕ್ರೀಡಾಂಗಣಗಳಿವೆ. 120 ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಆರು ತಾಲ್ಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ ಎಂದರು.

ಕ್ರೀಡಾ ಪ್ರಾಧಿಕಾರದಲ್ಲಿ ಕಾಯಂ ತರಬೇತುದಾರರು ಇಲ್ಲ. ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ 48 ಮತ್ತು ಮಾಸಿಕ ಸಂಚಿತ ವೇತನದ ಆಧಾರದಲ್ಲಿ 48 ತರಬೇತುದಾರರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ವಿವರ ನೀಡಿದರು.

# ಭೂ ಒಡೆತನ ಮಾರ್ಗಸೂಚಿ ಬದಲಾವಣೆ: ಸಚಿವ ಕೋಟ

**ಬೆಂಗಳೂರು:** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಭೂರಹಿತ ಕುಟುಂಬಗಳಿಗೆ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳ ಅಧೀನದ ನಿಗಮಗಳ ಮೂಲಕ ಜಮೀನು ವಿತರಿಸುವ 'ಭೂ ಒಡೆತನ' ಯೋಜನೆಯ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ವೈ.ಎ. ನಾರಾಯಣಸ್ವಾಮಿ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, 'ಭೂ ಒಡೆತನ ಯೋಜನೆಯಲ್ಲಿ ಅಕ್ರಮಗಳಿಗೆ ಕಡಿವಾಣ ಹಾಕಲು ಸರ್ಕಾರ ತೀರ್ಮಾನಿಸಿದೆ. ಅನರ್ಹರು ಯೋಜನೆಯ ಪ್ರಯೋಜನ ಪಡೆಯುವುದನ್ನು ತಪ್ಪಿಸಲು ಕಠಿಣವಾದ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗುವುದು' ಎಂದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಘಟಕ ವೆಚ್ಚ ₹ 20 ಲಕ್ಷ ಇದೆ. ಉಳಿದ ಜಿಲ್ಲೆಗಳಲ್ಲಿ ಘಟಕ ವೆಚ್ಚ ₹ 15 ಲಕ್ಷವಿದೆ. ಘಟಕ ವೆಚ್ಚವನ್ನು ಎಲ್ಲ ಜಿಲ್ಲೆಗಳಲ್ಲೂ ₹ 20 ಲಕ್ಷಕ್ಕೆ ಹೆಚ್ಚಿಸುವ ಚಿಂತನೆ ಇದೆ ಎಂದರು.

ಅಕ್ರಮ ನಡೆಸಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ತನಿಖೆ ನಡೆಸಲು ಸೂಚಿಸಲಾಗಿದೆ ಎಂದರು.

ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 1990–91ರಿಂದ ಭೂ ಒಡೆತನ ಯೋಜನೆ ಜಾರಿಯಲ್ಲಿದೆ. ಈವರೆಗೆ ಒಟ್ಟು 41,509 ಫಲಾನುಭವಿಗಳಿಗೆ 68,231.14 ಎಕರೆ ಜಮೀನು ಖರೀದಿಸಿ, ವಿತರಿಸಲಾಗಿದೆ ಎಂದರು.

**ಆರೋಪ:** ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಎರಡೇ ಜಾತಿಗಳ ಜನರು ಹೆಚ್ಚು ಸೌಲಭ್ಯ ಪಡೆದಿದ್ದಾರೆ. ಉಳಿದವರಿಗೆ ಅನ್ಯಾಯವಾಗಿದೆ. ಪರಿಶಿಷ್ಟ ಜಾತಿಯ ಜನರು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಗಳಲ್ಲಿ ಕಡಿಮೆ ಫಲಾನುಭವಿಗಳಿದ್ದರೆ, ಪರಿಶಿಷ್ಟ ಜಾತಿಯ ಜನರು ಕಡಿಮೆ ಸಂಖ್ಯೆಯಲ್ಲಿರುವ ಜಿಲ್ಲೆಗಳಲ್ಲಿ ಹೆಚ್ಚು ಫಲಾನುಭವಿಗಳಿದ್ದಾರೆ' ಎಂದು ನಾರಾಯಣಸ್ವಾಮಿ ದೂರಿದರು.

# 'ನಮ್ಮ–ನಿಮ್ಮ ಡಿಎನ್‌ಎ ಒಂದೇ: ಶಾಂತಿಯಿಂದ ಬಾಳೋಣ'

### ವಿಧಾನಸಭೆಯಲ್ಲಿ ಚರ್ಚೆಯ ವೇಳೆ ಎನ್‌.ಎ.ಹ್ಯಾರಿಸ್ ಸಲಹೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ನಿಮ್ಮ (ಹಿಂದು–ಮುಸ್ಲಿಂ) ಡಿಎನ್‌ಎ ಒಂದೇ. ರಕ್ತವೂ ಒಂದೇ. ಹಿಂದು, ಮುಸ್ಲಿಂ, ಕ್ರೈಸ್ತರು ಅಣ್ಣ– ತಮ್ಮಂದಿರಂತೆ ಇರೋಣ, ಒಗ್ಗಟ್ಟಿನಿಂದ ವಿಶ್ವದಲ್ಲಿ ಭಾರತ ನಂಬರ್ 1 ಆಗುವಂತೆ ನೋಡಿಕೊಳ್ಳೋಣ' ಎಂದು ಕಾಂಗ್ರೆಸ್‌ನ ಎನ್‌.ಎ.ಹ್ಯಾರಿಸ್ ಹೇಳಿದರು.

ವಿಧಾನಸಭೆಯಲ್ಲಿ ಶುಕ್ರವಾರ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹಿಜಾಬ್ ವಿವಾದ ಮತ್ತು ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ವಿಧಿಸಿದ ಘಟನೆಗಳನ್ನು ಪರೋಕ್ಷವಾಗಿ ಪ್ರಸ್ತಾಪಿಸಿದರು. 'ಇಲ್ಲಿ ತನಕ ಆಗಿದ್ದು ಸಾಕು. ಇನ್ನು ನಿಲ್ಲಿಸೋಣ. ನಾವ್ಯಾರೂ ಸಾವಿರಾರು ವರ್ಷ ಇರುವುದಿಲ್ಲ. ಮೂರು ದಿನಗಳ ಬದುಕಿಗೆ ಇಷ್ಟೆಲ್ಲಾ ಕಿತ್ತಾಡಬೇಕೆ' ಎಂದು ಅವರು ಪ್ರಶ್ನಿಸಿದರು.

'ನಾವೆಲ್ಲ ಅಣ್ಣ ತಮ್ಮಂದಿರು. ಭಾರತೀಯರು ಎಂದು ಹೇಳಿಕೊಳ್ಳಲು ಹೆಮ್ಮೆ ಆಗುತ್ತದೆ. ಹಿಂದು–ಮುಸ್ಲಿಂ ಎಂದು ಕಿತ್ತಾಡುವುದನ್ನು ನಿಲ್ಲಿಸೋಣ. ಎರಡೂ ಸಮುದಾಯಗಳ ಹಿರಿಯರು ಕುಳಿತು ಮಾತನಾಡಿ, ಶಾಂತಿ–ಸೌಹಾರ್ದದಿಂದ ಇರೋಣ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಹಿಂದು–ಮುಸ್ಲಿಂ ಸೇರಿದಂತೆ ಎಲ್ಲ ಜಾತಿ ಮತಗಳ ಜನರು ಒಗ್ಗಟ್ಟಿನಿಂದ ಹೋರಾಟ ಮಾಡಿದ್ದರು. ಆ ಒಗ್ಗಟ್ಟು ಮರು ಸ್ಥಾಪಿಸುವ ಬಗ್ಗೆ ಸಮಾನರಾಗಿ ಬದುಕಲು ಶ್ರಮಿಸೋಣ' ಎಂದು ಹ್ಯಾರಿಸ್ ಸಲಹೆ ನೀಡಿದರು.

**ಎಪಿಎಲ್‌ನವರಿಗೂ ಉಚಿತವಾಗಿ ಸಿಗಲಿ:** ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡುವ ಮಾದರಿಯಲ್ಲಿ ಎಪಿಎಲ್ ಕಾರ್ಡ್ ಹೊಂದಿದವರಿಗೂ ಉಚಿತ ಚಿಕಿತ್ಸೆ ನೀಡುವ ವ್ಯವಸ್ಥೆ ಆಗಬೇಕು. ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರು ಇತ್ತೀಚಿನ ಕೋವಿಡ್‌ನಿಂದ ಚಿಕಿತ್ಸೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬಡವರಾಗಿದ್ದಾರೆ. ಸಾಲ ಮಾಡಿ ಚಿಕಿತ್ಸೆಗೆ ಹಣ ಭರಿಸುವ ಸ್ಥಿತಿ ಇದೆ ಎಂದು ಹೇಳಿದರು.

ರಾಜ್ಯ ಸರ್ಕಾರ ಆರಂಭಿಸಲು ಉದ್ದೇಶಿಸಿರುವ ನಮ್ಮ ಕ್ಲಿನಿಕ್‌ನಲ್ಲಿ ಸಣ್ಣ–ಪುಟ್ಟ ಅನಾರೋಗ್ಯದ ಜತೆ ಗಂಭೀರ ಕಾಯಿಲೆಗಳಿಗೂ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಬೇಕು ಎಂದು ಅವರು ಸಲಹೆ ನೀಡಿದರು.

# ಮೇಕೆದಾಟು: ಪರಿಷತ್‌ನಲ್ಲೂ ಒಮ್ಮತದ ನಿರ್ಣಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಬಾಕಿ ಇರುವ ಅನುಮತಿಗಳನ್ನು ತ್ವರಿತವಾಗಿ ನೀಡುವಂತೆ ಒತ್ತಾಯಿಸಿ ವಿಧಾನ ಪರಿಷತ್‌ನಲ್ಲೂ ಶುಕ್ರವಾರ ಸರ್ವಾನುಮತದ ನಿರ್ಣಯ ಅಂಗೀಕರಿಸಲಾಯಿತು.

ತಮಿಳುನಾಡು ವಿಧಾನಸಭೆಯಲ್ಲಿ ಮೇಕೆದಾಟು ಯೋಜನೆ ವಿರೋಧಿಸಿ ಕೈಗೊಂಡಿರುವ ನಿರ್ಣಯವನ್ನು ಖಂಡಿಸುವ ಹಾಗೂ ಕಾವೇರಿ ಕಣಿವೆಯಲ್ಲಿ ತಮಿಳುನಾಡು ಕೈಗೊಳ್ಳುತ್ತಿರುವ ಯೋಜನೆಗಳಿಗೆ ಅನುಮತಿ ನೀಡದಂತೆ ಆಗ್ರಹಿಸುವ ಅಂಶಗಳೂ ನಿರ್ಣಯದಲ್ಲಿವೆ.

ಕರ್ನಾಟಕದ ಒಪ್ಪಿಗೆ ಇಲ್ಲದೆ ನದಿ ಜೋಡಣೆ ಯೋಜನೆಯನ್ನು ಅಂತಿಮಗೊಳಿಸಬಾರದು ಮತ್ತು ಸದ್ಯ ರೂಪಿಸಿರುವ ವಿಸ್ತೃತ ಯೋಜನಾ ವರದಿಗೆ ಒಪ್ಪಿಗೆ ನೀಡಬಾರದು ಎಂಬ ಆಗ್ರಹವೂ ನಿರ್ಣಯದಲ್ಲಿದೆ.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ನಿರ್ಣಯ ಮಂಡಿಸಿದರು. ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ನಿರ್ಣಯವನ್ನು ಬೆಂಬಲಿಸಿದರು. ಬಳಿಕ ಧ್ವನಿಮತದ ಮೂಲಕ ನಿರ್ಣಯಗಳನ್ನು ಅಂಗೀಕರಿಸಲಾಯಿತು.

# ರೈಲಿಗೆ ತಲೆಕೊಟ್ಟು ಆತ್ಮಹತ್ಯೆ

**ಬೆಂಗಳೂರು:** ಹೊರಮಾವು ಬಳಿ ರೈಲಿಗೆ ತಲೆಕೊಟ್ಟು ಸಹಪಾಠಿಗಳಿಬ್ಬರು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಬೈಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಿದ್ಯಾರ್ಥಿಗಳಾದ ಸಿರೀಶ್ (20) ಹಾಗೂ ಚೈತನ್ಯಾ (19) ಮೃತಪಟ್ಟವರು ಮೃತದೇಹಗಳನ್ನು

ಅವರಿಬ್ಬರೂ ನಗರದ ಕಾಲೇಜೊಂದರಲ್ಲಿ ಬಿ.ಸಿ.ಎ ಪದವಿ ವ್ಯಾಸಂಗ ಮಾಡುತ್ತಿದ್ದರು. ಸಹಪಾಠಿಗಳಾಗಿದ್ದ ಇಬ್ಬರ ನಡುವೆ ಸಲುಗೆ ಇತ್ತು. ಅವರಿಬ್ಬರು ಪರಸ್ಪರ ಪ್ರೀತಿಸುತ್ತಿದ್ದರೆಂಬ ಮಾಹಿತಿ ಇದ್ದು, ಖಚಿತವಾಗಿಲ್ಲ' ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

# ಬಾಲಕನ ಮೇಲೆ ದೌರ್ಜನ್ಯ: ಕಠಿಣ ಕ್ರಮಕ್ಕೆ ಆಗ್ರಹ

**ಬೆಂಗಳೂರು:** ಬಸವನ ಬಾಗೇವಾಡಿ ತಾಲ್ಲೂಕಿನ ವಡ್ಡೋಡಗಿ ಗ್ರಾಮದಲ್ಲಿ ಏಳು ವರ್ಷದ ಬಾಲಕನನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಹಾಕಿ, ಆಯಿಲ್ ಸುರಿದು ಬೆಂಕಿಹಚ್ಚಿ ಸುಟ್ಟಿರುವ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಥೋಡ್ ಆಗ್ರಹಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ಬಾಲಕನ ಮುಖ ಮತ್ತು ಮರ್ಮಾಂಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿವೆ. ಆರೋಪಿಗಳ ವಿರುದ್ಧ ಪೊಲೀಸರು ಈವರೆಗೆ ಯಾವುದೇ ಕ್ರಮ ಜರುಗಿಸಿಲ್ಲ. ಕೃತ್ಯ ಎಸಗಿದವರನ್ನು ತಕ್ಷಣ ಬಂಧಿಸಬೇಕು ಮತ್ತು ಬಾಲಕನ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಬೇಕು' ಎಂದು ಆಗ್ರಹಿಸಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಕೂಡ ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದರು. ಸಭಾಪತಿ ಪೀಠದಲ್ಲಿದ್ದ ತೇಜಸ್ವಿನಿ ಗೌಡ ಅವರೂ ಈ ಬೇಡಿಕೆಯನ್ನು ಬೆಂಬಲಿಸಿದರು.

ಉತ್ತರ ನೀಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಈ ಘಟನೆ ಅಮಾನವೀಯವಾದುದು. ಇದರಿಂದ ನನಗೂ ನೋವಾಗಿದೆ. ಈಗಾಗಲೇ ಒಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಿ, ವರದಿ ಸಲ್ಲಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.


ನಟ ಶಿವರಾಜ್‌ಕುಮಾರ್ ಹಾಗೂ ಟಿ.ಎಸ್‌.ಕಲ್ಯಾಣರಾಮನ್ ಆಭರಣ ಪ್ರದರ್ಶಿಸಿದರು. ಕಾರ್ಯನಿರ್ವಾಹಕ ನಿರ್ದೇಶಕರಾದ ರಾಜೇಶ್ ಕಲ್ಯಾಣರಾಮನ್ ಹಾಗೂ ರಮೇಶ್ ಕಲ್ಯಾಣರಾಮನ್ ಇದ್ದಾರೆ

# ಕಲ್ಯಾಣ್ ಜ್ಯುವೆಲರ್ಸ್ ನೂತನ ಮಳಿಗೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಲ್ಯಾಣ್ ಜ್ಯುವೆಲರ್ಸ್ ವತಿಯಿಂದ ಕಮ್ಮನಹಳ್ಳಿಯಲ್ಲಿ ಹೊಸದಾಗಿ ಆರಂಭಿಸಲಾಗಿರುವ ಆಭರಣ ಮಳಿಗೆಯನ್ನು ನಟ ಶಿವರಾಜ್‌ಕುಮಾರ್ ಉದ್ಘಾಟಿಸಿದರು.

ಕಲ್ಯಾಣ್ ಜ್ಯುವೆಲರ್ಸ್ ನಗರದಲ್ಲಿ ಆರಂಭಿಸಿರುವ 8ನೇ ಆಭರಣ ಮಳಿಗೆ ಇದಾಗಿದೆ.

'ಕಲ್ಯಾಣ್ ಜ್ಯುವೆಲರ್ಸ್ ಪ್ರಚಾರ ರಾಯಭಾರಿಯಾಗಿರುವುದಕ್ಕೆ ಖುಷಿಯಾಗಿದೆ. ಸಂಸ್ಥೆಯು ರಾಜ್ಯದಲ್ಲಿ ಒಟ್ಟು 17 ಆಭರಣ ಮಳಿಗೆಗಳನ್ನು ಹೊಂದಿದೆ. ಗ್ರಾಹಕರಿಗೆ ಇಷ್ಟವಾಗುವಂತಹ ವಿವಿಧ ವಿನ್ಯಾಸದ ಚಿನ್ನಾಭರಣಗಳು ಇಲ್ಲಿ ಲಭ್ಯವಿರಲಿವೆ' ಎಂದು ಶಿವರಾಜ್‌ಕುಮಾರ್ ಅವರು ಹೇಳಿದ್ದಾರೆ.

ಕಲ್ಯಾಣ್ ಜ್ಯುವೆಲರ್ಸ್ ಅಧ್ಯಕ್ಷ ಟಿ.ಎಸ್. ಕಲ್ಯಾಣರಾಮನ್, 'ನೂತನ ಮಳಿಗೆ ಉದ್ಘಾಟನೆ ಪ್ರಯುಕ್ತ ಚಿನ್ನಾಭರಣ ಖರೀದಿ ಮೇಲೆ ವಿಶೇಷ ರಿಯಾಯಿತಿ ಪ್ರಕಟಿಸಲಾಗಿದೆ. ವಜ್ರ ಹಾಗೂ ಅಮೂಲ್ಯ ಹರಳುಗಳನ್ನು ಹೊಂದಿರುವ ಆಭರಣಗಳ ಖರೀದಿ ಮೇಲೆ ಶೇ 20ರಷ್ಟು ರಿಯಾಯಿತಿ ಇದೆ. 1 ಗ್ರಾಂ ಚಿನ್ನ ಖರೀದಿಸುವವರಿಗೆ 1 ಗ್ರಾಂ ಬೆಳ್ಳಿ ಉಚಿತವಾಗಿ ನೀಡಲಾಗುತ್ತದೆ. ತಿಂಗಳಾಂತ್ಯದವರೆಗೆ ರಿಯಾಯಿತಿ ಹಾಗೂ ವಿಶೇಷ ಕೊಡುಗೆಗಳು ಇರಲಿವೆ' ಎಂದು ಮಾಹಿತಿ ನೀಡಿದ್ದಾರೆ.

**ಸಂಪರ್ಕ:** https://www kalyanjewellers.net/

# 'ಕನ್ನಡ ಭಾಷಾ ಶಿಕ್ಷಕರ ನೇಮಕಕ್ಕೆ ಒತ್ತು'

**ಬೆಂಗಳೂರು:** 'ಕನ್ನಡ ಭಾಷೆಯನ್ನು ಐಚ್ಛಿಕವಾಗಿ ಅಧ್ಯಯನ ಮಾಡಿದವರನ್ನೇ ಕನ್ನಡ ಭಾಷಾ ಶಿಕ್ಷಕರನ್ನಾಗಿ ನೇಮಿಸಲು ವೃಂದ ಹಾಗೂ ನೇಮಕಾತಿ ನಿಯಮಗಳಲ್ಲಿ ಅವಕಾಶವಿದೆ. ಇದರ ಅನುಸಾರ ಕನ್ನಡ ಭಾಷಾ ಶಿಕ್ಷಕರ ನೇಮಕಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ಕನ್ನಡ ಭಾಷಾ ಶಿಕ್ಷಕರ ನೇಮಕಾತಿಗೆ ಆದ್ಯತೆ ನೀಡುವಂತೆ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಸಚಿವರಿಗೆ ಪತ್ರ ಬರೆದಿದ್ದರು.

ಅದಕ್ಕೆ ಮಾರೋಲೆ ಬರೆದಿರುವ ಸಚಿವ ನಾಗೇಶ್, 'ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕನ್ನಡ ಭಾಷಾ ಬೋಧನೆ ಪರಿಣಾಮಕಾರಿಯಾಗಿಸಲು ಸರ್ಕಾರ ಎಲ್ಲಾ ಕ್ರಮ ಕೈಗೊಂಡಿದೆ. ಕನ್ನಡ ಭಾಷಾ ಶಿಕ್ಷಕರನ್ನು ನೇಮಿಸುವ ಜೊತೆಗೆ ಕಾಲ ಕಾಲಕ್ಕೆ ಅವರಿಗೆ ತರಬೇತಿಯನ್ನೂ ನೀಡಲಾಗುತ್ತಿದೆ. ಇನ್ನು ಮುಂದೆ ಪ್ರಾಥಮಿಕ ಶಾಲಾ ಸಾಮಾನ್ಯ ಶಿಕ್ಷಕರ ನಿವೃತ್ತಿ ಹಾಗೂ ಬಡ್ತಿಯಿಂದ ಖಾಲಿಯಾಗುವ ಹುದ್ದೆಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಕನ್ನಡ ಭಾಷಾ ಶಿಕ್ಷಕರನ್ನೇ ನೇಮಿಸಲಾಗುತ್ತದೆ' ಎಂದು ತಿಳಿಸಿದ್ದಾರೆ. 'ಶಾಲೆಗಳಲ್ಲಿ ಕನ್ನಡ ಭಾಷೆ ಬೋಧನೆ ಪರಿಣಾಮಕಾರಿಯಾಗಿಸಲು ತಾವು ನೀಡಿರುವ ಸಲಹೆಗಳನ್ನು ಸ್ವಾಗತಿಸುತ್ತೇನೆ' ಎಂದೂ ಹೇಳಿದ್ದಾರೆ.

# ಕೀಲುರೋಗ ಕ್ಲಿನಿಕ್ ಪ್ರಾರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆನ್ನುಮೂಳೆ ಶಸ್ತ್ರಚಿಕಿತ್ಸೆ ವಿಭಾಗದ (ಸ್ಪೈನ್ ಸರ್ಜರಿ) ಸಹಯೋಗದಲ್ಲಿ ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯು ಕೀಲು ರೋಗ (ರೊಮಟಾಲಜಿ) ಕ್ಲಿನಿಕ್ ಪ್ರಾರಂಭಿಸಿದೆ.

'ಪ್ರತಿ ತಿಂಗಳ 2ನೇ ಶುಕ್ರವಾರ ಬೆಳಿಗ್ಗೆ 9ಗಂಟೆಯಿಂದ 11ಗಂಟೆವರೆಗೆ ಈ ಕ್ಲಿನಿಕ್ ಉಚಿತವಾಗಿ ಕಾರ್ಯ ನಿರ್ವಹಿಸಲಿದೆ. ಸಂಸ್ಥೆಯು ಅತ್ಯುತ್ತಮ ಚಿಕಿತ್ಸೆ ಸೌಲಭ್ಯ ಹೊಂದಿದ್ದು, ಕೀಲು- ಮೂಳೆ ಹಾಗೂ ಬೆನ್ನುಹುರಿ ಸಮಸ್ಯೆಗಳಿಗೆ ಇಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದು. ಕೀಲು ರೋಗಕ್ಕೆ ಸಂಬಂಧಿಸಿದಂತೆ ಕ್ಲಿನಿಕ್‌ನಲ್ಲಿ ಉಚಿತವಾಗಿ ತಪಾಸಣೆ ಮತ್ತು ಚಿಕಿತ್ಸೆ ಪಡೆದುಕೊಳ್ಳಬಹುದು' ಎಂದು ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ ನಿರ್ದೇಶಕ ಡಾ.ಎಚ್‌.ಸಿ. ಚಂದ್ರಶೇಖರ್ ತಿಳಿಸಿದರು.

'ಕೀಲು ರೋಗ ಚಿಕಿತ್ಸೆ ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿಯಾಗಿದೆ. ಇಂಥ ಸಮಸ್ಯೆ ಎದುರಿಸುತ್ತಿರುವವರು ಈ ಕ್ಲಿನಿಕ್‌ನ ಪ್ರಯೋಜನ ಪಡೆದುಕೊಳ್ಳಬೇಕು' ಎಂದು ತಿಳಿಸಿದರು.



ಡಾ.ಎಚ್‌ಎಸ್‌ ಚಂದ್ರಶೇಖರ್ ಮತ್ತು ಇಂಡಿಯನ್ ರೊಮಟಾಲಜಿ ಅಸೋಸಿಯೇಷನ್ ಅಧ್ಯಕ್ಷ ಡಾ. ಧರ್ಮಾನಂದ್ ಅವರು ಕೀಲು ರೋಗ ಕ್ಲಿನಿಕ್‌ಗೆ ಚಾಲನೆ ನೀಡಿದರು. ಕರ್ನಾಟಕ ಆರ್ಥೋಪೆಡಿಕ್ ಅಸೋಸಿಯೇಷನ್ ಅಧ್ಯಕ್ಷ ಡಾ. ಅಶ್ವಿನಿ ಕುಮಾರ್ ಸಿಂಗ್ ಹಾಗೂ ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ಬೆನ್ನುಹುರಿ ವಿಭಾಗದ ಮುಖ್ಯಸ್ಥ ಡಾ. ಮೋಹನ್ ಎನ್‌ಎಸ್‌ ಇದ್ದಾರೆ.

## ಚಿತ್ರಾವಳಿ



ಆರ್‌ವಿ.ವಿಶ್ವವಿದ್ಯಾಲಯದ ದೃಶ್ಯ ಮತ್ತು ಪ್ರದರ್ಶನ ಕಲೆಗಳ ಕೇಂದ್ರವು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಎಡದಿಂದ ಮೂರನೆಯವರು) ಕರ್ನಾಟಕ ಶಾಸ್ತ್ರೀಯ ಸಂಗೀತಗಾರ ಟಿ.ಎಂ.ಕೃಷ್ಣ ಮತ್ತು ತಂಡದವರು ಸಂಗೀತ ಕಛೇರಿ ನಡೆಸಿಕೊಟ್ಟರು. ಜಿ. ರವಿಕಿರಣ್, ರಿತ್ವಿಕ್ ರಾಜ್, ಶಾಲಿನಿ ಎಂ. ಇದ್ದಾರೆ


'ಬೆಂಗಳೂರು ವಕೀಲರ ಸಂಘ' ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ವಕೀಲರಿಗೆ ಅಭಿನಂದನಾ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಹಿರಿಯ ವಕೀಲೆ ಜಯ್ನಾ ಕೊಠಾರಿ, ಲಕ್ಷ್ಮಿ ಅಯ್ಯಂಗಾರ್, ಎಸ್‌ಆರ್‌ಅನುರಾಧ ಮತ್ತು ನಳಿನಾ ಮಾಯೇಗೌಡ ಅವರನ್ನು ಅಭಿನಂದಿಸಲಾಯಿತು. (ನಿಂತವರು ಎಡದಿಂದ) ಹಿನ್ನೆಲೆ ಗಾಯಕಿ ಕೆ.ಎಸ್‌ಸುರೇಖಾ, ನಟಿ ಸೋನಿಕಾ ಗೌಡ, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಸ್‌ ಸುಜಾತಾ, ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ನಟಿ ಭಾವನಾ ಮತ್ತು ನಟಿ ಹರಿಪ್ರಿಯಾ ಇದ್ದರು



ಬೆಂಗಳೂರು ವಿಶ್ವವಿದ್ಯಾಲಯಕ್ಕೆ ತಕ್ಷಣ ಹೊಸ ಕುಲಪತಿ ನೇಮಕ ಮಾಡುವಂತೆ ಒತ್ತಾಯಿಸಿ 'ಬೆಂಗಳೂರು ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ' ಸದಸ್ಯರು ವಿ.ವಿ. ಆವರಣದಲ್ಲಿ ಶುಕ್ರವಾರ ಧರಣಿ ನಡೆಸಿದರು – ಪ್ರಜಾವಾಣಿ ಚಿತ್ರಗಳು

# ಲಾರಿಗಳ ಡಿಕ್ಕಿ: ಚಾಲಕ ಸಜೀವ ದಹನ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ಎನ್ ಎಚ್ 7ರ ಭುಕ್ತಿ ಡಾಬಾ ಮುಂದೆ ನಸುಕಿನ ವೇಳೆ ಎರಡು ಲಾರಿಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಬೆಂಕಿ ಹೊತ್ತಿಕೊಂಡು ಓರ್ವ ಚಾಲಕ ಸಜೀವವಾಗಿ ಸುಟ್ಟು ಹೋಗಿದ್ದಾನೆ.

ಭುಕ್ತಿ ಡಾಬಾ ಮುಂದೆ ಇದ್ದ ರಸ್ತೆ ವಿಭಜಕಕ್ಕೆ ಚಿಕ್ಕಬಳ್ಳಾಪುರದಿಂದ ಬೆಂಗಳೂರು ಕಡೆಗೆ ಸಿಮೆಂಟ್ ಹೊತ್ತು ಸಾಗುತ್ತಿದ್ದ ಲಾರಿವೊಂದು ರಭಸದಿಂದ ಗುದ್ದಿದ ಪರಿಣಾಮ, ಬೆಂಗಳೂರಿನಿಂದ ಚಿಕ್ಕಬಳ್ಳಾಪುರ ಮಾರ್ಗವಾಗಿ ಸಾಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದು ಈ ಅವಘಡ ಸಂಭವಿಸಿದೆ.

# 'ವಾಲ್ವ್‌ನಲ್ಲಿನ ದೋಷ ವೈಫಲ್ಯಕ್ಕೆ ಕಾರಣ'

**ನವದೆಹಲಿ (ಪಿಟಿಐ):** ಭಾರತದ ಪ್ರಪ್ರಥಮ ಜಿಐಎಸ್‌ಎಟಿ–1 ಉಪಗ್ರಹದ ಉಡಾವಣೆ ಕಾರ್ಯವು ಕಳೆದ ಆಗಸ್ಟ್ ತಿಂಗಳಲ್ಲಿ ವಿಫಲಗೊಳ್ಳಲು ರಾಕೆಟ್‌ನ ಘನೀಕೃತ ಜಲಜನಕ ಟ್ಯಾಂಕ್‌ನಲ್ಲಿ ಉಂಟಾಗಿದ್ದ ಕಡಿಮೆ ಒತ್ತಡ, ವಾಲ್ವ್‌ನಲ್ಲಿ ಕೊನೆಗಳಿಗೆಯಲ್ಲಿ ಕಾಣಿಸಿಕೊಂಡಿದ್ದ ದೋಷ ಕಾರಣ ಎಂದು ವರದಿ ತಿಳಿಸಿದೆ.

ಉಪಗ್ರಹ ಉಡಾವಣೆಯಲ್ಲಿ ವೈಫಲ್ಯ ಪತ್ತೆಗೆ ಸಮಿತಿಯನ್ನು 'ಇಸ್ರೊ' ರಚಿಸಿತ್ತು. ಉಡಾವಣೆ ಸಂದರ್ಭದಲ್ಲಿ ವೇಳೆ ಜಿಎಸ್‌ಎಲ್‌ವಿ ರಾಕೆಟ್‌ನ ಕ್ರಯೋಜೆನಿಕ್ ಎಂಜಿನ್‌ನಲ್ಲಿ ವೈಫಲ್ಯ ಪತ್ತೆಯಾಗಿತ್ತು. ದೋಷ ಪತ್ತೆಯಾದ ನಂತರ ನಿಗದಿತ ವೇಳೆಯ 307 ಕ್ಷಣಗಳ ನಂತರ ಉಡಾವಣಾ ಪ್ರಕ್ರಿಯೆ ಕೈಬಿಡಲಾಗಿತ್ತು.

## ನಗರದಲ್ಲಿ ಇಂದು

**5ನೇ ಕನ್ನಡ ಸಾಹಿತ್ಯ ಸಮ್ಮೇಳನ:** ಉದ್ಘಾಟನೆ– ಎ.ಎಚ್. ಬಸವರಾಜ್, ಕೃತಿಗಳ ಲೋಕಾರ್ಪಣೆ– ಮಾಯಣ್ಣ, ಗೋವಿಂದಹಳ್ಳಿ ಕೃಷ್ಣೇಗೌಡ, ಸಮ್ಮೇಳನಾಧ್ಯಕ್ಷತೆ– ಜರಗನಹಳ್ಳಿ ಸದಾಶಿವಯ್ಯ, ಆಯೋಜನೆ– ಕುವೆಂಪು ಕರ್ನಾಟಕ ಜನಪರ ವೇದಿಕೆ, ಸ್ಥಳ– ಬಿ.ಎಂ.ಶ್ರೀ. ಪ್ರತಿಷ್ಠಾನ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೋನಿ, ಬೆಳಿಗ್ಗೆ 10

**ಸರಳಾ ರಂಗನಾಥ ರಾವ್ ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ– ಮಾವಿನಕೆರೆ ರಂಗನಾಥ್, ಪ್ರಶಸ್ತಿ ಪ್ರದಾನ: ಬಿ.ಆರ್. ಲಕ್ಷ್ಮಣರಾವ್, ಅಧ್ಯಕ್ಷತೆ: ಎಚ್.ಎಸ್. ವೆಂಕಟೇಶಮೂರ್ತಿ, ಪ್ರಶಸ್ತಿ ವಿಜೇತರು– ಶಾಂತಿ ಕೆ. ಅಪ್ಪಣ್ಣ, ಪ್ರಸ್ತಾವನೆ: ಜಿ.ಎನ್. ರಂಗನಾಥ ರಾವ್, ಅಭಿನಂದನಾ ಭಾಷಣ: ಚಿಂತಾಮಣಿ ಕೊಡ್ಲೆಕೆರೆ, ಆಯೋಜನೆ– ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನ, ಸ್ಥಳ– ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10.30

**ರಾಮಮನೋಹರ ಲೋಹಿಯಾ ಜನ್ಮದಿನ ಮತ್ತು ವಿಚಾರ ಸಂಕಿರಣ:** ಅಧ್ಯಕ್ಷತೆ– ಬಿ.ಟಿ.ಲಲಿತಾ ನಾಯಕ್, ಭಾಷಣ: ಎಚ್. ಡಿ.ಬಸವರಾಜು, ಆಯೋಜನೆ: ಜನತಾ ಪಾರ್ಟಿ ಕರ್ನಾಟಕ, ಸ್ಥಳ: ಸಮ್ಮೇಳನ ಸಭಾಂಗಣ, ಶಾಸಕರ ಭವನ–2, ಬೆಳಿಗ್ಗೆ 11

**ಲಯನ್ಸ್–317ಎಫ್ ಜಿಲ್ಲಾ ಪ್ರತಿಷ್ಠಾನದ ವಾರ್ಷಿಕೋತ್ಸವ:** ಅತಿಥಿಗಳು– ಕೆ.ವಂಶೀಧರ್ ಬಾಬು, ಆರ್.ವಿಶಾಲ್, ಮನೋಹರನ್ ನಂಬಿಯಾರ್, ಎಂ.ಬಿ. ದೀಪಕ್ ಸುಮನ್, ಸ್ಥಳ: ಭಾರತ್ ಸ್ಕೌಟ್ಸ್–ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11

**'ಚಿತ್ರಕಲಾ ಸಮ್ಮಾನ್' ಪ್ರಶಸ್ತಿ ಪ್ರದಾನ:** ರಾಜೀವ್ ಚಂದ್ರಶೇಖರ್, ಚಿತ್ರಕಲಾ ಪ್ರದರ್ಶನ ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಪ್ರಶಸ್ತಿ ಪುರಸ್ಕೃತರು: ಪ್ರೊ. ರಥನ್ ಪರಿಮು, ಎನ್. ಪುಷ್ಪಮಾಲ, ನರೇಂದ್ರ ವಿ.ಜಿ., ಬಸವರಾಜ್ ಮುಸಾವಳಗಿ, ಪ್ರೊ. ವಿಶ್ವಂಭರ ಕೆ.ಎಸ್., ಆಯೋಜನೆ ಹಾಗೂ ಸ್ಥಳ– ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

**ಶಿವಸಂಚಾರ ನಾಟಕೋತ್ಸವ:** ಉದ್ಘಾಟನೆ– ಮುನಿರತ್ನ, ಅಧ್ಯಕ್ಷತೆ: ಎಚ್. ಎಸ್. ರಾಜಶೇಖರ್, ಮುಖ್ಯ ಅತಿಥಿ: ಕೆ.ವಿ. ನಾಗರಾಜಮೂರ್ತಿ, ನಾಟಕ: ಗಡಿಯಂಕ ಕುಡಿಮುದ್ದ, ಆಯೋಜನೆ: ಶಿವಸಂಚಾರ ನಾಟಕೋತ್ಸವ ಸಮಿತಿ, ಸ್ಥಳ– ಕಲಾಗ್ರಾಮ ಬಯಲು ರಂಗಮಂದಿರ, ಸಂಜೆ 5.30.

**'ನಾದಜ್ಯೋತಿ ಸಂಗೀತ ಸಂಭ್ರಮ' ಹಾಗೂ ಪುರಂದರದಾಸರ ಮತ್ತು ತ್ರಿಮೂರ್ತಿಗಳ ಉತ್ಸವ:** ಗಾಯನ: ಶ್ರೀರಂಗಮ್ ವಿ., ವಯೋಲಿನ್: ಬಿ.ಕೆ. ರಘು, ಮೃದಂಗ: ಅರ್ಜುನ್ ಕುಮಾರ್, ಮೋರ್ಚಿಂಗ್: ಬಿ. ರಾಜಶೇಖರ್, ಆಯೋಜನೆ– ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ ಸಭಾಂಗಣ, ಮಲ್ಲೇಶ್ವರ, ಸಂಜೆ 6

ಡ್ರಾಮಾಟ್ರಿಕ್ಸ್, ಸ್ಥಳ– ಅಶ್ವಥ್ ಕಲಾ ಭವನ, ಎನ್.ಆರ್.ಕಾಲೊನಿ, ಸಂಜೆ 7


ನಿರ್ಮಾಣ ಹಂತದಲ್ಲಿರುವ ಪುನೀತ್ ಪುತ್ಥಳಿ


# ಪಾಲಿಕೆ ಆವರಣದಲ್ಲಿ ಪುನೀತ್ ಪುತ್ಥಳಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿಯ ಕನ್ನಡ ನೌಕರರ ಸಂಘವು ಪಾಲಿಕೆ ಆವರಣದಲ್ಲಿ ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ ಕಂಚಿನ ಪುತ್ಥಳಿ ನಿರ್ಮಿಸಿದೆ. ಇದೇ 27ರಂದು ಇದು ಲೋಕಾರ್ಪಣೆಯಾಗಲಿದೆ.

'ಡಾ.ರಾಜ್‌ಕುಮಾರ್ ಪ್ರತಿಮೆ ಪಕ್ಕದಲ್ಲೇ ಪುನೀತ್ ಪುತ್ಥಳಿ ನಿರ್ಮಿಸಲಾಗಿದೆ. ಪಾಲಿಕೆ ಆವರಣದಲ್ಲಿ ಒಟ್ಟು 900 ಚದರ ಅಡಿ ವಿಸ್ತೀರ್ಣದಲ್ಲಿ 20 ಗಂಧದ ಸಸಿಗಳನ್ನು ನೆಡಲಾಗಿದೆ. ಮೆಕ್ಸಿಕನ್ ಹುಲ್ಲು ಹಾಸು ಕೂಡ ನಿರ್ಮಿಸಲಾಗಿದೆ. ಇದಕ್ಕೆ ಗಂಧದ ಗುಡಿ ಉದ್ಯಾನವೆಂದು ಹೆಸರಿಡಲಾಗಿದೆ. ಇದು ಕೂಡ 27ರಂದೇ ಉದ್ಘಾಟನೆಯಾಗಲಿದೆ' ಎಂದು ಪ್ರಕಟಣೆ ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ವಿವಾಹವಾಗಲು ಆರ್ಥಿಕ ಸಾಮರ್ಥ್ಯ ಮತ್ತು ಸ್ವಾತಂತ್ರ್ಯ ಇರಬೇಕು. ಈ ಸಾಮರ್ಥ್ಯ ಇಲ್ಲದವರು ವಿವಾಹವಾಗಬಾರದು.

–ಡಾ. ಬಿ.ಆರ್.ಅಂಬೇಡ್ಕರ್

# ಬೇಕಿರುವುದು ಮೈತ್ರಿ ಸ್ಥಾಪನೆ ದ್ವೇಷ ಹರಡುವುದು ಬೇಡ

**ಕಾಶ್ಮೀರಿ** ಪಂಡಿತರ ಮೇಲೆ 1990-91ರಲ್ಲಿ ನಡೆದ ಹಿಂಸಾಚಾರ ಮತ್ತು ಅದರ ಪರಿಣಾಮವಾಗಿ ಅವರು ಕಣಿವೆಯಿಂದ ವಲಸೆ ಹೋಗಬೇಕಾದಂಥ ಸನ್ನಿವೇಶ ಸೃಷ್ಟಿಯಾದದ್ದು, ದೇಶದ ಈಚೆಗಿನ ಇತಿಹಾಸದ ಭಯಾನಕ ಹಾಗೂ ನಾಚಿಕೆಗೇಡಿನ ಅಧ್ಯಾಯ. ಪಂಡಿತರ ಸಂಕಟಗಳು ಇನ್ನೂ ಮುಂದುವರಿದಿವೆ. ರಾಷ್ಟ್ರವು ಅವರ ಬಗ್ಗೆ ಸಹಾನುಭೂತಿ ಹೊಂದಿದೆ ಮತ್ತು ಅವರ ಪರವಾಗಿ ನಿಂತಿದೆ. ಇತ್ತೀಚೆಗೆ ಬಿಡುಗಡೆಯಾಗಿರುವ, ವಿವೇಕ್ ಅಗ್ನಿಹೋತ್ರಿ ನಿರ್ದೇಶನದ ಚಲನಚಿತ್ರ 'ದಿ ಕಾಶ್ಮೀರ್ ಫೈಲ್ಸ್' ಮುಖ್ಯವಾಗಿ ಜಮ್ಮು ಸೇರಿದಂತೆ ದೇಶದ ಇತರ ಭಾಗಗಳಿಗೆ ಒತ್ತಾಯಪೂರ್ವಕವಾಗಿ ವಲಸೆ ಹೋಗುವಂತಾದ ಕಾಶ್ಮೀರಿ ಪಂಡಿತರ ಅನುಭವ ಕಥನವನ್ನು ಒಳಗೊಂಡಿದೆ. ಅವರ ಈ ವಲಸೆ, ಅದಕ್ಕೆ ಕಾರಣವಾದಂತಹ ಪರಿಸ್ಥಿತಿ, ಆ ಸಂದರ್ಭದಲ್ಲಿ ಅವರ ನೆರವಿಗೆ ನಿಲ್ಲುವಲ್ಲಿ ಆಗಿನ ಸರ್ಕಾರದ ವೈಫಲ್ಯವು ಕಾಂಗ್ರೆಸ್ ವಿರುದ್ಧದ ಬಿಜೆಪಿಯ ಪ್ರಚಾರ ವೈಖರಿಯಲ್ಲಿನ ಪ್ರಮುಖ ಅಂಶಗಳಾಗಿವೆ. ಈಗ ಅಂತಹದ್ದೊಂದು ಪ್ರಚಾರದ ಭಾಗವಾಗಿಯೇ ಈ ಸಿನಿಮಾವನ್ನು ಪರಿಗಣಿಸಬೇಕಾಗುತ್ತದೆ. ಏಕೆಂದರೆ, ಚಿತ್ರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ದೊರೆತಿರುವ ಅನುಮೋದನೆ ಹಾಗೂ ಬಿಜೆಪಿ ಆಡಳಿತ ಇರುವ ರಾಜ್ಯಗಳು ಚಿತ್ರಕ್ಕೆ ನೀಡಿರುವ ತೆರಿಗೆ ವಿನಾಯಿತಿಗಳಿಂದ ಇದು ಸ್ಪಷ್ಟವಾಗುತ್ತದೆ. ದೇಶದ ಏಕತೆ, ಸಮಗ್ರತೆಯಂತಹ ಉತ್ತಮ ಕಾರಣಗಳಿಗಾಗಿ ಸರ್ಕಾರಗಳು ಚಲನಚಿತ್ರಗಳನ್ನು ಪ್ರೋತ್ಸಾಹಿಸಬಹುದು ಮತ್ತು ಬೆಂಬಲಿಸಬಹುದು. ಆದರೆ 'ದಿ ಕಾಶ್ಮೀರ್ ಫೈಲ್ಸ್' ಚಲನಚಿತ್ರದ ವಿಷಯದಲ್ಲಿ ಸರ್ಕಾರವು ಖಂಡಿತವಾಗಿಯೂ ಇದಕ್ಕೆ ತದ್ವಿರುದ್ಧವಾದ ಕಾರಣಕ್ಕಾಗಿ ಇಂತಹ ಕೆಲಸವನ್ನು ಮಾಡುತ್ತಿದೆ.



'ದಿ ಕಾಶ್ಮೀರ್ ಫೈಲ್ಸ್' ಚಲನಚಿತ್ರವು ಕೆಲವು ಸತ್ಯ ಸಂಗತಿಗಳನ್ನು ಮರೆಮಾಚಿ, ಉತ್ಪ್ರೇಕ್ಷಿತ ಅಂಶಗಳನ್ನು ಪ್ರಸ್ತುತಪಡಿಸಿದೆ

1990ರ ಘಟನಾವಳಿಗಳನ್ನು ಮಂಡಿಸುವ ವಿಷಯದಲ್ಲಿ ಚಲನಚಿತ್ರವು ಸ್ವಾತಂತ್ರ್ಯವನ್ನು ಮಿತಿಮೀರಿ ಬಳಸಿಕೊಂಡಿದೆ ಮತ್ತು ಉತ್ಪ್ರೇಕ್ಷಿತ ಅಂಶಗಳನ್ನು ಪ್ರಸ್ತುತಪಡಿಸಿದೆ. ಚರಿತ್ರೆಯನ್ನು ಯಥಾರೀತಿಯಲ್ಲಿ ಕಟ್ಟಿಕೊಡುವುದಾಗಿ ಚಿತ್ರವು ಹೇಳುತ್ತದಾದರೂ ಅಂತಹ ನಿರೀಕ್ಷೆಯನ್ನು ಅದು ಹುಸಿಗೊಳಿಸಿದೆ ಮತ್ತು ಸಾಲದೆಂಬಂತೆ ಸುಳ್ಳು ವಿವರಗಳನ್ನು ಸಹ ನೀಡುತ್ತದೆ. ಉದಾಹರಣೆಗೆ, ಚಲನಚಿತ್ರದಲ್ಲಿ ನೀಡಿರುವಂತೆ ಪ್ರಕರಣದಲ್ಲಿ ಹತರಾದವರು ಮತ್ತು ಸ್ಥಳಾಂತರಗೊಂಡವರ ಸಂಖ್ಯೆಯು ಕಾಶ್ಮೀರಿ ಪಂಡಿತರ ಸಂಘಟನೆಗಳು ಮಾತ್ರವಲ್ಲ, ಸ್ವತಃ ಸರ್ಕಾರ ನೀಡಿದ್ದಕ್ಕಿಂತಲೂ ಅತ್ಯಂತ ಹೆಚ್ಚಾಗಿದೆ. ಈ ಹತ್ಯೆಗಳಿಗೆ ಕಾಂಗ್ರೆಸ್ ಪಕ್ಷ, ಅದರ ನೇತೃತ್ವದ ಸರ್ಕಾರಗಳು ಮತ್ತು ಅದರ ನಾಯಕರನ್ನು ದೂಷಿಸುವುದಕ್ಕೆ ಇಡೀ ಪ್ರಯತ್ನವು ಮೀಸಲಾಗಿದೆ. ಎಡಪಂಥೀಯ ಉದಾರವಾದಿಗಳು ಮತ್ತು ಕಾಶ್ಮೀರಿ ಮುಸ್ಲಿಮರು ಸಹ ಇಲ್ಲಿ ಖಳನಾಯಕರಾಗಿದ್ದಾರೆ. ಕೇಂದ್ರದಲ್ಲಿ ಆಗ ಇದ್ದುದು ಬಿಜೆಪಿ ಬೆಂಬಲಿತ ಸರ್ಕಾರ, ಹೀಗಾಗಿ ಆ ಸಂದರ್ಭದಲ್ಲಿ ಮತ್ತು ನಂತರದಲ್ಲಿ ನಡೆದ ವಿದ್ಯಮಾನಗಳಿಗೆ ಆ ಪಕ್ಷವೂ ಹೊಣೆಗಾರ ಆಗುತ್ತದೆ. ಆದರೆ ಇಂತಹ ಅನೇಕ ಸತ್ಯಸಂಗತಿಗಳನ್ನು ಚಲನಚಿತ್ರವು ಮರೆಮಾಚಿದೆ.

ಇತಿಹಾಸವನ್ನು ತಿರುಚುವುದು, ಉದ್ರೇಕಕಾರಿಯಾಗಿ ಅದನ್ನು ಬಿಂಬಿಸುವುದು ಮತ್ತು ಪ್ರಚೋದನಕಾರಿಯಾಗಿ ಮಿಥ್ಯೆಗಳನ್ನು ನಿರೂಪಿಸುವುದು ಹಿಂದುತ್ವ ರಾಜಕಾರಣದ ರೂಢಿಗತವಾದ ನಡೆ. ಇದೇ ಮಾರ್ಗವನ್ನು ಚಲನಚಿತ್ರವೂ ಅನುಸರಿಸಿದೆ. ಇಲ್ಲಿ ಸುಳ್ಳು ನಿರೂಪಣೆಯಷ್ಟೇ ಇರುವುದಲ್ಲ, ಕಲೆಯ ಸೋಗಿನಲ್ಲಿ ಅದನ್ನು ಅತ್ಯಂತ ಭಾವನಾತ್ಮಕವಾಗಿ ಪ್ರಸ್ತುತಪಡಿಸಲಾಗಿದೆ. ಸಮುದಾಯಗಳ ನಡುವೆ ದ್ವೇಷ ಹುಟ್ಟುಹಾಕುವುದನ್ನು ಬಿಟ್ಟರೆ ನ್ಯಾಯ ಅಥವಾ ಶಾಂತಿ ಸ್ಥಾಪನೆಯ ಉದ್ದೇಶ ಅದಕ್ಕಿಲ್ಲ. ಈ ಉದ್ದೇಶಗಳಿಗೆ ವಿರುದ್ಧವಾಗಿದೆ ಸಿನಿಮಾ. ಬಿಜೆಪಿ ನೇತೃತ್ವದ ಸರ್ಕಾರಗಳು ಪಂಡಿತರಿಗೆ ತಮ್ಮ ತಾಯ್ನಾಡಿನಲ್ಲಿ ಈವರೆಗೂ ಪರಿಣಾಮಕಾರಿಯಾದ ಪುನರ್ವಸತಿಯನ್ನು ಕಲ್ಪಿಸಲಿಲ್ಲವೇಕೆ ಎಂಬ ಪ್ರಶ್ನೆಯನ್ನು ಚಿತ್ರ ಎತ್ತುವುದಿಲ್ಲ. ಪಂಡಿತರು ಮತ್ತು ಮುಸಲ್ಮಾನರು ಇಬ್ಬರೂ ಇತಿಹಾಸದಿಂದ ಗಾಸಿಗೊಂಡಿದ್ದಾರೆ. ದೇಶದ ಏಕತೆ ಹಾಗೂ ಸಮಗ್ರತೆಯಲ್ಲಿ ನಿಜವಾಗಿಯೂ ಆಸಕ್ತಿ ಇದ್ದರೆ ಸರ್ಕಾರವು ಸತ್ಯಶೋಧನೆ ಮತ್ತು ಸಂಧಾನ ಸಾಧನೆಗೆ ಪೂರಕವಾಗಿ ಆಯೋಗವೊಂದನ್ನು ರಚಿಸಬೇಕು. ಆಗಿರುವ ಗಾಯಗಳನ್ನು ಗುಣಪಡಿಸಲು ಆ ಆಯೋಗವು ನೆರವಾಗಬೇಕು, ಪಂಡಿತರು ತಾಯ್ನಾಡಿಗೆ ಮರಳಲು ಸಹಾಯ ಮಾಡಬೇಕು. ಆ ಮೂಲಕ ಎಲ್ಲರ ಹೃದಯ ಮತ್ತು ಮನಸ್ಸನ್ನು ಅದು ಗೆಲ್ಲಬೇಕು. ಅಷ್ಟೇ ಅಲ್ಲ, ಅಂತಹ ಆಯೋಗವು 'ಕಾಶ್ಮೀರ ಸಮಸ್ಯೆ'ಯ ಪರಿಹಾರಕ್ಕೂ ದಾರಿ ಮಾಡಿಕೊಡಬಹುದು. ಪಂಡಿತರಿಗೆ ಬೇಕಾಗಿರುವುದೂ ಅದೇ. ಜೊತೆಗೆ ಭಾರತಕ್ಕೆ ಬೇಕಾಗಿರುವುದು ಸಹ ಅದೇ ವಿನಾ ದ್ವೇಷ ಹುಟ್ಟಿಸುವ, ಧ್ರುವೀಕರಣಕ್ಕೆ ಕಾರಣವಾಗುವ ಪ್ರಚಾರವಲ್ಲ.

ದಿನದ ಟ್ವೀಟ್

## ಆತ್ಮಾವಲೋಕನ ನಡೆಯಲಿ



**ಕುಟುಂಬಕ್ಕೆ ರಾಜಕೀಯ ಹಿನ್ನೆಲೆ ಇಲ್ಲದಿದ್ದರೂ ಸಾಮಾನ್ಯ ವ್ಯಕ್ತಿ ಕೂಡ ಬಿಜೆಪಿಯಲ್ಲಿ ನಾಯಕತ್ವದ ಸ್ಥಾನಕ್ಕೆ ಏರಬಲ್ಲ. ಇಂತಹ ಸಾಧ್ಯತೆ ಇರುವ ಇನ್ನೊಂದು ಪಕ್ಷ ಎಎಪಿ. ಇತರ ಎಲ್ಲ ಪಕ್ಷಗಳು ತಮ್ಮ ತಪ್ಪುಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ತಪ್ಪನ್ನು ಸರಿಪಡಿಸಿಕೊಳ್ಳಬೇಕು. ತಪ್ಪು ಆಗಿಲ್ಲ ಎಂದು ಹೇಳುತ್ತ ಕೂರಬಾರದು. ಅದರಿಂದ ಅವುಗಳಿಗೆ ದೀರ್ಘಾವಧಿಯಲ್ಲಿ ಹಾನಿಯೇ ಹೆಚ್ಚು.**

**ರೋಹಿತ್ ಸಿಂಹ,** ಎಂಜಿನಿಯರ್

ಕಿಡಿನುಡಿ



**ಯಾವುದೇ ಸರ್ಕಾರ ಬಂದರೂ ಕೃಷ್ಣೆಗಂತೂ ನ್ಯಾಯ ಸಿಗುತ್ತಿಲ್ಲ. ಈ ಅಧಿವೇಶನ ಮುಗಿಯುವುದರೊಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಸ್ಟರ್ ಪ್ಲಾನ್ ಮಾಡಲಿ. ಮಂತ್ರಿ ಆಗುವಾಗ ಎಲ್ಲರ ಕಣ್ಣೂ ನೀರಾವರಿ ಮತ್ತು ಇಂಧನ ಖಾತೆಗಳ ಮೇಲಿರುತ್ತದೆ. ಯಾಕೆಂದರೆ ಅಲ್ಲಿ ಕಾಮಗಾರಿ ಅಥವಾ ಖರೀದಿಯ ಅಂದಾಜು (ಎಸ್ಟಿಮೇಟ್) ಅನ್ನೋದೆ ದೊಡ್ಡ ವಿಚಾರ ಆಗಿರುತ್ತದೆ.**

**ಬಸನಗೌಡ ಪಾಟೀಲ ಯತ್ನಾಳ,** ಬಿಜೆಪಿ ಶಾಸಕ

## 25 ವರ್ಷಗಳ ಹಿಂದೆ

ಬುಧವಾರ, 26-3-1997

- **ಅಣು ವಿದ್ಯುತ್ ಸ್ಥಾವರ ಭಾರತಕ್ಕೆ ರಷ್ಯಾ ನೆರವು**

**ಮಾಸ್ಕೊ, ಮಾ. 25 (ಪಿಟಿಐ)**– ಅಮೆರಿಕದ ಪ್ರತಿಭಟನೆಯನ್ನು ನಿರ್ಲಕ್ಷಿಸಿದ ರಷ್ಯಾ, ಭಾರತಕ್ಕೆ ತಲಾ 1,000 ಮೆಗಾವಾಟ್ ಸಾಮರ್ಥ್ಯದ 2 ಲಘುಜಲ ಅಣುವಿದ್ಯುತ್ ರಿಯಾಕ್ಟರ್‌ಗಳನ್ನು ಪೂರೈಸಲು ನಿರ್ಧರಿಸಿದೆ.

ತಮಿಳುನಾಡಿನ ಕೂಡಂಕುಳಂನಲ್ಲಿ ಸ್ಥಾಪನೆಯಾಗಲಿರುವ, ಸುಮಾರು 200 ಕೋಟಿ ಡಾಲರ್ ವೆಚ್ಚದ ಈ ಯೋಜನೆಗಳ ವಿವರವಾದ ಯೋಜನಾ ವರದಿಯನ್ನು ಶೀಘ್ರವೇ ತಯಾರಿಸುವುದಾಗಿಯೂ ರಷ್ಯಾ ಪ್ರಕಟಿಸಿದೆ.

ಭಾರತದ ಪ್ರಧಾನಿ ಎಚ್.ಡಿ. ದೇವೇಗೌಡ ಹಾಗೂ ರಷ್ಯಾದ ಪ್ರಧಾನಿ ಬೋರಿಸ್ ಯೆಲ್ಸಿನ್ ಅವರ ಮಧ್ಯೆ ಕ್ರೆಮ್ಲಿನ್ ಭವನದಲ್ಲಿ ಇಂದು 40 ನಿಮಿಷಗಳ ಕಾಲ ನಡೆದ ಮಾತುಕತೆಯಲ್ಲಿ ಈ ಕುರಿತು ಒಪ್ಪಂದಕ್ಕೆ ಬರಲಾಗಿದೆ.

- **'ಮದ್ಯಾಭಿಷೇಕ': ಲಲಿತಾ ನಾಯಕ್ ಪುತ್ರ ಭಾಗಿ– ಸಿಓಡಿ ಸಾಬೀತು**

**ಬೆಂಗಳೂರು, ಮಾ. 25**– ಅಂಬೇಡ್ಕರ್ ಪ್ರತಿಮೆಗೆ 'ಮದ್ಯಾಭಿಷೇಕ' ಮಾಡಿದ ಪ್ರಕರಣದಲ್ಲಿ ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್ ಅವರ ಪುತ್ರ ಭಾಗಿಯಾಗಿರುವುದನ್ನು ಸಿಓಡಿ ತನಿಖೆ ಖಚಿತಪಡಿಸಿದೆ.

ಲಲಿತಾ ನಾಯಕ್ ಪುತ್ರ ವಿಶ್ವಜಿತ್ ನಾಯಕ್ ಹಾಗೂ ಆತನ ಏಳು ಮಂದಿ ಗೆಳೆಯರು ಇದರಲ್ಲಿ ಭಾಗಿಯಾಗಿದ್ದುದು ಸಿಓಡಿ ತನಿಖೆಯಿಂದ ತಿಳಿದುಬಂದಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

## 50 ವರ್ಷಗಳ ಹಿಂದೆ

ಭಾನುವಾರ, 26-3-1972

- **ರಾಜ್ಯಕ್ಕೆ ತೆರಿಗೆಗಳಿಲ್ಲದ ಉಳಿತಾಯ ಬಜೆಟ್**

**ಬೆಂಗಳೂರು, ಮಾ. 25**– ಹೊಸ ಅರ್ಥಮಂತ್ರಿ ಎಂ.ವೈ. ಘೋರ್ಪಡೆ ಅವರು ಇಂದು ಮಂಡಿಸಿದ 1971ನೇ ಸಾಲಿನ 'ತಾತ್ಕಾಲಿಕ' ಬಜೆಟ್‌ನ ಪ್ರಕಾರ, ಜೂನ್ ತಿಂಗಳವರೆಗೆ ಯಾವುದೇ ಹೊಸ ತೆರಿಗೆಗಳನ್ನು ಹೊರುವ ಭಯ ರಾಜ್ಯದ ಜನತೆಗೆ ಇಲ್ಲ.

ಹೊಸ ಸರ್ಕಾರ ಬಂದ ಮೇಲೆ ಒಂದೆರಡು ದಿನಗಳಲ್ಲಿ ಅವಸರದಲ್ಲಿ ತಯಾರಾದ 1.21 ಕೋಟಿ ರೂಗಳ ಉಳಿತಾಯದ ಬಜೆಟ್, ಭಾವಿ ಆರ್ಥಿಕ ರೀತಿ-ನೀತಿಗಳಲ್ಲಿ ಭಾರಿ ಬದಲಾವಣೆಗಳನ್ನೇನೂ ತಂದಿಲ್ಲವಾದರೂ, ಅದು ಸದ್ಯದಲ್ಲಿಯೇ ಬರಲಿದೆ ಎಂಬುದನ್ನು ಸ್ಪಷ್ಟವಾಗಿಯೇ ಸೂಚಿಸಿದೆ.

- **ಸೀಮೆಎಣ್ಣೆ– ಹೊಸ ತೆರಿಗೆ 4 ಪೈಸೆ ಮಾತ್ರ**

**ನವದೆಹಲಿ, ಮಾ. 25**– ಸೀಮೆಎಣ್ಣೆ ಮೇಲಿನ ಹೆಚ್ಚುವರಿ ತೆರಿಗೆಯನ್ನು, ಮೊದಲು ಸೂಚಿಸಿದ್ದ ಆರು ಪೈಸೆಯಿಂದ ನಾಲ್ಕು ಪೈಸೆಗೆ ಇಳಿಸಿರುವುದಾಗಿ ಕೇಂದ್ರ ಹಣಕಾಸು ಸಚಿವ ಚವಾಣ್ ಅವರು ಇಂದು ಲೋಕಸಭೆಯಲ್ಲಿ ಪ್ರಕಟಿಸಿದರು.

ಒಂದು ಸಾವಿರ ಕಿಲೊಲೀಟರ್ ಸೀಮೆಎಣ್ಣೆ ಮೇಲಿನ ತೆರಿಗೆಯನ್ನು 285ರಿಂದ 265 ರೂ.ಗೆ ತಗ್ಗಿಸಿರುವುದಾಗಿ ಅವರು ನುಡಿದರು. ಲೋಕಸಭೆಯಲ್ಲಿ ಬಹುತೇಕ ಸದಸ್ಯರ ಆಗ್ರಹಪೂರ್ವಕ ಬೇಡಿಕೆಗೆ ಓಗೊಟ್ಟು ಈ ತೆರಿಗೆ ಖೋತಾವನ್ನು ಪ್ರಕಟಿಸಿದರು.

ಅಧ್ಯಯನಕ್ಕಾಗಿ ವಿದೇಶಗಳಿಗೆ ತೆರಳುವ ವಿದ್ಯಾರ್ಥಿಗಳ ಸಂಖ್ಯೆ ಗಮನಾರ್ಹವಾಗಿ ಇಳಿಯುವುದೇ?

# ವಿದೇಶಿ ವಿಶ್ವವಿದ್ಯಾಲಯಗಳಿಗೆ ಕೆಂಪುಹಾಸು



ವಿಶ್ಲೇಷಣೆ

ಎಚ್. ಆರ್. ಕೃಷ್ಣಮೂರ್ತಿ

**ಜಾಗತಿಕ** ಮಟ್ಟದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಗೆ ನಮ್ಮ ದೇಶದ ಉನ್ನತ ಶಿಕ್ಷಣ ವಲಯಕ್ಕೆ ಪ್ರವೇಶಾವಕಾಶವನ್ನು ಕಲ್ಪಿಸಿ, ಭಾರತದಲ್ಲಿ ಅವುಗಳ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ಅನುಮತಿ ನೀಡುವ ಪ್ರಸ್ತಾವವೊಂದನ್ನು ಕೇಂದ್ರ ಹಣಕಾಸು ಸಚಿವರು 2022-23ರ ಮುಂಗಡಪತ್ರದಲ್ಲಿ ಮಂಡಿಸಿದ್ದಾರೆ. ಗುಜರಾತ್‌ನ 'ಗುಜರಾತ್ ಇಂಟರ್‌ನ್ಯಾಷನಲ್ ಫೈನಾನ್ಷಿಯಲ್ ಟೆಕ್ ಸಿಟಿ' ಅಥವಾ 'ಗಿಫ್ಟ್ ಸಿಟಿ'ಯಲ್ಲಿ ವಿತ್ತೀಯ ನಿರ್ವಹಣೆ, ಅದಕ್ಕೆ ಅಗತ್ಯವಾದ ತಂತ್ರಜ್ಞಾನ, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ ಕ್ಷೇತ್ರದಲ್ಲಿ ಉತ್ಕೃಷ್ಟ ಮಟ್ಟದ ಉನ್ನತ ಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭಿಸಲು ಈ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡುವ ಯೋಜನೆ ಈ ಪ್ರಸ್ತಾವದಲ್ಲಿದೆ.

ವಿದೇಶಿ ವಿಶ್ವವಿದ್ಯಾಲಯಗಳನ್ನು ಆಹ್ವಾನಿಸುವ ಈ ಯೋಜನೆ ಹೊಸದೇನಲ್ಲ. 'ವಿಶೇಷ ಆರ್ಥಿಕ ವಲಯ'ಗಳಂತೆಯೇ 'ಉತ್ಕೃಷ್ಟ ಶೈಕ್ಷಣಿಕ ವಲಯ'ಗಳನ್ನು (ಎಜುಕೇಶನ್ ಎಕ್ಸಲೆನ್ಸ್ ಝೋನ್) ಜಾರಿಗೆ ತರುವ ಆಲೋಚನೆಯನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) 2005ರಲ್ಲೇ ಮಾಡಿತ್ತು. 2010ರಲ್ಲಿ, ಎರಡನೇ ಅವಧಿಯ ಯುಪಿಎ ಸರ್ಕಾರ, 'ಫಾರಿನ್ ಎಜುಕೇಶನಲ್ ಇನ್‌ಸ್ಟಿಟ್ಯೂಶನ್ಸ್ (ರೆಗ್ಯುಲೇಶನ್ ಆಫ್ ಎಂಟ್ರಿ ಆ್ಯಂಡ್ ಆಪರೇಶನ್ಸ್) ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿತ್ತು. ಆದರೆ 15ನೇ ಲೋಕಸಭೆಯ ವಿಸರ್ಜನೆಯಿಂದಾಗಿ ಅದರ ಕಾಲಾವಧಿ ಮುಗಿಯಿತು. 2020ರ ಹೊಸ ಶಿಕ್ಷಣ ನೀತಿ, ಭಾರತವನ್ನು ಅತ್ಯುತ್ತಮ ಉನ್ನತ ಶಿಕ್ಷಣದ ಜಾಗತಿಕ ಕೇಂದ್ರವನ್ನಾಗಿ ರೂಪಿಸುವ ಉದ್ದೇಶದಿಂದ, ವಿದೇಶಿ ವಿಶ್ವವಿದ್ಯಾಲಯಗಳಿಗೆ ಭಾರತದಲ್ಲಿ 'ಇಂಟರ್‌ನ್ಯಾಷನಲ್ ಬ್ರ್ಯಾಂಚ್ ಕ್ಯಾಂಪಸ್'ಗಳನ್ನು ತೆರೆಯುವ ಅವಕಾಶವನ್ನು ಪ್ರಕಟಿಸಿತ್ತು. ಇದೀಗ ಮುಂಗಡಪತ್ರದಲ್ಲಿನ ಪ್ರಸ್ತಾವ ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶಕ್ಕೆ ಒಂದು ನಿಶ್ಚಿತ ರೂಪವನ್ನು ಕೊಡುವ ಕೆಲಸವನ್ನು ಪ್ರಾರಂಭಿಸಿದೆ.

ಗುಜರಾತ್‌ನ ಗಾಂಧಿನಗರದ ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್‌ನಲ್ಲಿ, 359 ಹೆಕ್ಟೇರ್‌ಗಳ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಗಿಫ್ಟ್ ಸಿಟಿಯಲ್ಲಿ ವಿದೇಶಿ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗುತ್ತದೆ. ನಮ್ಮ ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಕೆಲಸಕಾರ್ಯಗಳನ್ನೂ ನಿಯಂತ್ರಿಸುವ ಯುಜಿಸಿ, ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಶನ್, ಹೈಯರ್ ಎಜುಕೇಶನ್ ಕಮಿಷನ್ ಆಫ್ ಇಂಡಿಯಾ, ನ್ಯಾಷನಲ್ ಅಸೆಸ್‌ಮೆಂಟ್ ಆ್ಯಂಡ್ ಅಕ್ರೆಡಿಟೇಶನ್ ಕೌನ್ಸಿಲ್ (ನ್ಯಾಕ್), ನ್ಯಾಷನಲ್ ಬೋರ್ಡ್ ಆಫ್ ಅಕ್ರೆಡಿಟೇಷನ್ ಮುಂತಾದ ಸಂಸ್ಥೆಗಳು ರೂಪಿಸಿರುವ ನಿಯಂತ್ರಣ ನೀತಿ, ನಿಯಮಗಳು ಗಿಫ್ಟ್ ಸಿಟಿಯಲ್ಲಿ ಬರಲಿರುವ ವಿದೇಶಿ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವುದಿಲ್ಲ. ಹೀಗೆಂದ ಮಾತ್ರಕ್ಕೆ ಈ ವಿದೇಶಿ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಕೇಂದ್ರಗಳು ಸಂಪೂರ್ಣವಾಗಿ ಸ್ವತಂತ್ರ ಘಟಕಗಳೆಂದಲ್ಲ. ಅದರ ಬದಲಿಗೆ, 2020ರ ಏಪ್ರಿಲ್‌ನಲ್ಲಿ ಅಸ್ತಿತ್ವಕ್ಕೆ ಬಂದ 'ಇಂಟರ್‌ನ್ಯಾಷನಲ್ ಫೈನಾನ್ಷಿಯಲ್ ಸರ್ವೀಸಸ್ ಅಥಾರಿಟಿ' ರೂಪಿಸಲಿರುವ ನೀತಿ, ನಿಯಮ, ಕಾನೂನುಗಳಿಗೆ ಒಳಪಟ್ಟು ಇವು ಕೆಲಸ ಮಾಡಬೇಕಾಗುತ್ತದೆ. ಈ ಎಲ್ಲ ನಿಯಮಗಳೂ ಸರಾಗ ವ್ಯವಹಾರದ ತತ್ವಗಳಿಗೆ (ಈಸ್ ಆಫ್ ಡೂಯಿಂಗ್ ಬಿಸಿನೆಸ್) ಅನುಸಾರವಾಗಿ ಇರಲಿವೆ.

ಭಾರತದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳ ಹೂಡಲಿರುವ ಈ ವಿಶ್ವವಿದ್ಯಾಲಯಗಳಿಗೆ ವಿಶೇಷ ಕರ ವಿನಾಯಿತಿ, ಪ್ರೋತ್ಸಾಹಕಗಳು ದೊರೆಯಲಿದ್ದು, ಭಾರತದಲ್ಲಿ ಗಳಿಸಿದ ಲಾಭವನ್ನು ತಮ್ಮ ದೇಶಗಳಿಗೆ ಕಳುಹಿಸಲು ಅವಕಾಶ ಇರಲಿದೆ. ವಿದ್ಯಾರ್ಥಿಗಳ ಪ್ರವೇಶಾತಿ, ಪ್ರವೇಶಕ್ಕೆ ಅಗತ್ಯವಾದ ವಿದ್ಯಾರ್ಹತೆ, ಪಠ್ಯ, ಪಾಠಕ್ರಮ, ಬೋಧನಾ ವಿಧಾನ, ಪರೀಕ್ಷೆಯ ಸ್ವರೂಪ, ಶುಲ್ಕ, ನೀಡುವ ಪದವಿ, ಶಿಕ್ಷಕರ ಆಯ್ಕೆ ಮುಂತಾದ ವಿಷಯಗಳಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಿಗೆ ಸಂಪೂರ್ಣ ಸ್ವಾಯತ್ತತೆ ನೀಡಲಾಗುತ್ತದೆ. ಈ ಎಲ್ಲ ಕ್ರಮಗಳನ್ನು ಜಾರಿಗೆ ತರಲು, ಸದ್ಯದಲ್ಲಿ ಅಸ್ತಿತ್ವದಲ್ಲಿರುವ ನಿಯಮಗಳಿಗೆ ಕಾನೂನಾತ್ಮಕ ತಿದ್ದುಪಡಿಗಳನ್ನು ತರುವ ಕೆಲಸವನ್ನು ಇಂಟರ್‌ನ್ಯಾಷನಲ್ ಫೈನಾನ್ಷಿಯಲ್ ಸರ್ವೀಸಸ್ ಪ್ರಾಧಿಕಾರ ಪ್ರಾರಂಭಿಸಲಿದೆ. ಆದರೆ ಈ ಕೆಲಸಕ್ಕೆ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿಲ್ಲ.

ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶಕ್ಕೆ ರತ್ನಗಂಬಳಿ ಹಾಸುವ ಈ ಪ್ರಸ್ತಾವಕ್ಕೆ ಮಿಶ್ರ ಪ್ರತಿಕ್ರಿಯೆಗಳು ಬಂದಿವೆ. ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳು ಭಾರತಕ್ಕೆ ಬಂದರೆ ಉತ್ಕೃಷ್ಟ ಗುಣಮಟ್ಟದ ಉನ್ನತ ಶಿಕ್ಷಣ ನಮ್ಮಲ್ಲಿಯೇ ಲಭಿಸುತ್ತದೆ. ಪಠ್ಯ, ಪಾಠಕ್ರಮ, ಅಧ್ಯಯನ, ಸಂಶೋಧನೆಗಳಲ್ಲಿನ ಹೊಸ ವಿಧಾನ, ಹೊಸ ಆಲೋಚನೆಗಳಿಂದ ಜ್ಞಾನಾರ್ಜನೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ವಿದೇಶಿ ಬಂಡವಾಳ ಹರಿದು ಬರುತ್ತದೆ. ದುಬೈನಲ್ಲಿರುವ 'ಅಕಡೆಮಿಕ್ ಇಂಟರ್‌ನ್ಯಾಷನಲ್ ಸಿಟಿ'ಯಂತೆಯೇ, ಗಿಫ್ಟ್ ಸಿಟಿ ಕೂಡ ಜಾಗತಿಕ ಮಟ್ಟದಲ್ಲಿ ಗುಣಮಟ್ಟದ ಉನ್ನತ ಶಿಕ್ಷಣ ಕೇಂದ್ರವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ ಎಂಬುದು ಒಂದು ವಾದ. ಇದಕ್ಕೆ ವಿರುದ್ಧವಾದ ಅಭಿಪ್ರಾಯವೂ ಇದೆ.

ಭಾರತಕ್ಕೆ ಬರಲಿರುವ ವಿದೇಶಿ ವಿಶ್ವವಿದ್ಯಾಲಯಗಳಲ್ಲಿನ ಉನ್ನತ ಶಿಕ್ಷಣ ನಮ್ಮ ವಿದ್ಯಾರ್ಥಿಗಳ ಕೈಗೆಟುಕದಷ್ಟು ದುಬಾರಿಯಾಗಲಿದೆ ಎಂಬುದು ಮೊದಲನೆಯ ಆಕ್ಷೇಪ. ರಾಷ್ಟ್ರೀಯ ಶಿಕ್ಷಣ ನೀತಿಯಂತೆ, ಪ್ರಪಂಚದ ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿನ ಮೊದಲ 100 ಸಂಸ್ಥೆಗಳಿಗೆ ಈ ಅವಕಾಶ ನೀಡಬಹುದಿತ್ತು. ಈಗ, ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ, 'ಟೈಮ್ಸ್ ಹೈಯರ್ ಎಜುಕೇಶನ್ ರ್‍ಯಾಂಕಿಂಗ್'ನಲ್ಲಿ, ಮೊದಲ 500 ಸ್ಥಾನಗಳಲ್ಲಿರುವ ವಿಶ್ವವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸಬಹುದು. ಈ ಕ್ರಮದಿಂದ ಉನ್ನತ ಶಿಕ್ಷಣದ ಪ್ರಸ್ತಾವವನ್ನು ಪ್ರಾರಂಭಕ್ಕೆ ಮುಂಚೆಯೇ ದುರ್ಬಲಗೊಳಿಸಲಾಗಿದೆ ಎಂಬ ಟೀಕೆಯಿದೆ.




ಸಿಂಗಪುರ, ಮಲೇಷ್ಯಾ, ವಿಯೆಟ್ನಾಂ ಮುಂತಾದ ದೇಶಗಳು, ಕಳೆದ ಸುಮಾರು ಎರಡು ದಶಕಗಳಿಂದ, ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳನ್ನು ಕರೆದುತರಲು ಪ್ರಯತ್ನಿಸುತ್ತಿದ್ದರೂ ದೊರೆತಿರುವ ಯಶಸ್ಸು ಮಾತ್ರ ನಗಣ್ಯ. ಹೀಗಾಗಿ ಭಾರತದ ಪ್ರಸ್ತಾವಕ್ಕೆ ಸ್ಪಂದಿಸಿ, ಇಲ್ಲಿಗೆ ಬರಬಹುದಾದ ಹೆಸರಾಂತ ವಿದೇಶಿ ವಿಶ್ವವಿದ್ಯಾಲಯಗಳ ಸಂಖ್ಯೆ ಬಹಳ ಕಡಿಮೆ ಎಂಬ ಅಭಿಪ್ರಾಯವಿದೆ. ಅವುಗಳ ಬದಲಿಗೆ, ಭಾರತ ಸರ್ಕಾರ ನೀಡುವ ಆಕರ್ಷಕ ಪ್ರೋತ್ಸಾಹಕಗಳಿಂದ, ಬಂಡವಾಳ ಹೂಡಿ ಲಾಭ ಗಳಿಸುವ ಉದ್ದೇಶದಿಂದ 500ರ ಪಟ್ಟಿಯಲ್ಲಿರುವ ಎರಡನೆಯ ದರ್ಜೆಯ ವಿದ್ಯಾಸಂಸ್ಥೆಗಳ ಸಂಖ್ಯೆಯೇ ಹೆಚ್ಚಾಗಬಹುದು. ಇಂತಹ ವಿಶ್ವವಿದ್ಯಾಲಯಗಳಿಗೆ ಮಣೆ ಹಾಕುವುದಕ್ಕಿಂತ ನಮ್ಮ ದೇಶದಲ್ಲಿಯೇ ಇರುವ ಆಯ್ದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬಾರದೇಕೆ ಎಂಬುದು ಸಹಜವಾದ ಪ್ರಶ್ನೆ.

ಐಐಟಿ ನಮ್ಮ ದೇಶದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆ. 2008- 09ರ ನಡುವೆ ಅಸ್ತಿತ್ವಕ್ಕೆ ಬಂದ ಎಂಟು ಹೊಸ ಐಐಟಿಗಳ ಪರಿಸ್ಥಿತಿ, ಕೆಲಸಕಾರ್ಯಗಳನ್ನು 2019ರಲ್ಲಿ ಪರಿಶೀಲಿಸಿದ ಭಾರತ ಸರ್ಕಾರದ ಮಹಾಲೇಖಪಾಲರು, ಅವುಗಳ ಶೋಚನೀಯ ಪರಿಸ್ಥಿತಿಯನ್ನು ತಮ್ಮ ವರದಿಯಲ್ಲಿ ಎತ್ತಿ ತೋರಿದ್ದಾರೆ. ಅವುಗಳಲ್ಲಿ ಅನೇಕ ಕೇಂದ್ರಗಳಿಗೆ ಸ್ವಂತ ಕಟ್ಟಡವಿಲ್ಲ. ಅಗತ್ಯವಾದ ಪ್ರಯೋಗಶಾಲೆಗಳಿಲ್ಲ. ಯಾವ ಕೈಗಾರಿಕಾ ಸಂಸ್ಥೆಗಳೂ ಸಂಶೋಧನೆಯನ್ನು ಪ್ರಾಯೋಜಿಸಿಲ್ಲ. ಕಳೆದ 5 ವರ್ಷಗಳಲ್ಲಿ ಇವುಗಳಲ್ಲಿ ಯಾವ ಒಂದು ಕೇಂದ್ರಕ್ಕೂ ಒಂದೇ ಒಂದು ಪೇಟೆಂಟ್ ದೊರೆತಿಲ್ಲ. ಇದರೊಂದಿಗೆ ಉತ್ತಮ ಬ್ರ್ಯಾಂಡ್ ಮೌಲ್ಯವಿರುವ ಐಐಟಿ, ಐಐಎಂ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೇಂದ್ರೀಯ ವಿಶ್ವವಿದ್ಯಾಲಯಗಳು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಆ್ಯಂಡ್ ರಿಸರ್ಚ್ ಮುಂತಾದ ಕೇಂದ್ರ ಧನಸಹಾಯದ ಸಂಸ್ಥೆಗಳಲ್ಲಿ ಬೋಧನೆ, ಸಂಶೋಧನೆಯ ಶೇ 36ರಷ್ಟು ಹುದ್ದೆಗಳು ಖಾಲಿಯಿವೆ.

ವಿದೇಶಿ ವಿಶ್ವವಿದ್ಯಾಲಯಗಳಿಗೆ ರತ್ನಗಂಬಳಿ ಹಾಸಿ ಸ್ವಾಗತಿಸುವುದರ ಜೊತೆಗೆ ನಮ್ಮ ದೇಶದಲ್ಲಿ ಉನ್ನತ ಮಟ್ಟಕ್ಕೇರುವ ಸಾಮರ್ಥ್ಯವಿರುವ ಸಂಸ್ಥೆಗಳಿಗೆ ಎಲ್ಲ ಪ್ರೋತ್ಸಾಹವನ್ನೂ ನೀಡಿ, ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸ್ಪರ್ಧಿಸಲು ಅಗತ್ಯವಾದ ಸಮಾನ ಅನುಕೂಲ, ಅವಕಾಶಗಳನ್ನು ಕಲ್ಪಿಸಬೇಕೆಂಬುದು ಶಿಕ್ಷಣ ತಜ್ಞರ ಬೇಡಿಕೆ.

ವಿದೇಶಿ ವಿಶ್ವವಿದ್ಯಾಲಯಗಳ ಶಿಕ್ಷಣ ಇಲ್ಲಿಯೇ ದೊರೆತಾಗ ಅಲ್ಲಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಗಮನಾರ್ಹವಾಗಿ ಇಳಿಯುತ್ತದೆಯೇ? ವಿವಿಧ ದೇಶಗಳ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಗಳಿಂದ ಬಂದ ಯುವಜನರ ಒಡನಾಟದಲ್ಲಿ, ಅಂತರರಾಷ್ಟ್ರೀಯ ಜೀವನಾನುಭವಗಳಿಗೆ ತೆರೆದುಕೊಳ್ಳುತ್ತಲೇ, ಆಸಕ್ತಿಯ ಶೈಕ್ಷಣಿಕ ಕ್ಷೇತ್ರದಲ್ಲಿ ಪರಿಣತಿ ಪಡೆಯುವ ವಿಶಿಷ್ಟ ಅವಕಾಶವನ್ನು ಬಯಸುವ ವಿದ್ಯಾರ್ಥಿಗಳು, ವಿದೇಶಗಳಿಗೆ ತೆರಳುವುದರಲ್ಲಿ ಯಾವ ಅನುಮಾನವೂ ಇಲ್ಲ ಎನ್ನುವುದು ವ್ಯಾಪಕವಾಗಿರುವ ಅಭಿಪ್ರಾಯ.

ಚುರುಮುರಿ



## ಬೆಂಬಿಡದ ಲಂಚಭೂತ!

• ತುರುವೇಕೆರೆ ಪ್ರಸಾದ್

**ಹರಟೆಕಟ್ಟೇಲಿ** ಎಸಿಬಿ ರೈಡ್ ಬಗ್ಗೆ ಚರ್ಚೆ ನಡೀತಿತ್ತು: 'ನೀನ್ ಏನೇ ಹೇಳು, ಕಷ್ಟಪಟ್ಟು ದುಡಿದ ದುಡ್ಡಿಗೆ ಸೇಫ್ಟಿ ಇಲ್ಲ ಅಂದ್ರೆ ಏನ್ಮಾಡ್ಬೇಕು?' ಎಂದ ಬಳ್ಳೇಕಟ್ಟೆ.

'ಲೇಯ್! ಅದು ಕಷ್ಟಪಟ್ ದುಡಿದ ದುಡ್ಡಲ್ಲ, ಲಂಚ ಹೊಡೆದು ಸಂಪಾದಿಸಿದ ದುಡ್ಡು' ತಿದ್ದಿದ ಕೊಟ್ರ.

'ಅದು ತಾನೇ ಏನ್ ಸುಮ್ನೆ ಬರುತ್ತಾ? ರಾಜಾರೋಷವಾಗಿ ಕೋಟಿ ಕೋಟಿ ಲಂಚ ಹೊಡೆಯೋದು ಅಂದ್ರೇನು ಪುಗಸಟ್ಟೆನಾ? ನಮೋ ಲಂಚಭೂತ ಅನ್ಬೇಕು!'

'ನಿಜ ನಿಜ, ಅವರದ್ದು ಲಂಚದ ರೊಟ್ಟಿ, ನೋಟಿಗೆ ಕಸದ ತೊಟ್ಟಿ, ಮನೆಯೇ ಕೋಲಾರ ಚಿನ್ನದ ಹಟ್ಟಿ'.

'ಬ್ಯಾಂಕಲ್ಲಿಟ್ರೂ ಬಿಡಲ್ಲ, ಬಂಕಲ್ಲಿಟ್ರೂ ಬಿಡಲ್ಲ, ಹಾಳಾಗೋಗ್ಲಿ ಈ ದೇಶದ ಸಹವಾಸನೇ ಬೇಡ ಅಂತ ಸ್ವಿಸ್ ಬ್ಯಾಂಕಲ್ಲಿಟ್ರೆ ಅಲ್ಲಿಂದಲೂ ಹಿಟ್ ಲಿಸ್ಟ್ ತರುಸ್ಕೊತಾರೆ'.

'ಅಷ್ಟೇ ಅಲ್ಲ, ಒಂದು ಕಿಡ್ನಿ ತೆಗೆಸಿ ಚಿನ್ನ ಬಚ್ಚಿಟ್ಕೊಂಡ್ರೂ ಸ್ಕ್ಯಾನ್ ಮಾಡ್ತಾರೆ'.

'ನಿಜ, ಅವರು ಚತುರ್ಭೂತಗಳಲ್ಲಿ ಲಂಚಭೂತ ಅಡಗಿಸಿಟ್ಟರೂ ಈ ಎಸಿಬಿ, ಇ.ಡಿ. ನೋರು ಅಲ್ಲಾವುದ್ದೀನ್ ದೀಪದ್ ತರ ಬ್ಯಾಟ್ರಿ ಹಾಕಿ ಅದನ್ನೂ ಹುಡುಕಿ ಕಿತ್ಕೊತಾರೆ'.

'ಏನದು ಚತುರ್ಭೂತ...?'

'ಭೂಮಿ, ಬೆಂಕಿ, ನೀರು, ಗಾಳಿ ಇವು ಚತುರ್ಭೂತ, ಆಕಾಶ ಐದನೇ ಭೂತ. ನೆಲ ಬಗೆದು ಇಟ್ಟಿದ್ದಾಯ್ತು, ಹಂಡೆ ಒಲೇಲಿ ಇಟ್ಟಿ ದ್ದಾಯ್ತು, ಪೈಪುಲೈನು, ನೀರಿನ ತೊಟ್ಟೀಲಿ ಇಟ್ಟಿದ್ದಾಯ್ತು. ಇನ್ ಉಳಿದಿರೋದು ಆಕಾಶ ಒಂದೇ!

'ಆಕಾಶದಲ್ಲಿ ಎಲ್ ಇಡಕ್ಕಾಗುತ್ತೆ?'

'ಈಗ ವೀಕೆಂಡಲ್ಲಿ ಬಾಹ್ಯಾಕಾಶಕ್ಕೇ ಹೋಗ್ಬಹುದು. ಅಲ್ಲೇ ಒಂದು ರಿಮೋಟ್ ಕಂಟ್ರೋಲ್ ಕ್ಯಾಪ್ಸೂಲ್ ಮಾಡಿ ನಮ್ ಒಡವೆ, ದುಡ್ಡು, ಚಿನ್ನ ಎಲ್ಲಾ ತುಂಬಿ ಆಕಾಶದಲ್ಲಿ ತೇಲಿ ಬಿಡೋದು' ಐಡಿಯಾ ಕೊಟ್ಟ ಕೊಟ್ರ.

'ಅದನ್ನೂ ಉಪಗ್ರಹಗಳು ಪತ್ತೆ ಮಾಡುತ್ವೆ'.

'ಶನಿಗ್ರಹ ಹೆಗಲು ಹತ್ತುದ್ರೆ ಯಾವ ಗ್ರಹದಲ್ಲಿಟ್ರೂ ತಗಲಾಕ್ಕೊಳೋದೇ! ಕ್ಯಾಪ್ಸೂಲ್ ತೇಲಿಬಿಡೋದು ಬಿಟ್ಟು ಒಂದು ಕ್ಯಾಪ್ಸೂಲ್ ಗುಳುಂ ಅನ್ಸಿ, ಎಲ್ಲಾ ಮರೆತು ವ್ಯವಸ್ಥೆ ತರ ನಿದ್ದೆ ಹೊಡೆಯೋದೇ ಒಳ್ಳೇದು' ಎಂದು ಅಲ್ಲೇ ತಲೆಗೆ ಕೈ ಕೊಟ್ಟ ಪರ್ಮೇಶಿ.

ಚರ್ಚೆ

# ಪರೀಕ್ಷೆ: ಆತ್ಮಸಂಯಮವೇ ಪರಮೌಷಧ

ಮಕ್ಕಳ ಪರಿಕ್ಷಾ ಅವಧಿಯಲ್ಲಿ ಪೋಷಕರು ತಮ್ಮ ಉದ್ವೇಗ, ದುಗುಡಗಳಿಗೆ ಕಡಿವಾಣ ಹಾಕಿಕೊಂಡರೆ, ಅರ್ಧ ಹೊಣೆಗಾರಿಕೆಯನ್ನು ನಿಭಾಯಿಸಿದಂತೆಯೇ ಸರಿ

• ಯೋಗಾನಂದ

**'ಔಷಧಿ** ಬೇಕಾಗಿದೆ ಅಪ್ಪ ಅಮ್ಮನಿಗೆ!' ಎಂಬ ಡಾ. ಕೆ.ಎಸ್.ಪವಿತ್ರ ಅವರ ಲೇಖನ (ಸಂಗತ, ಮಾರ್ಚ್ 24) ಸಮಯೋಚಿತವಾಗಿದೆ. ಮಕ್ಕಳು ಆನ್‌ಲೈನ್, ಆಫ್‌ಲೈನ್ ಗೌಜಿಗೂ ಮೀರಿ ಪಾಲಕರ ಅನಗತ್ಯ ಉದ್ವೇಗದಿಂದಲೇ ಹೆಚ್ಚು ಸೊರಗುತ್ತಾರೆ. ಉಪಾಹಾರ ಸೇವಿಸುವಾಗ, ಬೂಟಿಗೆ ದಾರ ಬಿಗಿಯುವಾಗ, ಬೈಕ್ ಹಿಂಬದಿ ಕೂತಾಗ, ಬಸ್ಸೇರಿ ಇಳಿಯುವಾಗ ಆಯಾ ದಿನದ ಪರೀಕ್ಷೆಗೆ ಕೊನೇ ಕ್ಷಣಗಳ ತಯಾರಿ ನಡೆದಿರುತ್ತದೆ. ರಸ್ತೆ ದಾಟುವಾಗಲೂ ಪರೀಕ್ಷಾರ್ಥಿಗಳನ್ನು ಏನೇನು ಪ್ರಶ್ನೆಗಳು ಬಂದಾವೆಯೋ ಏನು ಉತ್ತರ ಬರೆದೇನೊ ಎನ್ನುವ ಗುಂಗು ಕಾಡಿರುತ್ತದೆ.

ತರಾತುರಿಯ ತರಾವರಿ ತಯಾರಿಯಿಂದ ಇನ್ನಷ್ಟು ತಲ್ಲಣವೇ ವಿನಾ ಯಾವುದೇ ಪ್ರಯೋಜನವಾಗದು. 'ಪರೀಕ್ಷೆ' ಶೈಕ್ಷಣಿಕ ವರ್ಷದಲ್ಲಿ ಅತಿ ಮಹತ್ವದ ಪರ್ವ. ಹಾಗೆನ್ನುವುದಕ್ಕಿಂತ ಈ ಅವಧಿಗೆ ಅನಗತ್ಯ ಪ್ರಾಮುಖ್ಯ ನೀಡಿ ವೈಭವೀಕರಿಸಲಾಗಿದೆ. ಸರ್ಕಾರ, ಶಾಲಾ ಆಡಳಿತ, ಶಿಕ್ಷಕರು, ಪೋಷಕರು- ಎಲ್ಲರ ಪಾಲೂ ಇದರಲ್ಲಿದೆ. ಬಹುತೇಕ ಪೋಷಕರಂತೂ ಪರೀಕ್ಷೆಯನ್ನು ತಾವೇ ಎದುರಿಸುವಂತೆ ಕಂಗಾಲಾಗುತ್ತಾರೆ. ಇದರಿಂದ ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು ಖಂಡಿತ. ಹೆತ್ತವರು ನಗದೇ ಮಕ್ಕಳು ನಗುವುದೆಂತು?

ಹೀಗೊಂದು ವೃತ್ತಾಂತ. ಒಂದು ಶಾಲೆಯಲ್ಲಿ ಪೋಷಕರ ಸಭೆ ಏರ್ಪಡುತ್ತದೆ. ಪ್ರತ್ಯೇಕ ಕೊಠಡಿಗಳಲ್ಲಿ ಪೋಷಕರಿಗೆ, ಮಕ್ಕಳಿಗೆ ಒಂದೇ ಪ್ರಶ್ನೆಪತ್ರಿಕೆ ನೀಡಿ ಉತ್ತರಿಸಲು ಹೇಳಲಾಗುತ್ತದೆ. ಮೌಲ್ಯಮಾಪನ ನೆರವೇರಿ ಹೊರಬಂದ ಫಲಿತಾಂಶ ಅಚ್ಚರಿಯದಾಗಿರುತ್ತದೆ. ಪೋಷಕರಿಗಿಂತ ಮಕ್ಕಳ ಸಾಧನೆ ಉತ್ತಮವಾಗಿರುತ್ತದೆ! ಪರೀಕ್ಷೆಯನ್ನು ಪರಿಚಯಿಸಿಕೊಂಡ ಪೋಷಕರು ಇನ್ನು ಮುಂದೆ ತಮ್ಮ ಮಕ್ಕಳ ಮೇಲೆ ಯಾವುದೇ ಒತ್ತಡವೇರುವುದಿಲ್ಲ ಎಂದು ಸಂಕಲ್ಪಿಸುತ್ತಾರೆ. ತಾವು ಅವರೊಂದಿಗೆ ಭಾವನಾತ್ಮಕವಾಗಿ ಬೆರೆಯುವ ಅಗತ್ಯ ಮನಗಾಣುತ್ತಾರೆ. ಆತ್ಮಸಂಯಮದಿಂದ ಪರೀಕ್ಷೆಯು ಮಕ್ಕಳಿಗೆ ಶೈಕ್ಷಣಿಕ ಸಡಗರವಾಗುವಂತೆ ನೋಡಿಕೊಳ್ಳುತ್ತಾರೆ.

ಬಲವಂತ, ನಿಂದನೆ ಮಕ್ಕಳನ್ನು ಓದಿಸುವ ಸುಲಭೋಪಾಯವೆಂದೇ ಪೋಷಕರು ಭಾವಿಸುವುದಿದೆ. ಓದಿನಲ್ಲಿ ಆಸಕ್ತಿ ತಳೆಯುವಂತೆ, ಹಾಗೆ ಓದಿದ್ದನ್ನು ಚೆನ್ನಾಗಿ ತಿಳಿಯುವಂತೆ ಪ್ರೇರೇಪಿಸುವುದೇ ರಾಜಮಾರ್ಗ.

ನಿರ್ಬಂಧ, ಪೈಪೋಟಿರಹಿತ ಸಹಜ ಮನಃಸ್ಥಿತಿಯಲ್ಲಿ ಮಾತ್ರ ಸಮರ್ಥ ಕಲಿಕೆ ಸಾಧ್ಯ. ಪೋಷಕರು ತಮ್ಮ ಮಕ್ಕಳ ಬಗ್ಗೆ ಅತಿ ಪ್ರತೀಕ್ಷೆ ಹೊಂದಿರಬಾರದು. ಇದು ಮಕ್ಕಳಲ್ಲಿ ಒತ್ತಡವನ್ನು ವಿನಾಕಾರಣ ವೃದ್ಧಿಸುತ್ತದೆ. ಒಂದು ವಿಷಯದ ಪರೀಕ್ಷೆ ಮುಗಿದ ಮೇಲೆ ಮತ್ತೆ ಮತ್ತೆ, 'ಹೇಗೆ ಮಾಡಿರುವೆ, ಎಷ್ಟು ಅಂಕಗಳನ್ನು ನಿರೀಕ್ಷಿಸಬಹುದು' ಎಂದು ಪೋಷಕರು ಪ್ರಶ್ನಿಸುವುದೇ ಬಾಲಿಶ. ಉಳಿದ ವಿಷಯಗಳಿಗೆ ಸಿದ್ಧವಾಗು ಎಂದು ಬೆನ್ನು ತಟ್ಟುವುದರಿಂದ ಮಕ್ಕಳಲ್ಲಿ ಮೂಡುವ ಹುರುಪಿಗೆ ಸಾಟಿಯಿಲ್ಲ.

ತಮ್ಮಲ್ಲಿ ವಿಶ್ವಾಸವಿಡಿ, ಯಥಾಶಕ್ತಿ ಓದಿ ಪರೀಕ್ಷೆಗೆ ತಯಾರಾಗುತ್ತೇನೆ ಎಂದು ಹಿರಿಯರಿಗೆ ಹೇಳುವ ಧೈರ್ಯ ಹೆಚ್ಚಿನ ಮಕ್ಕಳಿಗೆ ಇರದು. ಪೋಷಕರು ಮಕ್ಕಳ ಪರಿಕ್ಷಾ ಅವಧಿಯನ್ನು ಅತ್ಯಂತ ಸೂಕ್ಷ್ಮವಾಗಿ ನಿರ್ವಹಿಸಬೇಕಾಗುತ್ತದೆ. ಅವರು ತಮ್ಮ ಉದ್ವೇಗ, ದುಗುಡಗಳಿಗೆ ಕಡಿವಾಣ ಹಾಕಿಕೊಂಡರೆ ಅರ್ಧ ಹೊಣೆಗಾರಿಕೆಯನ್ನು ನಿಭಾಯಿಸಿದಂತೆಯೆ. ಪುಸ್ತಕ ಸದಾ ಕೈಯಲ್ಲಿರಲಿ, ಗೆಳೆಯರೊಂದಿಗೆ ಮಾತಾಡಬೇಡ, ಹೊರಗೆ ಸುಳಿಯಬೇಡ, ಪಂದ್ಯ ವೀಕ್ಷಿಸಬಾರದು... ಇಂತಹ ಆದೇಶಗಳು ಮಕ್ಕಳನ್ನು ಲವಲೇಶವೂ ಪ್ರಭಾವಿಸವು. ಪೋಷಕರೇನೊ ಇದು ಉತ್ತೇಜನ ಎಂದುಕೊಳ್ಳುತ್ತಾರೆ. ಆದರೆ ಅವರ ಈ ಒಂದೊಂದು ಹೆಜ್ಜೆಯೂ ಪ್ರತಿಕೂಲವಾಗಿರುತ್ತದೆ.

ಆಗಾಗ್ಗೆ ಮಕ್ಕಳ ಕೊಠಡಿಗೆ ಹೋಗಿ, ಏನು ಮಾಡುತ್ತಿದ್ದಾರೆ ಎಂದು ನೋಡುವುದರಿಂದ ಮಕ್ಕಳ ಏಕಾಗ್ರತೆಗೆ ಭಂಗ. ನಿನಗೆ ಹೆಚ್ಚಿನ ಅಂಕಗಳು ಬರದಿದ್ದರೆ ಗತ್ಯಂತರವೇ ಇಲ್ಲವೆಂದು ಬೆದರಿಸುವುದು ತಕ್ಕುದಲ್ಲ. ಹೆತ್ತವರೇ ಬ್ಲ್ಯಾಕ್‌ಮೇಲ್ ಮಾಡಿದಂತಾಗುವುದು! ಕಿರುಚಾಟ, ಬೈದಾಟ, ಸಹಪಾಠಿಗಳೊಂದಿಗೆ ಹೋಲಿಕೆಯಿಂದ ಮಕ್ಕಳಿಗೆ ತಂದೆ, ತಾಯಿ ಆಗಂತುಕರೆಂಬ ಭಾವನೆ ಮೂಡೀತು. ಮನೆಯಲ್ಲಿ ಉಸಿರುಗಟ್ಟಿಸುವಂತಹ ವಾತಾವರಣ ವಿದ್ದರೆ ಯಾವ ಓದು, ಯಾವ ಮನನ ಸಾಧ್ಯ?



ಅಂದಹಾಗೆ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳು ಬಂದರೆ ಉಡುಗೊರೆ, ಬಳುವಳಿ ಘೋಷಣೆಯೂ ಅಷ್ಟೇ ಅಸಂಬದ್ಧ. ಹಾಗೆ ನೋಡಿದರೆ ಒಳ್ಳೆಯ ಅಂಕ, ಕೆಟ್ಟ ಅಂಕ ಎನ್ನುವುದೇ ಹುಸಿ! ಪರೀಕ್ಷೆಯಲ್ಲಿ ಭಾಗಿಯಾದ ಮಕ್ಕಳೆಲ್ಲ ಅನುಭವ ಗಳಿಸಿಯೇ ಇರುತ್ತಾರೆ. ಮಕ್ಕಳು ಪಾಠ ಅರ್ಥವಾದರೆ ಮಾತ್ರ ಉತ್ಸಾಹದಿಂದ ಬರೆಯುತ್ತಾರೆ. ಪ್ರಶ್ನೆಗಳನ್ನು ಉತ್ತರಿಸುವಾಗ ಅವರ ಆನಂದ ನಿಗದಿಯಾಗಿರುವ ಅಂಕಗಳನ್ನು ನಿರ್ಲಕ್ಷಿಸುವಷ್ಟು ತೀವ್ರವಾಗಿರುತ್ತದೆ. ಇನ್ನು ಹಿರಿಯರ ಬಲವಂತದಿಂದ ಪುಸ್ತಕದ ಮೇಲೆ ಕಣ್ಣಾಡಿಸಿದರೋ ಆಯಾ ಅಧ್ಯಾಯದ ಅಂಶಗಳು ಮಸ್ತಕಕ್ಕಿಳಿಯದೆ ತತ್ಕಾಲದ ನೆನಪಿನ ಬುತ್ತಿಯಾಗುತ್ತವೆ.

ಒಂದಷ್ಟು ಉರು ಹೊಡೆದು ಅಷ್ಟು ಅಂಕಗಳೂ ಲಭಿಸಬಹುದು. ಆದರೆ ಮುಂದೆ ಅವರು ಉನ್ನತ ವ್ಯಾಸಂಗ, ಉದ್ಯೋಗಾವಕಾಶಗಳನ್ನು ಅರಸುವಾಗ ಲಿಖಿತ ಮತ್ತು ಮೌಖಿಕ ಪರೀಕ್ಷೆಗಳು ಕಠಿಣತಮ ಎನ್ನಿಸುತ್ತವೆ. ಸಂದರ್ಶನದಲ್ಲಿ ಪರೀಕ್ಷೆಗಾಗಿ ಓದಿಕೊಂಡೆ ಎನ್ನಬೇಕಾಗುವುದು.

ವಾಚಕರ ವಾಣಿ

## ನಕಲಿ ಶಿಕ್ಷಕನಿಂದ ನೀತಿ ಬೋಧೆ ಸಾಧ್ಯವೇ?

24 ವರ್ಷಗಳ ಹಿಂದೆ ಮೃತ ಅಣ್ಣನ ಹೆಸರಿನಲ್ಲಿ ಶಿಕ್ಷಕನಾಗಿ ಕೆಲಸಕ್ಕೆ ಸೇರಿ ಸರ್ಕಾರದ ಎಲ್ಲ ಸವಲತ್ತುಗಳನ್ನೂ ಅನುಭವಿಸುತ್ತಾ ಬಂದ ವ್ಯಕ್ತಿ, ಈಗಷ್ಟೇ ಬಂಧನಕ್ಕೆ ಒಳಗಾಗಿರುವ ಸುದ್ದಿ (ಪ್ರ.ವಾ., ಮಾರ್ಚ್ 25) ಓದಿ ದಿಗ್ಭ್ರಮೆಯಾಯಿತು. ಸಮಾಜದ ನೈತಿಕ ಮಟ್ಟ ಎಷ್ಟು ಅಧೋಗತಿಗೆ ಇಳಿಯುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ಎರಡೂವರೆ ದಶಕಗಳಿಂದಲೂ ಸರ್ಕಾರದ ಕಣ್ಣಿಗೆ ಮಣ್ಣೆರಚುತ್ತಿದ್ದರೂ ಶಿಕ್ಷಣ ಇಲಾಖೆಯ ಗಮನಕ್ಕೆ ಅದು ಬಾರದಿದ್ದುದು ಅಚ್ಚರಿಯ ಸಂಗತಿ. ಒಂದೊಮ್ಮೆ ಗೊತ್ತಿದ್ದರೂ ಅದರ ಬಗ್ಗೆ ಸಂಬಂಧಿಸಿದವರು ಸರ್ಕಾರಕ್ಕೆ ಮಾಹಿತಿ ನೀಡಿಲ್ಲವೆಂದರೆ ಅದಕ್ಕೆ ಇಲಾಖೆಯ ಮೇಲಧಿಕಾರಿಗಳೇ ಹೊಣೆಗಾರರಾಗುತ್ತಾರೆ.

ಅಷ್ಟಕ್ಕೂ ತನ್ನ ಹೆಸರನ್ನೇ ಮರೆಮಾಚಿ ವಾಮಮಾರ್ಗದಿಂದ ಶಿಕ್ಷಕ ಹುದ್ದೆಯಲ್ಲಿ ಮುಂದುವರಿದ ವ್ಯಕ್ತಿಯು ಭಾವಿ ಪ್ರಜೆಗಳಾಗಿರುವ ಮಕ್ಕಳಿಗೆ ನ್ಯಾಯ, ನೀತಿ, ಸತ್ಯ, ನಿಷ್ಠೆ, ಪ್ರಾಮಾಣಿಕತೆಯಂಥ ವಿಚಾರಗಳನ್ನು ಬೋಧಿಸುವುದು ಸಾಧ್ಯವೇ?

**ನಾರಾಯಣರಾವ ಕುಲಕರ್ಣಿ,** ಹಿರೇಅರಳಿಹಳ್ಳಿ, ಯಲಬುರ್ಗ

## ತಪ್ಪು ಒಪ್ಪಿಕೊಂಡ ಮಾತ್ರಕ್ಕೆ...

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಅವರ ಕುಟುಂಬದ ವಿರುದ್ಧ ನಕಲಿ ಜಾತಿ ಪ್ರಮಾಣಪತ್ರ ಪಡೆದ ಆರೋಪ ಕೇಳಿಬಂದಿದೆ. '...ನನ್ನ ಅಣ್ಣ ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆದುಕೊಂಡು ಕಲಬುರಗಿಯಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದ. ಆತನೇ ನನ್ನ ಮಗಳಿಗೂ ಪರಿಶಿಷ್ಟ ಜಾತಿ ಪ್ರಮಾಣಪತ್ರ ಕೊಡಿಸಿದ್ದ. ವಿಷಯ ಗೊತ್ತಾದ ತಕ್ಷಣ ಅದನ್ನು ಮರಳಿಸಲು ಸೂಚಿಸಿದ್ದೆ' ಎಂದು ರೇಣುಕಾಚಾರ್ಯ ವಿವರಣೆ ನೀಡಿದ್ದಾರೆ. ಜಾತಿ ಪ್ರಮಾಣಪತ್ರ ಹೇಗೆ ದುರ್ಬಳಕೆ ಆಗುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನ. ಆದರ್ಶವಾಗಿ ಇರಬೇಕಾದ ಜನಪ್ರತಿನಿಧಿಗಳ ಕುಟುಂಬಗಳೇ ಇಂತಹ ಕೃತ್ಯ ನಡೆಸಿರುವುದು ವಿಷಾದನೀಯ. ಈ ಬಗ್ಗೆ 'ಸಂಬಂಧಿಸಿದ ಪ್ರಾಧಿಕಾರದ ಎದುರು ಯಾರಾದರೂ ದೂರು ನೀಡಲಿ. ತಪ್ಪು ಮಾಡಿದ್ದರೆ ಕ್ರಮ ಆಗುತ್ತದೆ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಈಗ ಈ ಎರಡೂ ಅಗತ್ಯವಾಗಿ ಆಗಬೇಕಾಗಿದೆ.

ದೊಡ್ಡವರೇ ಹೀಗೆ ದುರ್ಬಳಕೆ ಮಾಡಿಕೊಳ್ಳುತ್ತಿರುವಾಗ, ಬಡವರು ತಮ್ಮ ಜೀವನ ನಿರ್ವಹಣೆಗಾಗಿ, ಹೊಟ್ಟೆಪಾಡಿಗಾಗಿ, ಸರ್ಕಾರದ ಸೌಲಭ್ಯಕ್ಕಾಗಿ ಈ ರೀತಿ ಪಡೆದರೆ ತಪ್ಪೇನಿಲ್ಲ ಎಂಬ ಅಭಿಪ್ರಾಯ ಜನಸಾಮಾನ್ಯರಲ್ಲಿ ಮೂಡಲು ಇಂತಹ ನಿದರ್ಶನಗಳು ಕಾರಣವಾಗುತ್ತವೆ.

**ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ,** ಬೆಂಗಳೂರು

## ಮಾನವೀಯತೆಯಿಂದ ಯೋಚಿಸುವಂತಾಗಲಿ

ರಾಜ್ಯದ ವಿವಿಧೆಡೆ ಜಾತ್ರೆಗಳಲ್ಲಿ ಮುಸ್ಲಿಂ ವರ್ತಕರಿಗೆ ಬಹಿಷ್ಕಾರ ಹಾಕಲು ಮುಂದಾಗಿರುವ ಸುದ್ದಿ ಆತಂಕಕಾರಿಯಾದುದು. ಮುಸ್ಲಿಮರಲ್ಲಿ ಹೆಚ್ಚಿನವರು ವ್ಯಾಪಾರವನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಆ ಸಮುದಾಯದಲ್ಲಿ ಸರ್ಕಾರಿ ನೌಕರಿಯಲ್ಲಿ ಇರುವವರು ಹಾಗೂ ಭೂ ಒಡೆತನ ಹೊಂದಿರುವವರು ಕಡಿಮೆ. ಹೀಗಿರುವಾಗ, ಜೀವನಾಧಾರವಾದ ವ್ಯಾಪಾರ ವೃತ್ತಿಗೆ ನಿರ್ಬಂಧ ಹೇರುವುದು ಒಂದು ರೀತಿಯಲ್ಲಿ ಅವರ ಅನ್ನವನ್ನು ಕಸಿದುಕೊಂಡಂತೆ ಅಲ್ಲವೇ? ನಿರ್ಬಂಧ ಹೇರುವವರು ಈ ಬಗ್ಗೆ ಮಾನವೀಯತೆಯಿಂದ ವಿಚಾರ ಮಾಡಬೇಕು. ಈ ರೀತಿ ಒಂದು ಸಮುದಾಯವನ್ನು ಹೊರಗಿಡುವ ಬೆಳವಣಿಗೆಯು ಸಮಾಜದ ಆರೋಗ್ಯದ ದೃಷ್ಟಿಯಿಂದ ಒಳ್ಳೆಯ ಸೂಚನೆಯಲ್ಲ.

**ಟಿ.ಕೆ.ಸ್ವಾಮಿ,** ತುಮಕೂರು

## ತಿಪ್ಪಗೊಂಡನಹಳ್ಳಿ ಪುನರುಜ್ಜೀವನ ಶ್ಲಾಘನೀಯ...

ಒಂದು ಕಾಲದಲ್ಲಿ ಬೆಂಗಳೂರಿಗೆ ನೀರಿನ ಸೆಲೆಯಾಗಿದ್ದ ತಿಪ್ಪಗೊಂಡನಹಳ್ಳಿ ಅಣೆಕಟ್ಟನ್ನು ಪುನರುಜ್ಜೀವನಗೊಳಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಶ್ಲಾಘನೀಯ. ಅಲ್ಲಿನ ಹೂಳೆತ್ತಲು ಮುಂದಾಗುವುದರ ಜೊತೆಗೆ ಸುತ್ತಲಿನ ಕಾವೇರಿಯ ಉಪನದಿಗಳೆಡೆಗೆ ತುರ್ತಾಗಿ ಗಮನಹರಿಸಬೇಕಿದೆ. ದೂರದ ಎತ್ತಿನಹೊಳೆಯ ನೀರನ್ನು ಚಿಕ್ಕಬಳ್ಳಾಪುರಕ್ಕೆ ಹೊತ್ತುತರುವ ಕಾರ್ಯದಲ್ಲಿ ಆಗುತ್ತಿರುವ ಅರಣ್ಯನಾಶಕ್ಕೆ ಸಾಕ್ಷಿಯಾಗಿದ್ದೇವೆ. ತಿಪ್ಪಗೊಂಡನಹಳ್ಳಿಗೆ ನೀರು ತರಲು ಎತ್ತಿನಹೊಳೆಯ ಮೇಲೆ ಮತ್ತಷ್ಟು ಭಾರ ಹಾಕುವುದನ್ನು ನಿಲ್ಲಿಸಿ, ಅರ್ಕಾವತಿ ಪಾತ್ರವನ್ನು ಶುಚಿಗೊಳಿಸಿದರೆ ಲಾಭದಾಯಕವಾಗಬಲ್ಲದು. ಕುಮುದ್ವತಿ, ಮಂಗಳಮುಖಿ, ಅರ್ಕಾವತಿ ನದಿಗಳು ಸೇರಿದಂತೆ ಹೆಸರಘಟ್ಟದಂತಹ ದೊಡ್ಡಕೆರೆಗಳೇ ತಿಪ್ಪಗೊಂಡನಹಳ್ಳಿಯ ಮೂಲಾಧಾರ. ಮಳೆಗಾಲದಲ್ಲಿ ಕೆರೆ-ಕೆರೆ ಸೇರಿ, ದೊಡ್ಡನದಿಯಂತೆ ಹರಿದು ತಿಪ್ಪಗೊಂಡನಹಳ್ಳಿ ಸೇರಿದ್ದನ್ನು ಕಂಡೇ ನಮ್ಮ ಹಿರಿಯರು ಅಲ್ಲಿ ಡ್ಯಾಂ ನಿರ್ಮಿಸಿರುವುದು.

ಗ್ರಾಮಾಂತರ ಬೆಂಗಳೂರಿನ ಮಳೆಯೇ ಈ ಎಲ್ಲ ಕೆರೆ, ನದಿಗಳ ಮೂಲ. ಮಳೆಗಾಲದಲ್ಲಿ ಸುಗಮವಾಗಿ ನೀರು ಹರಿಯುವಂತೆ ಮಾಡಲು, ಇಡೀ ಅರ್ಕಾವತಿ ಪಾತ್ರವನ್ನು ಸನ್ನದ್ಧಗೊಳಿಸಬೇಕು. ಜೊತೆಗೆ, ತಿಪ್ಪಗೊಂಡನಹಳ್ಳಿಗೆ ಹರಿಯುತ್ತಿರುವ ಕಾರ್ಖಾನೆಯ ವಿಷವನ್ನೂ ತಡೆಯಬೇಕು. ಇವು ದೀರ್ಘಕಾಲದಲ್ಲಿ ಬೆಂಗಳೂರಿನ ಕುಡಿಯುವ ನೀರಿಗೆ ಪರಿಹಾರವೇ ವಿನಾ ನೂರಾರು ಕಿಲೊಮೀಟರ್ ದೂರದ ಪಶ್ಚಿಮಘಟ್ಟದ ನಾಶದಿಂದಲ್ಲ.

**ಶಾಂತರಾಜು ಎಸ್.ಮಳವಳ್ಳಿ,** ಬೆಂಗಳೂರು

## ನೆನಪಾದ 'ಬೀಚಿ' ಮೊನಚು


ಹೆಣ್ಣುಮಕ್ಕಳ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಹಿರೇಮಗಳೂರು ಕಣ್ಣನ್ ಅವರನ್ನು ರಂಗಕರ್ಮಿ ಪ್ರಸನ್ನ ಅವರು ಕ್ಷಮಿಸುವ ಔದಾರ್ಯ ತೋರಿರುವುದನ್ನು ಆಕ್ಷೇಪಿಸಿರುವ ಡಾ. ಸುಧಾ ಕೆ. ಅವರ ಅಭಿಪ್ರಾಯ ಓದಿ (ವಾ.ವಾ., ಮಾರ್ಚ್ 25), ನನಗೆ ಹಾಸ್ಯ ಸಾಹಿತಿ ಬೀಚಿ ನೆನಪಾದರು. ಹೊರಗೆ ಬಿಟ್ಟ ಪಾದರಕ್ಷೆಗಳು ಕಳುವಾಗುವ ಸಾಧ್ಯತೆಯನ್ನು ಬೀಚಿ ಅವರು ಒಂದು ಸಭೆಯಲ್ಲಿ ಮೊನಚಾಗಿ, ಅಷ್ಟೇ ಬೋಧಪ್ರದವಾಗಿ ಅಭಿವ್ಯಕ್ತಿಸಿದ್ದು ಹೀಗೆ: 'ನೋಡಿ ಗೆಳೆಯರೆ, ಮದುವೆ ಮನೆಗೆ ಹೋಗುವಾಗ ನೀವು ಚಪ್ಪಲಿ ಹಾಕಿಕೊಂಡು ಹೋಗಬೇಡಿ... ಬರುವಾಗ ಹಾಕಿಕೊಂಡು ಬನ್ನಿ!' ಸಭೆಯಲ್ಲಿ ಸಣ್ಣಗೆ ಆರಂಭಗೊಂಡ ಕರತಾಡನ ಕೊನೆಗೆ ಭರ್ಜರಿಯಾಗಿತ್ತು. ಒಬ್ಬರಾದರೂ ಸಭಿಕರು 'ಏನ್ಸಾರ್ ನಮ್ಮನ್ನು ಅಂತಹವರೆಂದಿರಲ್ಲ' ಅಂತ ಮುನಿಯಲಿಲ್ಲ. ಹದ ವಿನೋದವೆಂದರೆ ಇದೇ ಅಲ್ಲವೆ? ಹಾಸ್ಯಪಟುತ್ವವು ಶಿಷ್ಟಾಚಾರ, ಸದಭಿರುಚಿಯ ಸೀಮೆ ಕಡೆಗಣಿಸಿದರೆ ಆಕ್ರೋಶಕ್ಕೆ ಆಸ್ಪದವಾಗುತ್ತದೆ. ಮಂದಿ ಕೈತಟ್ಟುವುದೇ ಮುಖ್ಯವೆ? ಅಸಂಬದ್ಧ ಪ್ರಾಸಗಳಿಗೂ ಚಪ್ಪಾಳೆಗಳಾಗಿರುತ್ತವೆ. ಚಟಾಕಿಗಳು ಸಭ್ಯವಾಗಿದ್ದರೆ ಜನ ಸ್ವೀಕರಿಸುತ್ತಾರೆ. ಹಾಸ್ಯ ಭಾಷಣಕಾರ ಶ್ರೋತೃಗಳ ಹೃದಯ ಮುಟ್ಟಬೇಕು. ಆಗ ಅಹುದಹುದೆಂದು ಅವರ ಕೈಗಳು ತಂತಾನೇ ತಟ್ಟಿರುತ್ತವೆ.

**ಬಿಂಡಿಗನವಿಲೆ ಭಗವಾನ್,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

## ಶಾಲಾಪಠ್ಯದಲ್ಲಿ ಭಗವದ್ಗೀತೆ ಅಳವಡಿಸಲು ಹೊರಟ ಸರ್ಕಾರದ ಕ್ರಮ ಸರಿಯೇ?

# ಭಗವದ್ಗೀತೆ ಶಾಲಾ ಪಠ್ಯವಾಗಬೇಕೇ?



ಏಕ ಕಾಲದಲ್ಲಿ ಹಿಂಸೆ ಹಾಗೂ ಅಹಿಂಸೆ, ಕರ್ಮ ಹಾಗೂ ವೈರಾಗ್ಯ, ಸರ್ವ ಸಮಾನತೆ ಹಾಗೂ ಭಿನ್ನತೆ, ಇತ್ಯಾದಿ ಪರಸ್ಪರ ವಿರುದ್ಧ ವೈಚಾರಿಕತೆಯನ್ನು ಸಮರ್ಥಿಸುವ ಗೀತೆಯನ್ನು ಪಠ್ಯವನ್ನಾಗಿ ಅಳವಡಿಸಿಕೊಳ್ಳುವ ಯೋಜನೆಯಲ್ಲಿ ಅನೇಕ ಮಿತಿಗಳು ಹಾಗೂ ಅಪಾಯಕಾರಿ ಸಾಧ್ಯತೆಗಳು ಕಂಡು ಬರುತ್ತವೆ

ಪ್ರಜಾವಾಣಿ ಚರ್ಚೆ

• ಸಿ.ಎನ್.ರಾಮಚಂದ್ರನ್

ಇತ್ತೀಚಿನ ದಿನಗಳಲ್ಲಿ ಮತ್ತೆ ಭಗವದ್ಗೀತೆ ವಾದ-ವಿವಾದಗಳಿಗೆ ಕಾರಣವಾಗಿದೆ. ಮೊದಲಿಗೆ, ಸುಮಾರು ಎಂಟು ವರ್ಷಗಳ ಹಿಂದೆ (2014), ಆಗ ಕೇಂದ್ರದಲ್ಲಿ ವಿದೇಶಾಂಗ ಸಚಿವೆಯಾಗಿದ್ದ ಶ್ರೀಮತಿ ಸುಷ್ಮಾಸ್ವರಾಜ್ ಅವರು 'ಭಗವದ್ಗೀತೆಯನ್ನು 'ರಾಷ್ಟ್ರೀಯ ಗ್ರಂಥ'ವನ್ನಾಗಿಸಬೇಕು' ಎಂದು ದೆಹಲಿಯ 'ಗೀತಾ ಪ್ರೇರಣಾ ಮಹೋತ್ಸವ'ದಲ್ಲಿ ಭಾಷಣ ಮಾಡಿದ್ದರು. ಸರಿ ಸುಮಾರು ಅದೇ ಕಾಲದಲ್ಲಿ (2013), ಕರ್ನಾಟಕದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಮಂತ್ರಿಗಳಾಗಿದ್ದ ಕಾಗೇರಿಯವರು ಭಗವದ್ಗೀತೆಯನ್ನೂ ಶಾಲೆಗಳ ಪಠ್ಯಗಳಲ್ಲಿ ಸೇರಿಸಬೇಕು ಎಂದು ಸಾರ್ವಜನಿಕ ಹೇಳಿಕೆ ನೀಡಿದ್ದರು. ಮತ್ತೆ ಈಗ ಅದೇ ಖಾತೆಯ ಮಂತ್ರಿಗಳಾಗಿರುವ ಬಿ. ಸಿ. ನಾಗೇಶ್ ಅವರು ಭಗವದ್ಗೀತೆಯನ್ನು ಶಾಲೆಗಳಲ್ಲಿ ನೈತಿಕ ಶಿಕ್ಷಣಕ್ಕಾಗಿ ಪಠ್ಯಗಳಲ್ಲಿ ಸೇರಿಸಬೇಕೆಂದು, ಮತ್ತು ಆ ವಿಚಾರದಲ್ಲಿ ಸಲಹೆ-ಸೂಚನೆಗಳನ್ನು ಕೊಡಲು ಒಂದು ಸಮಿತಿಯನ್ನು ರಚಿಸುವುದಾಗಿ ಸಾರ್ವಜನಿಕ ಹೇಳಿಕೆ ನೀಡಿದ್ದಾರೆ. ಕೇಂದ್ರ ಸಚಿವರಾಗಿರುವ ಪ್ರಹ್ಲಾದ್ ಜೋಷಿ ಅವರು 'ಈ ವಿಷಯವನ್ನು ಕುರಿತು ಯಾರೂ ವಿರೋಧ ವ್ಯಕ್ತಪಡಿಸಬಾರದು' ಎಂಬ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ.

ಗೀತೆಯಲ್ಲಿ ಏನಿವೆ ಅಂತಹ ಮೌಲ್ಯಗಳು ಹಾಗೂ ತತ್ವಗಳು?

ಭಗವದ್ಗೀತೆ ಅಥವಾ ಗೀತೆ ಎಂದು ಪ್ರಸಿದ್ಧವಾಗಿರುವ, 18 ಅಧ್ಯಾಯಗಳುಳ್ಳ, ಈ ಕೃತಿ ಮಹಾಭಾರತದ 'ಭೀಷ್ಮಪರ್ವ'ದ ಪ್ರಾರಂಭದಲ್ಲಿ ಬರುತ್ತದೆ. ವಿದ್ವಾಂಸರು ಗೀತೆಯಲ್ಲಿರುವ 18 ಅಧ್ಯಾಯಗಳನ್ನು ಆರು ಅಧ್ಯಾಯಗಳ ಮೂರು ಘಟಕಗಳಂತೆ ವರ್ಗೀಕರಿಸುತ್ತಾರೆ: 'ಕರ್ಮಯೋಗ', 'ಜ್ಞಾನಯೋಗ', ಮತ್ತು 'ಭಕ್ತಿಯೋಗ'. ಕಳೆದ ಶತಮಾನದವರೆಗೂ ಗೀತೆಯನ್ನು ಒಂದು ಮಹತ್ವದ ಧರ್ಮಗ್ರಂಥವೆಂದು ಕಾಣುತ್ತಾ, ಅದನ್ನು ಆಧ್ಯಾತ್ಮಿಕ ನೆಲೆಯಲ್ಲಿ ವಿದ್ವಾಂಸರು ವ್ಯಾಖ್ಯಾನಿಸುತ್ತಿದ್ದರು. ಆದರೆ ಅದಕ್ಕೊಂದು ರಾಜಕೀಯ ಆಯಾಮವನ್ನು ಕೊಟ್ಟವರು ಲೋಕಮಾನ್ಯ ಬಾಲಗಂಗಾಧರ ತಿಲಕ್.

ಪ್ರಸಿದ್ಧ ರಾಷ್ಟ್ರನಾಯಕರಾಗಿದ್ದ ತಿಲಕರು, ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಅಧಿಕೃತತೆಯನ್ನು ಕೊಡುವ ಉದ್ದೇಶದಿಂದ ಗೀತಾ ರಹಸ್ಯ ಎಂಬ ಕೃತಿಯನ್ನು 1908ರಲ್ಲಿ ರಚಿಸಿದರು. ತಮ್ಮ ನೂತನ ವ್ಯಾಖ್ಯಾನದಲ್ಲಿ ತಿಲಕರು ಇಡೀ ಭಗವದ್ಗೀತೆಯನ್ನು ಒಂದು ಅನ್ಯೋಕ್ತಿಯಂತೆ (allegory) ವ್ಯಾಖ್ಯಾನಿಸುತ್ತಾರೆ: 'ಕರ್ಮ' = ರಾಷ್ಟ್ರಕ್ಕಾಗಿ ಪ್ರತಿಯೊಬ್ಬ ಪ್ರಜೆಯೂ ಮಾಡಬೇಕಾದ ಸೇವೆ; ಕುರುಕ್ಷೇತ್ರ ಯುದ್ಧ = ಸ್ವಾತಂತ್ರ್ಯ ಹೋರಾಟ; ಅರ್ಜುನ = ಪರದಾಸ್ಯದಲ್ಲಿರುವ ಭಾರತೀಯರು; ಬ್ರಿಟಿಷರು = ಕೌರವರು; ಮುಕ್ತಿ = ದೇಶದ ಸ್ವಾತಂತ್ರ್ಯ ಇತ್ಯಾದಿ.

'ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ ತ್ವಯಿ ಉಪಪದ್ಯತೇ...'



ಎಂದು ಕೃಷ್ಣನು ಅರ್ಜುನನಿಗೆ ಕೊಡುವ ಉಪದೇಶಕ್ಕೆ ಮಹತ್ವ ಕೊಟ್ಟು, ತಿಲಕರು 'ಉದ್ದೇಶವು ನಿಸ್ವಾರ್ಥದಿಂದ ಕೂಡಿದ್ದರೆ, ಆ ಉದ್ದೇಶ ಸಾಧನೆಗಾಗಿ ಹಿಂಸಾಮಾರ್ಗವನ್ನು ಅನುಸರಿಸುವುದೂ ಕೂಡಾ ಸಮರ್ಥನೀಯ' ಎಂದು ವಾದಿಸುತ್ತಾರೆ.

ಗಾಂಧೀಜಿಯವರು ನೈತಿಕ ನೆಲೆಯಲ್ಲಿ ಗೀತೆಯನ್ನು ಗ್ರಹಿಸುತ್ತಾರೆ. ತಮ್ಮ ಆಶ್ರಮದಲ್ಲಿ ಅವರು 1926ರಲ್ಲಿ ಗೀತೆಯನ್ನು ಕುರಿತು ಮಾಡಿದ ಸರಣಿ ಉಪನ್ಯಾಸಗಳನ್ನು ಆಧರಿಸಿದ ಕೃತಿ ಅನಂತರ, 'Discourses on the Gita' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಅದನ್ನು ಗಾಂಧೀಜಿಯವರೇ 1929ರಲ್ಲಿ 'ಅನಾಸಕ್ತಿ ಯೋಗ' ಎಂಬ ಹೆಸರಿನಲ್ಲಿ ಗುಜರಾತಿ ಭಾಷೆಗೆ ಅನುವಾದಿಸಿ, ಅದಕ್ಕೆ ಮುನ್ನುಡಿ ಮತ್ತು ಅಲ್ಲಲ್ಲಿ ಟಿಪ್ಪಣಿಗಳನ್ನೂ ಕೊಟ್ಟರು. (ಮಹದೇವ ದೇಸಾಯಿ ಅದನ್ನು The Gita According to Gandhi ಎಂಬ ಹೆಸರಿನಲ್ಲಿ 1933ರಲ್ಲಿ ಪ್ರಕಟಿಸಿದರು.) ಗಾಂಧೀಜಿ ಅವರಿಗೆ ಗೀತೆಯು ಮುಖ್ಯವಾಗುವುದು ನೈತಿಕ ನೆಲೆಯಲ್ಲಿ. ಮತ್ತು ಅವರ 'ನೈತಿಕ ಸಂಹಿತೆ'ಯ ಚೌಕಟ್ಟಿನ ಕೇಂದ್ರದಲ್ಲಿ ಸ್ತ್ರೀಸಮಾನತೆ, ಜಾತಿನಿರ್ಮೂಲನ, ಅಹಿಂಸೆ, ಶಾಂತಿ, ಇತ್ಯಾದಿಗಳನ್ನೊಳಗೊಂಡ ಸುಧಾರಣಾವಾದಿ ಚಿಂತನೆಯಿದೆ. ಗಾಂಧಿಜಿ ಅವರ ದೃಷ್ಟಿಯಲ್ಲಿ ಗೀತೆಯು, 'ವಾಸ್ತವಿಕ ಯುದ್ಧದ ನೆಪದಲ್ಲಿ ಮನುಷ್ಯರ ಹೃದಯಗಳಲ್ಲಿ ಸದಾ ನಡೆಯುವ ಸಂಘರ್ಷವನ್ನು ಚಿತ್ರಿಸುತ್ತದೆ.'

ಈ ಹಿನ್ನೆಲೆಯಲ್ಲಿ ಈಗ ಗೀತೆಯನ್ನು ಶಾಲಾಪಠ್ಯಗಳಲ್ಲಿ ಅಳವಡಿಸುವ ಯೋಜನೆಗೆ ಬಂದರೆ, ಮೊದಲಿಗೆ ನಾವು ಆ ಪಠ್ಯದ ಲಕ್ಷ್ಯವಾದ ವಿದ್ಯಾರ್ಥಿಗಳನ್ನು ಗಮನಿಸಬೇಕು. 6-12 ತರಗತಿಯವರು ಎಂದರೆ 12ರಿಂದ 18 ವರ್ಷಗಳ ಕಿಶೋರ-ಕಿಶೋರಿಯರು. ಈ ಕಿಶೋರಾವಸ್ಥೆಯಲ್ಲಿ ಅವರಲ್ಲಿ ಹೊಸದೇನನ್ನಾದರೂ ಕಲಿಯುವ-ಮಾಡುವ ಅದಮ್ಯ ಉತ್ಸಾಹವಿರುತ್ತದೆ. ಆದರೆ ವಿಮರ್ಶನ ಶಕ್ತಿಯನ್ನು ಇನ್ನೂ ಬೆಳೆಸಿಕೊಳ್ಳದಿರುವುದರಿಂದ, ಅವರು ಭಾವನೆಗಳಿಂದ ಬಹು ಬೇಗ ಪ್ರಭಾವಿತರಾಗುತ್ತಾರೆ ಮತ್ತು ರೋಚಕವಾಗಿ ಹಾಗೂ ಭಾವನಾತ್ಮಕವಾಗಿ ಯಾರು ಏನು ಹೇಳಿದರೂ ಅದನ್ನು ಪ್ರಶ್ನಿಸದೆ ಅಂತರಂಗೀಕರಿಸಿಕೊಳ್ಳುತ್ತಾರೆ. ಆದುದರಿಂದ ಅವರ ಶಾಲಾ ಪಠ್ಯಗಳನ್ನು ಸಿದ್ಧಪಡಿಸುವಾಗ ಇನ್ನಿಲ್ಲದ ಎಚ್ಚರಿಕೆ ಅವಶ್ಯಕವಾಗುತ್ತದೆ: ಅ) ಅವರು ಗ್ರಹಿಸಲಾಗದ ಅಮೂರ್ತ ವಿಚಾರಗಳು (ಎಂದರೆ ಆತ್ಮ-ಪರಮಾತ್ಮ ಕಲ್ಪನೆ, ಕರ್ಮ-ಪುನರ್ಜನ್ಮ, ಇತ್ಯಾದಿ) ಪಠ್ಯಗಳಲ್ಲಿರಬಾರದು; ಆ) ನಮ್ಮ ಸಂವಿಧಾನದ ಮುಖ್ಯ ವಿಚಾರಗಳನ್ನು ಹಾಗೂ ಮಹತ್ವವನ್ನು ಸರಳ ಭಾಷೆಯಲ್ಲಿ ತಿಳಿಸುವ ಪಾಠಗಳಿರಬೇಕು; ಮತ್ತು ಇ) ನಮ್ಮ ರಾಷ್ಟ್ರದ ಪ್ರಮುಖ ಭಾಷೆಗಳು-ಮತಗಳು-ಜನಾಂಗಗಳು ಇವುಗಳ ಅರಿವನ್ನು ವಿದ್ಯಾರ್ಥಿಗಳಿಗೆ ಕೊಡುವಂತಿರಬೇಕು.

ಈ ಹಿನ್ನೆಲೆಯಲ್ಲಿ, ಏಕ ಕಾಲದಲ್ಲಿ ಹಿಂಸೆ ಹಾಗೂ ಅಹಿಂಸೆ, ಕರ್ಮ ಹಾಗೂ ವೈರಾಗ್ಯ, ಸರ್ವ ಸಮಾನತೆ ಹಾಗೂ ಭಿನ್ನತೆ, ಇತ್ಯಾದಿ ಪರಸ್ಪರ ವಿರುದ್ಧ ವೈಚಾರಿಕತೆಯನ್ನು ಸಮರ್ಥಿಸುವ ಗೀತೆಯನ್ನು ಪಠ್ಯವನ್ನಾಗಿ ಅಳವಡಿಸಿಕೊಳ್ಳುವ ಯೋಜನೆಯಲ್ಲಿ ಅನೇಕ ಮಿತಿಗಳು ಹಾಗೂ ಅಪಾಯಕಾರಿ ಸಾಧ್ಯತೆಗಳು ಕಂಡು ಬರುತ್ತವೆ. ಮುಖ್ಯವಾಗಿ:

1 ಗೀತೆಯನ್ನು ಅನ್ಯೋಕ್ತಿಯಂತೆ ಪರಿಗಣಿಸುವ ತಿಲಕರ ವೈಚಾರಿಕತೆ ಸ್ವಾತಂತ್ರ್ಯಹೋರಾಟದ ಕಾಲದಲ್ಲಿ ತುಂಬಾ ಪ್ರಸ್ತುತವಾಗಿತ್ತು. ಆದರೆ, ಅವರ 'ಅನ್ಯೋಕ್ತಿ' ಮಾದರಿ ಇಂದು ಅಪಾಯಕಾರಿಯಾಗಬಹುದು. 'ಸ್ವಧರ್ಮೆ ನಿಧನಂ ಶ್ರೇಯ:, ಪರಧರ್ಮೋ ಭಯಾವಹಃ' (3:35) ಎಂಬ ಶ್ಲೋಕವನ್ನು ಅನುಸರಿಸಿ, ಹಿಂದು/ಮುಸ್ಲಿಂ/ಕ್ರಿಶ್ಚಿಯನ್ನರು 'ಸ್ವಧರ್ಮ'ವೆಂದರೆ ತಮ್ಮ ಧರ್ಮವೆಂದು ಪರಿಗಣಿಸಿ, 'ಅನ್ಯ ಧರ್ಮ/ ಅನ್ಯ ಭಾಷೆ/ ಅನ್ಯ ಸಂಸ್ಕೃತಿ' ಇತ್ಯಾದಿಗಳ ವಿರುದ್ಧ ಹೋರಾಡುವುದು ಪ್ರತಿಯೊಬ್ಬನ ಕರ್ತವ್ಯ ಎಂಬ ಸಿದ್ಧಾಂತಕ್ಕೆ ಬಂದರೆ, ನಮ್ಮ ಸಂವಿಧಾನದ ಅಡಿಗಲ್ಲಾದ 'ಸರ್ವ ಸಮಾನತೆ'ಯ ತತ್ವವು ಸಂಪೂರ್ಣವಾಗಿ ಮೂಲೆಗುಂಪಾಗುವುದಿಲ್ಲವೆ? ಹಾಗೆಯೇ, ಈ ಸೂತ್ರವು ವ್ಯಕ್ತಿಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದಿಲ್ಲವೆ?

2 'ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ / ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ' (4:7) - ಈ ಪ್ರಸಿದ್ಧ ಶ್ಲೋಕದಲ್ಲಿ ಬರುವ 'ಧರ್ಮ' ಎಂದರೆ ಏನು? ಉತ್ತರ 'ಮತ,' 'ನ್ಯಾಯ,' 'ಕರ್ತವ್ಯ,' 'ಔದಾರ್ಯ' ಏನು ಬೇಕಾದರೂ ಆಗಬಹುದು. ಹಾಗೆಯೇ, 'ಈಗ ಈ ಧರ್ಮಕ್ಕೆ ಗ್ಲಾನಿಯಾಗಿದೆ' ಎಂದು ಯಾರು ನಿರ್ಧರಿಸುತ್ತಾರೆ?

3 'ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶ:' (4:13) – ಈ ಶ್ಲೋಕವಂತೂ ಅತ್ಯಂತ ಚರ್ಚಾಸ್ಪದವಾದುದು. 'ನಾನೇ ನಾಲ್ಕು ವರ್ಣಗಳನ್ನು ಸೃಷ್ಟಿಸಿದ್ದೇನೆ' ಎಂದರೆ ಆ ವರ್ಣಗಳ ಸೃಷ್ಟಿಯಾದ ಮೇಲೆ ಅವರವರ ಗುಣ-ಕರ್ಮಗಳಿಗನುಸಾರವಾಗಿ ಅವರ ಶ್ರೇಣೀಕರಣವನ್ನು ಆ ಸೃಷ್ಟಿಕರ್ತನೇ ಮಾಡಿದನೆ? ಯಾವ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸಮಾಜ ಸುಧಾರಕರು ಶತಮಾನಗಳ ಕಾಲ ಹೋರಾಡಿದರೋ ಅದೇ ವ್ಯವಸ್ಥೆಯನ್ನು ಈಗ ಮಕ್ಕಳಿಗೆ ನಾವು ಕಲಿಸಬೇಕೆ? ಇದೇ ನೆಲೆಯಲ್ಲಿ, 'ಸ್ತ್ರೀಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂಗತಿಂ' (9:32) ಎಂದು ಕೃಷ್ಣನು ಹೇಳುವಾಗ, 'ಸ್ತ್ರೀಯರು, ವೈಶ್ಯರು ಮತ್ತು ಶೂದ್ರರು' ಹುಟ್ಟಿನಿಂದ ಎರಡನೆಯ ದರ್ಜೆಯ ಮಾನವರು; ಭಗವಂತನ ವಿಶೇಷ ಕೃಪೆಯಿಂದ ಮಾತ್ರ ಅವರಿಗೆ ಮುಕ್ತಿ ಸಾಧ್ಯ ಎಂದಾಗುವುದಿಲ್ಲವೆ?

'ನೀತಿಶಿಕ್ಷಣವನ್ನು ಶಾಲೆಯಲ್ಲಿ ಕಲಿಸಲೇಬೇಕು; ಭಗವದ್ಗೀತೆ ಅದರಲ್ಲಿರಲೇ ಬೇಕು' ಎಂದಾದರೆ, ಮೊದಲಿಗೆ ಆ ಬಗೆಯ ಶಿಕ್ಷಣವನ್ನು ಕೊಡಬಲ್ಲ ಶಿಕ್ಷಕರು ಶಾಲೆಗಳಲ್ಲಿ ಇರಬೇಕು. ಪಠ್ಯಾವಳಿಯಲ್ಲಿ, ಗಾಂಧೀಜಿಯವರ Discourses on the Gita ಕೃತಿಯಿಂದ ಆಯ್ದ ಭಾಗಗಳು, ವಿವೇಕಾನಂದರ ಭಾಷಣಗಳು, ಕುವೆಂಪು ಅವರ 'ನಿರಂಕುಶಮತಿಗಳಾಗಿ,' ಶಿವರಾಮ ಕಾರಂತರ 'ಬಾಳ್ವೆಯೇ ಬೆಳಕು,' ಇತ್ಯಾದಿಗಳಿಂದ (ನಮ್ಮ ಸಂವಿಧಾನದ ಚೌಕಟ್ಟಿನಲ್ಲಿ) ಆಯ್ದ ಭಾಗಗಳು; ಮತ್ತು ಪರಿಸರ ಪ್ರಜ್ಞೆ, ನಿಸರ್ಗ-ಮಾನವ ಸಂಬಂಧ, ಇತ್ಯಾದಿಗಳನ್ನು ಸೇರಿಸಬಹುದು. ಒಟ್ಟಿನಲ್ಲಿ, ನೀತಿಶಿಕ್ಷಣದ ಉದ್ದೇಶ 'ಬಹುತ್ವ'ದ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವುದಾಗಬೇಕು.

ಲೇಖಕರು: ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ




ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 78

## ಕ್ಷಮೆ ಬೇಡಿದ ನಾರದ

ನಾರದ ತನ್ನ ಅಜ್ಞಾನ, ಮೋಹಪಾಶದಿಂದ ಮತ್ತು ಕೋಪಕ್ಕೆ ಬುದ್ಧಿ ಕೊಟ್ಟು ವಿಷ್ಣುವನ್ನು ಶಪಿಸಿಬಿಟ್ಟ. ವಿಷ್ಣುವೂ ಅನಾದಿಯಾದ ಶಿವನ ಮಾಯೆಯನ್ನು ಹೊಗಳುತ್ತಾ, ಆ ಶಾಪವನ್ನು ಪರಿಗ್ರಹಿಸಿದ. ಯಾವ ಮಾಯೆಯ ಪ್ರಭಾವಕ್ಕೆ ಸಿಲುಕಿ, ಜ್ಞಾನಿಯಾದ ನಾರದ ಮೋಹಿತನಾಗಿದ್ದನೋ, ಆ ಸರ್ವಮೋಹಕವಾದ ತನ್ನ ಮಾಯೆಯನ್ನು ಲೀಲಾಮಯನಾದ ಶಿವನು ಉಪಸಂಹರಿಸಿಬಿಟ್ಟ. ಆಗ ನಾರದ ಭ್ರಮೆ ಕಳೆದುಕೊಂಡು ವಾಸ್ತವಕ್ಕೆ ಬಂದ.

ಶಿವಮಾಯೆಯು ಬಿಟ್ಟುಹೋದಮೇಲೆ ನಾರದ ಮೊದಲಿನಂತೆ ಬುದ್ಧಿಯನ್ನು ಪಡೆದ.ಬುದ್ಧಿಸ್ತಿಮಿತವಿಲ್ಲದೆ ಏನೇನೋ ಮಾತಾಡಿಬಿಟ್ಟೆ ಎಂದು ವ್ಯಥಿಸಿದ. ತನಗೆ ಭ್ರಾಂತಿ ಬಂದಿದ್ದು, ಅದರಿಂದಾದ ಅವಾಂತರವನ್ನೆಲ್ಲ ನೆನೆದು ನಾಚಿಕೆಪಟ್ಟ. ತನ್ನನ್ನು ತಾನು ನಿಂದಿಸಿಕೊಂಡ. ಜ್ಞಾನಿಗಳಿಗೂ ಮಂಕುಹಿಡಿಸುವ ಶಿವನ ಮಾಯೆಯನ್ನು ನೆನೆದು, ಶಿವನ ಮಹಿಮೆಯನ್ನು ಹೊಗಳಿದ.

ನಂತರ ವಿಷ್ಣುವಿನ ಭಕ್ತಾಗ್ರೇಸರನಾದ ನಾರದಮಹರ್ಷಿಯು ತನ್ನ ಮಂಕುತನದಿಂದ ವಿಷ್ಣುವನ್ನು ನಿಂದಿಸಿದ್ದನ್ನು ತಿಳಿದು, ಪಶ್ಚಾತ್ತಾಪಪಟ್ಟ. ಶ್ರೀಮನ್ನಾರಾಯಣನ ಪಾದಗಳ ಮೇಲೆ ಬಿದ್ದು ಕ್ಷಮೆ ಬೇಡಿದ. ಕ್ಷಮೆ ಬೇಡುತ್ತಿದ್ದ ನಾರದನನ್ನು ವಿಷ್ಣು ಮೇಲೆತ್ತಿ ಕುಳ್ಳಿರಿಸಿದ. ಆದರೆ ನಾರದ ತನ್ನ ಕೆಟ್ಟಬುದ್ಧಿಯಿಂದಾದ ಪ್ರಮಾದಕ್ಕೆ ಪರಿತಪಿಸುತ್ತಿದ್ದ. ತನ್ನ ಸಲ್ಲದ ಮಾತುಗಳೆಲ್ಲವೂ ತೊಲಗಬೇಕೆಂದು ನಾರದ ಕೈವಲ್ಯಪತಿಯಾದ ವಿಷ್ಣುವನ್ನು ಪ್ರಾರ್ಥಿಸಿದ. 'ಭ್ರಮಾಮೋಹಿತನೂ ಕೆಟ್ಟಬುದ್ಧಿಯುಳ್ಳವನೂ ಆದ ನಾನು, ನಿನ್ನ ವಿಷಯದಲ್ಲಿ ಕೆಟ್ಟ ಮಾತುಗಳನ್ನು ಆಡಿಬಿಟ್ಟೆ. ಅಲ್ಲದೆ, ನಿನಗೆ ಶಾಪವನ್ನೂ ಕೊಟ್ಟುಬಿಟ್ಟೆ. ಆ ಶಾಪವು ನಿನಗೆ ತಟ್ಟದೆ, ವ್ಯರ್ಥವಾಗುವಂತೆ ಮಾಡು. ನಾನು ಮಹಾಪಾಪವನ್ನು ಮಾಡಿಬಿಟ್ಟೆ. ಖಂಡಿತವಾಗಿಯೂ ನನಗೆ ನರಕವೆ ಸಿಗಲಿದೆ' ಎಂದು ಪ್ರಲಾಪಿಸಿದ.

'ಓ ಹರೀ! ನಾನು ಮಾಡಿರುವ ಪಾಪಕಾರ್ಯ ಕೊನೆಯಾಗಲು ಯಾವ ಪರಿಹಾರೋಪಾಯವನ್ನು ಮಾಡಲಿ? ನಾನು ನಿನ್ನ ಸೇವಕ, ಅಪ್ಪಣೆ ಮಾಡು. ನಾನು ಮಾಡಿದ ಈ ಪಾಪರಾಶಿಯು ಹೇಗೆ ನಾಶವಾಗುವುದು? ನಾನು ನರಕದಿಂದ ಪಾರಾಗುವ ಮಾರ್ಗ ಯಾವುದು?' ಎಂದು ನಾರದ ವಿಷ್ಣುವಿನ ಪಾದ ಹಿಡಿದು ಗೋಳಾಡಿದ. ಆಗ ನಾರದನನ್ನು ಮೇಲಕ್ಕೆಬ್ಬಿಸಿದ ವಿಷ್ಣು, ಪ್ರಿಯವಾದ ಮಾತುಗಳನ್ನಾಡಿ ಸಂತೈಸಿದ.

'ಓ ಭಕ್ತಾಗ್ರೇಸರ, ನೀನು ವ್ಯಥೆಪಡಬೇಡ. ನೀನು ಶ್ರೇಷ್ಠ ಯತಿ. ನೀನೆಂದಿಗೂ ನರಕಕ್ಕೆ ಹೋಗಲಾರೆ. ಶಿವ ನಿನಗೆ ಒಳ್ಳೆಯದನ್ನು ಮಾಡುತ್ತಾನೆ. ನೀನು ಅಹಂಕಾರದಿಂದ ಮೈಮರೆತು ಶಿವನ ಮಾತನ್ನು ಕಡೆಗಾಣಿಸಿದೆ. ಆದುದರಿಂದಲೇ ಶಿವನು ನಿನಗೆ ಇಂತಹ ಪ್ರತಿಫಲವನ್ನು ನೀಡಿದ. ಇದೆಲ್ಲವೂ ಶಿವನ ಇಚ್ಛೆಯಿಂದಲೇ ನಡೆಯಿತೆಂದು ತಿಳಿದುಕೋ. ಎಲ್ಲರಿಗೂ ಪ್ರಭುವಾದ ಆ ಶಂಕರನು ದುರಹಂಕಾರವನ್ನು ಅಣಗಿಸಿಬಿಡುವನು. ಆತನೇ ಪರಬ್ರಹ್ಮನು, ಸಚ್ಚಿದಾನಂದಸ್ವರೂಪನಾದ ಪರಮಾತ್ಮನು, ಗುಣಶೂನ್ಯನು, ವಿಕಾರರಹಿತನು. ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳಿಗೂ ಮೀರಿದವನು. ಆ ಶಿವನೇ ತನ್ನ ಮಾಯೆಯಿಂದ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮೂರು ರೂಪಗಳನ್ನು ಧರಿಸುತ್ತಾನೆ. ಅವನು ನಿರ್ಗುಣನೂ ಸಗುಣನೂ ಆಗಿರುವನು. ನಿರ್ಗುಣತ್ವದ ಅವಸ್ಥೆಯಲ್ಲಿ ಶಿವನೆಂದು ಹೆಸರನ್ನು ಪಡೆದ ಪರಮಾತ್ಮನಾದ ಆ ಮಹೇಶ್ವರನು ಪರಬ್ರಹ್ಮ, ಅವ್ಯಯ, ಅನಂತ, ಮಹಾದೇವ ಎಂಬುದಾಗಿಯೂ ಕರೆಯಲ್ಪಡುತ್ತಾನೆ. ಶಿವನನ್ನು ಸೇವಿಸಿಯೇ ಬ್ರಹ್ಮ ಜಗತ್ತಿಗೆ ಸೃಷ್ಟಿಕರ್ತನಾದ. ನಾನು ಅದನ್ನು ಕಾಪಾಡುವವನಾದೆ. ಆ ಶಿವನು ತಾನಾಗಿಯೇ ರುದ್ರರೂಪವನ್ನು ಧರಿಸಿ ಇವೆಲ್ಲವನ್ನೂ ಸಂಹರಿಸುವವನಾದ' ಎಂದು ವಿಷ್ಣುವು ಶಿವನ ಮಹಿಮೆಯನ್ನು ನಾರದನಿಗೆ ತಿಳಿಸುತ್ತಾನೆ.

ಸರ್ವ ಪಾಪಗಳನ್ನೂ ಹೋಗಲಾಡಿಸುವ ಮತ್ತು ಭೋಗಗಳನ್ನೂ ಮೋಕ್ಷವನ್ನೂ ಕೊಡುವ ಒಂದು ಒಳ್ಳೆಯ ಉಪಾಯವನ್ನು ನಾರದನಿಗೆ ವಿಷ್ಣು ಹೇಳುತ್ತಾನೆ. 'ನಿನ್ನ ಮನದಲ್ಲಿರುವ ಸಂಶಯವೆಲ್ಲನ್ನೂ ಬಿಟ್ಟು, ಶಂಕರನ ಸತ್ಕೀರ್ತಿಯನ್ನು ಮಾಡು. ಯಾವುದನ್ನು ಜಪಿಸಿದರೆ ನಿನ್ನ ಪಾಪವೆಲ್ಲವೂ ಬಹು ಬೇಗನೇ ನಾಶವಾಗುವುದೋ ಅಂತಹ ಶಿವಶತನಾಮ ಸ್ತೋತ್ರವನ್ನು ಅನನ್ಯ ಮನಸ್ಸಿನಿಂದ ಸದಾ ಜಪಿಸುತ್ತಿರು' ಎಂದು ವಿಷ್ಣು ಪರಿಹಾರ ಸೂಚಿಸಿದರೂ, ನಾರದನಿಗೆ ಸಮಾಧಾನವಾಗದೆ ರೋದಿಸುತ್ತಿದ್ದ.

# ಶಿಕ್ಷಣದಲ್ಲಿ ಭಗವದ್ಗೀತೆ ಬೇಡವೇ?

• ನಾರಾಯಣ ಶೇವರೆ



ವಿದ್ವೇಷದ ಸಂದರ್ಭದಲ್ಲಿ ಅದಕ್ಕೆ ಭಿನ್ನವಾಗಿ ವಿರೋಧಿಯನ್ನು ದ್ವೇಷವಿಲ್ಲದೆ, ಕರ್ತವ್ಯದ ನೆಲೆಯಲ್ಲಿ ನಿರ್ವಹಿಸುವ ಶಾಸ್ತ್ರವೊಂದು ದ್ವೇಷಮುಕ್ತ ಸಮಾಜದ ನಿರ್ಮಾಣಕ್ಕಾಗಿ ಅವಶ್ಯ ಬೇಕು. ಗೀತೆ ಅಂಥ ಒಂದು ಅವಶ್ಯ ಆಕರ

ಮಹಾಭಾರತದ ಭೀಷ್ಮಪರ್ವದಲ್ಲಿ ಬರುವ ಭಗವದ್ಗೀತೆ ಅದರ ಒಂದು ಅವಿಭಾಜ್ಯ ಅಂಗವೇ ಆಗಿದೆ. ಮಹಾಭಾರತವನ್ನು ಬಿಟ್ಟು ಭಗವದ್ಗೀತೆಯನ್ನು ಚಿಂತಿಸಲಾಗದು. ಭಗವದ್ಗೀತೆಯನ್ನು ಹೊರತಾಗಿಸಿ ಮಹಾಭಾರತವನ್ನೂ ನೋಡಲಾಗದು. ಅಂಥ ಅವಿನಾಭಾವ ಸಂಬಂಧ ಅವೆರಡರೊಳಗಿನದು.

ಗೀತೆ, ಭೀಷ್ಮಪರ್ವದಲ್ಲಿ ಬರುತ್ತದೆ ಎಂಬುದೇ ವಿಶೇಷ. ಗೀತೆಯು ಕೃಷ್ಣ ಮತ್ತು ಅರ್ಜುನರ ಸಂವಾದವಾಗಿದೆ. ಅದರೆ, ಇವರ ಸಂವಾದದ ಮಧ್ಯೆಯೇ ಒಮ್ಮೆ ಧೃತರಾಷ್ಟ್ರ ಮತ್ತು ಪದೇಪದೇ ಸಂಜಯ ಬಂದುಹೋಗುತ್ತಾರೆ. ಇಲ್ಲಿ ಪಾಂಡವರು ಮತ್ತು ಕೌರವರು ಎರಡು ಪಕ್ಷಗಳಾಗಿ ಯುದ್ಧಕ್ಕೆ ನಿಂತಿದ್ದಾರೆ. ಪಾಂಡವರಿಗೆ ಬೆಂಬಲವಾಗಿ ಕೃಷ್ಣ ನಿಂತಿದ್ದಾನೆ. ಹೀಗೆ ಕೃಷ್ಣಾರ್ಜುನರು ಒಂದು ಪಕ್ಷ. ಅವರ ವಿರುದ್ಧ ಇರುವ ಕೌರವನ ಬೆಂಬಲಕ್ಕೆ ಬಂದ ಭೀಷ್ಮ ಇನ್ನೊಂದು ಪಕ್ಷ. ಆದರೆ ಗೀತೆಯು ಪ್ರತ್ಯೇಕ ಪರ್ವವಾಗದೆ, ಕೃಷ್ಣಾರ್ಜುನರ ಎದುರಾಳಿ ಪಕ್ಷದವನಾದ ಭೀಷ್ಮಪರ್ವದಲ್ಲಿ ಬರುತ್ತದೆ. ಇದು ಗೀತೆಯ ಒಳಗೊಳ್ಳುವಿಕೆಯ ಗುಣವನ್ನು ಸೂಚಿಸುವಂತಿದೆ. ಎಲ್ಲರನ್ನೂ ಒಳಗೊಳ್ಳುವ ಸಂಗತಿಯಲ್ಲವೇ ತತ್ತ್ವವೆಂದೆನಿಸಿಕೊಳ್ಳುವುದು? ಮತ್ತು ಅಂಥ ತತ್ತ್ವ ವಿಚಾರವಲ್ಲವೇ ಪೀಳಿಗೆಯನ್ನು ತಯಾರುಮಾಡುವ ಶಿಕ್ಷಣದ ಅಂಗವಾಗಬೇಕಾದುದು?

ನಮ್ಮ ತತ್ತ್ವಪರಂಪರೆಯಲ್ಲಿ ವಿರೋಧಭಕ್ತಿಗೂ ಸ್ಥಾನವಿದೆ. ಇನ್ನಾವುದೇ ಪರಂಪರೆಯಲ್ಲಿ ಲಭ್ಯವಾಗದ ಸ್ಥಾನವಿದು. ಶ್ರೀಹರಿಯ ದ್ವಾರಪಾಲಕರಾದ ಶಪ್ತ ಜಯವಿಜಯರು ತಮ್ಮ ಆರಾಧ್ಯವಸ್ತುವನ್ನು ಶೀಘ್ರ ಹೊಂದಲು ಆಯ್ದುಕೊಂಡದ್ದು, ಅದೇ ಆರಾಧ್ಯವಸ್ತುವನ್ನು ದ್ವೇಷಿಸುವ ಜನ್ಮಗಳನ್ನು.

ಮಹಾಭಾರತವು ಇನ್ನೊಂದು ಬಗೆಯ ವಿರೋಧಭಕ್ತಿಯನ್ನು ಕಟ್ಟಿಕೊಟ್ಟಿದೆ. ಇಲ್ಲಿ ಭೀಷ್ಮ ಕೃಷ್ಣಭಕ್ತ. ಅವನಿಗೆ ತನ್ನ ಮೊಮ್ಮಕ್ಕಳಾದ ಪಾಂಡವರ ಮೇಲೂ ಪ್ರೀತಿ ಇದೆ. ಆದರೆ ಕೌರವಪಾಳಯವನ್ನು ಬಿಡಲಾಗದ ಅನಿವಾರ್ಯತೆಯಿದೆ. ಯುದ್ಧಭೂಮಿಯಲ್ಲಿ ತನ್ನ ಗುರುಹಿರಿಯರನ್ನು, ಮುಖ್ಯವಾಗಿ ಭೀಷ್ಮನನ್ನು ನೋಡಿ ಅರ್ಜುನ ಮೈಬಸವಳಿದುಹೋದವನಂತಾದ. ಯುದ್ಧವಿಮುಖನಾದ. ಅಂಥ ಅರ್ಜುನನ್ನು ಯುದ್ಧೋನ್ಮುಖನನ್ನಾಗಿಸಿ ತನ್ನ ಭಕ್ತನೆನಿಸಿದ ಭೀಷ್ಮನನ್ನು ಒರಗಿಸುತ್ತಾನೆ ಕೃಷ್ಣ. ತನ್ನ ಆರಾಧ್ಯವಸ್ತುವನ್ನು ಯುದ್ಧಾಂಗಣದಲ್ಲಿ ವಿರೋಧಿಸಿಯೂ ಭಕ್ತಿಯನ್ನು ಕಾಪಿಟ್ಟುಕೊಳ್ಳಬಲ್ಲ ಭೀಷ್ಮನೊಂದು ಕಡೆ. ಭಕ್ತನೇ ಆದರೂ, ಧರ್ಮಿಯೇ ಆದರೂ ಅಧರ್ಮದ ಪಕ್ಷದಲ್ಲಿದ್ದರೆ ಒರಗಿಸುವ ಕೃಷ್ಣ ಇನ್ನೊಂದು ಕಡೆ. ಬದುಕಿನಲ್ಲಿ ಒದಗಬಹುದಾದ ಧರ್ಮಜಿಜ್ಞಾಸೆಗೆ, ಧರ್ಮಸೂಕ್ಷ್ಮತೆಗೆ ಇಲ್ಲೊಂದು ಪರಿಹಾರದ ದಿಕ್ಸೂಚಿ ಇದೆಯೆಂದೆನಿಸುವುದಿಲ್ಲವೇ? ಇಂಥ ದಿಕ್ಸೂಚಿಯನ್ನು ನೀಡಬೇಕಾದುದು ಶಿಕ್ಷಣದ ಕರ್ತವ್ಯವೂ ಹೌದು.

ಗೀತೆಯನ್ನು ಯುದ್ಧಪ್ರಚೋದಕವೆಂದು ಕೆಲವರು ಆಕ್ಷೇಪಿಸುವುದಿದೆ. ಆ ಉದ್ದೇಶವಿದ್ದಂತೆ ತೋರುವುದಿಲ್ಲ. ಅದೇ ಅದರ ಉದ್ದೇಶವಾಗಿದ್ದರೆ ಅರ್ಜುನನನ್ನು ಪ್ರಚೋದಿಸಲು ಕೃಷ್ಣನ ಬಳಿ ಅದೆಷ್ಟು ಸರಕುಗಳಿರಲಿಲ್ಲ! ವಿಷತಿನ್ನಿಸಿದ್ದು, ಅರಗಿನಮನೆಯನ್ನು ಸುಟ್ಟು ಕೊಲ್ಲಹೊರಟಿದ್ದು, ಮೋಸದ ಜೂಜಾಡಿ ರಾಜ್ಯವನ್ನೇ ಅಪಹರಿಸಿದ್ದು, ಪತ್ನಿಯ ಮಾನಭಂಗಗೈದಿದ್ದು... ಒಂದೇ ಎರಡೇ! ಇವುಗಳಲ್ಲಿ ಯಾವುದೇ ಒಂದನ್ನು ನೆನಪಿಸಿದರೂ ಸಾಕು, ಮತ್ತೆ ಯುದ್ಧಪ್ರಚೋದನೆಯ ಬೇರೆ ವಾಕ್ಯಗಳು ಬೇಕಾಗಿ ಬರವು. ಆದರೆ ಕೃಷ್ಣ ಇವುಗಳ ಉಸಾಬರಿಗೇ ಹೋಗದೆ, ಯುದ್ಧವಿಮುಖನಾಗಿ ನಿರ್ವೀರ್ಯನಂತೆ ಕುಸಿದಿದ್ದ ಅರ್ಜುನನಿಗೆ ಆತ್ಮತತ್ತ್ವವನ್ನು ಬೋಧಿಸುತ್ತ ಅದರ ಆಧಾರದಲ್ಲಿ ಇಹದ ಕರ್ತವ್ಯವನ್ನು ನೆನಪಿಸಿದ.

ಸುಮ್ಮನೆ ಇದ್ದವರ ಮೇಲೆ ಯುದ್ಧಸಾರಲು ಪ್ರಚೋದಿಸಿದರೆ ಅದು ಯುದ್ಧಪ್ರಚೋದಕವಾದೀತು. ತನ್ನ ಮೇಲೆ ಯುದ್ಧಘೋಷಣೆಯಾದಾಗ ಅದಕ್ಕೆ ವಿಮುಖನಾದವನನ್ನು ಯುದ್ಧಮಾಡುವಂತೆ ಪ್ರಚೋದಿಸಿದರೆ ಅದು ಯುದ್ಧಪ್ರಚೋದಕವಲ್ಲ, ಕರ್ತವ್ಯಪ್ರಚೋದಕವಾಗುತ್ತದೆ. ಪಾಂಡವರ ಮೇಲೆ ಯುದ್ಧವು ಹೇರಲ್ಪಟ್ಟಿತೇ ವಿನಾ ಅವರೇ ಯುದ್ಧವನ್ನು ಹೇರಿದವರಲ್ಲವಲ್ಲ! ಯುದ್ಧದಂಥ ಸಂದರ್ಭದಲ್ಲಿ ದ್ವೇಷಭಾವದಿಂದ ಕರ್ತವ್ಯವನ್ನು ಪ್ರಚೋದಿಸಬಹುದು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಕೃಷ್ಣ ತೊಡಗಿದ್ದರಿಂದ ಕೃಷ್ಣಾರ್ಜುನಸಂವಾದವು ಬರಿಯ ಸಂವಾದವಾಗದೆ ಭಗವದ್ಗೀತೆಯಾಯಿತು.

ಇಂದಿನ ಉದ್ಯೋಗಮುಖೀ ಶಿಕ್ಷಣವ್ಯವಸ್ಥೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಕ್ಷಾರ್ಥಿಗಿಂತ ಹೆಚ್ಚಾಗಿ ಉದ್ಯೋಗಾರ್ಥಿಯೆನಿಸಿಕೊಂಡಿದ್ದಾನೆ. ಪ್ರತಿಯೊಬ್ಬನಿಗೂ ಪ್ರತಿಯೊಬ್ಬನೂ ಪ್ರತಿಸ್ಪರ್ಧಿಯೆಂದೇ ತೋರುತ್ತಾನೆ. ಶಾಲೆಗೆ ಪ್ರವೇಶಪಡೆಯುವಲ್ಲಿಂದ ಹಿಡಿದು ಉದ್ಯೋಗದಲ್ಲಿ ಬಡ್ತಿ ಪಡೆಯುವವರೆಗೆ ಎಲ್ಲರಿಗೆ ಜತೆಗಿರುವ ಉಳಿದೆಲ್ಲರೂ ಪ್ರತಿಸ್ಪರ್ಧಿಗಳೇ. ಇಂಥ ಪೈಪೋಟಿಯ ವ್ಯವಸ್ಥೆಯೇ ದೋಷದಿಂದ ಕೂಡಿದ್ದು. ಅಂಥಲ್ಲಿ ಸ್ಪರ್ಧೆ ಹುಟ್ಟುಹಾಕಬಲ್ಲ ದ್ವೇಷವನ್ನು ಇಲ್ಲವಾಗಿಸಲು ಗೀತೆಯಷ್ಟು ಸಹಾಯಕ ಇನ್ನಾವುದಿದ್ದೀತು? ವಿದ್ವೇಷದ ಸಂದರ್ಭದಲ್ಲಿ ಅದಕ್ಕೆ ಭಿನ್ನವಾಗಿ ವಿರೋಧಿಯನ್ನು ದ್ವೇಷವಿಲ್ಲದೆ, ಕರ್ತವ್ಯದ ನೆಲೆಯಲ್ಲಿ ನಿರ್ವಹಿಸುವ ಶಾಸ್ತ್ರವೊಂದು ದ್ವೇಷಮುಕ್ತ ಸಮಾಜದ ನಿರ್ಮಾಣಕ್ಕಾಗಿ ಅವಶ್ಯ ಬೇಕು. ಗೀತೆ ಅಂಥ ಒಂದು ಅವಶ್ಯ ಆಕರ.

ಇಂದು ನಾವು ಯಾವುದೇ ಕೆಲಸಮಾಡಹೊರಟರೂ ಏನು ಲಾಭ ಎಂದೇ ಲೆಕ್ಕಾಚಾರದಲ್ಲಿ ಮುಳುಗುತ್ತೇವೆ. ಶಿಕ್ಷಣ ಪಡೆಯುವುದೇ ಹೆಚ್ಚು ಸಂಬಳದ ಉದ್ಯೋಗಕ್ಕಾಗಿ ಎಂಬ ಲೆಕ್ಕಾಚಾರವಿದೆ. ಇಂಥಲ್ಲಿ ಲಾಭನಷ್ಟದ ಲೆಕ್ಕಾಚಾರಕ್ಕಿಂತ ಆಚೆನಿಂತು ಯೋಚಿಸಬಲ್ಲ ವ್ಯಕ್ತಿಗಳ ನಿರ್ಮಾಣ ಮಾಡಬೇಕಾದ ಆವಶ್ಯಕತೆಯಿದೆ. ಅದನ್ನು ಪೂರೈಸಬಲ್ಲುದು ಗೀತೆ.

ಪಠ್ಯಕ್ರಮದಲ್ಲಿ ಆಯಾ ದೇಶಗಳ ಪರಂಪರೆ, ಮತ ಇತ್ಯಾದಿಗಳಿಗೆ ಸಂಬಂಧಿಸಿದ ಅಂಶಗಳೂ ಇರಬೇಕೆಂಬುದು ಬಹುತೇಕ ಎಲ್ಲ ದೇಶಗಳಲ್ಲಿ ಪಾಲಿಸಿಕೊಂಡು ಬರಲಾಗುತ್ತಿರುವ ನಿಯಮ. ಶ್ರೀಲಂಕಾದ ವಿದ್ಯಾರ್ಥಿಗಳು ಬೌದ್ಧಮತದ ವಿಚಾರಗಳನ್ನು ಅರಿತುಕೊಳ್ಳದೆ ಶಿಕ್ಷಣ ಪೂರ್ತಿಯಾಗುವುದಿಲ್ಲ. ತೀರಾ ಸೆಕ್ಯುಲರ್ ಎಂದುಕೊಳ್ಳುವ ಅಮೆರಿಕ, ಇಂಗ್ಲೆಂಡ್ ಮತ್ತಿತರ ಐರೋಪ್ಯ ದೇಶಗಳಲ್ಲಿ ಕೂಡಾ ಬೈಬಲ್‌ನ ವಿಷಯವಿಲ್ಲದೆ ಶಾಲಾಶಿಕ್ಷಣ ಪೂರೈಸಲ್ಪಡುವುದಿಲ್ಲ. ಆದರೆ ಅಲ್ಲಿಂದಲೇ ತಪ್ಪಾಗಿ ಇಲ್ಲಿಗೆ ಬಂದ ಸೆಕ್ಯುಲರ್‌ನ ಹೆಸರಿನಲ್ಲಿ ಭಾರತೀಯವಾದುದನ್ನೆಲ್ಲ ತಿರಸ್ಕರಿಸುವ, ತುಚ್ಛೀಕರಿಸುವ ಜಾಯಮಾನ ಬೆಳೆದಿದೆ.


ಸೆಕ್ಯುಲರ್ ಹೆಸರಿನಲ್ಲಿ ಮತ್ತೊಂದು ವಾದವೂ ಕೆಲಸ ಮಾಡುತ್ತಿದೆ. ಅದೆಂದರೆ; ಗೀತೆ ಇರಲಿ, ಜತೆಗೆ ಬೈಬಲ್ ಮತ್ತು ಕುರಾನ್ ಕೂಡಾ ಇರಲಿ. ಅಚ್ಚರಿ ಎಂದರೆ ಈ ವಾದವು ಸಿಖ್ಖರನ್ನೂ, ಬೌದ್ಧರನ್ನೂ, ಜೈನರನ್ನೂ ಹಿಂದುಗಳಲ್ಲವೆಂದು ಸಮರ್ಥಿಸುತ್ತಲೇ ಅವರಾರ ಮತಗ್ರಂಥಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸುವ ಆಗ್ರಹವನ್ನು ತೋರುವುದಿಲ್ಲ. ಅವರೆಲ್ಲರ ಆಗ್ರಹ ಎರಡು ಸೆಮೆಟಿಕ್ ರಿಲಿಜನ್ನಿಗೆ ಮುಗಿದುಹೋಗುತ್ತದೆ.

ನಿಜಕ್ಕಾದರೆ ಗೀತೆಯನ್ನು ಈ ವಾದದ ಅಡಿಯಲ್ಲಿ ನೋಡಲೇಬಾರದು. ಕ್ರೈಸ್ತ ರಿಲಿಜನ್ ಬಗ್ಗೆ ಬೈಬಲ್ ಅತ್ಯಂತ ಸ್ಪಷ್ಟವಾಗಿ ಆಗ್ರಹಿಸುತ್ತದೆ. ಹಾಗೆಯೇ ಇಸ್ಲಾಮಿನ ಶ್ರೇಷ್ಠತೆಯನ್ನು ಕುರಾನ್ ಯಾವುದೇ ಗೊಂದಲವಿಲ್ಲದೆ ಸಾರುತ್ತದೆ. ಆದರೆ ಇಡಿಯ ಗೀತೆಯಲ್ಲಿ ಎಲ್ಲಿಯೂ ಹಿಂದೂ ಎಂಬ ಪದವಾಗಲೀ, ದೇಶವಾಚಕವಾಗಿ ಭಾರತದ ಉಲ್ಲೇಖವಾಗಲೀ ಇಲ್ಲ. ಅದು ಯಾವುದೇ ವಾದವನ್ನಾಗಲೀ ಸಿದ್ಧಾಂತವನ್ನಾಗಲೀ ಹೇಳುತ್ತಿಲ್ಲ. ಯಾವುದೇ ಪಂಥವನ್ನಾಗಲೀ ಮತವನ್ನಾಗಲೀ ಸ್ಥಾಪಿಸುತ್ತಿಲ್ಲ. ಅದು ಅದ್ವೈತವನ್ನಾಗಲೀ ವಿಶಿಷ್ಟಾದ್ವೈತವನ್ನಾಗಲೀ ದ್ವೈತವನ್ನಾಗಲೀ ಸಮರ್ಥಿಸುತ್ತಿಲ್ಲ. ಆದರೆ ಅದರಿಂದ ಅದ್ವೈತಾದಿ ಎಲ್ಲ ದರ್ಶನಗಳನ್ನೂ ಕಂಡುಕೊಳ್ಳಲು ಸಾಧ್ಯ. ಮನಃಶಾಸ್ತ್ರವನ್ನು ರೂಪಿಸಿಕೊಳ್ಳಲು ಸಾಧ್ಯ. ಬದುಕಿನ ಕಲೆಯನ್ನು ಕಲಿತುಕೊಳ್ಳಲು ಸಾಧ್ಯ. ಹೀಗೆ ಯಾವುದೇ ಒಂದು ನಿರ್ದಿಷ್ಟ ವಿಷಯಕ್ಕೆ ಅಂಟಿಕೊಳ್ಳದೆ, ಎಲ್ಲವನ್ನೂ ಸರ್ಜಿಸಬಲ್ಲ, ಎಲ್ಲವನ್ನೂ ಒಳಗೊಳ್ಳಬಲ್ಲ ಗೀತೆಯು ಪ್ರಪಂಚದೆಲ್ಲೆಡೆಯ ಪಠ್ಯಕ್ರಮದ ಭಾಗವಾಗಲು ಯೋಗ್ಯತೆ ಇರುವಂಥದ್ದು. ಅಂಥ ಗೀತೆಗೆ ಅದರ ಹುಟ್ಟೂರಲ್ಲಿಯೇ ಬೌದ್ಧಿಕವಲಯದ ವಿರೋಧವಿರುವುದು ನಿಜಕ್ಕೂ ವಿರೋಧಾಭಾಸ.

ಲೇಖಕರು: ಗುರುಕುಲ ವಿಭಾಗದ ಪ್ರಮುಖ ಹಾಗೂ ಅಖಿಲ ಭಾರತ ಸಾಹಿತ್ಯ ಘಟಕದ ಸಂಚಾಲಕರು

## ಪದಬಂಧ 4909

– ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

1.ಜಗಳಕ್ಕೊಂದು ಪರ್ಯಾಯ ಪದ (3)
4.ಸಭೆಯಲ್ಲಿರುವ ಸದಸ್ಯ (4)
6.ರಾತ್ರಿ ವೇಳೆ ಸಂಚರಿಸುವಂಥ ದೆವ್ವ, ಭೂತ ಇತ್ಯಾದಿ (4)
8.ಉಚಿತ ಎಂದರೂ ಇದು ನಿಶ್ಚಿತವಾದದ್ದು! (3)
11.ಗುಲಾಬಿ ತಂದಿರುವ ಸೇವಕ (3)
13.ಈ ಪರಿಯಾಗಿ ಅಪಹಾಸ್ಯ ಬಂದಿದೆಯಲ್ಲಾ! (4)
17.ವೀರಾಜಮಾನವಾದ ಚಕ್ರವರ್ತಿ (4)
18.ಕೊಡತಕ್ಕ ಶುಲ್ಕ (3)

**ಮೇಲಿಂದ ಕೆಳಕ್ಕೆ**

1.ಕರು ನೋಡಿದರೆ ಹೊಟ್ಟೆಕಿಚ್ಚು! (3)
2.ನಗುವ ವದನ (4)
3.ಕನ್ನಡಿಗ ಹಿಡಿದಿರುವ ಸ್ಪೂನ್! (3)
5.ನಾದಿನಿಯ ಸ್ವರ! (2)
7.ರೀತಿಯೊಡನೆ ಬರುವ ಜೋಡುನುಡಿ (3)
9.ತರಗತಿಯ ಮುಂದಿರುವ ಒಣಗಿದ ಎಲೆ (3)
10.ತಾಪ ಏರಿದಾಗ ತೋರಿಸಿದ ಶೌರ್ಯ (3)
12.ಮಹಾರಾಜರ ಎದುರಿಗೇ ಈ ಪಂಚನಾಮೆ! (4)
14.ಕುದುರೆಯನ್ನೇರುವ ಬಳೆ (3)
15.ಬೆಸವಲ್ಲದ ಸಂಖ್ಯೆ (2)
16.ಗೋವಿನ ಹತ್ತಿರದ ಕಣಜ (3)

**4908ನೇ ಪದಬಂಧದ ಉತ್ತರ**

ಎಡದಿಂದ ಬಲಕ್ಕೆ:
1.ಸುಲಭೋಪಾಯ
4.ಕುಹಕಿ5.ಶಹರು
6.ಹುತಾತ್ಮ8.ಮಯ
9.ಬಾಕು11.ಮಂದಿರ
14.ವಿಳಾಸ15.ಒನಕೆ
16.ನವೀಕರಣ
ಮೇಲಿಂದ ಕೆಳಕ್ಕೆ:
1.ಸುಸಂಬದ್ಧ
2.ಭೋಜನಾಲಯ
3.ಯಶಸ್ಸು4.ಕುರುಹು
7.ತಾರೀಕು8.ಮಡದಿ
9.ಬಾಲಬಡಿಕ
10.ಕಡುಜಾಣ12.ರವಿಕೆ
13.ವ್ಯಸನ

## ಸುಡೊಕು 5295

| | | | | | | | | |
|---|---|---|---|---|---|---|---|---|
| | | 7 | | 8 | | | 2 | |
| | | | | | | | 7 | 8 |
| 6 | | 5 | | 9 | | 4 | | |
| | 2 | | 6 | | | | 3 | |
| 5 | | 3 | 2 | | 1 | 8 | | 9 |
| | 1 | | | | 9 | | 4 | 2 |
| | 6 | | | 2 | | | | 4 |
| 3 | | 8 | 9 | | | | 5 | |
| | 5 | | | | 4 | | | 1 |

**5294 ಸುಡೊಕು**

| | | | | | | | | |
|---|---|---|---|---|---|---|---|---|
| 1 | 8 | 3 | 5 | 2 | 6 | 9 | 4 | 7 |
| 2 | 9 | 5 | 3 | 4 | 7 | 1 | 8 | 6 |
| 7 | 6 | 4 | 9 | 8 | 1 | 5 | 2 | 3 |
| 9 | 1 | 6 | 4 | 7 | 5 | 2 | 3 | 8 |
| 3 | 4 | 7 | 2 | 9 | 8 | 6 | 1 | 5 |
| 5 | 2 | 8 | 6 | 1 | 3 | 7 | 9 | 4 |
| 8 | 3 | 1 | 7 | 5 | 9 | 4 | 6 | 2 |
| 6 | 5 | 2 | 1 | 3 | 4 | 8 | 7 | 9 |
| 4 | 7 | 9 | 8 | 6 | 2 | 3 | 5 | 1 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮಾರ್ಚ್ 26, 2022

**ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮೀನ ಮಾಸದ 12 ನೇ ದಿನ ತಿಥಿ:** (ಫಾಲ್ಗುಣ ಕೃಷ್ಣ) ನವಮಿ ಗಂ. 20-02 ನಕ್ಷತ್ರ: ಪೂರ್ವಾಷಾಢಾ ಗಂ. 14-47 ಯೋಗ: ಪರಿಘ ಗಂ. 22-58, ಕರಣ: ತೈತಲ ಗಂ. 09-03. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-34 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ : 22 ಶಬನ್ ಅದೃಷ್ಟ ಸಂಖ್ಯೆ: 6, 11

**ಮೇಷ:** ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳ. ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವ ಪ್ರಯತ್ನದಿಂದಾಗಿ ಶ್ರೀಮಂತಿಕೆಯನ್ನು ಗಳಿಸಬಹುದು.

**ವೃಷಭ:** ಕೋರ್ಟು ವ್ಯವಹಾರದಲ್ಲಿ ಬಹುನಿರೀಕ್ಷಿತವಾದ ಜಯದ ಸಿಹಿಯನ್ನು ಅನಿರೀಕ್ಷಿತವಾದ ಸೋಲಿನ ಕಹಿ ಕಸಿಯುವ ಸಾಧ್ಯತೆ. ಸರ್ಕಾರಿ ಅಧಿಕಾರಿಗಳಿಗೆ ವರ್ಗಾವಣೆ ಸಾಧ್ಯತೆ. ಕೃಷಿ ಕೆಲಸಗಳಿಗೆ ಹೆಚ್ಚಿನ ಸಮಯ ಸಿಗುವುದು.

**ಮಿಥುನ:** ಎಣ್ಣೆಯಲ್ಲಿ ಕರಿದ ಖಾದ್ಯಗಳ ಸೇವನೆಯಿಂದ ಅನಾರೋಗ್ಯ. ಗುರುಗಳ ಮನಸ್ಸಿಗೆ ನೋವು ಉಂಟು ಮಾಡುವಂತಹ ಕೆಲಸವನ್ನು ಮಾಡದಿರಿ. ಷೇರುಗಳಲ್ಲಿ ಹೂಡಿಕೆ ಮಾಡುವುದು ಸದ್ಯದ ಪರಿಸ್ಥಿತಿಯಲ್ಲಿ ಲಾಭದಾಯಕವಲ್ಲ.

**ಕರ್ಕಾಟಕ:** ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತಸ. ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಕಾಳಜಿ ತೋರುವ ಅನಿವಾರ್ಯತೆ ಹೆಚ್ಚಲಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮನಸ್ಸಾಗುವುದು.

**ಸಿಂಹ:** ಕಟ್ಟಡದ ಕಂಟ್ರಾಕ್ಟರ್‌ಗಳಿಗೆ ಕೆಲಸಗಾರರ ಕೊರತೆ ಕಾಣಲಿದೆ ಅಥವಾ ಪರಿಣಿತ ಕೆಲಸಗಾರರ ಗೈರುಹಾಜರಿಯಿಂದ ನಷ್ಟ ಸಂಭವ. ಕುಟುಂಬದವರೊಡನೆ ಈ ದಿನದ ಸಂಜೆಯನ್ನು ಸಂತೋಷದಿಂದ ಕಳೆಯುವಂತಾಗಲಿದೆ.

**ಕನ್ಯಾ:** ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳಬೇಕಿದ್ದರೆ ಅವಿರತ ಶ್ರಮ ಅಗತ್ಯ. ವೃತ್ತಿಜೀವನದಲ್ಲಿ ನೀವು ಧೈರ್ಯದಿಂದ ಪರಿಣಾಮಕಾರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಆದರೆ ಯಾವುದೇ ಕೆಲಸ ಗುತ್ತಿಗೆ ನೀಡುವುದು ಸರಿಯಲ್ಲ.

**ತುಲಾ:** ಸಹವರ್ತಿಗಳ ಜೊತೆಯಲ್ಲಿ ಉತ್ತಮವಾದ ಸಂಪರ್ಕ ಬೆಳೆಸಿಕೊಳ್ಳುವುದು ಸುಲಭ ಸಾಧ್ಯ. ಹಣಕಾಸಿನ ವಿವಾದಗಳನ್ನು ಬಗೆಹರಿಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ನೆನಪಿನಶಕ್ತಿ, ಜ್ಞಾನ ದೊರೆತು ಆನಂದವಾಗಲಿದೆ.

**ವೃಶ್ಚಿಕ:** ದೈವಾನುಗ್ರಹದಿಂದ ಸಕಲ ಅಭೀಷ್ಟವು ಸಿದ್ಧಿಯಾಗಿ ಸಂತೃಪ್ತಿ. ಕೌಟುಂಬಿಕ ಸಮಸ್ಯೆಯು ನೂತನವಾದ ಆಯಾಮವನ್ನು ಹೊಂದಲಿದೆ. ಯೋಜನೆಗಳು ಪೂರ್ವ ನಿಯೋಜಿತವಾಗಿ ವ್ಯವಸ್ಥಿತ ರೂಪದಲ್ಲಿ ಸಾಗಲಿವೆ.

**ಧನು:** ಸಮಾಜದಲ್ಲಿ ಮೃದುಭಾಷಿ ಎನಿಸಿಕೊಳ್ಳುವಿರಿ. ಕುಟುಂಬ ನಿರ್ವಹಣೆಗಾಗಿ ಅಧಿಕ ಮಟ್ಟಿನ ಖರ್ಚು ಬಂದರೂ ಆದಾಯಕ್ಕೇನೂ ಕೊರತೆ ಇರುವುದಿಲ್ಲ. ಆರೋಗ್ಯ ಸುಧಾರಿಸಿ ಎಂದಿನಂತೆ ಕೆಲಸಕ್ಕೆ ತೆರಳುವಂತಾಗುತ್ತದೆ.

**ಮಕರ:** ನೀವು ವ್ಯವಹಾರವನ್ನು ವಿಸ್ತರಿಸುವ ಯೋಜನೆ ಹಾಕಿಕೊಂಡಿದ್ದರೆ ಅದನ್ನು ಅನುಷ್ಠಾನಕ್ಕೆ ತರಲು ಇದು ಸಕಾಲ. ನಿಮ್ಮ ಪರೋಪಕಾರದ ಸ್ವಭಾವವನ್ನು ಇತರರು ದುರುಪಯೋಗಪಡಿಸಿಕೊಳ್ಳದಂತೆ ಜಾಗೃತವಹಿಸಿ.

**ಕುಂಭ:** ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ. ಮನರಂಜನೆಗೂ ಸಾಕಷ್ಟು ಸಮಯವನ್ನು ಮೀಸಲಿಟ್ಟು ಸಂತಸದಿಂದಿರುವಂತೆ ಆಗುವುದು. ಔಷಧಿ ವಸ್ತುಗಳ ಮಾರಾಟದಿಂದ ಲಾಭ.

**ಮೀನ:** ನಿಮ್ಮ ನಿಷ್ಠೆ ಹಾಗೂ ಬುದ್ಧಿವಂತಿಕೆಗೆ ಒಳ್ಳೆಯ ಪ್ರತಿಫಲ ಸಿಗಲಿದೆ. ಹಣದ ವಿಷಯದಲ್ಲಿ ದಾಕ್ಷಿಣ್ಯದ ಮಾತುಗಳಿಗೆ ಮರುಳಾಗಬೇಡಿ. ಹುಡುಕಾಟದಲ್ಲಿ ಸತತ ಪ್ರಯತ್ನದಿಂದ ಕಳೆದು ಹೋಗಿದ್ದ ವಸ್ತುಗಳು ಸಿಕ್ಕಿ ಮನಸ್ಸಿಗೆ ಸಮಾಧಾನ.

**ಷೇರುಪೇಟೆ ವಹಿವಾಟು** ▼ 233

ಇಂದಿನ ಅಂತ್ಯ 57,362
57,595 ಹಿಂದಿನ ಅಂತ್ಯ

**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 17,222 |
| ಇಂದಿನ ಅಂತ್ಯ | 17,153 |
| ▼ | 69 |
| ದಿನದ ಕನಿಷ್ಠ | 17,076 |

**ವಿನಿಮಯ ದರ**

| | |
|---|---|
| $ ಡಾಲರ್ | 76.24 |
| £ ಪೌಂಡ್ | 100.32 |
| € ಯುರೊ | 83.85 |
| ¥ ಯೆನ್ (100ಕ್ಕೆ) | 62 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹420 |
| 12 ಮೊಟ್ಟೆಗೆ | ₹58 |
| ಮೈಸೂರು | |
| 100 ಮೊಟ್ಟೆಗೆ | ₹425 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1580 (1575) |
| ಸೋಯಾ (ರಿಫೈನ್ಡ್) | ₹1495 (1502) |
| ಸೂರ್ಯಕಾಂತಿ (ರಿಫೈನ್ಡ್) | ₹1750 (1825) |
| ಪಾಮೋಲಿನ್ | ₹1470 (1480) |

**ಈರುಳ್ಳಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1200-1600 |
| ಮಧ್ಯಮ | ₹800-1200 |
| ಸಣ್ಣ | ₹200-800 |

**ತೆಂಗು ಧಾರಣೆ (ಸಾವಿರಕ್ಕೆ)**

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹10000-16000

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಕೆ.ಆರ್. ಪೇಟೆ | ₹9254-9300 |
| ಪುತ್ತೂರು | ₹4000-10500 |
| ತುರುವೇಕೆರೆ | ₹16500-16500 |



ದೇಶಿ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು ಕೇಂದ್ರದ ಆಲೋಚನೆ

# ಸಕ್ಕರೆ ರಫ್ತಿಗೆ ಮಿತಿ ಸಂಭವ

**ಮುಖ್ಯಾಂಶಗಳು**

- ರಫ್ತಿನ ಮೇಲೆ ತೆರಿಗೆ ವಿಧಿಸುವ ಬಗ್ಗೆಯೂ ಪರಿಶೀಲನೆ
- ದಾಸ್ತಾನು ಕಡಿಮೆಯಾದರೆ ಬೆಲೆ ಹೆಚ್ಚಳವಾಗುವ ಆತಂಕ

ಮುಂಬೈ (ರಾಯಿಟರ್ಸ್): ಆರು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರವು ಸಕ್ಕರೆ ರಫ್ತಿನ ಮೇಲೆ ಮಿತಿ ಹೇರಲು ಆಲೋಚನೆ ನಡೆಸಿದೆ. ದೇಶಿ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯು ದುಬಾರಿ ಆಗದಂತೆ ನೋಡಿಕೊಳ್ಳಲು ಈ ಕ್ರಮ ಎಂದು ಮೂಲಗಳು ಹೇಳಿವೆ.

ಪ್ರಸಕ್ತ ಹಂಗಾಮಿನಲ್ಲಿ ಸಕ್ಕರೆ ರಫ್ತಿಗೆ 80 ಲಕ್ಷ ಟನ್ ಮಿತಿ ವಿಧಿಸಬಹುದು ಎಂದು ಕೇಂದ್ರ ಸರ್ಕಾರ ಹಾಗೂ ಸಕ್ಕರೆ ಉದ್ಯಮದ ಮೂಲಗಳು ಹೇಳಿವೆ. ಈ ವಿಚಾರವಾಗಿ ಕೇಂದ್ರವು ಮುಂದಿನ ತಿಂಗಳ ಆರಂಭದಲ್ಲಿ ಪ್ರಕಟಣೆ ಹೊರಡಿಸಬಹುದು ಎನ್ನಲಾಗಿದೆ.

ಶುಕ್ರವಾರ ಈ ಸುದ್ದಿ ಹೊರಬಂದ ನಂತರದಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳ ಷೇರು ಮೌಲ್ಯವು ಕುಸಿದಿದೆ. 'ಈ ಬಾರಿ ಸಕ್ಕರೆ ಉತ್ಪಾದನೆ ದಾಖಲೆ ಮಟ್ಟ ತಲುಪಲಿದೆ. ಆದರೆ, ರಫ್ತು ಕಾರಣದಿಂದಾಗಿ ದೇಶದಲ್ಲಿ ಸಕ್ಕರೆ ದಾಸ್ತಾನು ಕಡಿಮೆ ಆಗುತ್ತಿದೆ. ರಫ್ತಿನ ಮೇಲೆ ನಿಯಂತ್ರಣ ಇಲ್ಲದಿದ್ದರೆ ದೇಶದಲ್ಲಿ ಸಕ್ಕರೆ ಅಭಾವ ಉಂಟಾಗಬಹುದು, ಹಬ್ಬಗಳ ಸಂದರ್ಭದಲ್ಲಿ ದೇಶಿ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಬಹುದು' ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ತಿಳಿಸಿದರು. ರಫ್ತು ನಿರುತ್ತೇಜಿಸಲು ತೆರಿಗೆ ವಿಧಿಸುವ ಆಯ್ಕೆಯನ್ನೂ ಸರ್ಕಾರ ಪರಿಶೀಲಿಸುತ್ತಿದೆ ಎಂದು ಗೊತ್ತಾಗಿದೆ. ಈ ಕುರಿತು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಸಕ್ಕರೆ ಕಾರ್ಖಾನೆಗಳು ಈಗಾಗಲೇ 70 ಲಕ್ಷ ಟನ್ ಸಕ್ಕರೆ ರಫ್ತಿಗೆ ಒಪ್ಪಂದ ಮಾಡಿಕೊಂಡಿವೆ. ಹೀಗಿರುವಾಗ, ಸೆಪ್ಟೆಂಬರ್‌ಗೆ ಕೊನೆಯಾಗುವ ಮಾರುಕಟ್ಟೆ ವರ್ಷದಲ್ಲಿ ರಫ್ತು 80 ಲಕ್ಷ ಟನ್ ಮೀರುವಂತಿಲ್ಲ ಎಂಬ ಮಿತಿ ಜಾರಿಗೆ ಬಂದರೆ, ಮೇ ತಿಂಗಳಿನಿಂದ ರಫ್ತು ಸಂಪೂರ್ಣವಾಗಿ ನಿಲುಗಡೆ ಆಗುತ್ತದೆ ಎಂದು ಮೂಲಗಳು ವಿವರಿಸಿವೆ. ಜಾಗತಿಕ ಮಟ್ಟದಲ್ಲಿ ಸಕ್ಕರೆ ಬೆಲೆಯು ಗುರುವಾರ ಐದು ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ.

'ಹೊಸ ಮಾರುಕಟ್ಟೆ ಹಂಗಾಮು (ಅಕ್ಟೋಬರ್‌ನಿಂದ ಆರಂಭವಾಗುವ ಅವಧಿ) ಶುರುವಾಗುವ ಹೊತ್ತಿನಲ್ಲಿ ದೇಶದಲ್ಲಿ ಒಟ್ಟು 60 ಲಕ್ಷದಿಂದ 70 ಲಕ್ಷ ಟನ್ ಸಕ್ಕರೆ ದಾಸ್ತಾನು ಇರಬೇಕು ಎಂಬುದು ಸರ್ಕಾರದ ಬಯಕೆ. ಆಗ ಡಿಸೆಂಬರ್ ತ್ರೈಮಾಸಿಕದ ಸಕ್ಕರೆ ಬೇಡಿಕೆ ಪೂರೈಸಲು ಸಾಧ್ಯವಾಗುತ್ತದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು. ದೀಪಾವಳಿ, ದಸರಾ ಹಬ್ಬ, ಮದುವೆಗಳ ಕಾರಣದಿಂದಾಗಿ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದಲ್ಲಿ ಸಕ್ಕರೆ ಬೇಡಿಕೆಯು ಹೆಚ್ಚಾಗುತ್ತದೆ.

ಸ್ಥಳೀಯ ಬೇಡಿಕೆ ಪೂರೈಸಲು ಅಗತ್ಯವಿರುವಷ್ಟು ಸಕ್ಕರೆ ಉತ್ಪಾದನೆ ಆಗಬೇಕು. ಹೆಚ್ಚುವರಿ ಕಬ್ಬಿನಿಂದ ಸಾಧ್ಯವಾದಷ್ಟು ಹೆಚ್ಚು ಎಥೆನಾಲ್ ಉತ್ಪಾದನೆ ಆಗಬೇಕು. ದೇಶದಲ್ಲಿ ಸಕ್ಕರೆ ಬೆಲೆಯು ಜಾಗತಿಕ ಮಾರುಕಟ್ಟೆಯ ಬೆಲೆಯನ್ನು ನೆಚ್ಚಿಕೊಂಡು ಇರಬಾರದು. ಇದು ಕೇಂದ್ರದ ನೀತಿ ಎಂದು ಅಧಿಕಾರಿಯೊಬ್ಬರು ಹೇಳಿದರು.

## ರಫ್ತು ಶೇ 7ರಷ್ಟು ಹೆಚ್ಚಳ ನಿರೀಕ್ಷೆ



ನವದೆಹಲಿ (ಪಿಟಿಐ): ಸೆಪ್ಟೆಂಬರ್‌ಗೆ ಕೊನೆಗೊಳ್ಳುವ ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ ದೇಶದ ಸಕ್ಕರೆ ರಫ್ತು ಪ್ರಮಾಣವು ಶೇಕಡ 7ರಷ್ಟು ಹೆಚ್ಚಳ ಕಂಡು, 75 ಲಕ್ಷ ಟನ್‌ಗೆ ತಲುಪುವ ನಿರೀಕ್ಷೆ ಇದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ವ್ಯವಹಾರಗಳ ರಾಜ್ಯ ಸಚಿವೆ ಸಾಧ್ವಿ ನಿರಂಜನಜ್ಯೋತಿ ರಾಜ್ಯಸಭೆಗೆ ತಿಳಿಸಿದ್ದಾರೆ. ಹಿಂದಿನ ಮಾರುಕಟ್ಟೆ ವರ್ಷದಲ್ಲಿ ದೇಶದಿಂದ 70 ಲಕ್ಷ ಟನ್ ಸಕ್ಕರೆ ರಫ್ತು ಆಗಿತ್ತು.

**ಸಂಕ್ಷಿಪ್ತ ಸುದ್ದಿ**

## ಸರ್ಕಾರಕ್ಕೆ ₹ 8,815 ಕೋಟಿ ಮುಂಗಡ ಪಾವತಿ: ಏರ್‌ಟೆಲ್

ನವದೆಹಲಿ (ಪಿಟಿಐ): 2015ರಲ್ಲಿ ತರಂಗಾಂತರ ಖರೀದಿ ಮಾಡಿರುವುದಕ್ಕೆ ಸಂಬಂಧಿಸಿದ ₹ 8,815 ಕೋಟಿ ಬಾಕಿ ಮೊತ್ತವನ್ನು ಅವಧಿಗೂ ಮುಂಚಿತವಾಗಿ ಸರ್ಕಾರಕ್ಕೆ ಪಾವತಿ ಮಾಡಲಾಗಿದೆ ಎಂದು ಭಾರ್ತಿ ಏರ್‌ಟೆಲ್ ಕಂಪನಿಯು ಶುಕ್ರವಾರ ತಿಳಿಸಿದೆ.

2026-27 ಮತ್ತು 2027–28ನೇ ಹಣಕಾಸು ವರ್ಷಕ್ಕೆ ಪಾವತಿಸಬೇಕಾಗಿದ್ದ ಕಂತಿನ ಮೊತ್ತವನ್ನು ಮುಂಚಿತವಾಗಿಯೇ ಪಾವತಿಸಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ನಾಲ್ಕು ತಿಂಗಳ ಅವಧಿಯಲ್ಲಿ ನಿಗದಿತ ಅವಧಿಗೂ ಮುಂಚಿತವಾಗಿಯೇ ₹ 24,334 ಕೋಟಿ ಮೊತ್ತವನ್ನು ಪಾವತಿ ಮಾಡಲಾಗಿದೆ ಎಂದೂ ಹೇಳಿದೆ.

## ಪೆಟ್ರೋಲ್, ಡೀಸೆಲ್ ದರ 80 ಪೈಸೆ ಹೆಚ್ಚಳ



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶುಕ್ರವಾರ ಪೆಟ್ರೋಲ್, ಡೀಸೆಲ್ ದರವನ್ನು ಲೀಟರಿಗೆ ತಲಾ 80 ಪೈಸೆಯಷ್ಟು ಹೆಚ್ಚಿಸಿವೆ.

ಶುಕ್ರವಾರದ ದರ ಏರಿಕೆಯನ್ನೂ ಪರಿಗಣಿಸಿದರೆ ಮಾರ್ಚ್ 22ರ ನಂತರ ಒಟ್ಟು ಮೂರು ಬಾರಿ ದರ ಹೆಚ್ಚಿಸಲಾಗಿದೆ. ಇದರಿಂದಾಗಿ ಒಟ್ಟಾರೆ ಏರಿಕೆಯು ಲೀಟರಿಗೆ ₹ 2.40ರಷ್ಟಾಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ಅಧಿಸೂಚನೆಯ ಪ್ರಕಾರ, ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 97.81 ಮತ್ತು ಡೀಸೆಲ್ ದರ ₹ 89.07ಕ್ಕೆ ಏರಿಕೆಯಾಗಿದೆ.

## ಹಣಕಾಸು ಮಸೂದೆಗೆ ಲೋಕಸಭೆ ಒಪ್ಪಿಗೆ

ನವದೆಹಲಿ: ಹಣಕಾಸು ಮಸೂದೆ–2022ಕ್ಕೆ ಲೋಕಸಭೆಯಲ್ಲಿ ಶುಕ್ರವಾರ ಅಂಗೀಕಾರ ದೊರೆತಿದೆ. ಕ್ರಿಪ್ಟೊಕರೆನ್ಸಿಗಳ ವರ್ಗಾವಣೆಯಿಂದ ಬರುವ ಮೊತ್ತಕ್ಕೆ ಏಪ್ರಿಲ್ 1ರಿಂದ ಶೇಕಡ 30ರಷ್ಟು ತೆರಿಗೆ ವಿಧಿಸುವ ಪ್ರಸ್ತಾವ ಮಸೂದೆಯಲ್ಲಿ ಇದೆ.

ಒಂದು ವರ್ಚುವಲ್ ಅಸೆಟ್‌ನಲ್ಲಿ ಆದ ನಷ್ಟವನ್ನು ಇನ್ನೊಂದು ವರ್ಚುವಲ್ ಅಸೆಟ್‌ನ ವರ್ಗಾವಣೆಯಲ್ಲಿ ಬಂದಿರುವ ಲಾಭದ ಜೊತೆ ಸರಿಹೊಂದಿಸಿಕೊಳ್ಳಲು ಅವಕಾಶ ಇಲ್ಲ ಎಂದು ತಿದ್ದುಪಡಿ ಮಸೂದೆಯಲ್ಲಿ ಹೇಳಲಾಗಿದೆ.

ವರ್ಚುವಲ್ ಆಸ್ತಿಗಳ ಮೇಲೆ ತೆರಿಗೆ ಹಾಕಿರುವುದನ್ನು ಹೊರತುಪಡಿಸಿದರೆ, ಕೋವಿಡ್‌ನಿಂದ ತೊಂದರೆಗೆ ಒಳಗಾದ ಅರ್ಥ ವ್ಯವಸ್ಥೆಯ ಅಗತ್ಯಗಳನ್ನು ಪೂರೈಸಲು ಹೊಸ ತೆರಿಗೆ ಹೇರದ ದೇಶ ಭಾರತ ಮಾತ್ರ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸದನದಲ್ಲಿ ಹೇಳಿದರು.

## ಯುದ್ಧ ಸಂತ್ರಸ್ತರಿಗೆ ಇನ್ಫೊಸಿಸ್ ₹ 7.62 ಕೋಟಿ ನೆರವು

ಮುಂಬೈ (ಎಎಫ್‌ಪಿ): ರಷ್ಯಾದಲ್ಲಿ ತಾನು ಹೊಂದಿರುವ ವಾಣಿಜ್ಯ ವಹಿವಾಟು ದೊಡ್ಡ ಮಟ್ಟದ್ದೇನೂ ಅಲ್ಲ ಎಂದು ಇನ್ಫೊಸಿಸ್ ಶುಕ್ರವಾರ ಹೇಳಿದೆ. ಬ್ರಿಟನ್ನಿನ ಹಣಕಾಸು ಸಚಿವ ರಿಷಿ ಸುನಕ್ ಅವರು ತಮ್ಮ ಪತ್ನಿ (ಅಕ್ಷತಾ ಮೂರ್ತಿ) ಇನ್ಫೊಸಿಸ್‌ನಲ್ಲಿ ಷೇರು ಹೊಂದಿರುವ ವಿಚಾರವಾಗಿ ಟೀಕೆಗೆ ಗುರಿಯಾದ ನಂತರದಲ್ಲಿ ಈ ಹೇಳಿಕೆ ನೀಡಿದೆ.

ಉಕ್ರೇನ್ ಮೇಲೆ ಆಕ್ರಮಣ ನಡೆಸಿದ್ದಕ್ಕಾಗಿ, ಬ್ರಿಟನ್ ಮತ್ತು ಇತರ ರಾಷ್ಟ್ರಗಳು ರಷ್ಯಾವನ್ನು ಆರ್ಥಿಕವಾಗಿ ಏಕಾಂಗಿ ಆಗಿಸಲು ಯತ್ನಿಸುತ್ತಿವೆ. ಗುರುವಾರ ಟಿ.ವಿ. ಸಂದರ್ಶನವೊಂದರಲ್ಲಿ ಸುನಕ್ ಅವರಲ್ಲಿ, 'ಇನ್ಫೊಸಿಸ್ ಕೂಡ ರಷ್ಯಾದಲ್ಲಿನ ತನ್ನ ಚಟುವಟಿಕೆ ಕಡಿಮೆ ಮಾಡುತ್ತಿದೆಯೇ' ಎಂದು ಪ್ರಶ್ನಿಸಲಾಯಿತು. 'ಅದು ನನಗೆ ಗೊತ್ತಿಲ್ಲ. ಕಂಪನಿಗೂ ನನಗೂ ಸಂಬಂಧವಿಲ್ಲ' ಎಂದು ಸುನಕ್ ಉತ್ತರಿಸಿದರು.

ರಷ್ಯಾ–ಉಕ್ರೇನ್ ಯುದ್ಧದ ಸಂತ್ರಸ್ತರಿಗಾಗಿ ₹ 7.62 ಕೋಟಿ ಮೀಸಲಿಡುತ್ತಿರುವುದಾಗಿ ಇನ್ಫೊಸಿಸ್ ತಿಳಿಸಿದೆ. 'ಕಂಪನಿಯು ರಷ್ಯಾದಲ್ಲಿ ಕೆಲವು ನೌಕರರನ್ನು ಹೊಂದಿದೆ. ರಷ್ಯಾದ ಉದ್ದಿಮೆಗಳ ಜೊತೆ ಸಕ್ರಿಯ ವಾಣಿಜ್ಯ ಸಂಬಂಧ ಇಲ್ಲ' ಎಂದು ಕಂಪನಿ ಹೇಳಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು 2004ರಲ್ಲಿ ಇನ್ಫೊಸಿಸ್‌ನ ಬೆಂಗಳೂರು ಕಚೇರಿಗೆ ಭೇಟಿ ನೀಡಿದ್ದರು.

## ವರ್ಷಾಂತ್ಯಕ್ಕೆ 5ಜಿ ಸೇವೆ: ಕೇಂದ್ರ

ನವದೆಹಲಿ (ಪಿಟಿಐ): 'ದೇಶದಲ್ಲಿ ಈ ವರ್ಷದ ಅಂತ್ಯದ ವೇಳೆಗೆ 5ಜಿ ಸೇವೆ ದೊರೆಯಲಿದೆ. ಶೀಘ್ರದಲ್ಲೇ ತರಂಗಾಂತರ ಹರಾಜು ಪ್ರಕ್ರಿಯೆ ಕೂಡ ನಡೆಯಲಿದೆ' ಎಂದು ಕೇಂದ್ರ ಸಂವಹನ ಖಾತೆ ರಾಜ್ಯ ಸಚಿವ ದೇವುಸಿನ್ಹ ಚೌಹಾಣ್ ಶುಕ್ರವಾರ ರಾಜ್ಯಸಭೆಗೆ ಮಾಹಿತಿ ನೀಡಿದರು.

'ನಾಲ್ಕು ಕಂಪನಿಗಳಿಗೆ ಪ್ರಯೋಗಾರ್ಥವಾಗಿ ತರಂಗಾಂತರ ನೀಡಲಾಗಿದೆ. ಪ್ರಯೋಗವು ಶೀಘ್ರದಲ್ಲೇ ಅಂತಿಮಗೊಳ್ಳುವ ನಿರೀಕ್ಷೆ ಇದೆ' ಎಂದರು.

'ಸದ್ಯದಲ್ಲೇ ಹರಾಜು ಪ್ರಕ್ರಿಯೆ ನಡೆಸಲಿದ್ದೇವೆ. ವರ್ಷಾಂತ್ಯದ ವೇಳೆಗೆ 5ಜಿ ಸೇವೆ ಲಭ್ಯವಾಗಲಿದೆ. ಬಿಎಸ್‌ಎನ್‌ಎಲ್ ಈ ವರ್ಷ 4ಜಿ ಸೇವೆ ಆರಂಭಿಸಲಿದೆ' ಎಂದು ತಿಳಿಸಿದರು.



ಅಂಗನವಾಡಿ ಕಾರ್ಯಕರ್ತೆಯರ ವೇತನ ಹೆಚ್ಚಳ ಮತ್ತು ಕಾಯಮಾತಿಗೆ ಒತ್ತಾಯಿಸಿ ಬಿಹಾರದ ಅಂಗನವಾಡಿ ಸಂಘದ ಸದಸ್ಯರು ಶುಕ್ರವಾರ ಪಟ್ನಾದಲ್ಲಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

## ರಫ್ತು ಸೂಚ್ಯಂಕದಲ್ಲಿ ಗುಜರಾತ್‌ಗೆ ಮೊದಲ ಸ್ಥಾನ



ನವದೆಹಲಿ (ಪಿಟಿಐ): ನೀತಿ ಆಯೋಗ ಸಿದ್ಧಪಡಿಸಿರುವ ರಫ್ತು ಸಿದ್ಧತೆ ಸೂಚ್ಯಂಕ – 2021ರಲ್ಲಿ ಗುಜರಾತ್ ರಾಜ್ಯವು ಮೊದಲ ಸ್ಥಾನದಲ್ಲಿದೆ. ಹಿಂದಿನ ವರ್ಷವೂ ಗುಜರಾತ್ ಮೊದಲ ಸ್ಥಾನದಲ್ಲಿ ಇತ್ತು.

ಮಹಾರಾಷ್ಟ್ರ ಮತ್ತು ಕರ್ನಾಟಕ ಕ್ರಮವಾಗಿ ಎರಡನೆಯ ಹಾಗೂ ಮೂರನೆಯ ಸ್ಥಾನಗಳಲ್ಲಿ ಇವೆ. ರಾಜ್ಯಗಳ ರಫ್ತು ಸಾಮರ್ಥ್ಯ ಮತ್ತು ಸಾಧನೆಯನ್ನು ಗಮನಿಸಿ ಈ ಸೂಚ್ಯಂಕವನ್ನು ಸಿದ್ಧಪಡಿಸಲಾಗಿದೆ ಎಂದು ನೀತಿ ಆಯೋಗ ಹೇಳಿದೆ. ಒಟ್ಟು ರಫ್ತಿನಲ್ಲಿ ಶೇಕಡ 70ರಷ್ಟು ಮಹಾರಾಷ್ಟ್ರ, ಗುಜರಾತ್, ಕರ್ನಾಟಕ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳಿಂದ ಆಗುತ್ತಿದೆ ಎಂದು ನೀತಿ ಆಯೋಗದ ಸಿಇಒ ಅಮಿತಾಭ್ ಕಾಂತ್ ಹೇಳಿದ್ದಾರೆ.

## ಏಪ್ರಿಲ್ 1ರಿಂದ ಕಾರು ಬೆಲೆ ಏರಿಕೆ: ಬಿಎಂಡಬ್ಲ್ಯು

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಿಸುವ ಬಿಎಂಡಬ್ಲ್ಯು ಇಂಡಿಯಾ ಕಂಪನಿಯು ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ತನ್ನ ಎಲ್ಲ ಮಾದರಿಗಳ ಬೆಲೆಯನ್ನು ಶೇಕಡ 3.5ರವರೆಗೆ ಹೆಚ್ಚಳ ಮಾಡುವುದಾಗಿ ಶುಕ್ರವಾರ ಹೇಳಿದೆ.

ಸರಕು ಮತ್ತು ಸಾಗಣೆ ವೆಚ್ಚಗಳಲ್ಲಿ ಆಗಿರುವ ಹೆಚ್ಚಳ ಹಾಗೂ ಜಾಗತಿಕ ರಾಜಕೀಯ ಬಿಕ್ಕಟ್ಟು ಮತ್ತು ವಿನಿಮಯ ದರದಲ್ಲಿ ಆಗಿರುವ ಬದಲಾವಣೆಯ ಕಾರಣಗಳಿಂದಾಗಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಕಂಪನಿಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 430-450 |
| ನಡುಗೋಲು | 500-550 |
| ರಾಶಿ | 600-650 |
| ರಾಶಿ ಉತ್ತಮ | 650-700 |
| ಜರಡಿ | 750-800 |
| ಹೆರಕಿದ್ದು | 1100-1150 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-950 |
| ಹಸಿರು ಅತಿ ಉತ್ತಮ | 1200-1250 |
| ಕಾಳು ಮೆಣಸು | 490 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಕುಂದಾಪುರ** | |
| ಹೊಸಚಾಲಿ | 43500-44500 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 27500-45000 |
| **ಸಿದ್ದಾಪುರ** | |
| ಬಿಳಿಗೋಟು | 23289-32618 |
| ಚಾಲಿ | 42099-42099 |
| ಹೊಸಚಾಲಿ | 36209-40099 |
| ಕೆಂಪುಗೋಟು | 26089-32399 |
| ರಾಶಿ | 44099-47199 |
| ತಟ್ಟಿಬೆಟ್ಟೆ | 37089-45609 |
| **ಶಿರಸಿ** | |
| ಬೆಟ್ಟೆ | 24018-46189 |
| ಬಿಳಿಗೋಟು | 22099-33999 |
| ಚಾಲಿ | 30199-40909 |
| ರಾಶಿ | 44099-48609 |
| **ಯಲ್ಲಾಪುರ** | |
| ಬಿಳಿಗೋಟು | 26612-32899 |
| ಚಾಲಿ | 36860-41049 |
| ಕೋಕ | 18899-29499 |
| ಕೆಂಪುಗೋಟು | 31899-35199 |
| ರಾಶಿ | 47380-54600 |
| ತಟ್ಟಿಬೆಟ್ಟೆ | 38580-46700 |
| **ಶಿವಮೊಗ್ಗ** | |
| ಬೆಟ್ಟೆ | 47649-49600 |
| ಗೊರಬಲು | 17119-33599 |
| ರಾಶಿ | 43669-47389 |
| ಸರಕು | 51109-72909 |
| **ಹೊಸನಗರ** | |
| ಬಿಳಿಗೋಟು | 23419-26729 |
| ಚಾಲಿ | 36899-37769 |
| ಕೆಂಪುಗೋಟು | 25699-33899 |
| ರಾಶಿ | 44299-47729 |
| **ರಾಮನಗರ ರೇಷ್ಮೆಗೂಡು** | |
| ಮಿಶ್ರತಳಿ | 400-755 |
| ದ್ವಿತಳಿ | 380-902 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ ಮುದ್ರೆಮನೆ | ಹಾಸನ ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
|---|---|---|---|---|
| ಎಪಿ | 15650 | 15500 | 15550 | 221.85 ಸೆಂಟ್ಸ್ |
| ಎಸಿ | 8120 | 7900 | 8200 | |
| ಆರ್‌ಪಿ | 8800 | 8800 | 9050 | ಲಂಡನ್ |
| ಆರ್‌ಸಿ | 4000 | 3950 | 4025 | 2136 ಡಾಲರ್ಸ್ |

**ಮುಂಬೈ ಧಾರಣೆ**

**ಶೇಂಗಾ**

25-3-2022

| | |
|---|---|
| ಜಾವಾ 70/80(ಹೊಸ) | 10550-10600 |
| ಜಾವಾ 80/90(ಹೊಸ) | 10250-10300 |
| ದಪ್ಪ ಮಧ್ಯಪ್ರದೇಶ(ಹೊಸ) | 10500-10600 |
| ದಪ್ಪ ಗುಜರಾತ್(ಹೊಸ) | 9400-9500 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1590 (1585) |
| ಒಂದು ವಾರದ ಡೆಲಿವರಿ | 1585 (1580) |
| ಸೋಯಾ ಕಚ್ಚಾ | 1452 (1475) |
| ಪಾಮ್ ವಾರದ ಡೆಲಿವರಿ | 1468 (1478) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1700 (1750) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
51,600 (51,800)
ಬೆಳ್ಳಿ ಕೆ.ಜಿ 68,500 (68,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## 30ನೇ ದಿನದ ಬೆಳವಣಿಗೆಗಳು

- ರಷ್ಯಾ ರಂಜಕದ ಬಾಂಬ್ ಬಳಸುತ್ತಿದೆ ಎಂಬ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿಯವರ ಆರೋಪ ನಿರಾಕರಿಸಿರುವ ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್, ರಷ್ಯಾ ಅಂತರರಾಷ್ಟ್ರೀಯ ಕಾನೂನು ಉಲ್ಲಂಘಿಸಿಲ್ಲ ಎಂದಿದ್ದಾರೆ
- ನ್ಯಾಟೊ ರಾಷ್ಟ್ರಗಳ ರಕ್ಷಣೆಗೆ ಅಮೆರಿಕದ ಬದ್ಧತೆ ತೋರಿಸಲು ಮತ್ತು ಉಕ್ರೇನ್ ನಿರಾಶ್ರಿತರಿಗೆ ಆಶ್ರಯ ನೀಡಿದ ರಾಷ್ಟ್ರಗಳಿಗೆ ಧನ್ಯವಾದ ಹೇಳಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ಪೋಲೆಂಡ್‌ಗೆ ಭೇಟಿ ನೀಡಿದರು
- ತಮ್ಮ ಸೇನಾಪಡೆಗಳ ಕಾರ್ಯಕ್ಷಮತೆ ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಭಾರೀ ನಿರಾಸೆಗೊಳಿಸಿದೆ. ಪುಟಿನ್ ಕಾರ್ಯಾಚರಣೆ ಹೆಚ್ಚು ಅಪಾಯಕಾರಿ ಹಂತ ಮತ್ತು ಹೊಸ ರೂಪದ ದಾಳಿಯತ್ತ ಹೊರಳುತ್ತಿದೆ– ಅಮೆರಿಕದ ಸಿಐಎ ಮಾಜಿ ನಿರ್ದೇಶಕ ಮತ್ತು ರಕ್ಷಣಾ ಕಾರ್ಯದರ್ಶಿ ರಾಬರ್ಟ್ ಗೇಟ್ಸ್
- ರಷ್ಯಾದ ನಿಖರ ಗುರಿಯ ಕ್ಷಿಪಣಿಗಳು ಉಕ್ರೇನ್‌ನಲ್ಲಿ ಶೇ 60ರಷ್ಟು ವಿಫಲಗೊಳ್ಳುತ್ತಿವೆ– ಅಮೆರಿಕದ ಗುಪ್ತಚರ ಅಧಿಕಾರಿಗಳ ಅಂದಾಜು
- ಹಾರ್ಕಿವ್‌ನ ಅರ್ಧ ಜನತೆ ನಗರ ತೊರೆದಿದೆ. ಸದ್ಯ ನಗರದಲ್ಲೇ ಉಳಿದಿರುವವರಿಗೂ ಆಹಾರ ಮತ್ತು ಅಗತ್ಯ ವಸ್ತುಗಳ ಕೊರತೆ ಎದುರಾಗಿದೆ.
- ರಷ್ಯಾದ ಆಕ್ರಮಣದ ನಡುವೆಯೂ ಉಕ್ರೇನ್ 1,50,000 ಹೆಕ್ಟೇರ್ ಪ್ರದೇಶದಲ್ಲಿ ಧಾನ್ಯಗಳ ಬಿತ್ತನೆ ಮಾಡಿದೆ. ಹಿಂದಿನ ವರ್ಷ 7 ದಶಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿತ್ತು. ಈ ವರ್ಷ 15 ದಶಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯ ಗುರಿ ಹೊಂದಿತ್ತು – ಕೃಷಿ ಉಪ ಸಚಿವ ಟಾರಸ್ ವಿಸೋತ್‌ಸ್ಕಿ
- ರಷ್ಯಾದ ಕಲ್ಲಿದ್ದಲು, ಅನಿಲ ಮತ್ತು ತೈಲದ ಅವಲಂಬನೆ ತಗ್ಗಿಸಲು ಹೊಸ ಪೂರೈಕೆದಾರರೊಂದಿಗೆ ಜರ್ಮನಿ ತ್ವರಿತ ಒಪ್ಪಂದ ಮಾಡಿಕೊಂಡಿದೆ
- ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸಲು ಮತ್ತು ರಷ್ಯಾದ ಇಂಧನ ವಲಯದ ಮೇಲಿನ ನಿರ್ಬಂಧ ಬೆಂಬಲಿಸುವಂತೆ ಝೆಲೆನ್‌ಸ್ಕಿ ಮಾಡಿರುವ ಭಾವನಾತ್ಮಕ ಮನವಿಯನ್ನು ಹಂಗೆರಿ ಪ್ರಧಾನಿ ವಿಕ್ಟರ್ ಓರ್ಬನ್ ತಿರಸ್ಕರಿಸಿದ್ದಾರೆ
- ರಷ್ಯಾದ ಮೇಲಿನ ನಿರ್ಬಂಧಗಳಲ್ಲಿ ಯುರೋಪ್‌ಒಕ್ಕೂಟ ಅಭೂತಪೂರ್ವ ಒಗ್ಗಟ್ಟು ತೋರಿತ್ತು. ಆದರೆ, 27 ರಾಷ್ಟ್ರಗಳ ನಾಯಕರ ಶೃಂಗಸಭೆಯಲ್ಲಿ ರಷ್ಯಾದ ಇಂಧನ ಅವಲಂಬನೆ ವಿಚಾರದಲ್ಲಿ ಒಡಕು ಕಾಣಿಸಿತು
- ಯುರೋಪ್ ಒಕ್ಕೂಟದ ಸದಸ್ಯತ್ವ ತಕ್ಷಣವೇ ಉಕ್ರೇನ್‌ಗೆ ನೀಡುವಂತೆ 27 ದೇಶಗಳ ನಾಯಕರ ಶೃಂಗಸಭೆಗೆ ಝೆಲೆನ್‌ಸ್ಕಿ ಮನವಿ ಮಾಡಿದರು
- ಉಕ್ರೇನ್ ಮಾರ್ಗವಾಗಿ ಯುರೋಪ್‌ಗೆ ನೈಸರ್ಗಿಕ ಅನಿಲವನ್ನು ಪೈಪ್‌ಲೈನ್ ಮೂಲಕ ಪೂರೈಸುವ ರಷ್ಯಾದ ಹೊಸ ನಾರ್ಡ್ ಸ್ಟ್ರೀಮ್ 2 ಯೋಜನೆ ನಿರ್ಬಂಧಿಸಲು ಜರ್ಮನಿ ನಿರ್ಧರಿಸಿದೆ. ನಿರ್ಣಾಯಕ ಕ್ಷಣದಲ್ಲಿ, ಜರ್ಮನಿ ಕೂಡ ನಮ್ಮೊಂದಿಗೆ ನಿಲ್ಲುವುದು ಖಚಿತಪಟ್ಟಿದೆ– ಝೆಲೆನ್‌ಸ್ಕಿ
- ರಷ್ಯಾ ಆಕ್ರಮಣ ವಿರೋಧಿಸಿ, ಉಕ್ರೇನಿಗರನ್ನು ಬೆಂಬಲಿಸಲು ಬಲ್ಗೇರಿಯಾ ರಾಜಧಾನಿ ಸೋಫಿಯಾದಲ್ಲಿ ಸಾವಿರಾರು ಜನರು ಒಗ್ಗಟ್ಟು ಪ್ರದರ್ಶಿಸಿದರು
- ಸೇನಾ ಕಾರ್ಯಾಚರಣೆಯಲ್ಲಿ ರಷ್ಯಾದ 1,351 ಸೈನಿಕರು ಮೃತಪಟ್ಟಿದ್ದು, 3,825 ಸೈನಿಕರು ಗಾಯಗೊಂಡಿದ್ದಾರೆ– ರಷ್ಯಾ ಸೇನೆ ಹೇಳಿಕೆ
- ಉಕ್ರೇನಿನ 260ಕ್ಕೂ ಹೆಚ್ಚು ಡ್ರೋನ್‌ಗಳು, 1,580ಕ್ಕೂ ಹೆಚ್ಚು ಟ್ಯಾಂಕ್‌ಗಳು, ವಿಮಾನ ಹೊಡೆದುರುಳಿಸುವ 204 ಶಸ್ತ್ರಾಸ್ತ್ರ, ಇತರ ಶಸ್ತ್ರಸಜ್ಜಿತ ವಾಹನಗಳನ್ನು ನಾಶಪಡಿಸಲಾಗಿದೆ ಎಂದು ರಷ್ಯಾ ಹೇಳಿದೆ

### ಉಕ್ರೇನ್ ಮೇಲೆ ಮುಂದುವರಿದ ರಷ್ಯಾದ ವಿಶೇಷ ಸೇನಾ ಕಾರ್ಯಾಚರಣೆ

# ರಂಗಮಂದಿರಕ್ಕೆ ದಾಳಿ: ಸತ್ತವರ ಸಂಖ್ಯೆ 300



ಉಕ್ರೇನಿನ ಹಾರ್ಕಿವ್ ನಗರದಲ್ಲಿ ಶುಕ್ರವಾರ ರಷ್ಯಾ ಪಡೆಗಳು ವೈದ್ಯಕೀಯ ಸೌಲಭ್ಯಗಳನ್ನು ಗುರಿಯಾಗಿಸಿ ನಡೆಸಿದ ಫಿರಂಗಿ ಮತ್ತು ಶೆಲ್ ದಾಳಿಯಿಂದ ಬೆಂಕಿ ಹೊತ್ತಿ ಉರಿಯಿತು – ಎಎಫ್‌ಪಿ ಚಿತ್ರ

**ಕೀವ್/ಹಾರ್ಕಿವ್/ಮಾಸ್ಕೊ (ಎಪಿ/ಎಎಫ್‌ಪಿ/ಪಿಟಿಐ):** ಉಕ್ರೇನಿನ ಪ್ರಮುಖ ಕಾರ್ಯತಂತ್ರದ ಬಂದರು ನಗರ ಮರಿಯುಪೋಲ್‌ನಲ್ಲಿರುವ ರಂಗ ಮಂದಿರದ ಮೇಲೆ ಕಳೆದ ವಾರ ರಷ್ಯಾ ವಾಯು ಪಡೆ ನಡೆಸಿದ ವೈಮಾನಿಕ ದಾಳಿಯಲ್ಲಿ ಸುಮಾರು 300 ಜನರು ಮೃತಪಟ್ಟಿದ್ದಾರೆ ಎಂದು ಉಕ್ರೇನ್ ಸರ್ಕಾರ ಶುಕ್ರವಾರ ತಿಳಿಸಿದೆ.

‘ಪ್ರತ್ಯಕ್ಷದರ್ಶಿಗಳಿಂದ ಈ ಮಾಹಿತಿ ಸಿಕ್ಕಿದೆ’ ಎಂದು ಮರಿಯುಪೋಲ್ ಸಿಟಿ ಹಾಲ್ ಟೆಲಿಗ್ರಾಮ್‌ನಲ್ಲಿ ಹೇಳಿದೆ. ಇದನ್ನು ಉಕ್ರೇನ್ ಸರ್ಕಾರ ದೃಢಪಡಿಸಿದೆ. ಯುದ್ಧಪೀಡಿತ ನೆಲದಲ್ಲಿ ನಿರಂತರ ವಾಯು ದಾಳಿ, ಶೆಲ್ ದಾಳಿ ನಡೆಯುತ್ತಿದ್ದರಿಂದಾಗಿ ಮಹಿಳೆಯರು, ಮಕ್ಕಳು ಸೇರಿ ಒಂದು ಸಾವಿರಕ್ಕೂ ಹೆಚ್ಚು ನಾಗರಿಕರು ಈ ರಂಗಮಂದಿರದಲ್ಲಿ ಆಶ್ರಯ ಪಡೆದಿದ್ದರು. ‘ಮಾನವೀಯ ಕಾರಿಡಾರ್’ ಮೂಲಕ ಸುರಕ್ಷಿತ ಸ್ಥಳಗಳಿಗೆ ತೆರಳುವ ನಿರೀಕ್ಷೆಯಲ್ಲಿ ಇವರೆಲ್ಲರೂ ದಿನದೂಡುತ್ತಿದ್ದರು.

ಮಾ.16ರಂದು ರಾತ್ರಿ ರಷ್ಯಾ ಪಡೆಗಳು ರಂಗಮಂದಿರ ಗುರಿಯಾಗಿಸಿ ಬಾಂಬ್ ದಾಳಿ ನಡೆಸಿದ್ದವು. ಕಟ್ಟಡದ ಮಧ್ಯಭಾಗ ಸಂಪೂರ್ಣ ಧ್ವಂಸವಾಗಿತ್ತು. ‘ಕಟ್ಟಡದಲ್ಲಿ 1,000ದಿಂದ 1,200 ಜನರು ಆಶ್ರಯ ಪಡೆದಿದ್ದರು’ ಎಂದು ಮರಿಯುಪೋಲ್‌ನ ಉಪ ಮೇಯರ್ ಹೇಳಿದ್ದಾಗಿ ‘ಬಿಬಿಸಿ’ ವರದಿ ಮಾಡಿತ್ತು. ಆಗ ಸಾವು–ನೋವಿನ ಬಗ್ಗೆ ಯಾವುದೇ ಮಾಹಿತಿ ಉಕ್ರೇನ್ ಕಡೆಯಿಂದ ಹೊರಬಿದ್ದಿರಲಿಲ್ಲ.

ರಂಗಮಂದಿರದಲ್ಲಿ ಮಕ್ಕಳಿದ್ದಾರೆ ಎನ್ನುವ ಸಂದೇಶವನ್ನು ನೀಡಲು, ಆಕಾಶದಿಂದಲೂ ನೋಡಿದರೆ ಕಾಣಿಸುವಂತೆ ‘ಮಕ್ಕಳು’ ಎಂಬ ದೊಡ್ಡ ಫಲಕವನ್ನು ರಷ್ಯಾದ ಭಾಷೆಯಲ್ಲೇ ರಂಗಮಂದಿರದ ಕಟ್ಟಡಕ್ಕೆ ಅಂಟಿಸಲಾಗಿತ್ತು.

‘ರಷ್ಯಾ ಪಡೆಯು ದೊಡ್ಡ ಬಾಂಬನ್ನು ಉದ್ದೇಶಪೂರ್ವಕವಾಗಿ ರಂಗಮಂದಿರದ ಮೇಲೆ ಹಾಕಿದೆ. ನಮ್ಮ ಜನರ ಮೇಲೆ ನಡೆಯುತ್ತಿರುವ ರಷ್ಯಾದ ಅನಾಚಾರ ನೋಡಿ ಹೃದಯ ಒಡೆದು ಹೋಗಿದೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡೊಮಿರ್ ಝೆಲೆನ್‌ಸ್ಕಿ ಮರುಕ ವ್ಯಕ್ತಪಡಿಸಿದ್ದರು.

**ಇಂಧನ ಸಂಗ್ರಹಾಗಾರ ನಾಶ:** ಕೀವ್ ನಗರದ ಸಮೀಪದ ಕಲಿನಿವ್ಕಾ ಗ್ರಾಮದಲ್ಲಿರುವ ಉಕ್ರೇನಿನ ಅತಿದೊಡ್ಡ ಸೇನಾ ಇಂಧನ ಸಂಗ್ರಹಗಾರವನ್ನು ಕ್ಷಿಪಣಿ ದಾಳಿ ಮೂಲಕ ನಾಶಪಡಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.

ಇಂಧನ ತಾಣವನ್ನು ಗುರಿಯಾಗಿಸಿಕೊಂಡು ಗುರುವಾರ ಸಂಜೆ ಸಮುದ್ರದಿಂದ ಹಾರಿಸಿದ ಕಲಿಬ್ ಕ್ರೂಸ್ ಕ್ಷಿಪಣಿಗಳು ನಿಖರವಾಗಿ ಗುರಿ ಭೇದಿಸಿವೆ. ಈ ನೆಲೆ ಉಕ್ರೇನಿನ ಸೇನೆಗೆ ಇಂಧನ ಪೂರೈಸುವ ದೊಡ್ಡ ಸಂಗ್ರಹಗಾರವಾಗಿತ್ತು ಎಂದು ಹೇಳಿದೆ.

**ನಾಲ್ವರ ಸಾವು:** ಹಾರ್ಕಿವ್ ನಗರದಲ್ಲಿ ಶುಕ್ರವಾರ ರಷ್ಯಾ ಪಡೆಗಳು ನಡೆಸಿದ ಫಿರಂಗಿ ಮತ್ತು ಶೆಲ್ ದಾಳಿಗೆ ಕನಿಷ್ಠ ನಾಲ್ವರು ನಾಗರಿಕರು ಮೃತಪಟ್ಟಿದ್ದು, ಹಲವರು ಗಾಯಗೊಂಡರು ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

**ಯುದ್ಧ ಎದುರಿಸಲಿದೆ ರಷ್ಯಾ:** ಪಶ್ಚಿಮದ ರಾಷ್ಟ್ರಗಳು ಸಾರಿರುವ ಸಂಪೂರ್ಣ ‘ಹೈಬ್ರಿಡ್ ಯುದ್ಧ’ವನ್ನು ರಷ್ಯಾ ಸಮರ್ಥವಾಗಿ ಎದುರಿಸಲಿದೆ ಎಂದು ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಶುಕ್ರವಾರ ಹೇಳಿದ್ದಾರೆ.

## ದಾಳಿಗೆ ಉಕ್ರೇನ್ ಕೃತಕ ಬುದ್ಧಿಮತ್ತೆ ಬಳಕೆ

**ಉಕ್ರೇನ್ (ಎಎಫ್‌ಪಿ):** ಬಲಿಷ್ಠ ರಷ್ಯಾ ಸೇನೆಗೆ ಉಕ್ರೇನ್ ನೆಲದಲ್ಲಿ ಕಾರ್ಯಾಚರಣೆಯಲ್ಲಿ 30 ದಿನಗಳ ಹಾದಿ ಸವೆಸಿದರೂ ನಿರೀಕ್ಷಿತ ಫಲ ಸಿಕ್ಕಿಲ್ಲ. ಪುಟ್ಟ ರಾಷ್ಟ್ರ ಉಕ್ರೇನ್ ತೋರುತ್ತಿರುವ ಪ್ರತಿರೋಧ ಜಗತ್ತಿನ ಹಲವು ರಾಷ್ಟ್ರಗಳನ್ನು ಚಕಿತಗೊಳಿಸಿದೆ. ಉಕ್ರೇನ್‌ನ ಯುದ್ಧತಂತ್ರ ಏನಿರಬಹುದೆಂಬ ಕುತೂಹಲ ರಕ್ಷಣಾ ವಿಶ್ಲೇಷಕರಲ್ಲೂ ಮೂಡಿದೆ.

ಇದಕ್ಕೆ ಕಾರಣವೆಂದರೆ, ಶತ್ರು ಸೈನಿಕರನ್ನು ಹುಡುಕಿ ಕೊಲ್ಲಲು ‘ಕೃತಕ ಬುದ್ಧಿಮತ್ತೆ’ ತಂತ್ರಜ್ಞಾನವನ್ನು ಉಕ್ರೇನ್ ಬಳಸುತ್ತಿದೆ. ಶತ್ರುಗಳ ಮುಖಚಹರೆಯನ್ನು ಕೃತಕ ಬುದ್ಧಿಮತ್ತೆಯಿಂದ ಗುರುತಿಸುವಂತಹ ತಂತ್ರಜ್ಞಾನವನ್ನು ಉಕ್ರೇನ್ ಸೇನೆಗೆ ಉಚಿತವಾಗಿ ಒದಗಿಸಿರುವುದಾಗಿ ಎಂದು ಅಮೆರಿಕ ಮೂಲದ ‘ಕ್ಲಿಯರ್‌ವ್ಯೂ ಎ.ಐ’ ಹೇಳಿದೆ.

## ‘ಮೇ 9ಕ್ಕೆ ಯುದ್ಧ ಕೊನೆ: ರಷ್ಯಾ ಬಯಕೆ’

**ಕೀವ್ (ಎಪಿ):** ರಷ್ಯಾ ಮೇ 9ರೊಳಗೆ ಯುದ್ಧ ಕೊನೆಗೊಳಿಸಲು ಬಯಸುತ್ತಿದೆ ಎಂದು ಉಕ್ರೇನ್ ಸೇನೆ ಹೇಳಿದೆ.

‘ಯುದ್ಧವನ್ನು ಮೇ 9ರೊಳಗೆ ಕೊನೆಗೊಳಿಸಲು ರಷ್ಯಾದ ಪಡೆಗಳಿಗೆ ಕ್ರೆಮ್ಲಿನ್‌ನಿಂದ ಸೂಚನೆ ಕೊಟ್ಟಿರುವುದಾಗಿ ಉಕ್ರೇನ್ ಸೇನೆ ಗೂಢಚರ್ಯೆ ಮೂಲಗಳು ತಿಳಿಸಿರುವುದಾಗಿ ಉಕ್ರೇನಿನ ‘ದಿ ಕೀವ್ ಇಂಡಿಪೆಂಡೆಂಟ್’ ಮಾಧ್ಯಮ ವರದಿ ಮಾಡಿದೆ. ‘ಆ ದಿನವನ್ನು ನಾಜಿ ಜರ್ಮನಿಯ ವಿಜಯ ದಿವಸವಾಗಿ ಆಚರಿಸಲು ರಷ್ಯಾದಲ್ಲಿ ಸಿದ್ಧತೆ ನಡೆದಿದೆ’ ಎಂದೂ ಹೇಳಿದೆ.

**ಉಕ್ರೇನಿಗರನ್ನು ಹೊತ್ತೊಯ್ದ ರಷ್ಯಾ:** ತಮ್ಮ ದೇಶದ ಸಾವಿರಾರು ನಾಗರಿಕರನ್ನು ಅದರಲ್ಲೂ ಮಹಿಳೆಯರು ಮತ್ತು ಮಕ್ಕಳನ್ನು ರಷ್ಯಾ ಬಲವಂತವಾಗಿ ಹೊತ್ತೊಯ್ದಿದೆ ಎಂದು ಉಕ್ರೇನ್ ಆರೋಪಿಸಿದೆ.

ಯುದ್ಧ ನಿಲ್ಲಿಸಲು ಉಕ್ರೇನ್ ಮೇಲೆ ಒತ್ತಡ ಹೇರಲು ರಷ್ಯಾ ಸೇನೆ ಅವರನ್ನು ‘ಒತ್ತೆಯಾಳು’ಗಳನ್ನಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ ಎಂದೂ ದೂರಿದೆ. 84,000 ಮಕ್ಕಳು ಸೇರಿ 4,02,000 ನಾಗರಿಕರನ್ನು ರಷ್ಯಾಗೆ ಬಲವಂತವಾಗಿ ಕರೆದೊಯ್ಯಲಾಗಿದೆ ಎಂದು ಉಕ್ರೇನ್‌ನ ಸಾರ್ವಜನಿಕ ತನಿಖಾಧಿಕಾರಿ ಲಿಯುಡ್ಮಿಲಾ ಡೆನಿಸೊವಾ ಹೇಳಿದ್ದಾರೆ.

ರಷ್ಯಾ ಅಧ್ಯಕ್ಷರ ಅಧಿಕೃತ ನಿವಾಸ ಕ್ರೆಮ್ಲಿನ್ ಕೂಡ ಇಷ್ಟೇ ಸಂಖ್ಯೆಯ ಉಕ್ರೇನಿಗರು ತಮ್ಮ ದೇಶ ತೊರೆದು ರಷ್ಯಾದ ಆಶ್ರಯ ಬಯಸಿ ಬಂದಿದ್ದಾರೆ ಎಂದು ಹೇಳಿದೆ.

### ‘ಸಬರಮತಿ ಆಶ್ರಮ’ ಪುನರ್ ಅಭಿವೃದ್ಧಿ ಪ್ರಶ್ನಿಸಿ ಅರ್ಜಿ

# ಮುಂದಿನ ವಾರ ‘ಸುಪ್ರೀಂ’ ವಿಚಾರಣೆ

**ನವದೆಹಲಿ (ಪಿಟಿಐ):** ಅಹಮದಾಬಾದ್‌ನಲ್ಲಿ ಸಬರಮತಿ ಆಶ್ರಮ ಯೋಜನೆಯ ಪುನರಾಭಿವೃದ್ಧಿ ಮಾಡುವ ಗುಜರಾತ್ ಸರ್ಕಾರದ ನಿರ್ಧಾರದ ವಿರುದ್ಧದ ತಮ್ಮ ಅರ್ಜಿಯನ್ನು ವಜಾಗೊಳಿಸಿದ ಗುಜರಾತ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಮಹಾತ್ಮ ಗಾಂಧಿ ಅವರ ಮರಿ ಮೊಮ್ಮಗ ತುಷಾರ್ ಗಾಂಧಿ ಅವರು ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮುಂದಿನ ವಾರ ವಿಚಾರಣೆ ನಡೆಸಲಿದೆ.

ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಅವರು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಸಿ.ಟಿ. ರವಿಕುಮಾರ್ ಅವರ ಪೀಠದ ಮುಂದೆ ಪ್ರಕರಣವನ್ನು ಪ್ರಸ್ತಾಪಿಸಿದ ನಂತರ ಪೀಠವು ಶುಕ್ರವಾರ ವಿಚಾರಣೆಗೆ ಪಟ್ಟಿ ಮಾಡಿತು.

ಗುಜರಾತ್ ಸರ್ಕಾರದ ನಿರ್ಣಯ ಪ್ರಶ್ನಿಸಿ ವಕೀಲೆ ಇಂದಿರಾ ಅವರು ಪ್ರಕರಣದ ತುರ್ತು ವಿಚಾರಣೆ ನಡೆಸುವಂತೆ ಒತ್ತಾಯಿಸಿದರು.

ಸಬರಮತಿ ಆಶ್ರಮವನ್ನು ಪುನರಾಭಿವೃದ್ಧಿ ಮಾಡುವ ಯೋಜನೆಯನ್ನು ಗುಜರಾತ್ ಪ್ರವಾಸೋದ್ಯಮ ನಿಗಮವು ಕೈಗೊಂಡಿದೆ.

‘ಯೋಜನೆಯ ನಿರ್ಮಾಣ ಕಾರ್ಯ ನಡೆಯುತ್ತಿರುವುದರಿಂದ ಪ್ರಕರಣದ ತುರ್ತು ವಿಚಾರಣೆ ಅಗತ್ಯವಿದೆ. ಆದ್ದರಿಂದ ವರ್ಚುವಲ್ ಮಾದರಿಯಲ್ಲಿ ನಡೆಸಬೇಕು’ ಎಂದು ಇಂದಿರಾ ಅವರು ಮನವಿ ಮಾಡಿದರು. ‘ವರ್ಚುವಲ್ ವಿಚಾರಣೆಗೆ ಪ್ರಕರಣವನ್ನು ಪಟ್ಟಿ ಮಾಡಲಾಗಿದೆ’ ಎಂದು ಪೀಠ ಹೇಳಿತು.

ಆಶ್ರಮವಿರುವ ಒಂದು ಎಕರೆ ಪ್ರದೇಶದಲ್ಲಿನ ಮೂರು ಪ್ರಮುಖ ತಾಣಗಳನ್ನು ಸ್ಪರ್ಶಿಸುವುದಿಲ್ಲ ಎಂದು ರಾಜ್ಯ ಸರ್ಕಾರ ಭರವಸೆ ನೀಡಿತ್ತು. ಆ ಬಳಿಕ ತುಷಾರ್ ಗಾಂಧಿ ಅವರು ಸಬರಮತಿ ಆಶ್ರಮ ಪುನರಾಭಿವೃದ್ಧಿ ಯೋಜನೆಯ ವಿರುದ್ಧದ ತಮ್ಮ ಮನವಿಯನ್ನು ತಿರಸ್ಕರಿಸಿದ ಗುಜರಾತ್ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಮಹಾತ್ಮಾ ಗಾಂಧಿಯವರು 1917 ರಿಂದ 1930 ರವರೆಗೆ ವಾಸಿಸುತ್ತಿದ್ದ ಆಶ್ರಮವನ್ನು ಅಭಿವೃದ್ಧಿಪಡಿಸಲು ₹ 1,200 ಕೋಟಿ ವೆಚ್ಚದಲ್ಲಿ ಗಾಂಧಿ ಆಶ್ರಮ ಸ್ಮಾರಕ ಮತ್ತು ಆವರಣದ ಅಭಿವೃದ್ಧಿ ಯೋಜನೆಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಜಂಟಿಯಾಗಿ ಕೈಗೆತ್ತಿಕೊಂಡಿವೆ.

ಈಗಿರುವ ಐದು ಎಕರೆಗಳ ಜೊತೆ 55 ಎಕರೆ ಪ್ರದೇಶದಲ್ಲಿ ಪಾರಂಪರಿಕ ಕಟ್ಟಡಗಳನ್ನು ಒಂದೆಡೆ ತರಲಾಗುವುದು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಪುನರ್‌ಸ್ಥಾಪಿಸುವುದು ಯೋಜನೆಯ ಉದ್ದೇಶವಾಗಿದೆ.

## ತಕ್ಷಣ ಕದನ ವಿರಾಮ ಅಗತ್ಯ: ಭಾರತ– ಚೀನಾ ಸಹಮತ

**ನವದೆಹಲಿ (ಪಿಟಿಐ):** ಉಕ್ರೇನ್ ಬಿಕ್ಕಟ್ಟು ಭೌಗೋಳಿಕ ರಾಜಕೀಯ ಪ್ರಕ್ಷುಬ್ಧತೆ ಉಂಟುಮಾಡಲಿದೆ. ಹಾಗಾಗಿ ತಕ್ಷಣ ಕದನ ವಿರಾಮ ಘೋಷಣೆಯ ಅಗತ್ಯವಿದೆ. ಸಂಘರ್ಷವನ್ನು ಶಮನಗೊಳಿಸಲು ರಾಜತಾಂತ್ರಿಕತೆ ಹಾಗೂ ಮಾತುಕತೆಯ ಹಾದಿಗೆ ಮರಳಬೇಕು ಎಂದು ಭಾರತ ಮತ್ತು ಚೀನಾ ಶುಕ್ರವಾರ ಒತ್ತಿಹೇಳಿವೆ.

ಭಾರತಕ್ಕೆ ಭೇಟಿ ನೀಡಿರುವ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಮತ್ತು ವಿದೇಶಾಂಗ ಸಚಿವ ಎಸ್.ಜೈಶಂಕರ್ ನಡುವೆ ಈ ಸಂಬಂಧ ಮೂರು ತಾಸು ಮಾತುಕತೆ ನಡೆಸಿದರು.

‘ವಾಂಗ್ ಯಿ ಅವರು ಉಕ್ರೇನ್ ಬಿಕ್ಕಟ್ಟಿನ ಕುರಿತು ಅವರ ರಾಷ್ಟ್ರದಲ್ಲಿನ ಪರಿಸ್ಥಿತಿ ಮತ್ತು ಅದಕ್ಕೆ ಸಂಬಂಧಿಸಿದ ಬೆಳವಣಿಗೆಗಳ ಬಗ್ಗೆ ಚೀನಾದ ದೃಷ್ಟಿಕೋನ ತಿಳಿಸಿದರು. ನಾನು ಭಾರತೀಯ ದೃಷ್ಟಿಕೋನವನ್ನು ಪ್ರತಿಪಾದಿಸಿದೆ’ ಎಂದು ಜೈಶಂಕರ್ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

ಚೀನಾದ ವಿದೇಶಾಂಗ ಸಚಿವರು ಕ್ವಾಡ್‌ನ ವಿಷಯ ಪ್ರಸ್ತಾಪಿಸಿದರಾ ಎಂಬ ಪ್ರಶ್ನೆಗೆ, ಜೈಶಂಕರ್, ‘ಇಲ್ಲ, ಅದನ್ನು ಪ್ರಸ್ತಾಪಿಸಲಿಲ್ಲ. ಕ್ವಾಡ್ ಸಂಬಂಧ ಯಾವುದೇ ಚರ್ಚೆ ನಡೆದಿಲ್ಲ’ ಎಂದರು.

### ‘ಘೋರ ಯುದ್ಧ’

**ಬ್ಯಾಂಕಾಕ್ (ಎಪಿ):** ‘ರಷ್ಯಾದ ಆಕ್ರಮಣಕ್ಕೆ ಉಕ್ರೇನ್ ತೋರಿದ ಕಠಿಣ ಪ್ರತಿರೋಧವು, ರಷ್ಯಾದ ಮುನ್ನಡೆಗೆ ಯುದ್ಧವನ್ನು ಘೋರವಾಗಿ ಪರಿವರ್ತಿಸಿಬಿಟ್ಟಿದೆ. ಇದು ಯಾವುದೇ ಸನ್ನಿವೇಶ ಎದುರಿಸಲು ಅಮೆರಿಕ ಮತ್ತು ನಮ್ಮ ಮಿತ್ರರಾಷ್ಟ್ರಗಳು ಸಿದ್ಧರಿರಬೇಕೆನ್ನುವ ಅಗತ್ಯವನ್ನು ಒತ್ತಿಹೇಳಿದೆ’ ಎಂದು ಪೆಸಿಫಿಕ್ ವಿಭಾಗದ ಅಮೆರಿಕ ಸೇನಾ ಕಮಾಂಡರ್ ಜನರಲ್ ಚಾರ್ಲ್ಸ್ ಫ್ಲಿನ್ ಶುಕ್ರವಾರ ತಿಳಿಸಿದರು.

‘ಯುರೋಪ್‌ನ ಈ ಘಟನೆ , ರಾಯಲ್ ಥಾಯ್ ಸೇನೆ ಮತ್ತು ಅಮೆರಿಕ ಸೇನೆ ನಡುವೆ ಈಗಷ್ಟೇ ಮುಗಿದ ಸಮರಾಭ್ಯಾಸವನ್ನು ನಿರಂತರ ನಡೆಸುವ ಅಗತ್ಯವನ್ನು ಎತ್ತಿತೋರಿಸಿದೆ’ ಎಂದರು.

## ‘ಅಧಿಕಾರ ಕಬಳಿಕೆಗೆ ನನ್ನನ್ನು ಜೈಲಿಗೆ ಹಾಕಿ’

ಪ್ರಜಾವಾಣಿ ವಾರ್ತೆ

**ಮುಂಬೈ:** ‘ಅಧಿಕಾರ ಕಬಳಿಸುವ ಉದ್ದೇಶವೇ ನಿಮ್ಮದಾಗಿದ್ದರೆ ನನ್ನನ್ನು ಜೈಲಿಗೆ ಹಾಕಿ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಕೇಂದ್ರ ಸರ್ಕಾರದ ನೇತೃತ್ವ ವಹಿಸಿರುವ ಬಿಜೆಪಿಗೆ ಸವಾಲು ಹಾಕಿದ್ದಾರೆ.

ಮಹಾ ವಿಕಾಸ ಆಘಾಡಿ ಮೈತ್ರಿ ಸರ್ಕಾರದ ನಾಯಕರನ್ನು ಗುರಿಯಾಗಿಸಿ ಕೇಂದ್ರದ ಸಂಸ್ಥೆಗಳನ್ನು ಬಿಜೆಪಿ ಬಳಸುತ್ತಿದೆ ಎಂದು ಹರಿಹಾಯ್ದರು. ‘ಹಿಂದುತ್ವ ಕುರಿತಂತೆ ತನ್ನ ನಿಲುವಿನಲ್ಲಿ ಬದಲಾವಣೆ ಇಲ್ಲ’ ಎಂದು ಸ್ಪಷ್ಟಪಡಿಸಿದರು.

‘ನಿಮಗೆ ಅಧಿಕಾರಕ್ಕೆ ಬರುವ ಆಸಕ್ತಿ ಇದ್ದರೆ, ಬನ್ನಿ. ಆದರೆ, ಅದಕ್ಕಾಗಿ ಇಂಥ ಕೃತ್ಯಗಳಿಗೆ ಮುಂದಾಗಬೇಡಿ. ನಮಗೆ ಅಥವಾ ನಮ್ಮ ಕುಟುಂಬದ ಯಾರೊಬ್ಬರಿಗೂ ಕಿರುಕುಳ ನೀಡಬೇಡಿ. ನಾವು ಎಂದಿಗೂ ನಿಮ್ಮ ಕುಟುಂಬ ಸದಸ್ಯರಿಗೆ ತೊಂದರೆ ಕೊಟ್ಟಿಲ್ಲ. ಅಧಿಕಾರಕ್ಕೆ ಬರಲು ಜೈಲಿಗೆ ಹಾಕುವ ಇರಾದೆ ಇದ್ದರೆ, ಹಾಕಿ’ ಎಂದು ಹೇಳಿದರು.

ವಿಧಾನಸಭೆ ಬಜೆಟ್ ಅಧಿವೇಶನದ ಕೊನೆ ದಿನ ಸದನದಲ್ಲಿಯೇ ಈ ಸವಾಲು ಹಾಕಿದರು. ಬಾಮೈದ ಶ್ರೀಧರ್ ಪತಂಕರ್ ಅವರಿಗೆ ಸೇರಿದ್ದ ಆಸ್ತಿಯನ್ನು ಇ.ಡಿ ಜಪ್ತಿ ಮಾಡಿದ ಬಳಿಕ ಈ ಕುರಿತು ಪ್ರಥಮ ಬಾರಿಗೆ ಬಹಿರಂಗವಾಗಿ ಮಾತನಾಡಿದರು.

ಬಾಬರಿ ಮಸೀದಿ ಸಂಕೀರ್ಣದ ಕೆಳಗೆ ರಾಮಮಂದಿರ ಇದ್ದಂತೆ, ಕೃಷ್ಣನ ಜನ್ಮಸ್ಥಳದ ಕೆಳಗೆ ಜೈಲು ಇದೆ. ನಾನು ಕೃಷ್ಣನೂ ಅಲ್ಲ, ನೀವು ಕಂಸನು ಅಲ್ಲ ಎಂದರು. ಸಚಿವ ನವಾಬ್ ಮಲ್ಲಿಕ್ ರಾಜೀನಾಮೆಗೆ ಒತ್ತಾಯಿಸುವ ಬಿಜೆಪಿ ನಿಲುವನ್ನೂ ಖಂಡಿಸಿದರು.

## ತನಿಖೆಗೆ ಸಿಬಿಐ ಒಪ್ಪಿಗೆ: ಲೆಫ್ಟಿನೆಂಟ್ ಗವರ್ನರ್

ಪ್ರಜಾವಾಣಿ ವಾರ್ತೆ

**ಜಮ್ಮು:** ‘ಆರ್‌ಎಸ್‌ಎಸ್ ನಾಯಕರೊಬ್ಬರು ಹಾಗೂ ಅಂಬಾನಿಗೆ ಸೇರಿದ ಎರಡು ಕಡತಗಳಿಗೆ ಅನುಮೋದನೆ ನೀಡಲು ₹ 300 ಕೋಟಿ ಲಂಚದ ಆಮಿಷ ಒಡ್ಡಲಾಗಿತ್ತು ಎಂಬ ಮೇಘಾಲಯ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರ ಆರೋಪದ ಕುರಿತು ತನಿಖೆ ನಡೆಸಲು ಸಿಬಿಐ ಒಪ್ಪಿಗೆ ನೀಡಿದೆ’ ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ತಿಳಿಸಿದರು.

‘ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾಗಿದ್ದ ವೇಳೆ ಸತ್ಯಪಾಲ್ ಮಲಿಕ್ ಅವರಿಗೆ ಆಮಿಷ ಒಡ್ಡಲಾಗಿತ್ತು ಗಂಭೀರ ಆರೋಪದ ಕುರಿತು ತನಿಖೆ ನಡೆಸುವಂತೆ ತಾವು ಈ ಹಿಂದೆ ಸಿಬಿಐಗೆ ಪತ್ರ ಬರೆದಿದ್ದು, ತನಿಖೆ ಕೈಗೊಳ್ಳುವುದಾಗಿ ಸಿಬಿಐ ತಿಳಿಸಿದೆ. ಉನ್ನತ ಶ್ರೇಣಿಯ ನಾಯಕರು ಇಂತಹ ಆರೋಪಗಳನ್ನು ಮಾಡಿರುವುದರಿಂದ ಎಲ್ಲವೂ ಸ್ಪಷ್ಟವಾಗಬೇಕು’ ಎಂದು ತಾವು ಬಯಸುವುದಾಗಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹತ್ತಿರವಾಗಿದ್ದ ಆರ್‌ಎಸ್‌ಎಸ್‌ನ ವ್ಯಕ್ತಿಯೊಬ್ಬರು ಹಾಗೂ ಅಂಬಾನಿ ಗ್ರೂಪ್‌ಗೆ ಸೇರಿದ ಎರಡು ಕಡತಗಳ ವಿಲೇವಾರಿಗಾಗಿ ₹300 ಕೋಟಿ ಆಮಿಷ ಒಡ್ಡಲಾಗಿತ್ತು. ಪ್ರತಿ ಕಡತ ವಿಲೇವಾರಿಗೆ ₹ 150 ಕೋಟಿ ಸಿಗಲಿದೆ’ ಎಂದು ತಮ್ಮ ಕಾರ್ಯದರ್ಶಿ ಹೇಳಿದ್ದರು. ಆದರೆ ನಾನು ಐದು ಕುರ್ತಾ–ಪೈಜಾಮಾಗಳೊಂದಿಗೆ ಇಲ್ಲಿಗೆ ಬಂದಿದ್ದೇನೆ. ಅವುಗಳೊಂದಿಗೆ ವಾಪಸ್ ತೆರಳುತ್ತೇನೆ’ ಎಂದು ಸತ್ಯಪಾಲ್ ಮಲಿಕ್ ಹೇಳಿಕೆ ನೀಡಿದ್ದರು.

## ವಾಂಗ್ ಯಿ ನೇಪಾಳಕ್ಕೆ ಭೇಟಿ

**ಕಠ್ಮಂಡು (ಪಿಟಿಐ):** ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಶುಕ್ರವಾರ ನೇಪಾಳ ಪ್ರವಾಸ ಕೈಗೊಂಡಿದ್ದಾರೆ. ಅವರು ಮೂರು ದಿನಗಳ ಕಾಲ ನೇಪಾಳದಲ್ಲಿ ಇರಲಿದ್ದಾರೆ.

ಈ ವೇಳೆ ಅವರು ನೇಪಾಳದ ಪ್ರಧಾನಿ ಶೇರ್ ಬಹಾದೂರ್ ದೇವುಬಾ ಮತ್ತು ಇತರ ಉನ್ನತ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ. ದೇಶದ ವಿದೇಶಾಂಗ ಸಚಿವ ನಾರಾಯಣ ಖಡ್ಕ ಅವರ ಆಹ್ವಾನದ ಮೇರೆಗೆ ವಾಂಗ್ ಈ ಭೇಟಿ ಕೈಗೊಂಡಿದ್ದಾರೆ.




**ಜಾಗೃತಿ...** ನವದೆಹಲಿಯಲ್ಲಿ ಶುಕ್ರವಾರ ಪರಿಸರ ಹೋರಾಟಗಾರರು ಜಾಗತಿಕ ಹವಾಮಾನ ಬದಲಾವಣೆ ಸಂಬಂಧ ಜಾಗೃತಿ ಪ್ರದರ್ಶನ ನಡೆಸಿದರು – ಎಎಫ್‌ಪಿ ಚಿತ್ರ

## ‘ಸರ್ಕಾರಿ ಸಿಬ್ಬಂದಿ ತೆರವಿಗೆ ಬೌನ್ಸರ್‌ಗಳು’

ಪ್ರಜಾವಾಣಿ ವಾರ್ತೆ

**ನವದೆಹಲಿ:** ರಾಜಧಾನಿಯ ಖಾನ್ ಮಾರ್ಕೆಟ್ ಬಳಿಯ ‘ಸುಜನ್ ಸಿಂಗ್ ಪಾರ್ಕ್’ ವಸತಿ ಸಂಕೀರ್ಣದಿಂದ ಸರ್ಕಾರಿ ಅಧಿಕಾರಿಗಳ ತೆರವಿಗೆ ಬೌನ್ಸರ್‌ಗಳನ್ನು ಕಳುಹಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠದ ಎದುರು ಈ ಮಾತು ಹೇಳಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಈ ಪ್ರಕರಣವನ್ನು ತುರ್ತು ವಿಚಾರಣೆಗೆ ಪರಿಗಣಿಸಿ ಎಂದು ಮನವಿ ಮಾಡಿದರು.

ಪೀಠವು ಇದಕ್ಕೆ, ‘ಸರ್ಕಾರಿ ಅಧಿಕಾರಿಗಳನ್ನು ತೆರವುಗೊಳಿಸಲು ಯಾರಾದರೂ ಬೌನ್ಸರ್‌ಗಳನ್ನು ಕಳುಹಿಸಲು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿತು. ವಿಚಾರಣೆಯನ್ನು ಏಪ್ರಿಲ್ 5ಕ್ಕೆ ನಿಗದಿಪಡಿಸಿತು.

ಈ ಪ್ರಕರಣದಲ್ಲಿ, ಉಲ್ಲೇಖಿತ ಆಸ್ತಿಗೆ ಸಂಬಂಧಿಸಿ ಬಾಕಿ ಬಾಡಿಗೆ ಮೊತ್ತವನ್ನು ಪ್ರತಿವಾದಿ ‘ಸರ್ ಶೋಭಾ ಸಿಂಗ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್’ ಸಂಸ್ಥೆಗೆ ಪಾವತಿಸಬೇಕು ಎಂದು ಬಾಡಿಗೆ ನಿಯಂತ್ರಣ ನ್ಯಾಯಮಂಡಳಿಯು ಆದೇಶಿಸಿದ್ದು, ಹೈಕೋರ್ಟ್ ಇದನ್ನು ಎತ್ತಿ ಹಿಡಿದಿತ್ತು. ಈ ಆದೇಶದ ವಿರುದ್ಧ ಕೇಂದ್ರ ಸರ್ಕಾರ ‘ಸುಪ್ರೀಂ’ಗೆ ಮೇಲ್ಮನವಿ ಸಲ್ಲಿಸಿತ್ತು. ಆಸ್ತಿಯನ್ನು ಶೋಭಾ ಸಿಂಗ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಅನುದಾನವಾಗಿ ನೀಡಲಾಗಿತ್ತು. ಹೆಸರಾಂತ ಗುತ್ತಿಗೆದಾರ, ದೆಹಲಿ ಅಭಿವೃದ್ಧಿಗೆ ಒತ್ತು ನೀಡಿರುವ ಶೋಭಾ ಸಿಂಗ್, ಹೆಸರಾಂತ ಪತ್ರಕರ್ತ ಖುಷವಂತ್ ಸಿಂಗ್ ಅವರ ತಂದೆ.

## ಪಾಕ್ ಸಂಸತ್ ಅಧಿವೇಶನ 28ಕ್ಕೆ ಮುಂದೂಡಿಕೆ

**ಇಸ್ಲಾಮಾಬಾದ್ (ಪಿಟಿಐ):** ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಯ ಅಧಿವೇಶನ ಶುಕ್ರವಾರದಿಂದ ಆರಂಭವಾಗಿದ್ದು, ಮೊದಲ ದಿನ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಗದೆ ಮುಂದೂಡಲ್ಪಟ್ಟಿತು.

ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶ ನೀಡುವಂತೆ ಪ್ರತಿಪಕ್ಷಗಳ ಸದಸ್ಯರು ಗದ್ದಲ ಎಬ್ಬಿಸಿ, ಆಕ್ರೋಶ ವ್ಯಕ್ತಪಡಿಸಿದರೂ ಸ್ಪೀಕರ್ ಅಸಾದ್ ಕೈಸರ್ ಅವಕಾಶ ನೀಡಲಿಲ್ಲ. ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ ಪಕ್ಷದ ಸಂಸದ ಖಯಾಲ್ ಜಮಾನ್ ಅವರ ನಿಧನಕ್ಕೆ ಸದನದಲ್ಲಿ ಸಂತಾಪ ಸೂಚಿಸಿದ ಬಳಿಕ ಸ್ಪೀಕರ್ ಅವರು ಅಧಿವೇಶನವನ್ನು ಇದೇ 28ರ ಸಂಜೆ 4 ಗಂಟೆಗೆ ಮುಂದೂಡಿದರು.

ಪಾಕಿಸ್ತಾನದ ಸಂಸತ್ತಿನ ಸಂಪ್ರದಾಯಗಳ ಪ್ರಕಾರ, ಅಧಿವೇಶನದ ಮೊದಲ ದಿನದ ಸಭೆಯು ಅಗಲಿದ ಗಣ್ಯರನ್ನು ಸ್ಮರಿಸಲು ಸೀಮಿತವಾಗಿರುತ್ತದೆ.

ವಿರೋಧ ಪಕ್ಷದ ನಾಯಕ ಶೆಹಬಾಜ್ ಷರೀಫ್, ಪಾಕಿಸ್ತಾನ್ ಪೀಪಲ್ಸ್ ಪಕ್ಷದ ಅಧ್ಯಕ್ಷ ಬಿಲಾವಲ್ ಭುಟ್ಟೊ ಜರ್ದಾರಿ ಮತ್ತು ಸಹ-ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಸೇರಿದಂತೆ ಹಲವು ಪ್ರಮುಖ ವಿರೋಧ ಪಕ್ಷದ ಸದಸ್ಯರು ಅವಿಶ್ವಾಸ ನಿರ್ಣಯ ಮಂಡನೆಗೆ ಸಜ್ಜಾಗಿ ಅಧಿವೇಶನಕ್ಕೆ ಬಂದಿದ್ದರು. ಅಧಿವೇಶನ ಮುಂದೂಡಿದ ಕ್ರಮವನ್ನು ವಿರೋಧಿಸಿ ಪ್ರತಿ ಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸಿದರು.

ಇಮ್ರಾನ್ ಖಾನ್ ನೇತೃತ್ವದ ಸರ್ಕಾರವು ದೇಶದ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿದೆ ಎಂದು ಆರೋಪಿಸಿ ವಿರೋಧ ಪಕ್ಷಗಳು ಮಾರ್ಚ್ 8ರಂದು ನ್ಯಾಷನಲ್ ಅಸೆಂಬ್ಲಿಯ ಸಚಿವಾಲಯಕ್ಕೆ ಅವಿಶ್ವಾಸ ನಿರ್ಣಯ ಮಂಡಿಸುವ ಕುರಿತು ನೋಟಿಸ್ ನೀಡಿತ್ತು.

## ಚೀನಾದಲ್ಲಿ ಶಿಕ್ಷಣ: ಯುಜಿಸಿ ಸಲಹೆ

**ನವದೆಹಲಿ (ಪಿಟಿಐ):** ಕೋವಿಡ್ ಸಂಬಂಧಿತ ಕಠಿಣ ನಿರ್ಬಂಧಗಳು ಚಾಲ್ತಿಯಲ್ಲಿರುವ ಕಾರಣ ಚೀನಾದ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆಯಲು ಆಸಕ್ತರಾಗಿರುವ ವಿದ್ಯಾರ್ಥಿಗಳು ಜಾಗ್ರತೆ ವಹಿಸಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಎಚ್ಚರಿಸಿದೆ.

ಚೀನಾದಲ್ಲಿ ವಿಧಿಸಲಾಗಿರುವ ನಿರ್ಬಂಧಗಳ ಪರಿಣಾಮ ಅನೇಕ ವಿದ್ಯಾರ್ಥಿಗಳು ದೇಶಕ್ಕೆ ಮರಳಲು ಹಾಗೂ ಶಿಕ್ಷಣವನ್ನು ಮುಂದುವರಿಸಲು ಆಗಿಲ್ಲ ಎಂದು ಯುಜಿಸಿ ಹೇಳಿದೆ.

## ರಾಮೇಶ್ವರದಲ್ಲಿ ಲಂಕಾದವರಿಗೆ ಪುನರ್ವಸತಿ

**ಚೆನ್ನೈ:** ಆಹಾರ ಮತ್ತು ಅಗತ್ಯ ವಸ್ತುಗಳ ತೀವ್ರ ಕೊರತೆಯಿಂದಾಗಿ ಉತ್ತರ ಶ್ರೀಲಂಕಾದಲ್ಲಿ ತಮ್ಮ ಮನೆಗಳನ್ನು ತೊರೆದ ಒಂಬತ್ತು ಮಕ್ಕಳು ಸೇರಿ ಎಲ್ಲಾ 16 ತಮಿಳರಿಗೆ ತಮಿಳುನಾಡು ಸರ್ಕಾರವು ರಾಮೇಶ್ವರ ಬಳಿಯ ಮಂಡಪಂನಲ್ಲಿ ಪುನರ್ವಸತಿ ಕಲ್ಪಿಸಿದೆ.

ಸೋಮವಾರ ಉತ್ತರದ ಮನ್ನಾರ್‌ನಿಂದ ಎರಡು ದೋಣಿಗಳಲ್ಲಿ ಹೊರಟಿದ್ದ ತಮಿಳರು, ಮಂಗಳವಾರ ರಾಮೇಶ್ವರ ತಲುಪಿದ್ದರು. ಅಲ್ಲಿನ ಸ್ಥಳೀಯ ನ್ಯಾಯಾಲಯವು ಆರು ಜನರನ್ನು ವಶಕ್ಕೆ ಪಡೆಯಲು ಆದೇಶಿಸಿತ್ತು. ಆದರೆ, ತಮಿಳುನಾಡು ಸರ್ಕಾರವು ಎಲ್ಲರನ್ನೂ ಮಾನವೀಯ ಆಧಾರದ ಮೇಲೆ ಮಂಡಪಂನ ಶಿಬಿರದಲ್ಲಿ ಇರಿಸಿದೆ.

### ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ದ್ವೀಪ ರಾಷ್ಟ್ರ ಶ್ರೀಲಂಕಾ

# ಮುದ್ರಣ ಸ್ಥಗಿತಗೊಳಿಸಲಿವೆ ಎರಡು ದೈನಿಕಗಳು

**ಕೊಲಂಬೊ (ಎಎಫ್‌ಪಿ):** ಆರ್ಥಿಕಬಿಕ್ಕಟ್ಟಿನಿಂದ ತತ್ತರಿಸಿರುವ ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ತೀವ್ರವಾಗಿರುವ ಕಾಗದದ ಕೊರತೆಯಿಂದ ಎರಡು ಪ್ರಮುಖ ದಿನ ಪತ್ರಿಕೆಗಳು ತಮ್ಮ ಮುದ್ರಣ ಆವೃತ್ತಿಯನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿವೆ.

‘ನ್ಯೂಸ್‌ಪ್ರಿಂಟ್’ ಕೊರತೆಯ ಕಾರಣ ತನ್ನ ಇಂಗ್ಲಿಷ್ ಆವೃತ್ತಿಯಾದ ‘ದಿ ಐಲ್ಯಾಂಡ್’ ಮತ್ತು ಅದರ ಸಿಂಹಳೀಯ ಆವೃತ್ತಿಯಾದ ‘ದಿವೈನಾ’ ಪತ್ರಿಕೆಗಳ ಮುಂದ್ರಣ ಆವೃತ್ತಿ ಸ್ಥಗಿತಗೊಳ್ಳಲಿದ್ದು, ‘ಆನ್‌ಲೈನ್’ನಲ್ಲಿ ಮಾತ್ರ ಲಭ್ಯವಿರಲಿವೆ ಎಂದು ಪತ್ರಿಕೆಗಳ ಮಾತೃ ಸಂಸ್ಥೆಯಾದ ‘ಉಪಾಲಿ ನ್ಯೂಸ್‌ಪೇಪರ್ಸ್’ ತಿಳಿಸಿದೆ.

ವಿದೇಶಗಳಿಂದ ಸಮರ್ಪಕವಾಗಿ ಕಾಗದ ತರಿಸಲು ಆಗದಿರುವ ಮತ್ತು ವೆಚ್ಚದಲ್ಲಿ ಭಾರಿ ಏರಿಕೆ ಆಗಿರುವ ಕಾರಣ ದೇಶದ ಇತರ ರಾಷ್ಟ್ರೀಯ ದಿನ ಪತ್ರಿಕೆಗಳು ಪುಟಗಳ ಸಂಖ್ಯೆಯನ್ನು ಕಡಿಮೆಗೊಳಿಸಿವೆ. ಕಾಗದ ಮತ್ತು ಇಂಕ್ ಕೊರತೆಯ ಕಾರಣ ಕಳೆದ ವಾರ ಶ್ರೀಲಂಕಾದಲ್ಲಿ ಶಾಲಾ ಪರೀಕ್ಷೆಗಳನ್ನೇ ಮುಂದೂಡಲಾಗಿತ್ತು.

ದೇಶದ ವಿದೇಶಿ ವಿನಿಮಯದ ಕೊರತೆಯು ಎಲ್ಲಾ ಕ್ಷೇತ್ರಗಳ ಮೇಲೂ ದುಷ್ಪರಿಣಾಮ ಬೀರಿದ್ದು, ಫೆಬ್ರುವರಿಯಲ್ಲಿ ಹಣದುಬ್ಬರದ ಪ್ರಮಾಣ ಶೇ 17.5ಕ್ಕೆ ತಲುಪಿತ್ತು. ಇದರಿಂದ ದೇಶದಲ್ಲಿ ಅಗತ್ಯ ವಸ್ತುಗಳೂ ಸೇರಿದಂತೆ ಬಹುತೇಕ ಪದಾರ್ಥಗಳ ಬೆಲೆ ಗಗನಕ್ಕೇರಿದೆ.

ಪೆಟ್ರೋಲ್, ಡೀಸೆಲ್ ಜತೆಗೆ ಅಡುಗೆ ಅನಿಲ, ಸೀಮೆ ಎಣ್ಣೆಗೂ ತೀವ್ರ ಅಭಾವ ಉಂಟಾಗಿದೆ. ವಾಹನ ಚಾಲಕರು ‘ಗ್ಯಾಸೋಲಿನ್ ಪಂಪ್’ಗಳಲ್ಲಿ ದಿನಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲಬೇಕಾಗಿದೆ. ಕಳೆದ ವಾರ ಬಿಸಿಲಿನ ಝಳದ ನಡುವೆಯೂ ಪೆಟ್ರೋಲ್ ಪಂಪ್‌ಗಳ ಬಳಿ ಗಂಟೆಗಟ್ಟಲೆ ಸರದಿಯಲ್ಲಿ ನಿಂತಿದ್ದ ನಾಲ್ವರು ಅಸುನೀಗಿದ್ದರು.

ಡೀಸೆಲ್ ಮತ್ತು ವೈಮಾನಿಕ ಇಂಧನ ತುಂಬಿದ್ದ ಹಡಗು ಎರಡು ವಾರಗಳ ಹಿಂದೆಯೇ ಕೊಲಂಬೊ ಬಂದರಿಗೆ ಬಂದಿದ್ದರೂ, ಅವಕ್ಕೆ ಪಾವತಿಸಲು ಡಾಲರ್ ಕೊರತೆಯ ಎದುರಾಗಿತ್ತು. ಇದೀಗ ಸರ್ಕಾರ 42 ಮಿಲಿಯನ್ ಡಾಲರ್ ಪಾವತಿಸುವಲ್ಲಿ ಯಶಸ್ವಿಯಾಗಿದೆ ಎಂದು ಶ್ರೀಲಂಕಾದ ಇಂಧನ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ದ್ವೀಪ ರಾಷ್ಟ್ರವು ತನ್ನ ಕರೆನ್ಸಿ ಬಿಕ್ಕಟ್ಟನ್ನು ನಿವಾರಿಸಲು ಭಾರತ, ಚೀನಾ ಮತ್ತು ಇತರ ದೇಶಗಳಿಂದ ಹೆಚ್ಚಿನ ಸಾಲವನ್ನು ಪಡೆಯುತ್ತಿದೆ.

2.2 ಕೋಟಿ ಜನಸಂಖ್ಯೆ ಹೊಂದಿರುವ ಶ್ರೀಲಂಕಾ ಏಳು ದಶಕಗಳಲ್ಲಿಯೇ ಕಂಡರಿಯದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. 1948ರಲ್ಲಿ ಬ್ರಿಟನ್‌ನಿಂದ ಶ್ರೀಲಂಕಾ ಸ್ವಾತಂತ್ರ್ಯ ಪಡೆದಿತ್ತು. ಕೋವಿಡ್ ಸಾಂಕ್ರಾಮಿಕವು ಶ್ರೀಲಂಕಾದ ಈ ಆರ್ಥಿಕ ಬಿಕ್ಕಟ್ಟಿಗೆ ಪ್ರಮುಖ ಕಾರಣವಾಗಿದೆ.

ಪ್ರವಾಸೋದ್ಯಮವೇ ಇಲ್ಲಿನ ಪ್ರಮುಖ ಆದಾಯದ ಮೂಲ. ಆದರೆ ಕೋವಿಡ್‌ನಿಂದಾಗಿ ಈ ಕ್ಷೇತ್ರ ಸಂಪೂರ್ಣ ನೆಲಕಚ್ಚಿದೆ. ವಿದೇಶಗಳಲ್ಲಿ ಕೆಲಸ ಮಾಡುವ ಲಂಕಾ ಪ್ರಜೆಗಳ ಪ್ರಮಾಣವೂ ಕಡಿಮೆಯಾಗಿದೆ.

ಈ ಸಲ ಪಂದ್ಯ ನಡೆಯುವ ಸ್ಥಳಗಳು

| | ವಾಂಖೆಡೆ ಕ್ರೀಡಾಂಗಣ | ಬ್ರೆಬೋರ್ನ್ ಕ್ರೀಡಾಂಗಣ | ಡಿ.ವೈ.ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ | ಎಂಸಿಎ ಪುಣೆ |
|---|---|---|---|---|
| ನಿರ್ಮಾಣ | 1974 | 1937 | 2007 | 2012 |
| ಸಾಮರ್ಥ್ಯ | 32,000 | 20,000 | 60,000 | 37,000 |
| ಗರಿಷ್ಠ ಸ್ಕೋರು | 1ಕ್ಕೆ235 | 212 | 190 | 4ಕ್ಕೆ214 |
| ಕನಿಷ್ಠ ಸ್ಕೋರು | 67 | 115 | 82 | 73 |
| ಲೀಗ್ ಪಂದ್ಯಗಳು | 20 | 15 | 20 | 15 |

ಪ್ರಶಸ್ತಿ ಮೊತ್ತ

| ₹20 ಕೋಟಿ | ₹13 ಕೋಟಿ | ₹7 ಕೋಟಿ | ₹6.5 ಕೋಟಿ | ₹15 ಲಕ್ಷ | ₹15 ಲಕ್ಷ |
|---|---|---|---|---|---|
| ವಿಜೇತರು | ರನ್ನರ್ಸ್‌ಅಪ್ | ಮೂರನೇ ಸ್ಥಾನ | ನಾಲ್ಕನೇ ಸ್ಥಾನ | ಪರ್ಪಲ್ ಕ್ಯಾಪ್ | ಆರೆಂಜ್ ಕ್ಯಾಪ್ |




# ಅರಬ್ಬಿ ಸಾಗರ ಕಿನಾರೆಯಲ್ಲಿ ಕ್ರಿಕೆಟ್ ಅಲೆ

**ಇಂಡಿಯನ್ ಪ್ರೀಮಿಯರ್ ಲೀಗ್ 'ದಶಾವತಾರ' ಇಂದಿನಿಂದ • ಮುಂಬೈ, ಪುಣೆ ಅಂಗಣಗಳಲ್ಲಿ ಪಂದ್ಯಗಳ ಆಯೋಜನೆ • ಶೇ. 25ರಷ್ಟು ಪ್ರೇಕ್ಷಕರಿಗೆ ಅವಕಾಶ**

ಮುಂಬೈ: ಅರಬ್ಬಿ ಸಮುದ್ರಕ್ಕೆ ಹಲವು ನದಿಗಳು ಬಂದು ಸೇರುವ ಮಾದರಿಯಲ್ಲಿಯೇ ದೇಶ–ವಿದೇಶಗಳ ಕ್ರಿಕೆಟಿಗರು ಈ ಮಾಯಾನಗರಿಗೆ ಬಂದು ಸೇರಿದ್ದಾರೆ. ಶನಿವಾರ ರಾತ್ರಿ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ–20 ಕ್ರಿಕೆಟ್ ಮೇಳದಲ್ಲಿ ತಮ್ಮ ಸಾಮರ್ಥ್ಯ ತೋರಲು ಸಿದ್ಧರಾಗಿದ್ದಾರೆ. ಕ್ರಿಕೆಟ್ ಜಗತ್ತಿನ ಅತ್ಯಂತ ಶ್ರೀಮಂತ ಲೀಗ್ ಟೂರ್ನಿ ಎರಡು ವರ್ಷಗಳ ನಂತರ ಭಾರತಕ್ಕೆ ಮರಳಿದೆ. ಅದರಿಂದಾಗಿಯೇ ಅಭಿಮಾನಿಗಳ ಉತ್ಸಾಹವೂ ಹೊಳೆಯಾಗಿ ಹರಿಯುವ ವಾತಾವರಣ ಸೃಷ್ಟಿಯಾಗಿದೆ. ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ 2020ರಲ್ಲಿ ಟೂರ್ನಿಯು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆದಿತ್ತು. 2021ರ ಏಪ್ರಿಲ್‌ನಲ್ಲಿ ಭಾರತದ ನಡೆಯುತ್ತಿದ್ದ ಟೂರ್ನಿಯನ್ನು ಕೋವಿಡ್ ಎರಡನೇ ಅಲೆ ವ್ಯಾಪಿಸಿದ್ದ ಕಾರಣಕ್ಕಾಗಿ ಸ್ಥಗಿತಗೊಳಿಸಿ, ಉಳಿದ ಭಾಗವನ್ನು ಯುಎಇಯಲ್ಲಿ ಆಯೋಜಿಸಲಾಗಿತ್ತು. ಆದರೆ ಈ ವರ್ಷ ಪರಿಸ್ಥಿತಿ ತಿಳಿಯಾಗಿರುವುದರಿಂದ ಟೂರ್ನಿಯನ್ನು ಭಾರತದ ನೆಲದಲ್ಲಿಯೇ ಪೂರ್ತಿಗೊಳಿಸುವ ವಿಶ್ವಾಸದಲ್ಲಿ ಆಯೋಜಕರು ಇದ್ದಾರೆ. ಆದರೂ ಹಲವಾರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

## ಚೆನ್ನೈ–ಕೋಲ್ಕತ್ತ ಹಣಾಹಣಿ ಇಂದು

ಮುಂಬೈ : ಭಾರತ ಕ್ರಿಕೆಟ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಆಧಾರಸ್ತಂಭಗಳಾಗಿರುವ ಇಬ್ಬರು ಆಟಗಾರರು ಶನಿವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಪ್ರತಿಸ್ಪರ್ಧಿಗಳಾಗಿ ಕಣಕ್ಕಿಳಿಯಲಿದ್ದಾರೆ.

ಇಲ್ಲಿ ಆರಂಭವಾಗಲಿರುವ ಐಪಿಎಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿರುವ ಆ ಇಬ್ಬರು ಆಟಗಾರರು ರವೀಂದ್ರ ಜಡೇಜ ಮತ್ತು ಶ್ರೇಯಸ್ ಅಯ್ಯರ್. ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರನ್ನರ್ ಅಪ್ ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳನ್ನು ಇವರಿಬ್ಬರೂ ಮುನ್ನಡೆಸಲಿದ್ದಾರೆ.

ಹೋದ ಬಾರಿ ಚಾಂಪಿಯನ್ ಆಗಿದ್ದ ತಂಡಕ್ಕೆ ಮಹೇಂದ್ರಸಿಂಗ್ ಧೋನಿ ನಾಯಕತ್ವ ವಹಿಸಿದ್ದರು. ಗುರುವಾರವಷ್ಟೇ ಅವರು ನಾಯಕತ್ವವನ್ನು ಜಡೇಜಗೆ ಹಸ್ತಾಂತರಿಸಿದ್ದಾರೆ. ಅದರಿಂದಾಗಿ ತಂಡದ ವರ್ಚಸ್ಸು ಉಳಿಸಿಕೊಳ್ಳುವ ಸವಾಲು ಎಡಗೈ ಆಲ್‌ರೌಂಡರ್ ಜಡೇಜ ಮುಂದಿದೆ. ಚೆನ್ನೈ ತಂಡದಲ್ಲಿ ರಾಬಿನ್ ಉತ್ತಪ್ಪ, ಅಂಬಟಿ ರಾಯುಡು, ಡ್ವೇನ್ ಬ್ರಾವೊ ಅವರಂತಹ ಅನುಭವಿಗಳು ಮತ್ತು ಋತುರಾಜ್ ಗಾಯಕವಾಡ್, ಶಿವಂ ದುಬೆ ಮತ್ತು ರಾಜವರ್ಧನ್ ಹಂಗರ್ಗೇಕರ್ ಅವರಂತಹ ಯುವ ಪ್ರತಿಭೆಗಳೂ ಇದ್ದಾರೆ. ಆದ್ದರಿಂದ ಕಣಕ್ಕಿಳಿಯುವ ಹನ್ನೊಂದರ ಬಳಗದ ಆಯ್ಕೆ ಮಾಡುವಲ್ಲಿ ಜಡೇಜ ಯಾವ ರೀತಿ ಯೋಜನೆ ರೂಪಿಸುವರು ಎಂಬುದೇ ಈಗ ಕುತೂಹಲದ ಸಂಗತಿ. ಬೌಲಿಂಗ್‌ನಲ್ಲಿ ದೀಪಕ್ ಚಾಹರ್ ಪ್ರಮುಖ ಅಸ್ತ್ರವಾಗಲಿದ್ದಾರೆ.

ಕೋಲ್ಕತ್ತ ತಂಡದಲ್ಲಿಯೂ ಅಜಿಂಕ್ಯ ರಹಾನೆ ಅವರಂತಹ ಅನುಭವಿ ಆಟಗಾರನಿಗೆ ಶ್ರೇಯಸ್ ಯಾವ ರೀತಿಯ ಅವಕಾಶ ನೀಡುವರು ಎಂಬುದನ್ನು ಕಾದು ನೋಡಬೇಕಿದೆ. ಆ್ಯಂಡ್ರೆ ರಸೆಲ್, ಆ್ಯರನ್ ಫಿಂಚ್ ತಮ್ಮ ನೈಜ ಲಯಕ್ಕೆ ಮರಳಿದರೆ ಶ್ರೇಯಸ್ ಕಾರ್ಯ ನಿರ್ವಹಣೆ ಸುಲಭವಾಗಲಿದೆ. ವೆಂಕಟೇಶ್ ಅಯ್ಯರ್, ಸುನಿಲ್ ನಾರಾಯಣ್ ಆಲ್‌ರೌಂಡ್ ಆಟವೂ ಮಹತ್ವವಾಗಲಿದೆ.



ಮಹೇಂದ್ರಸಿಂಗ್ ಧೋನಿ

### ತಂಡಗಳು

**ಚೆನ್ನೈ ಸೂಪರ್ ಕಿಂಗ್ಸ್:** ರವೀಂದ್ರ ಜಡೇಜ(ನಾಯಕ), ಮಹೇಂದ್ರ ಸಿಂಗ್ ಧೋನಿ, ಸಿ. ಹರಿ ನಿಶಾಂತ್, ಡೆವೊನ್ ಕಾನ್ವೆ, ರಾಬಿನ್ ಉತ್ತಪ್ಪ, ಋತುರಾಜ್ ಗಾಯಕವಾಡ್, ಸುಬ್ರಾಂಶು ಸೇನಾಪತಿ, ಅಂಬಟಿ ರಾಯುಡು, ಎನ್.ಜಗದೀಶನ್, ಕ್ರಿಸ್ ಜೋರ್ಡಾನ್, ಡ್ವೇನ್ ಪ್ರಿಟೋರಿಯಸ್, ಡ್ವೇನ್ ಬ್ರಾವೊ, ಕೆ.ಭಗತ್ ವರ್ಮಾ, ಮಿಚೆಲ್ ಸ್ಯಾಂಟನರ್, ರಾಜವರ್ಧನ್ ಹಂಗರ್ಗೇಕರ್, ಶಿವಂ ದುಬೆ, ಆ್ಯಡಂ ಮಿಲ್ನೆ, ದೀಪಕ್ ಚಾಹರ್, ಕೆ.ಎಂ. ಆಸಿಫ್, ಮಹೀಶ್ ತೀಕ್ಷಣ, ಮುಖೇಶ್ ಚೌಧರಿ, ಪ್ರಶಾಂತ್ ಸೋಲಂಕಿ, ಸಿಮರ್‌ಜೀತ್ ಸಿಂಗ್, ತುಷಾರ್ ದೇಶಪಾಂಡೆ,

**ಕೋಲ್ಕತ್ತ ನೈಟ್ ರೈಡರ್ಸ್:** ಶ್ರೇಯಸ್ ಅಯ್ಯರ್ (ನಾಯಕ), ಅಜಿಂಕ್ಯ ರಹಾನೆ, ರಿಂಕು ಸಿಂಗ್, ಅಲೆಕ್ಸ್ ಹೇಲ್ಸ್, ಆ್ಯರನ್ ಫಿಂಚ್, ಅಭಿಜೀತ್ ತೋಮರ್, ರಮೇಶ್ ಕುಮಾರ್, ಪ್ರಥಮ್ ಸಿಂಗ್, ಸ್ಯಾಮ್ ಬಿಲಿಂಗ್ಸ್, ಶೆಲ್ಡನ್ ಜಾಕ್ಸನ್, ಬಾಬಾ ಇಂದ್ರಜೀತ್, ಪ್ಯಾಟ್ ಕಮಿನ್ಸ್, ಮೊಹಮ್ಮದ್ ನಬಿ, ನಿತೀಶ್ ರಾಣಾ, ಶಿವಂ ಮಾವಿ, ಅನುಕೂಲ್ ರಾಯ್, ಚಮಿಕಾ ಕರುಣರತ್ನೆ, ಅಮನ್ ಖಾನ್, ಆ್ಯಂಡ್ರೆ ರಸೆಲ್, ವೆಂಕಟೇಶ್ ಅಯ್ಯರ್, ಉಮೇಶ್ ಯಾದವ್, ರಸಿಕ್ ದಾರ್, ಟಿಮ್ ಸೌಥಿ, ಅಶೋಕ್ ಶರ್ಮಾ, ಸುನಿಲ್ ನಾರಾಯಣ್, ವರುಣ್ ಚಕ್ರವರ್ತಿ

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಡಿಸ್ನಿ ಹಾಟ್‌ಸ್ಟಾರ್, ಸ್ಟಾರ್‌ಸ್ಪೋರ್ಟ್ಸ್

### ವಿವಿಧ ತಂಡಗಳ ಬಲಾಬಲ

| ತಂಡ | ಪಂದ್ಯ | ಜಯ | ಸೋಲು | ಟೈ | ಫಲಿತಾಂಶ ಇಲ್ಲ |
|---|---|---|---|---|---|
| ಬೆಂಗಳೂರು | 211 | 98 | 106 | 3 | 4 |
| ಕೋಲ್ಕತ್ತ | 209 | 107 | 98 | 4 | - |
| ಚೆನ್ನೈ | 195 | 117 | 76 | 1 | 1 |
| ಮುಂಬೈ | 217 | 125 | 88 | 4 | - |
| ಪಂಜಾಬ್ | 204 | 91 | 109 | 3 | 1 |
| ಡೆಲ್ಲಿ | 210 | 93 | 111 | 4 | 2 |
| ಹೈದರಾಬಾದ್ | 138 | 68 | 66 | 4 | - |
| ರಾಜಸ್ಥಾನ್ | 175 | 84 | 86 | 3 | 2 |

### ಟೂರ್ನಿಯ ಪ್ರಮುಖ ಅಂಶಗಳು

| | |
|---|---|
| 4 | ಈ ಬಾರಿಯ ಟೂರ್ನಿಯ ಲೀಗ್ ಹಂತದ ಪಂದ್ಯಗಳು ನಡೆಯುವ ಕ್ರೀಡಾಂಗಣಗಳ ಸಂಖ್ಯೆ |
| 74 | ಟೂರ್ನಿಯಲ್ಲಿ ನಡೆಯಲಿರುವ ಒಟ್ಟು ಪಂದ್ಯಗಳು |
| 10 | ಪ್ರಶಸ್ತಿಗಾಗಿ ಸೆಣಸಲಿರುವ ತಂಡಗಳು |
| 65 | ಈ ಆವೃತ್ತಿಯ ಟೂರ್ನಿಯು ನಡೆಯುವ ದಿನಗಳು |
| 02 | ಸೇರ್ಪಡೆಯಾಗಿರುವ ಹೊಸ ತಂಡಗಳು ಲಖನೌ ಸೂಪರ್ ಜೈಂಟ್ಸ್ ಮತ್ತು ಗುಜರಾತ್ ಟೈಟನ್ಸ್ |
| 09 | ಟಿವಿಯಲ್ಲಿ ವೀಕ್ಷಕ ವಿವರಣೆ ಪ್ರಸಾರವಾಗುವ ಭಾಷೆಗಳ ಸಂಖ್ಯೆ |
| 85 | ವೀಕ್ಷಕ ವಿವರಣೆಗಾರರಾಗಿ ಕಾರ್ಯನಿರ್ವಹಿಸುವವರ ಸಂಖ್ಯೆ |

### ಪ್ರಶಸ್ತಿ ವಿಜೇತರು

| ವರ್ಷ | ವಿಜೇತ ತಂಡ | ರನ್ನರ್ ಅಪ್ |
|---|---|---|
| 2008 | ರಾಜಸ್ಥಾನ | ಚೆನ್ನೈ |
| 2009 | ಡೆಕ್ಕನ್‌ಚಾರ್ಜರ್ಸ್ | ಬೆಂಗಳೂರು |
| 2010 | ಚೆನ್ನೈ | ಮುಂಬೈ |
| 2011 | ಚೆನ್ನೈ | ಬೆಂಗಳೂರು |
| 2012 | ಕೋಲ್ಕತ್ತ | ಚೆನ್ನೈ |
| 2013 | ಮುಂಬೈ | ಚೆನ್ನೈ |
| 2014 | ಕೋಲ್ಕತ್ತ | ಪಂಜಾಬ್ |
| 2015 | ಮುಂಬೈ | ಚೆನ್ನೈ |
| 2016 | ಹೈದರಾಬಾದ್ | ಬೆಂಗಳೂರು |
| 2017 | ಮುಂಬೈ | ಪುಣೆ ಎಸ್‌ಜಿ |
| 2018 | ಚೆನ್ನೈ | ಹೈದರಾಬಾದ್ |
| 2019 | ಮುಂಬೈ | ಚೆನ್ನೈ |
| 2020 | ಮುಂಬೈ | ಡೆಲ್ಲಿ |
| 2021 | ಚೆನ್ನೈ | ಕೋಲ್ಕತ್ತ |

### ಎರಡು ಡಿಆರ್‌ಎಸ್; 'ಮಂಕಡಿಂಗ್'ಗೆ ಅವಕಾಶ

ಎರಡು ಡಿಆರ್‌ಎಸ್, ಮಂಕಂಡಿಂಗ್‌ನಲ್ಲಿ ರನೌಟ್ ಸೇರಿದಂತೆ ಎಂಸಿಸಿ ಜಾರಿಗೆ ತಂದಿರುವ ಹೊಸ ನಿಯಮಗಳೆಲ್ಲವೂ ಈ ಬಾರಿಯ ಐಪಿಎಲ್‌ನಲ್ಲಿ ಇರುತ್ತವೆ.

- ಅಂಪೈರ್ ತೀರ್ಪು ಮರುಪರಿಶೀಲನೆ (ಡಿಆರ್‌ಎಸ್) ಪದ್ಧತಿಯಡಿ ಈ ಹಿಂದೆ ಒಂದು ತಂಡಕ್ಕೆ ಇನಿಂಗ್ಸ್‌ನಲ್ಲಿ ಒಂದು ಅವಕಾಶ ಮಾತ್ರ ನೀಡಲಾಗುತ್ತಿತ್ತು. ಈ ಬಾರಿಯ ಟೂರ್ನಿಯ ಪಂದ್ಯಗಳಲ್ಲಿ ಪ್ರತಿ ತಂಡಕ್ಕೆ ಪ್ರತಿ ಇನಿಂಗ್ಸ್‌ನಲ್ಲಿ ಎರಡು ಡಿಆರ್‌ಎಸ್ ಅವಕಾಶಗಳು ಲಭಿಸಲಿವೆ.
- ಕೋವಿಡ್–19ರ ಸಂದರ್ಭದಲ್ಲಿ ಚೆಂಡಿಗೆ ಎಂಜಲು ಸವರುವುದರ ಮೇಲೆ ಐಸಿಸಿ ನಿಷೇಧ ಹೇರಿತ್ತು. ಐಪಿಎಲ್‌ನಲ್ಲಿ ಈ ಬಾರಿ ಈ ನಿಯಮ ಜಾರಿಯಲ್ಲಿರುತ್ತೆ.
- ಬೌಲರ್ ಚೆಂಡು ರಿಲೀಸ್ ಮಾಡುವ ಮೊದಲೇ ನಾನ್ ಸ್ಟ್ರೈಕರ್ ಕ್ರೀಸ್ ಬಿಟ್ಟರೆ ರನೌಟ್ ಮಾಡುವುದಕ್ಕೂ (ಮಂಕಡಿಂಗ್) ಹೊಸ ನಿಯಮದಲ್ಲಿ ಅವಕಾಶವಿದೆ.
- ತಂಡದಲ್ಲಿ ಸೋಂಕು ಕಾಣಿಸಿಕೊಂಡು 12 ಆಟಗಾರರು (ಭಾರತದ 7 ಆಟಗಾರರು ಕಡ್ಡಾಯ) ಆಟಕ್ಕೆ ಲಭ್ಯ ಇಲ್ಲದೇ ಇದ್ದರೆ ಆ ಪಂದ್ಯವನ್ನು ಮರುನಿಗದಿ ಮಾಡಲಾಗುತ್ತದೆ. ಈ ಕುರಿತು ಐಪಿಎಲ್ ತಾಂತ್ರಿಕ ಸಮಿತಿ ನಿರ್ಧಾರ ಕೈಗೊಳ್ಳಲಿದೆ.
- ಬ್ಯಾಟರ್ ಕ್ಯಾಚ್ ಔಟ್ ಆದಾಗ ನಾನ್‌ಸ್ಟ್ರೈಕರ್ ಕ್ರೀಸ್‌ನ ಅರ್ಧಭಾಗವನ್ನು ದಾಟಿದ್ದರೆ ಮುಂದಿನ ಎಸೆತ ಎದುರಿಸುವ ಅವಕಾಶ ಆ ಬ್ಯಾಟರ್‌ಗೆ ಲಭಿಸುತ್ತಿತ್ತು. ಆದರೆ ಇನ್ನು ಮುಂದೆ ಹೊಸ ಬ್ಯಾಟರ್ ಸ್ಟ್ರೈಕ್ ತೆಗೆದುಕೊಳ್ಳಲು ಅರ್ಹ.

### ಕಣದಲ್ಲಿ ಕರ್ನಾಟಕದವರು

ಕೆ.ಎಲ್ ರಾಹುಲ್, ಮನೀಶ್ ಪಾಂಡೆ, ಕೃಷ್ಣಪ್ಪ ಗೌತಮ್ (ಮೂವರೂ ಲಖನೌ ಸೂಪರ್ ಜೈಂಟ್ಸ್), ಪ್ರವೀಣ್ ದುಬೆ (ಡೆಲ್ಲಿ ಕ್ಯಾಪಿಟಲ್ಸ್), ಅಭಿನವ್ ಮನೋಹರ್ (ಗುಜರಾತ್ ಟೈಟನ್ಸ್), ಮಯಂಕ್ ಅಗರವಾಲ್ (ಪಂಜಾಬ್ ಕಿಂಗ್ಸ್), ದೇವದತ್ ಪಡಿಕ್ಕಲ್, ಕೆ.ಸಿ ಕಾರ್ಯಪ್ಪ, ಪ್ರಸಿದ್ಧ ಕೃಷ್ಣ, ಕರುಣ್ ನಾಯರ್ ( ನಾಲ್ವರೂ ರಾಜಸ್ಥಾನ್ ರಾಯಲ್ಸ್), ಆರ್. ಸಮರ್ಥ್, ಜೆ. ಸುಚಿತ್, ಶ್ರೇಯಸ್ ಗೋಪಾಲ್ (ಮೂವರೂ ಸನ್‌ರೈಸರ್ಸ್ ಹೈದರಾಬಾದ್), ರಾಬಿನ್ ಉತ್ತಪ್ಪ (ಚೆನ್ನೈ ಸೂಪರ್ ಕಿಂಗ್ಸ್), ಅನೀಶ್ವರ್ ಗೌತಮ್, ಲವನೀತ್ ಸಿಸೋಡಿಯ (ಇಬ್ಬರೂ ರಾಯಲ್ ಚಾಲೆಂಜರ್ಸ್ ಬೆಂಗಳೂರು)

### ಕಾಮೆಂಟ್ರಿ ಬಾಕ್ಸ್‌ನಲ್ಲಿ ಕನ್ನಡಿಗರು


ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರರಾದ ವೆಂಕಟೇಶ್ ಪ್ರಸಾದ್ ಮತ್ತು ವಿಜಯ್ ಭಾರದ್ವಾಜ್ ಐಪಿಎಲ್ ಕನ್ನಡ ವೀಕ್ಷಕ ವಿವರಣೆಗಾರರಾಗಿ ಕಾರ್ಯನಿರ್ವಹಿಸುವರು. ಸ್ಟಾರ್ ಸ್ಪೋರ್ಟ್ಸ್ ಕನ್ನಡ ವಾಹಿನಿಯಲ್ಲಿ ಮಹಿಳಾ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಕೂಡ ಕಾಣಿಸಿಕೊಳ್ಳುವರು. ಇವರೊಂದಿಗೆ ಮಧು ಮೈಲಂಕೋಡಿ, ರೀನಾ ಡಿಸೋಜಾ, ಕಿರಣ ಶ್ರೀನಿವಾಸ, ಸುಮೇಶ್ ಗೋಣಿ, ಪಿ. ಶ್ರೀನಿವಾಸಮೂರ್ತಿ, ಭರತ್ ಚಿಪ್ಲಿ, ಅಖಿಲ್ ಬಾಲಚಂದ್ರ, ಪವನ್ ದೇಶಪಾಂಡೆ ಇದ್ದಾರೆ.

## ವೇಳಾಪಟ್ಟಿ (ಲೀಗ್ ಹಂತ)

| ದಿನಾಂಕ | ಪಂದ್ಯ | ಸ್ಥಳ | ಆರಂಭ |
|---|---|---|---|
| ಮಾ.26 | ಚೆನ್ನೈ ಸೂಪರ್ ಕಿಂಗ್ಸ್–ಕೋಲ್ಕತ್ತ ನೈಟ್ ರೈಡರ್ಸ್ | ಮುಂಬೈ | ರಾತ್ರಿ7.30 |
| ಮಾ.27 | ಡೆಲ್ಲಿ ಕ್ಯಾಪಿಟಲ್ಸ್–ಮುಂಬೈ ಇಂಡಿಯನ್ಸ್ | ಮುಂಬೈ | ಮ.3.30 |
| ಮಾ.27 | ಪಂಜಾಬ್ ಕಿಂಗ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು | ಮುಂಬೈ | ರಾತ್ರಿ7.30 |
| ಮಾ.28 | ಗುಜರಾತ್ ಟೈಟನ್ಸ್–ಲಖನೌ ಸೂಪರ್ ಜೈಂಟ್ಸ್ | ಮುಂಬೈ | ರಾತ್ರಿ7.30 |
| ಮಾ.29 | ಸನ್‌ರೈಸರ್ಸ್ ಹೈದರಾಬಾದ್–ರಾಜಸ್ಥಾನ್ ರಾಯಲ್ಸ್ | ಪುಣೆ | ರಾತ್ರಿ7.30 |
| ಮಾ.30 | ರಾಯಲ್ ಚಾಲೆಂಜರ್ಸ್ ಬೆಂಗಳೂರು–ಕೋಲ್ಕತ್ತ ನೈಟ್ ರೈಡರ್ಸ್ | ಮುಂಬೈ | ರಾತ್ರಿ7.30 |
| ಮಾ.31 | ಲಖನೌ ಸೂಪರ್ ಜೈಂಟ್ಸ್–ಚೆನ್ನೈ ಸೂಪರ್ ಕಿಂಗ್ಸ್ | ಮುಂಬೈ | ರಾತ್ರಿ7.30 |
| ಏ.1 | ಕೋಲ್ಕತ್ತ ನೈಟ್ ರೈಡರ್ಸ್–ಪಂಜಾಬ್ ಕಿಂಗ್ಸ್ | ಮುಂಬೈ | ರಾತ್ರಿ7.30 |
| ಏ.2 | ಮುಂಬೈ ಇಂಡಿಯನ್ಸ್–ರಾಜಸ್ಥಾನ್ ರಾಯಲ್ಸ್ | ಮುಂಬೈ | ಮ.3.30 |
| ಏ.2 | ಗುಜರಾತ್ ಟೈಟನ್ಸ್–ಡೆಲ್ಲಿ ಕ್ಯಾಪಿಟಲ್ಸ್ | ಪುಣೆ | ರಾತ್ರಿ7.30 |
| ಏ.3 | ಚೆನ್ನೈ ಸೂಪರ್ ಕಿಂಗ್ಸ್–ಪಂಜಾಬ್ ಕಿಂಗ್ಸ್ | ಮುಂಬೈ | ರಾತ್ರಿ7.30 |
| ಏ.4 | ಸನ್‌ರೈಸರ್ಸ್ ಹೈದರಾಬಾದ್–ಲಖನೌ ಸೂಪರ್ ಜೈಂಟ್ಸ್ | ಮುಂಬೈ | ರಾತ್ರಿ7.30 |
| ಏ.5 | ರಾಜಸ್ಥಾನ್ ರಾಯಲ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು | ಮುಂಬೈ | ರಾತ್ರಿ7.30 |
| ಏ.6 | ಕೋಲ್ಕತ್ತ ನೈಟ್ ರೈಡರ್ಸ್–ಮುಂಬೈ ಇಂಡಿಯನ್ಸ್ | ಪುಣೆ | ರಾತ್ರಿ7.30 |
| ಏ.7 | ಲಖನೌ ಸೂಪರ್ ಜೈಂಟ್ಸ್–ಡೆಲ್ಲಿ ಕ್ಯಾಪಿಟಲ್ಸ್ | ಮುಂಬೈ | ರಾತ್ರಿ7.30 |
| ಏ.8 | ಪಂಜಾಬ್ ಕಿಂಗ್ಸ್–ಗುಜರಾತ್ ಟೈಟನ್ಸ್ | ಮುಂಬೈ | ರಾತ್ರಿ7.30 |
| ಏ.9 | ಚೆನ್ನೈ ಸೂಪರ್ ಕಿಂಗ್ಸ್–ಸನ್‌ರೈಸರ್ಸ್ ಹೈದರಾಬಾದ್ | ಮುಂಬೈ | ಮ.3.30 |
| ಏ.9 | ರಾಯಲ್ ಚಾಲೆಂಜರ್ಸ್ ಬೆಂಗಳೂರು–ಮುಂಬೈ ಇಂಡಿಯನ್ಸ್ | ಪುಣೆ | ರಾತ್ರಿ7.30 |
| ಏ.10 | ಕೋಲ್ಕತ್ತ ನೈಟ್ ರೈಡರ್ಸ್–ಡೆಲ್ಲಿ ಕ್ಯಾಪಿಟಲ್ಸ್ | ಮುಂಬೈ | ರಾತ್ರಿ7.30 |
| ಏ.10 | ರಾಜಸ್ಥಾನ್ ರಾಯಲ್ಸ್–ಲಖನೌ ಸೂಪರ್ ಜೈಂಟ್ಸ್ | ಮುಂಬೈ | ರಾತ್ರಿ7.30 |
| ಏ.11 | ಸನ್‌ರೈಸರ್ಸ್ ಹೈದರಾಬಾದ್–ಗುಜರಾತ್ ಟೈಟನ್ಸ್ | ಮುಂಬೈ | ರಾತ್ರಿ7.30 |
| ಏ.12 | ಚೆನ್ನೈ ಸೂಪರ್ ಕಿಂಗ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು | ಮುಂಬೈ | ರಾತ್ರಿ7.30 |
| ಏ.13 | ಮುಂಬೈ ಇಂಡಿಯನ್ಸ್–ಪಂಜಾಬ್ ಕಿಂಗ್ಸ್ | ಪುಣೆ | ರಾತ್ರಿ7.30 |
| ಏ.14 | ರಾಜಸ್ಥಾನ್ ರಾಯಲ್ಸ್–ಗುಜರಾತ್ ಟೈಟನ್ಸ್ | ಮುಂಬೈ | ರಾತ್ರಿ7.30 |
| ಏ.15 | ಸನ್‌ರೈಸರ್ಸ್ ಹೈದರಾಬಾದ್–ಕೋಲ್ಕತ್ತ ನೈಟ್ ರೈಡರ್ಸ್ | ಮುಂಬೈ | ರಾತ್ರಿ7.30 |
| ಏ.16 | ಮುಂಬೈ ಇಂಡಿಯನ್ಸ್–ಲಖನೌ ಸೂಪರ್ ಜೈಂಟ್ಸ್ | ಮುಂಬೈ | ಮ.3.30 |
| ಏ.16 | ಡೆಲ್ಲಿ ಕ್ಯಾಪಿಟಲ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು | ಮುಂಬೈ | ರಾತ್ರಿ7.30 |
| ಏ.17 | ಪಂಜಾಬ್ ಕಿಂಗ್ಸ್–ಸನ್‌ರೈಸರ್ಸ್ ಹೈದರಾಬಾದ್ | ಮುಂಬೈ | ಮ.3.30 |
| ಏ.17 | ಗುಜರಾತ್ ಟೈಟನ್ಸ್–ಚೆನ್ನೈ ಸೂಪರ್ ಕಿಂಗ್ಸ್ | ಪುಣೆ | ರಾತ್ರಿ7.30 |
| ಏ.18 | ರಾಜಸ್ಥಾನ್ ರಾಯಲ್ಸ್–ಕೋಲ್ಕತ್ತ ನೈಟ್ ರೈಡರ್ಸ್ | ಮುಂಬೈ | ರಾತ್ರಿ7.30 |
| ಏ.19 | ಲಖನೌ ಸೂಪರ್ ಜೈಂಟ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು | ಮುಂಬೈ | ರಾತ್ರಿ7.30 |
| ಏ.20 | ಡೆಲ್ಲಿ ಕ್ಯಾಪಿಟಲ್ಸ್–ಪಂಜಾಬ್ ಕಿಂಗ್ಸ್ | ಪುಣೆ | ರಾತ್ರಿ7.30 |
| ಏ.21 | ಮುಂಬೈ ಇಂಡಿಯನ್ಸ್–ಚೆನ್ನೈ ಸೂಪರ್ ಕಿಂಗ್ಸ್ | ಮುಂಬೈ | ರಾತ್ರಿ7.30 |
| ಏ.22 | ಡೆಲ್ಲಿ ಕ್ಯಾಪಿಟಲ್ಸ್–ರಾಜಸ್ಥಾನ್ ರಾಯಲ್ಸ್ | ಪುಣೆ | ರಾತ್ರಿ7.30 |
| ಏ.23 | ಕೋಲ್ಕತ್ತ ನೈಟ್ ರೈಡರ್ಸ್–ಗುಜರಾತ್ ಟೈಟನ್ಸ್ | ಮುಂಬೈ | ಮ.3.30 |
| ಏ.23 | ರಾಯಲ್ ಚಾಲೆಂಜರ್ಸ್ ಬೆಂಗಳೂರು–ಸನ್‌ರೈಸರ್ಸ್ ಹೈದರಾಬಾದ್ | ಮುಂಬೈ | ರಾತ್ರಿ7.30 |

| ದಿನಾಂಕ | ಪಂದ್ಯ | ಸ್ಥಳ | ಆರಂಭ |
|---|---|---|---|
| ಏ.24 | ಲಖನೌ ಸೂಪರ್ ಜೈಂಟ್ಸ್–ಮುಂಬೈ ಇಂಡಿಯನ್ಸ್ | ಮುಂಬೈ | ರಾತ್ರಿ7.30 |
| ಏ.25 | ಪಂಜಾಬ್ ಕಿಂಗ್ಸ್–ಚೆನ್ನೈ ಸೂಪರ್ ಕಿಂಗ್ಸ್ | ಮುಂಬೈ | ರಾತ್ರಿ7.30 |
| ಏ.26 | ರಾಯಲ್ ಚಾಲೆಂಜರ್ಸ್ ಬೆಂಗಳೂರು–ರಾಜಸ್ಥಾನ್ ರಾಯಲ್ಸ್ | ಪುಣೆ | ರಾತ್ರಿ7.30 |
| ಏ.27 | ಗುಜರಾತ್ ಟೈಟನ್ಸ್–ಸನ್‌ರೈಸರ್ಸ್ ಹೈದರಾಬಾದ್ | ಮುಂಬೈ | ರಾತ್ರಿ7.30 |
| ಏ.28 | ಡೆಲ್ಲಿ ಕ್ಯಾಪಿಟಲ್ಸ್–ಕೋಲ್ಕತ್ತ ನೈಟ್ ರೈಡರ್ಸ್ | ಮುಂಬೈ | ರಾತ್ರಿ7.30 |
| ಏ.29 | ಪಂಜಾಬ್ ಕಿಂಗ್ಸ್–ಲಖನೌ ಸೂಪರ್ ಜೈಂಟ್ಸ್ | ಪುಣೆ | ರಾತ್ರಿ7.30 |
| ಏ.30 | ಗುಜರಾತ್ ಟೈಟನ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು | ಮುಂಬೈ | ಮ.3.30 |
| ಏ.30 | ರಾಜಸ್ಥಾನ್ ರಾಯಲ್ಸ್–ಮುಂಬೈ ಇಂಡಿಯನ್ಸ್ | ಮುಂಬೈ | ರಾತ್ರಿ7.30 |
| ಮೇ1 | ಡೆಲ್ಲಿ ಕ್ಯಾಪಿಟಲ್ಸ್–ಲಖನೌ ಸೂಪರ್ ಜೈಂಟ್ಸ್ | ಮುಂಬೈ | ಮ.3.30 |
| ಮೇ1 | ಸನ್‌ರೈಸರ್ಸ್ ಹೈದರಾಬಾದ್–ಚೆನ್ನೈ ಸೂಪರ್ ಕಿಂಗ್ಸ್ | ಪುಣೆ | ರಾತ್ರಿ7.30 |
| ಮೇ2 | ಕೋಲ್ಕತ್ತ ನೈಟ್ ರೈಡರ್ಸ್–ರಾಜಸ್ಥಾನ್ ರಾಯಲ್ಸ್ | ಮುಂಬೈ | ರಾತ್ರಿ7.30 |
| ಮೇ3 | ಗುಜರಾತ್ ಟೈಟನ್ಸ್–ಪಂಜಾಬ್ ಕಿಂಗ್ಸ್ | ಮುಂಬೈ | ರಾತ್ರಿ7.30 |
| ಮೇ4 | ರಾಯಲ್ ಚಾಲೆಂಜರ್ಸ್ ಬೆಂಗಳೂರು–ಚೆನ್ನೈ ಸೂಪರ್ ಕಿಂಗ್ಸ್ | ಪುಣೆ | ರಾತ್ರಿ7.30 |
| ಮೇ5 | ಡೆಲ್ಲಿ ಕ್ಯಾಪಿಟಲ್ಸ್–ಸನ್‌ರೈಸರ್ಸ್ ಹೈದರಾಬಾದ್ | ಮುಂಬೈ | ರಾತ್ರಿ7.30 |
| ಮೇ6 | ಗುಜರಾತ್ ಟೈಟನ್ಸ್–ಮುಂಬೈ ಇಂಡಿಯನ್ಸ್ | ಮುಂಬೈ | ರಾತ್ರಿ7.30 |
| ಮೇ7 | ಪಂಜಾಬ್ ಕಿಂಗ್ಸ್–ರಾಜಸ್ಥಾನ್ ರಾಯಲ್ಸ್ | ಮುಂಬೈ | ಮ.3.30 |
| ಮೇ7 | ಲಖನೌ ಸೂಪರ್ ಜೈಂಟ್ಸ್– ಕೋಲ್ಕತ್ತ ನೈಟ್ ರೈಡರ್ಸ್ | ಪುಣೆ | ರಾತ್ರಿ7.30 |
| ಮೇ8 | ಸನ್‌ರೈಸರ್ಸ್ ಹೈದರಾಬಾದ್–ರಾಯಲ್ ಚಾಲೆಂಜರ್ಸ್ ಬೆಂಗಳೂರು | ಮುಂಬೈ | ಮ.3.30 |
| ಮೇ8 | ಚೆನ್ನೈ ಸೂಪರ್ ಕಿಂಗ್ಸ್–ಡೆಲ್ಲಿ ಕ್ಯಾಪಿಟಲ್ಸ್ | ಮುಂಬೈ | ರಾತ್ರಿ7.30 |
| ಮೇ9 | ಮುಂಬೈ ಇಂಡಿಯನ್ಸ್–ಕೋಲ್ಕತ್ತ ನೈಟ್ ರೈಡರ್ಸ್ | ಮುಂಬೈ | ರಾತ್ರಿ7.30 |
| ಮೇ10 | ಲಖನೌ ಸೂಪರ್ ಜೈಂಟ್ಸ್–ಗುಜರಾತ್ ಟೈಟನ್ಸ್ | ಪುಣೆ | ರಾತ್ರಿ7.30 |
| ಮೇ11 | ರಾಜಸ್ಥಾನ್ ರಾಯಲ್ಸ್–ಡೆಲ್ಲಿ ಕ್ಯಾಪಿಟಲ್ಸ್ | ಮುಂಬೈ | ರಾತ್ರಿ7.30 |
| ಮೇ12 | ಚೆನ್ನೈ ಸೂಪರ್ ಕಿಂಗ್ಸ್–ಮುಂಬೈ ಇಂಡಿಯನ್ಸ್ | ಮುಂಬೈ | ರಾತ್ರಿ7.30 |
| ಮೇ13 | ರಾಯಲ್ ಚಾಲೆಂಜರ್ಸ್ ಬೆಂಗಳೂರು–ಪಂಜಾಬ್ ಕಿಂಗ್ಸ್ | ಮುಂಬೈ | ರಾತ್ರಿ7.30 |
| ಮೇ14 | ಕೋಲ್ಕತ್ತ ನೈಟ್ ರೈಡರ್ಸ್–ಸನ್‌ರೈಸರ್ಸ್ ಹೈದರಾಬಾದ್ | ಪುಣೆ | ರಾತ್ರಿ7.30 |
| ಮೇ15 | ಚೆನ್ನೈ ಸೂಪರ್ ಕಿಂಗ್ಸ್–ಗುಜರಾತ್ ಟೈಟನ್ಸ್ | ಮುಂಬೈ | ಮ.3.30 |
| ಮೇ15 | ಲಖನೌ ಸೂಪರ್ ಜೈಂಟ್ಸ್–ರಾಜಸ್ಥಾನ್ ರಾಯಲ್ಸ್ | ಮುಂಬೈ | ರಾತ್ರಿ7.30 |
| ಮೇ16 | ಪಂಜಾಬ್ ಕಿಂಗ್ಸ್–ಡೆಲ್ಲಿ ಕ್ಯಾಪಿಟಲ್ಸ್ | ಮುಂಬೈ | ರಾತ್ರಿ7.30 |
| ಮೇ17 | ಮುಂಬೈ ಇಂಡಿಯನ್ಸ್–ಸನ್‌ರೈಸರ್ಸ್ ಹೈದರಾಬಾದ್ | ಮುಂಬೈ | ರಾತ್ರಿ7.30 |
| ಮೇ18 | ಕೋಲ್ಕತ್ತ ನೈಟ್ ರೈಡರ್ಸ್–ಲಖನೌ ಸೂಪರ್ ಜೈಂಟ್ಸ್ | ಮುಂಬೈ | ರಾತ್ರಿ7.30 |
| ಮೇ19 | ರಾಯಲ್ ಚಾಲೆಂಜರ್ಸ್ ಬೆಂಗಳೂರು–ಗುಜರಾತ್ ಟೈಟನ್ಸ್ | ಮುಂಬೈ | ರಾತ್ರಿ7.30 |
| ಮೇ20 | ರಾಜಸ್ಥಾನ್ ರಾಯಲ್ಸ್–ಚೆನ್ನೈ ಸೂಪರ್ ಕಿಂಗ್ಸ್ | ಮುಂಬೈ | ರಾತ್ರಿ7.30 |
| ಮೇ21 | ಮುಂಬೈ ಇಂಡಿಯನ್ಸ್–ಡೆಲ್ಲಿ ಕ್ಯಾಪಿಟಲ್ಸ್ | ಮುಂಬೈ | ರಾತ್ರಿ7.30 |
| ಮೇ22 | ಸನ್‌ರೈಸರ್ಸ್ ಹೈದರಾಬಾದ್–ಪಂಜಾಬ್ ಕಿಂಗ್ಸ್ | ಮುಂಬೈ | ರಾತ್ರಿ7.30 |

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್




ಐಪಿಎಲ್ ಆರಂಭವಾಗುತ್ತಿರುವ ಹೊತ್ತಿಗೆ ತಮ್ಮ ಕಾರನ್ನೇ ಸಿಂಗರಿಸುವ ಮೂಲಕ ಶಿವಮೊಗ್ಗ ಜಿಲ್ಲೆ ಸಾಗರದ ಕ್ರಿಕೆಟ್ ಅಭಿಮಾನಿ ಸಂತೋಷ್ ಸದ್ಗುರು ಆರ್‌ಸಿಬಿ ತಂಡದ ಪರವಾಗಿ ಅಭಿಯಾನ ನಡೆಸಲು ಮುಂದಾಗಿದ್ದಾರೆ.

## ಕುಸ್ತಿ: ಅರ್ಜುನ್ ಆಯ್ಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಭಾರತೀಯ ಸೇನೆಯ ಯೋಧ, ಬಾಗಲಕೋಟೆ ಜಿಲ್ಲೆಯ ಬೇವಿನಹಳ್ಳಿಯ ಅರ್ಜುನ್ ಹಲಕುರ್ಕಿ ಅವರು ಮಂಗೋಲಿಯಾದಲ್ಲಿ ಏಪ್ರಿಲ್ 19ರಿಂದ ನಡೆಯಲಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಗ್ರಿಕೊ ರೋಮನ್ ಸ್ಟೈಲ್‌ನ 55 ಕೆ.ಜಿ. ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಸೀನಿಯರ್ ಫ್ರೀ ಸ್ಟೈಲ್ ಮತ್ತು ಗ್ರಿಕೊ ರೋಮನ್ ಕುಸ್ತಿಯಲ್ಲಿ ಭಾರತದ ತಂಡವನ್ನು ಆಯ್ಕೆ ಮಾಡಲು ದೆಹಲಿಯಲ್ಲಿ ಗುರುವಾರ ನಡೆದ ಆಯ್ಕೆ ಟ್ರಯಲ್ಸ್‌ನಲ್ಲಿ ಉತ್ತರ ಪ್ರದೇಶ, ಹರಿಯಾಣ, ಪಂಜಾಬ್ ಹಾಗೂ ದೆಹಲಿಯ ಕುಸ್ತಿಪಟುಗಳನ್ನು ಮಣಿಸುವ ಮೂಲಕ ಅರ್ಜುನ್ ಹಲಕುರ್ಕಿ ಅವರು ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.



ಅರ್ಜುನ್

2020ರಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಅರ್ಜುನ್ ಅವರು ಕಂಚಿನ ಪದಕ ಗೆದ್ದುಕೊಂಡಿದ್ದರು.

ದಾವಣಗೆರೆಯ ಕ್ರೀಡಾ ವಸತಿನಿಲಯದಲ್ಲಿ ಆರ್. ಶಿವಾನಂದ ಅವರಿಂದ ತರಬೇತಿ ಪಡೆದುಕೊಂಡಿದ್ದರು.

## ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿ: ಬೇತ್ ಮೂನಿ ಅಜೇಯ ಅರ್ಧಶತಕ

# ಮಣಿದ ಬಾಂಗ್ಲಾ: ಅಗ್ರಸ್ಥಾನಕ್ಕೆ ಆಸ್ಟ್ರೇಲಿಯಾ

ವೆಲಿಂಗ್ಟನ್: ಕೆಲವು ಆತಂಕದ ಕ್ಷಣಗಳನ್ನು ಎದುರಿಸಿದರೂ ಛಲದಿಂದ ಮುಂದುವರಿದ ಆಸ್ಟ್ರೇಲಿಯಾ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಬೇಸಿನ್ ರಿಸರ್ವ್ ಅಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ಐದು ವಿಕೆಟ್‌ಗಳಿಂದ ಬಾಂಗ್ಲಾದೇಶವನ್ನು ಮಣಿಸಿತು. ಬಾಂಗ್ಲಾದೇಶ ಈ ಮೂಲಕ ಏಕೈಕ ಪಂದ್ಯ ಗೆದ್ದು ಲೀಗ್ ಹಂತವನ್ನು ಮುಗಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡ ಆಸ್ಟ್ರೇಲಿಯಾದ ಆ್ಯಶ್ಲಿ ಗಾರ್ಡನರ್ ಮತ್ತು ಜೆಸ್ ಜೊನಾಥನ್ ಅವರ ಪರಿಣಾಮಕಾರಿ ದಾಳಿಯ ನೆರವಿನಿಂದ 43 ಓವರ್‌ಗಳಲ್ಲಿ ಎದುರಾಳಿಗಳನ್ನು 135 ರನ್‌ಗಳಿಗೆ ಕೆಡವಿತು. ಗುರಿ ಸುಲಭವಾಗಿತ್ತಾದ-ರೂ ಆರಂಭದಲ್ಲಿ ಎರಡು ವಿಕೆಟ್ ಕಳೆದುಕೊಂಡ ಆಸ್ಟ್ರೇಲಿಯಾ ಆತಂಕಕ್ಕೆ ಸಿಲುಕಿತ್ತು. ಆದರೆ ಬೇತ್ ಮೂನಿ ಅವರ ಅಜೇಯ ಅರ್ಧಶತಕ ತಂಡದ ಕೈ ಹಿಡಿಯಿತು.

ತಂಡದ ಮೊತ್ತ 22 ರನ್ ಆಗಿದ್ದಾಗ ಅಲಿಸಾ ಹೀಲಿ ಅವರನ್ನು ಸಲ್ಮಾ ಖಾತುನ್ ಔಟ್ ಮಾಡಿದರು. ನಾಯಕಿ ಮೆಗ್ ಲ್ಯಾನಿಂಗ್ ಖಾತೆ ತೆರೆಯದೇ ವಾಪಸಾದರು. ಆರಂಭಿಕ ಬ್ಯಾಟರ್ ರಾಚೆಲ್ ಹೇನ್ಸ್ ಕೂಡ ಔಟಾದಾಗ ತಂಡದ ಮೊತ್ತ ಕೇವಲ 26 ಆಗಿತ್ತು. ಬೇತ್ ಮೂನಿ ಜೊತೆಗೂಡಿದ ತಹಿಲಾ ಮೆಗ್ರಾ 15 ರನ್ ಸೇರಿಸುವಷ್ಟರಲ್ಲಿ ವಿಕೆಟ್ ಕಳೆದುಕೊಂಡರು.

ಒಂದು ತುದಿಯಲ್ಲಿ ವಿಕೆಟ್‌ಗಳು ಉರುಳುತ್ತಿದ್ದರೂ ಗಟ್ಟಿಯಾಗಿ ನೆಲೆಯೂರಿದ ಬೇತ್ ಮೂನಿ (66; 75 ಎಸೆತ, 5 ಬೌಂಡರಿ) ಆ್ಯಶ್ಲಿ ಗಾರ್ಡನರ್ ಮತ್ತು ಅನಾಬೆಲ್ ಸುಥರ್ಲೆಂಡ್ ಜೊತೆಗೂಡಿ ತಂಡವನ್ನು ದಡ ಸೇರಿಸಿದರು. 32.1 ಓವರ್‌ಗಳಲ್ಲಿ ತಂಡ ಜಯದ ನಗೆ ಸೂಸಿತು.

**ಸ್ಪಿನ್ ದಾಳಿಗೆ ಬೆದರಿದ ಬಾಂಗ್ಲಾ:** ಬಾಂಗ್ಲಾದೇಶದ ಬ್ಯಾಟರ್‌ಗಳು ಆರಂಭದಲ್ಲಿ ನಿಧಾನಕ್ಕೆ ರನ್ ಗಳಿಸುತ್ತ ಸಾಗಿದರು. ಆದರೆ ಸ್ಪಿನ್ನರ್‌ಗಳಾದ ಆ್ಯಶ್ಲಿ ಗಾರ್ಡನರ್ ಮತ್ತು ಜೆಸ್ ಜೊನಾಸೆನ್ ದಾಳಿಗಿಳಿದ ನಂತರ ವಿಕೆಟ್‌ಗಳನ್ನು ಕಳೆದುಕೊಂಡಿತು. ಒಂದು ಹಂತದಲ್ಲಿ ತಂಡ 58 ರನ್‌ಗಳಿಗೆ 3 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ನಂತರವೂ ಇನಿಂಗ್ಸ್‌ಗೆ ಬಲ ತುಂಬಲು ಯಾರಿಗೂ ಸಾಧ್ಯವಾಗಲಿಲ್ಲ. ಆರನೇ ಕ್ರಮಾಂಕದ ಲತಾ ಮೊಂಡಲ್ ಸ್ವಲ್ಪ ಪ್ರತಿರೋಧ ಒಡ್ಡಿದರು.

**ಪಾಯಿಂಟ್ ಪಟ್ಟಿ**

| ತಂಡ | ಪಂದ್ಯ | ಜಯ | ಸೋಲು | ಟೈ | ಪಾಯಿಂಟ್ಸ್ | ರನ್‌ರೇಟ್ |
|---|---|---|---|---|---|---|
| ಆಸ್ಟ್ರೇಲಿಯಾ | 7 | 7 | 0 | | 14 | +1.283 |
| ದ.ಆಫ್ರಿಕಾ | 6 | 4 | 1 | 1 | 9 | +0.092 |
| ವೆಸ್ಟ್ ಇಂಡೀಸ್ | 7 | 3 | 3 | 1 | 7 | -0.885 |
| ಇಂಗ್ಲೆಂಡ್ | 6 | 3 | 3 | | 6 | +0.778 |
| ಭಾರತ | 6 | 3 | 3 | | 6 | +0.768 |
| ನ್ಯೂಜಿಲೆಂಡ್ | 6 | 2 | 4 | | 4 | -0.229 |
| ಬಾಂಗ್ಲಾದೇಶ | 6 | 1 | 5 | | 2 | -0.809 |
| ಪಾಕಿಸ್ತಾನ | 6 | 1 | 5 | | 2 | -1.280 |


ಬೇತ್ ಮೂನಿ ಅವರ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

### ಸ್ಕೋರ್ ಕಾರ್ಡ್

**ಬಾಂಗ್ಲಾದೇಶ 6ಕ್ಕೆ 135 (43 ಓವರ್)**
ಮುರ್ಷಿದಾ ಸಿ ಹೇನ್ಸ್ ಬಿ ಗಾರ್ಡನರ್ 12 (17 ಎ, 4x1), ಶರ್ಮಿನ್ ಎಲ್‌ಬಿಡಬ್ಲ್ಯು ಬಿ ಜೊನಾಸೆನ್ 24 (56 ಎ, 4x2), ಫರ್ಗಾನ ಸಿ ಹೀಲಿ ಬಿ ಸೂಥರ್ಲೆಂಡ್ 8 (22 ಎ), ನಿಗರ್ ಸಿ ಮೆಗ್ರಾ ಬಿ ಜೊನಾಸೆನ್ 7 (30 ಎ) ರುಮಾನ ಸಿ ಜೊನಾಸಸೆನ್ ಬಿ ಗಾರ್ಡನರ್ 15 (45 ಎ, 4x2), ಲತಾ ಸ್ಟಂಪ್ಡ್ ಹೀಲಿ ಬಿ ಶುಟ್ 33 (63 ಎ, 4x2), ಸಲ್ಮಾ ಔಟಾಗದೆ 15 (23 ಎ, 4x1), ನಹಿದಾ ಔಟಾಗದೆ 3 (3 ಎ))
**ಇತರೆ** (ಲೆಗ್‌ಬೈ 4, ನೋಬಾಲ್ 1, ವೈಡ್ 13) 18
**ವಿಕೆಟ್ ಪತನ:** 1-33 (ಮುರ್ಷಿದಾ ಖಾತುನ್, 8.1), 2-48 (ಫರ್ಗಾನ ಹಕ್, 13.5), 3-58 (ಶರ್ಮಿನ್ ಅಕ್ತರ್, 18.1), 4-62 (ನಿಗರ್ ಸುಲ್ತಾನ, 22.3), 5-95 (ರುಮಾನ ಅಹಮ್ಮದ್, 34.2), 6-131 (ಲತಾ ಮೊಂಡಲ್, 42.1)
**ಬೌಲಿಂಗ್:** ಮೇಗನ್ ಶುಟ್ 8-2-25-1, ಡಾರ್ಸಿ ಬ್ರೌನ್ 6-0-25-0, ಆ್ಯಶ್ಲಿ ಗಾರ್ಡನರ್ 8-1-23-2, ಜೆಸ್ ಜೊನಾಸೆನ್ 9-3-13-2, ಅನಾಬೆಲ್ ಸೂಥರ್ಲೆಂಡ್ 6-0-22-1, ಅಲಾನ ಕಿಂಗ್ 6-1-23-0

**ಆಸ್ಟ್ರೇಲಿಯಾ 5ಕ್ಕೆ 136 (32.1 ಓವರ್)**
ಅಲಿಸಾ ಸಿ ಜಹನಾರ ಬಿ ಸಲ್ಮಾ 15 (22 ಎ, 4x3), ರಾಚೆಲ್ ಸಿ ಫರ್ಗಾನ ಬಿ ಸಲ್ಮಾ 7 (23 ಎ), ಮೆಗ್ ಲ್ಯಾನಿಂಗ್ ಬಿ ಸಲ್ಮಾ 0 (8 ಎ), ಮೂನಿ ಔಟಾಗದೆ 66 (75 ಎ, 4x5), ತಹಲಿಯಾ ಎಲ್‌ಬಿಡಬ್ಲ್ಯು ಬಿ ನಹಿದಾ 3 (11 ಎ), ಆ್ಯಶ್ಲಿ ಗಾರ್ಡನರ್ ಬಿ ರುಮಾನ 13 (16 ಎ, 4x2), ಅನಾಬೆಲ್ ಔಟಾಗದೆ 26 (39 ಎ, 4x1)
**ಇತರೆ** (ಲೆಗ್‌ಬೈ 2, ನೋಬಾಲ್ 1, ವೈಡ್ 3) 6
**ವಿಕೆಟ್ ಪತನ:** 1-22 (ಅಲಿಸಾ ಹೀಲಿ, 5.3), 2-23 (ಮೆಗ್ ಲ್ಯಾನಿಂಗ್, 7.4), 3-26 (ರಾಚೆಲ್ ಹೇನ್ಸ್, 9.2), 4-41 (ತಹಿಲಾ ಮೆಗ್ರಾ, 12.5), 5-70 (ಆ್ಯಶ್ಲಿ ಗಾರ್ಡನರ್, 17.4))
**ಬೌಲಿಂಗ್:** ಜಹನಾರ ಆಲಂ 4-1-13-0, ಸಲ್ಮಾ ಖಾತುನ್ 9-0-23-3, ಲತಾ ಮೊಂಡಲ್ 2-0-12-0, ನಹಿದಾ ಅಕ್ತರ್ 5-0-33-1, ರುಮಾನ ಅಹಮ್ಮದ್ 8.1-0-35-1, ರಿತು ಮೋನಿ 2-0-11-0, ಫಹಿಮಾ ಖಾತುನ್ 2-0-7-0

**ಫಲಿತಾಂಶ: ಆಸ್ಟ್ರೇಲಿಯಾಗೆ 5 ವಿಕೆಟ್‌ಗಳ ಜಯ**

## ಜುಲೈ 28ರಿಂದ ಚೆಸ್ ಒಲಿಂಪಿಯಾಡ್

ಚೆನ್ನೈ (ಪಿಟಿಐ): 44ನೇ ಚೆಸ್ ಒಲಿಂಪಿಯಾಡ್ ಜುಲೈ 28ರಿಂದ ಆಗಸ್ಟ್ 10ರವರೆಗೆ ಇಲ್ಲಿ ನಡೆಯಲಿದೆ ಎಂದು ವಿಶ್ವ ಚೆಸ್ ಆಡಳಿತ ಮಂಡಳಿ (ಫಿಡೆ) ತಿಳಿಸಿದೆ.

‘44ನೇ ಚೆಸ್ ಒಲಿಂಪಿಯಾಡ್‌ಅನ್ನು ಅಖಿಲ ಭಾರತ ಚೆಸ್ ಫೆಡರೇಷನ್ ಜುಲೈ 28ರಿಂದ ಆಗಸ್ಟ್ 10ರವರೆಗೆ ಚೆನ್ನೈನಲ್ಲಿ ಆಯೋಜಿಸಲು ನಿರ್ಧರಿಸಿದೆ’ ಎಂದು ಫಿಡೆ ಹೇಳಿದೆ. ಅಲ್ಲದೆ, ಜುಲೈ 31ರಿಂದ ಆಗಸ್ಟ್ 9ರವರೆಗೆ ಅಖಿಲ ಭಾರತ ಚೆಸ್ ಫೆಡರೇಷನ್ ಚೆನ್ನೈನಲ್ಲಿ 94ನೇ ಫಿಡೆ ಅಧಿವೇಶನವನ್ನು ಆಯೋಜಿಸಲಿದೆ. ಆಗಸ್ಟ್ 7ಅನ್ನು ಫಿಡೆ ಚುನಾವಣೆಗೆ ದಿನಾಂಕವಾಗಿ ಅನುಮೋದಿಸಲು ನಿರ್ಧರಿಸಲಾಯಿತು.

ಈ ಮೊದಲು ಮಾಸ್ಕೊದಲ್ಲಿ ನಿಗದಿಯಾಗಿದ್ದ ಟೂರ್ನಿಯನ್ನು ಉಕ್ರೇನ್ ಮೇಲೆ ರಷ್ಯಾ ದಾಳಿಯ ಹಿನ್ನೆಲೆಯಲ್ಲಿ ಸ್ಥಳಾಂತರ ಮಾಡಲಾಗಿತ್ತು.

2013ರಲ್ಲಿ ವಿಶ್ವಚಾಂಪಿಯನ್‌ಷಿ-ಪ್ ಬಳಿಕ ಮೊದಲ ಬಾರಿ ಜಾಗತಿಕ ಮಟ್ಟದ ಚೆಸ್ ಟೂರ್ನಿಗೆ ಭಾರತ ಆತಿಥ್ಯ ವಹಿಸಲಿದೆ.


ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಆಸ್ಟ್ರೇಲಿಯಾ ಆಟಗಾರರು –ಎಎಫ್‌ಪಿ ಚಿತ್ರ

## ಲಾಹೋರ್ ಟೆಸ್ಟ್: ಪಾಕಿಸ್ತಾನಕ್ಕೆ 115 ರನ್‌ಗಳ ಸೋಲು

# ಐತಿಹಾಸಿಕ ಸರಣಿ ಗೆದ್ದ ಆಸ್ಟ್ರೇಲಿಯಾ

ಲಾಹೋರ್: ಕುತೂಹಲ ಕೆರಳಿಸಿದ್ದ ಕೊನೆಯ ದಿನ ಸಂಪೂರ್ಣ ಪಾರಮ್ಯ ಮೆರೆದ ಆಸ್ಟ್ರೇಲಿಯಾ ತಂಡ ಪಾಕಿಸ್ತಾ-ನದಲ್ಲಿ ಐತಿಹಾಸಿಕ ಟೆಸ್ಟ್ ಸರಣಿ ಗೆದ್ದು ಸಂಭ್ರಮಿಸಿತು.

ಗಡಾಫಿ ಕ್ರೀಡಾಂಗಣದಲ್ಲಿ ಶುಕ್ರವಾರ ಕೊನೆಗೊಂಡ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ಪ್ರವಾಸಿ ತಂಡ 115 ರನ್‌ಗಳಿಂದ ಜಯ ಗಳಿಸಿತು. ಈ ಮೂಲಕ 3 ಪಂದ್ಯಗಳ ಸರಣಿಯನ್ನು 1-0 ಅಂತರದಿಂದ ತನ್ನ-ದಾಗಿಸಿಕೊಂಡಿತು.

351 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ್ದ ಪಾಕಿಸ್ತಾನ ನಾಲ್ಕನೇ ದಿನವಾದ ಗುರುವಾರ ವಿಕೆಟ್ ಕಳೆದುಕೊಳ್ಳದೆ 73 ರನ್ ಗಳಿಸಿತ್ತು. ಹೀಗಾಗಿ ತಂಡದ ಆಟಗಾರರಲ್ಲೂ ಅಭಿಮಾನಿಗಳಲ್ಲೂ ಭರವಸೆ ಮೂಡಿತ್ತು. ಆದರೆ ಶುಕ್ರವಾರ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿತು. ನೇಥನ್ ಲಯನ್ ಐದು ಮತ್ತು ನಾಯಕ ಪ್ಯಾಟ್ ಕಮಿನ್ಸ್ ಮೂರು ವಿಕೆಟ್ ಉರುಳಿಸಿ ಪಾಕಿಸ್ತಾನದ ಆಸೆಗೆ ತಣ್ಣೀರು ಸುರಿದರು.

ಗುರುವಾರದ ಮೊತ್ತಕ್ಕೆ ನಾಲ್ಕು ರನ್ ಸೇರಿಸುವಷ್ಟರಲ್ಲಿ ಪಾಕಿಸ್ತಾನ ಮೊದಲ ವಿಕೆಟ್ ಕಳೆದುಕೊಂಡಿತು. ಅಬ್ದುಲ್ಲ ಶಫೀಕ್ ಅವರನ್ನು ಕ್ಯಾಮರಾನ್ ಗ್ರೀನ್ ವಾಪಸ್ ಕಳುಹಿಸಿದರು. ಅಜರ್ ಅಲಿ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲಿಲ್ಲ. ಅವರು ನೇಥನ್ ಲಯನ್‌ಗೆ ಬಲಿಯಾದರು. ಆರಂಭಿಕ ಬ್ಯಾಟರ್ ಇಮಾಮ್ ಉಲ್ ಹಕ್ (70; 199 ಎಸೆತ, 5 ಬೌಂಡರಿ) ಜೊತೆಗೂಡಿದ ನಾಯಕ ಬಾಬರ್ ಆಜಂ (55; 104 ಎ, 6 ಬೌಂ) ನಿರೀಕ್ಷೆ ಮೂಡಿಸಿದರು.

ಆದರೆ ಹಕ್ ಔಟಾದ ನಂತರ ಸತತವಾಗಿ ವಿಕೆಟ್‌ಗಳು ಉರುಳಿದವು. ತಂಡವು 22 ರನ್‌ಗಳಿಗೆ ಕೊನೆಯ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು.

1998ರ ನಂತರ ಇದೇ ಮೊದಲ ಬಾರಿ ಪಾಕಿಸ್ತಾನಕ್ಕೆ ಆಸ್ಟ್ರೇಲಿಯಾ ತಂಡ ಪ್ರವಾಸ ಕೈಗೊಂಡಿತ್ತು. ರಾವಲ್ಪಿಂಡಿ ಮತ್ತು ಕರಾಚಿ ಟೆಸ್ಟ್‌ಗಳು ಡ್ರಾದಲ್ಲಿ ಕೊನೆಗೊಂಡಿದ್ದವು. ಆಸ್ಟ್ರೇಲಿಯಾ ತಂಡದ ಮಾಜಿ ನಾಯಕ ರಿಚಿ ಬೆನಾಡ್ ಮತ್ತು ಪಾಕಿಸ್ತಾನದ ಮಾಜಿ ಲೆಗ್ ಸ್ಪಿನ್ನರ್ ಅಬ್ದುಲ್ ಖಾದಿರ್ ಅವರ ಹೆಸರಿನಲ್ಲಿ ಬೆನಾಡ್ ಖಾದಿರ್ ಟ್ರೋಫಿ ಆಯೋಜಿಸಲಾಗಿತ್ತು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 391, ಪಾಕಿಸ್ತಾನ: 268; ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 3ಕ್ಕೆ 227 (ಡಿಕ್ಲೇರ್ಡ್); ಪಾಕಿಸ್ತಾನ (ಗುರುವಾರ ವಿಕೆಟ್ ಕಳೆದುಕೊಳ್ಳದೆ 73): 92.1 ಓವರ್‌ಗಳಲ್ಲಿ 235 (ಅಬ್ದುಲ್ಲ ಶಫೀಕ್ 27, ಇಮಾಮ್ ಉಲ್ ಹಕ್ 70, ಬಾಬರ್ ಆಜಂ 55, ಸಾಜಿದ್ ಖಾನ್ 21, ಹಸನ್ ಅಲಿ 13; ಮಿಚೆಲ್ ಸ್ಟಾರ್ಕ್ 53ಕ್ಕೆ1, ಪ್ಯಾಟ್ ಕಮಿನ್ಸ್ 23ಕ್ಕೆ3, ನೇಥನ್ ಲಯನ್ 83ಕ್ಕೆ 5, ಕ್ಯಾಮರಾನ್ ಗ್ರೀನ್ 18ಕ್ಕೆ1). ಫಲಿತಾಂಶ: ಆಸ್ಟ್ರೇಲಿಯಾಗೆ 115 ರನ್‌ಗಳ ಜಯ; ಮೂರು ಪಂದ್ಯಗಳ ಸರಣಿಯಲ್ಲಿ 1-0 ಜಯ

## ಸ್ಯಾಫ್: ಭಾರತ ಮಹಿಳೆಯರಿಗೆ ಚಾಂಪಿಯನ್ ಪಟ್ಟ

ಜೆಮ್ಷೆಡ್‌ಪುರ (ಪಿಟಿಐ): ಕೊನೆಯ ಪಂದ್ಯದಲ್ಲಿ ಬಾಂಗ್ಲಾದೇಶಕ್ಕೆ ಮಣಿದರೂ ಭಾರತ ತಂಡ ಸ್ಯಾಫ್ 18 ವರ್ಷದೊಳಗಿನ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ತನ್ನ-ದಾಗಿಸಿಕೊಂಡಿತು. ಉತ್ತಮ ಗೋಲು ಸರಾಸರಿ ಭಾರತದ ಕೈ ಹಿಡಿಯಿತು.

ಶುಕ್ರವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಭಾರತವನ್ನು ಬಾಂಗ್ಲಾದೇಶ 1-0ಯಿಂದ ಸೋಲಿಸಿತು. ಇದರೊಂದಿಗೆ ಎರಡೂ ತಂಡಗಳ ಪಾಯಿಂಟ್‌ಗಳು ಸಮ ಆದವು. ಆದರೆ ಭಾರತ +11 ಗೋಲು ಸರಾಸರಿ ಹೊಂದಿತ್ತು. ಬಾಂಗ್ಲಾದೇಶದ ಸರಾಸರಿ ಗೋಲು +3 ಆಗಿತ್ತು. ಒಟ್ಟು ಐದು ಗೋಲು ಗಳಿಸಿದ ಲಿಂಡಾ ಕೋಮ್ ಟೂರ್ನಿಯ ಉತ್ತಮ ಆಟಗಾರ್ತಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪಂದ್ಯದ ಐದನೇ ನಿಮಿಷದಲ್ಲಿ ಭಾರತದ ಶುಭಾಂಗಿ ಆಕ್ರಮಣಕಾರಿ ಆಟದ ಮೂಲಕ ಎದುರಾಳಿ ಪಾಳಯದಲ್ಲಿ ಆತಂಕ ಉಂಟುಮಾಡಿದರು. ಅವಕಾಶ ಸೃಷ್ಟಿಸಿ ಅವರು ಒದ್ದ ಚೆಂಡು ಬಾಂಗ್ಲಾ ಗೋಲ್‌ಕೀಪರ್ ರೂಪ್ನಾ ಅವರ ಕೈ ಸೇರಿತು. 40ನೇ ನಿಮಿಷದಲ್ಲಿ ಭಾರತಕ್ಕೆ ಮತ್ತೊಂದು ಅಮೋಘ ಅವಕಾಶ ಲಭಿಸಿತ್ತು. ಆದರೆ ನೀತು ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. 60ನೇ ನಿಮಿಷದಲ್ಲಿ ನಾಯಕಿ ಶಿಲ್ಕಿ ದೇವಿ ಅವರ ಪ್ರಯತ್ನವನ್ನೂ ರೂಪ್ನಾ ವಿಫಲಗೊಳಿಸಿ-ದರು.

ಬಾಂಗ್ಲಾದೇಶದ ಪ್ರಿಯಾಂಕ 74ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ತಂಡದಲ್ಲಿ ಸಂಭ್ರಮ ಮೂಡಿಸಿದರು.


ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಪ್ರೆಸ್ಟಿಜೀಯಸ್ ಬಾಗಮನೆ ಟೆಂಪಲ್ ಬೆಲ್ಸ್ (ಪಿಬಿಟಿಬಿ) ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಸೂಪರ್ ಕಿಂಗ್ಸ್ ತಂಡ: ಎಡದಿಂದ–(ನಿಂತವರು) ವಿಜಯಲಕ್ಷ್ಮಿ, ಹರೀಶ್ (ಇಬ್ಬರೂ ಮಾಲೀಕರು), ಸಂದೇಶ್, ಕಾರ್ತಿಕ್, ಪಂಕಜ್, ವರುಣ್ (ಕುಳಿತವರು) ದಿವಿಕ್ (ಸಹ ಮಾಲೀಕ), ಮಧುಸೂದನ್, ಭರತ್, ರಾಮ್ ಮತ್ತು ಸುರೇಶ್. ಫೈನಲ್‌ನಲ್ಲಿ ಸೂಪರ್ ಕಿಂಗ್ಸ್ 8 ವಿಕೆಟ್‌ಗಳಿಂದ ಮೈಟಿ ಏಸಸ್ ತಂಡವನ್ನು ಸೋಲಿಸಿತು.

## ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಸೈನಾಗೆ ಸೋಲು

# ಸೆಮಿಫೈನಲ್‌ಗೆ ಲಗ್ಗೆಯಿಟ್ಟ ಸಿಂಧು, ಪ್ರಣಯ್

ಬಾಸೆಲ್ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಎಚ್.ಎಸ್ ಪ್ರಣಯ್ ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು. ಶುಕ್ರವಾರ ನಡೆದ ಎಂಟರ ಘಟ್ಟದ ಪಂದ್ಯಗಳಲ್ಲಿ ಅವರು ನೇರ ಗೇಮ್‌ಗಳಿಂದ ಜಯ ಸಾಧಿಸಿದರು. ಥಾಯ್ಲೆಂಡ್‌ನ ಶ್ರೇಯಾಂಕ ರಹಿತ ಆಟಗಾರ್ತಿ ಸುಪನಿಡ ಕಟೆತಾಂಗ್ ಸೆಮಿಫೈನಲ್‌ನಲ್ಲಿ ಸಿಂಧು ಎದುರಾಳಿ.


ಕಿಸೋನ ಸೆಲ್ವದೊರೆ

ಎರಡನೇ ಶ್ರೇಯಾಂಕಿತೆ ಸಿಂಧು ಕೆನಡಾದ ಮಿಚೆಲಿ ಲೀ ಎದುರು 21-10, 21-19ರಲ್ಲಿ ಗೆಲುವು ದಾಖಲಿಸಿದರು. 36 ನಿಮಿಷಗಳಲ್ಲಿ ಪಂದ್ಯ ಮುಕ್ತಾ-ಯಗೊಂಡಿತ್ತು. ಭಾರತದವರೇ ಆದ ಪರುಪಳ್ಳಿ ಕಶ್ಯಪ್ ವಿರುದ್ಧ 43 ನಿಮಿಷಗಳ ಹಣಾಯಣಿಯಲ್ಲಿ ಪ್ರಣಯ್ 21-16, 21-16ರಲ್ಲಿ ಗೆದ್ದರು.

**ಸೈನಾ ನೆಹ್ವಾಲ್‌ಗೆ ಸೋಲು:** ತಮಗಿಂತ ಕಡಿಮೆ ರ‍್ಯಾಂಕಿಂಗ್‌ನ ಆಟಗಾರ್ತಿಯ ಎದುರು ನೀರಸ ಆಟವಾಡಿದ ಸೈನಾ ನೆಹ್ವಾಲ್ ಟೂರ್ನಿಯಿಂದ ಹೊರಬಿದ್ದರು. ಗುರುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮಲೇಷ್ಯಾದ ಕಿಸೋನ ಸೆಲ್ವದುರೆ 17-21, 21-13, 21-13ರಲ್ಲಿ ನೆಹ್ವಾಲ್ ಅವರನ್ನು ಮಣಿಸಿದರು.

ವಿಶ್ವ ಕ್ರಮಾಂಕದಲ್ಲಿ 23ನೇ ಸ್ಥಾ-ನದಲ್ಲಿರುವ ನೆಹ್ವಾಲ್ ಮೊದಲ ಗೇಮ್‌ನಲ್ಲಿ ಪ್ರಯಾಸದಿಂದ ಗೆದ್ದರು. ಆದರೆ 64ನೇ ರ‍್ಯಾಂಕಿಂಗ್‌ನ ಎದುರಾಳಿ ಮುಂದಿನ ಎರಡು ಗೇಮ್‌ಗಳಲ್ಲಿ ಮಿಂಚಿದರು.


ಪಿ.ವಿ.ಸಿಂಧು –ಟ್ವಿಟರ್ ಚಿತ್ರ


ಎಚ್.ಎಸ್. ಪ್ರಣಯ್ –ಎಎಫ್‌ಪಿ ಚಿತ್ರ


ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಚನ್ನಮಲ್ಲಿಕಾರ್ಜುನ ಎಲೆ ಮತ್ತು ಅರ್ಜಾನ್ ಕೊರಿಕವಾಲ

## ಟೆನಿಸ್: ಚನ್ನಮಲ್ಲಿಕಾರ್ಜುನ, ಅರ್ಜಾನ್‌ಗೆ ಪ್ರಶಸ್ತಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೂರ್ನಿಯುದ್ದ-ಕ್ಕೂ ಉತ್ತಮ ಸಾಮರ್ಥ್ಯ ತೋರಿದ ಚನ್ನಮಲ್ಲಿಕಾರ್ಜುನ ಎಲೆ ಎಐಟಿಎ 14 ವರ್ಷದೊಳಗಿನವರ ಸಿಎಸ್7 ಸರಣಿಯ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಅರ್ಜಾನ್ ಕೊರಿಕವಾಲ ಅವರಿಗೆ ಪ್ರಶಸ್ತಿ ಒಲಿಯಿತು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ(ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆದ ಟೂರ್ನಿಯ ಬಾಲಕರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಚನ್ನಮಲ್ಲಿ-ಕಾರ್ಜುನ ಅವರಿಗೆ 6-4, 6-2ರಿಂದ ಅಹಿಲ್ ಆಯಾಜ್ ವಿರುದ್ಧ ಗೆಲುವು ಒಲಿಯಿತು.

13 ವರ್ಷದ ಚನ್ನಮಲ್ಲಿಕಾರ್ಜುನ ಅರ್ಹತಾ ಸುತ್ತಿನಿಂದ ಗೆದ್ದುಬಂದು, ಐದನೇ ಶ್ರೇಯಾಂಕದ ಆಟಗಾರನಿಗೆ ಸೋಲುಣಿಸಿ ಪ್ರಶಸ್ತಿಗೆ ಮುತ್ತಿಕ್ಕಿದರು. ಫೈನಲ್‌ಗೆ ತಲುಪುವ ಹಾದಿಯಲ್ಲಿ ಅವರು ಶ್ರೇಯಾಂಕ ಪಡೆದಿದ್ದ ಮೂವರು ಆಟಗಾರರನ್ನು ಮಣಿಸಿದ್ದರು.

ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅರ್ಜಾನ್ 6-3, 6-3ರಿಂದ ಋತಿಕಾ ಅವರನ್ನು ಪರಾ-ಭವಗೊಳಿಸಿದರು. ಆದರೆ ಋತಿಕಾ ಅವರು ಇಶಾ ಗಿರೀಶ್ ಜೊತೆಗೂಡಿ ಬಾಲಕಿಯರ ಡಬಲ್ಸ್‌ನಲ್ಲಿ 7-6 (6), 6-4ರಿಂದ ಅರ್ಜಾನ್ ಕೊರಿಕವಾಲ ಮತ್ತು ಸಾನ್ವಿ ಮಿಶ್ರಾ ಅವರನ್ನು ಮಣಿಸಿ ಪ್ರಶಸ್ತಿ ಜಯಿಸಿದರು.

ಬಾಲಕರ ಡಬಲ್ಸ್ ಪ್ರಶಸ್ತಿಯು ಲಿಖಿತ್ ಗೌಡ– ಮೀರ್ ಫಜಲ್ ಅಲಿ ಪಾಲಾಯಿತು. ಫೈನಲ್‌ನಲ್ಲಿ ಈ ಜೋಡಿಯು 6-3, 6-3ರಿಂದ ಅಹಿಲ್ ಆಯಾಜ್–ಎಂ.ದಿಗಂತ್ ಅವರನ್ನು ಸೋಲಿಸಿತು.

## ಸ್ನೇಹಪರ ಫುಟ್‌ಬಾಲ್ ಹಣಾಹಣಿಯಲ್ಲಿ ಗೆಲುವಿನ ನಿರೀಕ್ಷೆ

# ಭಾರತಕ್ಕೆ ಬೆಲಾರೂಸ್ ಸವಾಲು

ಮನಾಮ (ಪಿಟಿಐ): ಬಹರೇನ್ ವಿರುದ್ಧ ಸೋತಿರುವ ಭಾರತ ಫುಟ್‌ಬಾಲ್ ತಂಡ ಶನಿವಾರ ಬೆಲಾರೂಸ್ ಎದುರು ನಡೆಯಲಿರುವ ಸ್ನೇಹಪರ ಪಂದ್ಯದಲ್ಲಿ ಗೆಲುವಿನ ನಿರೀಕ್ಷೆಯಲ್ಲಿದೆ. ತಂಡದಲ್ಲಿ ಬದಲಾವಣೆಗಳನ್ನು ಮಾಡುವ ಸಾಧ್ಯತೆ ಇದೆ ಎಂದು ಕೋಚ್ ಇಗರ್ ಸ್ಟಿಮ್ಯಾಚ್ ಶುಕ್ರವಾರ ಹೇಳಿದ್ದಾರೆ.

ಜೂನ್‌ನಲ್ಲಿ ನಡೆಯಲಿರುವ ಏಷ್ಯನ್ ಕಪ್ ಅಂತಿಮ ಸುತ್ತಿನ ಅರ್ಹತಾ ಹಣಾಹಣಿಗೆ ಬಲಿಷ್ಠ ತಂಡವನ್ನು ಕಟ್ಟುವುದು ಸ್ಟಿಮ್ಯಾಚ್ ಅವರ ಉದ್ದೇಶ.

ದ್ವಿತೀಯಾರ್ಧದಲ್ಲಿ ರಾಹುಲ್ ಭೆಕೆ ಗಳಿಸಿದ ಗೋಲಿನ ಮೂಲಕ ಬರಹೇನ್ ಎದುರು ಎರಡು ದಿನಗಳ ಹಿಂದೆ ನಡೆದಿದ್ದ ಪಂದ್ಯದಲ್ಲಿ ಭಾರತ ಡ್ರಾದತ್ತ ಹೆಜ್ಜೆ ಹಾಕಿತ್ತು. ಆದರೆ 88ನೇ ನಿಮಿಷದಲ್ಲಿ ಗೋಲು ಬಿಟ್ಟುಕೊಟ್ಟು 1-2ರ ಸೋಲುಂಡಿತ್ತು. ಬೆಲಾರೂಸ್ ಎದುರು ಯುವ ಆಟಗಾರರಿಗೆ ಅವಕಾಶ ನೀಡಲು ಭಾರತ ತಂಡದ ಆಡಳಿತ ನಿರ್ಧರಿಸಿದೆ. ಕೇರಳ ಬ್ಲಾಸ್ಟರ್ಸ್ ತಂಡದಲ್ಲಿ ಆಡಿರುವ 21 ವರ್ಷದ ಡಿಫೆಂಡರ್ ರುಯ್‌ವಾ ಹಾರ್ಮಿಪಮ್ ಸ್ಥಾನ ಗಳಿಸುವುದು ಬಹುತೇಕ ಖಚಿತವಾಗಿದೆ. ಪ್ರಭುಶುಖನ್ ಗಿಲ್, ಅನ್ವರ್ ಅಲಿ, ರೋಷನ್ ಸಿಂಗ್, ವಿ.ಪಿ ಸುಹೇರ್, ಡ್ಯಾನಿಷ್ ಫಾರೂಕ್ ಮತ್ತು ಅನಿಕೇತ್ ಜಾಧವ್ ಅವರಲ್ಲಿ ಕೆಲವರು ತಂಡದಲ್ಲಿ ಸ್ಥಾನ ಗಳಿಸುವ ಸಾಧ್ಯತೆ ಇದೆ.

# ಏರೋಬಿಕ್ ಜಿಮ್ನಾಸ್ಟಿಕ್ಸ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 16ನೇ ರಾಷ್ಟ್ರೀಯ ಏರೋಬಿಕ್ ಜಿಮ್ನಾಸ್ಟಿಕ್ ಚಾಂಪಿಯನ್‌ಷಿಪ್‌ಗೆ ಉದ್ಯಾನಗರಿ ಆತಿಥ್ಯ ವಹಿಸಲಿದೆ. ಇದೇ 26 ಮತ್ತು 27ರಂದು ಚಾಂಪಿಯನ್‌ಷಿಪ್ ನಡೆಯಲಿದೆ.

ನಗರದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಜಿಮ್ನಾಸ್ಟಿಕ್ಸ್ ಸಂಸ್ಥೆಯ ಅಧ್ಯಕ್ಷ ಪ್ರಭಾಕರ್ ಈ ಕುರಿತು ಮಾಹಿತಿ ನೀಡಿದರು. ಹೂಡಿಯ ಗೋಪಾಲನ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ಸ್ಪರ್ಧೆಗಳು ನಡೆಯಲಿವೆ., ಏಷ್ಯನ್ ಮತ್ತು ವಿಶ್ವ ಏರೋಬಿಕ್ ಚಾಂಪಿಯನ್‌ಷಿಪ್‌ಗೆ ಆಯ್ಕೆ ಟ್ರಯಲ್ಸ್ ಕೂಡ ನಡೆಯಲಿದೆ.

ಭಾರತ ಫುಟ್‌ಬಾಲ್ ತಂಡದ ಆಟಗಾರ ಇಶಾನ್ ಪಂಡಿತ ಚಾಂಪಿಯನ್‌ಷಿಪ್‌ಗೆ ಮುಖ್ಯ ಅತಿಥಿಯಾಗಿ ಚಾಲನೆ ನೀಡಲಿದ್ದಾರೆ.

‘18 ರಾಜ್ಯಗಳಿಂದ ಸುಮಾರು 600 ಜಿಮ್ನಾಸ್ಟ್‌ಗಳು ಭಾಗವಹಿಸುವವರು ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿದ್ದಾರೆ. ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತದೆ’ ಎಂದು ಪ್ರಭಾಕರ್ ಅವರು ತಿಳಿಸಿದರು.





## ಬೆಂಗಳೂರು ರೇಸ್

### ಸ್ಯೆರೆನಸ್ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೈರೆನಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: ರೆಮಾಂಟಾಯಿರ್ 2. ನಾಟಿ ಸಿಟಿ 4
2ನೇ ರೇಸ್: ಮೆಮೊರೈಟರ್ 1. ಹೋಪ್ ಐಲ್ಯಾಂಡ್ 7, ಸೀ ಮೈ ಹೀಲ್ಸ್ 2
3ನೇ ರೇಸ್: ಅಪ್ಸರ 6, ಲಾ ರೀನ 9, ರಾಪಿಡಸ್ 3
4ನೇ ರೇಸ್: ಕಟಾನ 1, ಪ್ರಾಮಿಸ್ ಕೆಪ್ಟ್ 3, ಮಿಟ್ಸೂರಿೂ 2
5ನೇ ರೇಸ್: ಬ್ಲ್ಯಾಕ್ ಕಾಫಿ 4, ಸಿಲ್ವರ್ ಡ್ಯೂ 1, ರೂಲ್ ಆಫ್ ಎಂಗೇಜ್‌ಮೆಂಟ್ 3
6ನೇ ರೇಸ್: ಸ್ಯೆರೆನಸ್ 1, ಟ್ರಿಯಾಂಫಂಟ್ 3
7ನೇ ರೇಸ್: ರಾಪ್ಸೋಡಿ ಇನ್ ಗ್ರೀನ್ 1. ಗೋಲ್ಡನ್ ಮೆಮೋರಿ 3. ಅಲ್ಡಾಮಾಂಟೆ 6
8ನೇ ರೇಸ್: ಏರ್‌ಕ್ರಾಫ್ಟ್ 1, ಥಂಡರ್‌ಸ್ಟ್ರಕ್ 4. ಟಿಫ್ಫಾನಿ 9

**ಉತ್ತಮ ಬೆಟ್: ಅಪ್ಸರಾ**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 4,5,6,7,8 | 3,4,5 | 6,7,8 |

# ಕುಸ್ತಿ: ಭಾರತ ತಂಡದಲ್ಲಿ ಅನ್ಷು, ಸರಿತಾಗೆ ಸ್ಥಾನ

ನವದೆಹಲಿ (ಪಿಟಿಐ): ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತರಾಗಿರುವ ಅನ್ಷು ಮಲಿಕ್ ಮತ್ತು ಕಂಚು ಪದಕ ಪಡೆದಿರುವ ಸರಿತಾ ಮೋರ್ ಅವರು ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಏಪ್ರಿಲ್ 19ರಿಂದ 24ರವರೆಗೆ ಮಂಗೋಲಿಯಾದಲ್ಲಿ ಚಾಂಪಿಯನ್‌ಷಿಪ್ ನಡೆಯಲಿದೆ. ಅನ್ಷು 57 ಕೆ.ಜಿ ಮತ್ತು ಸರಿತಾ 59 ಕೆ.ಜಿ ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ. ಇವರಿಬ್ಬರೂ ಹೋದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದಿದ್ದರು.

ಆದರೆ, ಒಲಿಂಪಿಯನ್ ವಿನೇಶಾ ಫೋಗಟ್ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲರಾದರು.

ಮನೀಷಾ (50ಕೆಜಿ), ಸ್ವಾತಿ ಶಿಂಧೆ (53ಕೆಜಿ), ಸುಷ್ಮಾ ಶೋಕೀನ್ (55ಕೆಜಿ), ರಾಧಿಕಾ (65ಕೆಜಿ), ಸೋನಿಕಾ ಹೂಡಾ (68ಕೆಜಿ), ನಿಕ್ಕಿ (72ಕೆಜಿ) ಮತ್ತು ಸುದೇಶಾ (76 ಕೆಜಿ) ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.



ಸರಿತಾ ಮೋರ್ —ಟ್ವಿಟರ್ ಚಿತ್ರ



# ಮಕ್ಕಳಿಗೆ ಅಡುಗೆ ಕಲಿಕೆ ಪೋಷಕರಿಗಿರಲಿ ನಿಗಾ

ಸುಮಾ ಬಿ.

ಏಳು ವರ್ಷದ ಶ್ರಾವಣಿಗೆ ಮ್ಯಾಗಿ ತಿನ್ನುವ ಬಯಕೆ. ಅಮ್ಮ ಮಧ್ಯಾಹ್ನ ನಿದ್ರೆಗೆ ಜಾರಿರುವುದನ್ನು ಗಮನಿಸಿದ ಆಕೆ ಅಡುಗೆಕೋಣೆಗೆ ಹೋಗಿ ಲೈಟರ್ ಹಿಡಿದು ಗ್ಯಾಸ್ ಹಚ್ಚಿಯೇ ಬಿಟ್ಟಳು. ಬೆಂಕಿ ಧಗ್ಗನೆ ಹೊತ್ತಿಕೊಂಡಿತು. ಶ್ರಾವಣಿಯ ಕೈಕಾಲು, ಮುಖಕ್ಕೆ ಗಂಭೀರ ಗಾಯಗಳಾದವು.

ಇಂತಹ ಘಟನೆಗಳು ನಡೆದಾಗಲೆಲ್ಲ ‘ಮಕ್ಕಳು ಅಡುಗೆ ಮಾಡುವುದು ಸುರಕ್ಷಿತವೇ’ ಎಂಬ ಪ್ರಶ್ನೆ ಮುನ್ನೆಲೆಗೆ ಬರುತ್ತದೆ.

ಕಳೆದ ಎರಡು ಅವಧಿಯ ಕೊರೊನಾ- ಲಾಕ್‌ಡೌನ್‌ನಲ್ಲಿ ಅನೇಕ ಮಕ್ಕಳು ಇಂಥ ಪ್ರಯೋಗಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ತಮಗಿಷ್ಟದ ತಿನಿಸು ತಯಾರಿಸಿ ಬೀಗಿದ್ದಾರೆ. ಪೋಷಕರು ಅದರ ವಿಡಿಯೊ ಮಾಡಿ ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್, ವಾಟ್ಸ್‌ಆ್ಯಪ್‌ಗಳಲ್ಲಿ ಹಂಚಿಕೊಂಡಿದ್ದಾರೆ. ಇನ್ನೇನು ಈ ವರ್ಷದ ಬೇಸಿಗೆ ರಜೆ ಆರಂಭವಾಗುತ್ತವೆ. ಇಂಥ ಪ್ರಯತ್ನಗಳು ಪುನರಾವರ್ತನೆಯಾಗಬಹುದು..

ಮಕ್ಕಳು ಅಡುಗೆ ಮಾಡುವುದೂ ಕಲಿಕೆಯ ಒಂದು ಭಾಗವೇ. ಆದರೆ ಅದು ಸುರಕ್ಷಿತ ಕಲಿಕೆಯಾದಾಗ ಮಾತ್ರ. ಇದರಿಂದ ಮಕ್ಕಳಿಗೆ ಬಾಲ್ಯದಿಂದಲೇ ಅಡುಗೆ ಪರಿಕರ, ಪದಾರ್ಥಗಳ ಪರಿಚಯವಾಗುತ್ತದೆ. ಸೇವಿಸುವ ಆಹಾರದ ಬಗ್ಗೆ ಅರಿವು ಮೂಡುತ್ತದೆ. ಜಂಕ್ ಫುಡ್‌ಗಳ ದಾಸರಾಗುವುದನ್ನು ತಪ್ಪಿಸಬಹುದು. ಮನೆ ಅಡುಗೆಯ ಬಗ್ಗೆ ವಿಶ್ವಾಸ ವೃದ್ಧಿಯಾಗುತ್ತದೆ. ತಿನಿಸಿನ ವಿಚಾರದಲ್ಲಿ ಸ್ವಯಂ ಮಾರ್ಗದರ್ಶನ, ಸ್ವಾವಲಂಬನೆ ಬೆಳೆಯುತ್ತದೆ.

> ಚಿಕ್ಕ ವಯಸ್ಸಿನಲ್ಲೇ ಮಕ್ಕಳಿಗೆ ಅಡುಗೆ ಕಲಿಸಬೇಕು ಎಂಬುದು ಬಹುತೇಕ ಪೋಷಕರ ಅಪೇಕ್ಷೆ. ಆದರೆ, ಕಲಿಸುವಿಕೆಯಲ್ಲಿ ಅಜಾಗರೂಕತೆ ತೋರಿದರೆ ಬಲು ದೊಡ್ಡ ಬೆಲೆ ತೆರಬೇಕಾಗುತ್ತದೆ. ಮಕ್ಕಳ ವಯೋಮಾನಕ್ಕೆ ತಕ್ಕಂತೆ ಕಲಿಕೆ ಇರಲಿ. ಜತೆ ಜತೆಗೆ ಸುರಕ್ಷತಾ ಕ್ರಮಗಳ ಅರಿವೂ ಇರಲಿ...

ತರಕಾರಿ ಕತ್ತರಿಸುವಾಗ, ಪದಾರ್ಥಗಳನ್ನು ಬೆರೆಸುವಾಗ, ಹಿಟ್ಟು ಕಲೆಸುವಾಗ ಕಣ್ಣು ಮತ್ತು ಕೈಗಳ ಹೊಂದಾಣಿಕೆಯ ಕೌಶಲ ವೃದ್ಧಿಯಾಗುತ್ತದೆ. ಮಕ್ಕಳ ಚಿಂತನಾ ಶಕ್ತಿ ಬೆಳವಣಿಗೆಗೆ, ಕ್ರಿಯಾಶೀಲತೆ ವೃದ್ಧಿಗೆ ಅಡುಗೆ ಸಹಕಾರಿಯಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಪೋಷಕರು ಮತ್ತು ಮಕ್ಕಳ ನಡುವಿನ ಬಾಂಧವ್ಯ ಗಟ್ಟಿಗೊಳ್ಳುತ್ತದೆ ಎನ್ನುತ್ತಾರೆ ಮಕ್ಕಳ ಮನೋವೈದ್ಯರು.

ಮಕ್ಕಳ ಪ್ರಯೋಗಶೀಲತೆಗೂ ಅಡುಗೆ ಮನೆ ವೇದಿಕೆ ಒದಗಿಸುತ್ತದೆ. ಇಷ್ಟದ ಪದಾರ್ಥಗಳನ್ನು ಬಳಸಿಕೊಂಡು ಹೊಸದೊಂದು ರೆಸಿಪಿ ತಯಾರಿಸಬಹುದು. ತಿನಿಸು ತಯಾರಿಸುವಾಗ ಅದು ರುಚಿಕಟ್ಟಾಗಿ ಬರದಿದ್ದರೆ ಮತ್ತೊಂದು ಪದಾರ್ಥ ಸೇರಿಸಿ ಇನ್ನೊಂದು ರೆಸಿಪಿ ಸಂಶೋಧನೆಗೆ ನಾಂದಿ ಹಾಡಬಹುದು. ಪ್ರತಿದಿನ ತರಗತಿ, ಪಾಠ, ಹೋಂವರ್ಕ್‌ನಲ್ಲಿ ಮುಳುಗುವ ಮಕ್ಕಳು ಅದರಿಂದ ಹೊರಬಂದು ಅಡುಗೆ ಕಾರ್ಯದಲ್ಲಿ ತೊಡಗಿಕೊಂಡರೆ ಚೈತನ್ಯ ಬರುತ್ತದೆ ಎನ್ನುವ ಮನೋವೈದ್ಯರು, ಇದೆಲ್ಲವೂ ಪೋಷಕರ ನಿಗಾವಣೆಯಲ್ಲೇ ನಡೆಯಬೇಕು ಎಂದು ಎಚ್ಚರಿಸುತ್ತಾರೆ.

### ಯಾವ ವಯಸ್ಸಿಗೆ ಅಡುಗೆ ಮಾಡಬಹುದು?

ಪೋಷಕರಿಗೆ ಸಣ್ಣ ಪುಟ್ಟ ಕೆಲಸಗಳಲ್ಲಿ ಸಹಾಯ ಮಾಡುವುದು, ತರಕಾರಿ ತೊಳೆದುಕೊಡುವುದು, ಚಪಾತಿ ಲಟ್ಟಿಸುವುದು, ಮನೆಯ ಸದಸ್ಯರಿಗೆ ಊಟ ಬಡಿಸುವುದು, ಪಾತ್ರೆ ತೊಳೆಯುವುದು ಈ ಎಲ್ಲ ಪ್ರಕ್ರಿಯೆಗಳೂ ಕುಟುಂಬದ ಸದಸ್ಯರು ಮತ್ತು ಮಕ್ಕಳ ನಡುವೆ ಆರೋಗ್ಯಕರ ಬಾಂಧವ್ಯ ಬೆಳೆಸುತ್ತವೆ. ಆದರೆ, ಗ್ಯಾಸ್ ಹೊತ್ತಿಸುವುದು, ತರಕಾರಿ ಕತ್ತರಿಸುವುದು ಒಳ್ಳೆಯದಲ್ಲ.

‘ತಾಯಿ ತರಕಾರಿ ಹೆಚ್ಚುವುದನ್ನು ಮಗು ನೋಡಿರುತ್ತದೆ. ಆದರೆ ಚಾಕುವನ್ನು ಹೇಗೆ ನಿಭಾಯಿಸಬೇಕು, ಹೇಗೆ ಹಿಡಿದುಕೊಳ್ಳಬೇಕು ಎಂಬ ಜ್ಞಾನ ಇನ್ನೂ ವೃದ್ಧಿಯಾಗಿರುವುದಿಲ್ಲ. ತರಕಾರಿ ಕತ್ತರಿಸುವಾಗ ಬೆರಳಿಗೆ ಚಾಕು ತಾಗಿ ಸಣ್ಣ, ಪುಟ್ಟ ಅವಘಡ ಸಂಭವಿಸುವ ಸಾಧ್ಯತೆ ಹೆಚ್ಚು. ಹಾಗೆಯೇ ಲೈಟರ್ ಹಿಡಿದು ಗ್ಯಾಸ್ ಹೊತ್ತಿಸುವುದನ್ನು ಗಮನಿಸುವ ಮಗು, ಅಜಾಗರೂಕತೆಯ ಬಳಕೆಯಿಂದ ಆಗುವ ಪರಿಣಾಮವನ್ನು ನೋಡಿರುವುದಿಲ್ಲ. ಪೋಷಕರು ಆ ಬಗೆಯ ಜ್ಞಾನವನ್ನು ಮಕ್ಕಳಿಗೆ ನೀಡಬೇಕು’ ಎನ್ನುತ್ತಾರೆ ಮನೋವೈದ್ಯೆ ಡಾ.ಕೆ.ಎಸ್. ಪವಿತ್ರಾ.

‘ಶ್ರಾವಣಿ ಕೂಡ ಮ್ಯಾಗಿ ಮಾಡಿ ತಿನ್ನಬೇಕು ಎಂದು ಆ ಕ್ಷಣಕ್ಕೆ ಯೋಚಿಸಿದಳೇ ಹೊರತು, ಮ್ಯಾಗಿ ಮಾಡುವಾಗ ಅವಘಡ ಸಂಭವಿಸಿದರೆ ತನಗೆ ಏನಾಗಬಹುದು ಎಂದು ಆಲೋಚಿಸಲಿಲ್ಲ. ಏಳು ವರ್ಷಕ್ಕೆ ಆ ರೀತಿಯ ಆಲೋಚನೆಯನ್ನು ಮಕ್ಕಳಿಂದ ನಿರೀಕ್ಷೆ ಮಾಡಲೂ ಆಗುವುದಿಲ್ಲ. 9 ರಿಂದ 10 ವರ್ಷ ಮೇಲ್ಪಟ್ಟ ಮಕ್ಕಳು ಅಡುಗೆ ತಯಾರಿಯಲ್ಲಿ ತೊಡಗಬಹುದು. 14 ರಿಂದ 15 ವರ್ಷದ ಮಕ್ಕಳು ಯಾರ ಸಹಾಯವೂ ಇಲ್ಲದೆ ಅಡುಗೆ ಮಾಡಬಹುದು. ಆದರೆ, ಅವರಿಗೆ ಸಕಾರಾತ್ಮಕ, ನಕಾರಾತ್ಮಕ ಅಂಶಗಳು ಗೊತ್ತಿರಬೇಕು’ ಎನ್ನುವುದು ಪವಿತ್ರಾ ಅವರ ಸಲಹೆ.

### ಜಾಲತಾಣಕ್ಕೆ ಸೀಮಿತ ಆಗಬೇಡಿ

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ, ಫೋಟೊ ಹಂಚಿಕೊಳ್ಳಲಷ್ಟೇ ಮಕ್ಕಳು ಅಡುಗೆ ತಯಾರಿಯಲ್ಲಿ ತೊಡಗಿದರೆ ಪ್ರಯೋಜನವಿಲ್ಲ. ಅದು ಸಮಾಜಕ್ಕೆ ತಪ್ಪು ಸಂದೇಶ ಕೊಡುವ ಅಪಾಯವೂ ಇದೆ. ವಿಡಿಯೊ ಮಾಡಿ ಆದ ಬಳಿಕ ಪಾತ್ರೆ ತೊಳೆಯುವುದು, ಶೆಲ್ಫ್ ಸ್ವಚ್ಛಗೊಳಿಸುವುದನ್ನೂ ಮಕ್ಕಳು ಮಾಡಬೇಕು. ಅಡುಗೆ ಅಂದರೆ ಅನೇಕ ಹಂತಗಳನ್ನು ಒಳಗೊಂಡಿದೆ. ತರಕಾರಿ ಹೆಚ್ಚುವುದರಿಂದ ಹಿಡಿದು ಅಡುಗೆ ಆದ ಬಳಿಕ ಕೋಣೆ ಸ್ವಚ್ಛಗೊಳಿಸುವವರೆಗೆ ಪ್ರಕ್ರಿಯೆ ಮುಂದುವರಿಯುತ್ತದೆ. ಈ ಎಲ್ಲ ಹಂತಗಳಲ್ಲೂ ಮಕ್ಕಳು ಸಕ್ರಿಯವಾಗಿ ತೊಡಗಿಕೊಳ್ಳಬೇಕು. ಆ ರೀತಿ ಒಳಗೊಳ್ಳುವಂತೆ ಪೋಷಕರು ಮಾಡಬೇಕು ಎಂದು ಪ್ರತಿಪಾದಿಸುತ್ತಾರೆ ಪವಿತ್ರಾ.


ಫೇಸ್‌ಬುಕ್, ಯೂಟ್ಯೂಬ್‌ನಲ್ಲಿ ಬರುವ ಸಂದೇಶಗಳು ಕೇವಲ ಒಂದು ಮುಖವನ್ನು ಮಾತ್ರ ಬಿಂಬಿಸಿರುತ್ತವೆ ಎಂಬುದನ್ನು ಮಕ್ಕಳು, ಪೋಷಕರು ಅರಿಯಬೇಕು. ಮಗು ಚಾಕು ಕೈಯಲ್ಲಿ ಹಿಡಿದಿದೆ ಎಂದರೆ ಕೇವಲ ಕೈಗೆ ಮಾತ್ರ ಸಂಬಂಧಪಟ್ಟಿದ್ದಲ್ಲ. ಅದು ಮಿದುಳಿಗೂ ಸಂಬಂಧಿಸಿರುತ್ತದೆ. ಗ್ಯಾಸ್ ಬಳಕೆ, ಮಿಕ್ಸಿ, ಚಾಕು ಬಳಕೆಯ ಬಗ್ಗೆ ಮಕ್ಕಳಲ್ಲಿ ಮುಂಚಿತವಾಗೇ ಜಾಗೃತಿ ಮೂಡಿಸಿರಬೇಕು. ಮಕ್ಕಳು ಅಡುಗೆಯಲ್ಲಿ ಸಹಾಯ ಮಾಡುವುದು ಬೇರೆ. ಸ್ವತಃ ಅಡುಗೆ ಮಾಡುವುದೇ ಬೇರೆ. ಅದಕ್ಕೆ ಸಾಕಷ್ಟು ತಯಾರಿ, ತರಬೇತಿ ಅಗತ್ಯ.

### ಎಲ್ಲರೂ ಕಲಿಯಬೇಕು

ಅಡುಗೆ ಕಲಿಕೆ ಪ್ರಕ್ರಿಯೆ ಹೆಣ್ಣುಮಕ್ಕಳಿಗೆ ಮಾತ್ರವೇ ಎನ್ನುವ ಭಾವ ಕೆಲ ಪೋಷಕರಲ್ಲಿದೆ. ಇದು ಮಕ್ಕಳಲ್ಲಿ ಲಿಂಗ ತಾರತಮ್ಯವನ್ನು ಸದ್ದಿಲ್ಲದೆ ಹುಟ್ಟುಹಾಕುತ್ತದೆ. ಕೆಲ ಮನೆಯಲ್ಲಿ ಗಂಡು ಮಕ್ಕಳು ಅಡುಗೆ ಮಾಡುತ್ತಿದ್ದಾರೆ ಎಂದರೆ ಅವರನ್ನು ಓರೆಗಣ್ಣಿನಿಂದ ನೋಡುವವರೇ ಹೆಚ್ಚು. ಆದರೆ, ಅಡುಗೆ ಕಲಿಕೆ ಪ್ರಕ್ರಿಯೆಯಲ್ಲಿ ಹೆಣ್ಣು- ಗಂಡು ಇಬ್ಬರನ್ನೂ ತೊಡಗಿಸಿಕೊಳ್ಳಬೇಕು. ಅಡುಗೆ ಕಲಿಕೆ ಪ್ರತಿಯೊಬ್ಬರಲ್ಲೂ ಸ್ವಾವಲಂಬನೆ ಬೆಳೆಸುತ್ತದೆ.

## ಅಡುಗೆ ಕಲಿಸುವ ಮುನ್ನ...

- ಮಕ್ಕಳು ಅಡುಗೆ ಮಾಡುವಾಗ ಪೋಷಕರ ನಿಗಾ ಕಡ್ಡಾಯ.
- ಹಣ್ಣು, ತರಕಾರಿ ಕತ್ತರಿಸುವಾಗ ಪೇಪರ್ ಕಟರ್ ಬಳಕೆ ಇರಲಿ, ಚಾಕು ಬಳಕೆ ಬೇಡ.
- ಗ್ಯಾಸ್, ಎಲೆಕ್ಟ್ರಾನಿಕ್ ಸ್ಟವ್, ಮಿಕ್ಸಿ, ಚಾಕುಗಳಿಂದ ಆಗುವ ಅಪಾಯದ ಬಗ್ಗೆ ಅರಿವು ಮೂಡಿಸಿ.
- 14 ರಿಂದ 15 ವರ್ಷದವರೆಗೆ ಗ್ಯಾಸ್, ಮಿಕ್ಸಿಯನ್ನು ಸ್ವಂತ ಬಳಕೆಗೆ ಬಿಡಬಾರದು.
- ಚಿಕ್ಕ ಮಕ್ಕಳನ್ನು ಸಲಾಡ್ ತಯಾರಿ, ತರಕಾರಿ ಸಿಪ್ಪೆ ಸುಲಿದುಕೊಡುವುದು ಈ ರೀತಿಯ ಸಹಾಯದಲ್ಲಿ ಬಳಸಿಕೊಳ್ಳಿ.
- ಪೋಷಕರು ಎದುರಿಗೆ ಇದ್ದಾಗ ಮಾತ್ರ ತರಕಾರಿ ಕತ್ತರಿಸಿ ಎಂದು ಮಕ್ಕಳಿಗೆ ತಿಳಿ ಹೇಳಿ.
- ಫೇಸ್‌ಬುಕ್, ಯೂಟ್ಯೂಬ್ ನೋಡಿ ಅಡುಗೆ ತಯಾರಿಗೆ ಪ್ರೋತ್ಸಾಹಿಸಬೇಡಿ.
- ಸೂಕ್ತ ತರಬೇತಿ ನಂತರವೇ ಅಡುಗೆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಿ.





# ಉಗುರಿನ ಅಂದಕೆ...

ಮನಸ್ವಿ

ಸೌಂದರ್ಯ

**ಉದ್ದನೆಯ,** ನೀಳವಾದ ಉಗುರು ಎಂದರೆ ಯಾವ ಹೆಣ್ಣುಮಕ್ಕಳು ಇಷ್ಟಪಡುವುದಿಲ್ಲ ಹೇಳಿ? ಚೆಂದದ ನುಣುಪಾದ ಉಗುರು ಬೆಳೆಸಿ ಅದಕ್ಕೆ ಬಣ್ಣದ ರಂಗು ನೀಡುವುದೆಂದರೆ ಹೆಣ್ಣುಮಕ್ಕಳಿಗೆ ಬಹಳ ಪ್ರೀತಿ. ಹೀಗೆ ಉದ್ದನೆಯ ಉಗುರು ಬಿಡುವುದು ಹಲವು ಹೆಣ್ಣುಮಕ್ಕಳ ಕನಸೂ ಹೌದು. ಆದರೆ ಎಲ್ಲರಿಗೂ ಇದು ಸಾಧ್ಯವಾಗುವುದಿಲ್ಲ. ಆದರೆ ಉಗುರು ಬೆಳೆಸುವುದು ಅಸಾಧ್ಯ ಎಂದೇನಲ್ಲ. ಕೆಲವೊಂದು ಸರಳವಿಧಾನದಿಂದ ಉಗುರಿನ ಆರೋಗ್ಯ ಕಾಪಾಡಿಕೊಂಡು ಸುಂದರವಾಗಿಸಿಟ್ಟುಕೊಳ್ಳುವ ಜೊತೆಗೆ ಸದೃಢವಾಗಿಸಿಕೊಳ್ಳಲೂ ಸಾಧ್ಯವಿದೆ. ಅದು ಹೇಗೆ? ಇಲ್ಲಿದೆ ಟಿಪ್ಸ್...

### ನಿಂಬೆರಸ

ನಿಂಬೆರಸದಲ್ಲಿರುವ ವಿಟಮಿನ್ ಸಿ ಅಂಶವು ಉಗುರಿನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದಕ್ಕೆ ನೀವು ಮಾಡಬೇಕಿರುವುದು ಇಷ್ಟೇ. ನಿಂಬೆಹಣ್ಣನ್ನು ಎರಡು ಭಾಗ ಮಾಡಿಕೊಂಡು ಕೈ ಹಾಗೂ ಕಾಲಿನ ಉಗುರಿನ ಮೇಲೆ ಚೆನ್ನಾಗಿ ಉಜ್ಜಬೇಕು, ನಂತರ ಬಿಸಿನೀರಿನಲ್ಲಿ ತೊಳೆದುಕೊಳ್ಳಬೇಕು. ಇದು ಉಗುರಿನ ಹೊಳಪು ಹೆಚ್ಚುವಂತೆ ಮಾಡಿ ಉಗುರನ್ನು ಸ್ವಚ್ಛಗೊಳಿಸಿ ಬ್ಯಾಕ್ಟೀರಿಯಾ ಮುಕ್ತಗೊಳಿಸುತ್ತದೆ.

### ತೆಂಗಿನೆಣ್ಣೆ

ತೆಂಗಿನೆಣ್ಣೆಯನ್ನು ಉಗುರು ಬೆಚ್ಚಗಾಗುವವರೆಗೆ ಬಿಸಿ ಮಾಡಿ. ಅದನ್ನು ಉಗುರುಗಳ ಮೇಲೆ ಮಸಾಜ್ ಮಾಡಬೇಕು. ತೆಂಗಿನೆಣ್ಣೆಯಲ್ಲಿ ವಿಟಮಿನ್ ಇ ಅಂಶವಿದೆ. ಅಲ್ಲದೇ ಆ್ಯಂಟಿಆಕ್ಸಿಡೆಂಟ್ ಅಂಶವೂ ಅಧಿಕವಿದ್ದು ಉಗುರಿನ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಪ್ರತಿದಿನ ಮಲಗುವ ಮೊದಲು ತೆಂಗಿನೆಣ್ಣೆಯಲ್ಲಿ ಉಗುರಿಗೆ ಮಸಾಜ್ ಮಾಡಿಕೊಳ್ಳಿ.

### ಆಲಿವ್ ಎಣ್ಣೆ

ಕೆಲವರಿಗೆ ಉಗುರಿನ ಬೆಳವಣಿಗೆಯಲ್ಲೇ ಸಮಸ್ಯೆ ಇರುತ್ತದೆ. ಒಬ್ಬರಿಗೆ ಉಗುರು ಬೇಗನೆ ತುಂಡಾಗುತ್ತದೆ. ಇನ್ನೂ ಕೆಲವರಿಗೆ ಸಿಪ್ಪೆ ಏಳುತ್ತಿರುತ್ತದೆ. ಇಂಥ ತೊಂದರೆ ಇರುವವರು ಉಗುರಿಗೆ ಆಲಿವ್ ಎಣ್ಣೆ ಚಿಕಿತ್ಸೆ ಮಾಡಬೇಕು. ಇದು ಉಗುರಿನ ಆಳದವರೆಗೆ ಇಳಿದು ಒಳಪದರವನ್ನು ತಲುಪುತ್ತದೆ. ಇದು ಉಗುರಿನ ಸುತ್ತಲಿನ ಚರ್ಮದ ಶುಷ್ಕತೆಯನ್ನು ನಿವಾರಿಸುತ್ತದೆ. ಅಲ್ಲದೇ ಸುಗಮ ರಕ್ತಸಂಚಾರಕ್ಕೂ ಅನುವು ಮಾಡಿಕೊಟ್ಟು ಉಗುರಿನ ಬೆಳವಣಿಗೆಗೆ ಸಹಕರಿಸುತ್ತದೆ. ಆಲಿವ್ ಎಣ್ಣೆಯನ್ನು ಕೊಂಚ ಬಿಸಿ ಮಾಡಿ ಉಗುರು ಹಾಗೂ ಉಗುರಿನ ಸುತ್ತಲೂ ಐದು ನಿಮಿಷಗಳ ಕಾಲ ಮಸಾಜ್ ಮಾಡಿಕೊಂಡು ಬೆಳಿಗ್ಗೆ ಬಿಸಿನೀರಿನಿಂದ ತೊಳೆಯಿರಿ.

### ನೇಲ್ ಆರ್ಟ್ ಹಾಗೂ ಉಗುರು ಬಣ್ಣ

ನೇಲ್ ಆರ್ಟ್ (ಉಗುರಿನ ಮೇಲೆ ಚಿತ್ತಾರ ಮೂಡಿಸಿಕೊಳ್ಳುವುದು), ಪ್ಲಾಸ್ಟಿಕ್ ಅಥವಾ ಆಕ್ರಿಲಿಕ್ ಉಗುರುಗಳನ್ನು ಹಚ್ಚಿಕೊಂಡು ಕೈಗಳ ಅಂದ ಹೆಚ್ಚಿಸಿಕೊಳ್ಳುವುದು ಇಂದಿನ ಟ್ರೆಂಡ್. ಆದರೆ ಇವು ಉಗುರಿನ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತವೆ. ಯಾವಾಗಲಾದರೂ ಒಮ್ಮೆ ಈ ರೀತಿ ಉಗುರಿನ ಸಿಂಗಾರ ಮಾಡಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಆದರೆ ನಿಯಮಿತವಾಗಿ ಮಾಡುವುದರಿಂದ ಉಗುರಿನ ಬೆಳವಣಿಗೆಗೆ ತೊಂದರೆ ಉಂಟಾಗಬಹುದು. ಉಗುರಿನ ಅಂದ ಹೆಚ್ಚಿಸುವ ಸಲುವಾಗಿ ಬಣ್ಣ ಹಚ್ಚಿಕೊಳ್ಳುವ ಮುನ್ನ ನೀವು ಹಚ್ಚುವ ಉಗುರಿನ ಬಣ್ಣದ ಗುಣಮಟ್ಟವನ್ನು ಪರಿಶೀಲಿಸಿ ಹಾಗೂ ನಿಮಗೆ ಯಾವುದಾದರೂ ಬಣ್ಣಗಳ ಅಲರ್ಜಿ ಇದ್ದರೆ, ಅದನ್ನು ಖಚಿತಪಡಿಸಿಕೊಂಡು ಮುಂದುವರಿಯಿರಿ.

### ಹಸಿರು ತರಕಾರಿ ಸೇವನೆ

ಸೊಪ್ಪು, ತರಕಾರಿ ಸೇವನೆ ಉಗುರಿನ ಬೆಳವಣಿಗೆ ಹಾಗೂ ಆರೋಗ್ಯಕ್ಕೆ ತುಂಬಾ ಸಹಕಾರಿ. ಅದರಲ್ಲೂ ಆಹಾರದಲ್ಲಿ ನಿಯಮಿತವಾಗಿ ಕೊತ್ತಂಬರಿ ಸೊಪ್ಪನ್ನು ಸೇವಿಸುವುದರಿಂದ ಉಗುರು ಸದೃಢವಾಗುತ್ತದೆ. ಜೊತೆಗೆ ಆಹಾರದಲ್ಲಿ ಹೆಚ್ಚು ಹೆಚ್ಚು ಸೊಪ್ಪು ಇರುವಂತೆ ನೋಡಿಕೊಳ್ಳಿ.

### ಜೇನುತುಪ್ಪ

ಜೇನುತುಪ್ಪದಲ್ಲಿ ಹಲವು ಬಗೆಯ ಬ್ಯಾಕ್ಟೀರಿಯಾ ಹಾಗೂ ಸೋಂಕು ನಿವಾರಣಾ ಅಂಶವಿದೆ. ಜೇನುತುಪ್ಪ ಹಾಗೂ ನಿಂಬೆರಸವನ್ನು ಮಿಶ್ರಣ ಮಾಡಿ ಉಗುರಿಗೆ ಹಚ್ಚಿ 15 ರಿಂದ 20 ನಿಮಿಷಗಳ ಕಾಲ ಬಿಡಬೇಕು. ನಂತರ ಅದನ್ನು ಬಿಸಿನೀರಿನಿಂದ ತೊಳೆಯಬೇಕು. ಹೀಗೆ ವಾರದಲ್ಲಿ 2 ಬಾರಿ ಮಾಡುವುದರಿಂದ ಉಗುರು ಸದೃಢವಾಗಿ ಬೆಳೆಯುತ್ತದೆ.



# ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ನಂತರವೂ ಮಕ್ಕಳಾಗುವುದೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **1. ನನಗೆ 30 ವರ್ಷ. 8 ವರ್ಷದ ಮಗಳಿದ್ದಾಳೆ. ಮತ್ತೆ ಮಕ್ಕಳು ಬೇಡವೆಂದು ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿದೆ. ಈಗ ಮಗು ಬೇಕು ಅನ್ನಿಸುತ್ತಿದೆ. ಈಗ ಏನು ಮಾಡಬಹುದು?**

**ಹೆಸರು,** ಊರು ಬೇಡ

ನೀವು ಯಾವ ವಿಧಾನದಿಂದ ಶಾಶ್ವತ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದೀರಿ ಎಂಬುದನ್ನು ಇಲ್ಲಿ ತಿಳಿಸಿಲ್ಲ. ನೀವೇನಾದರೂ ಲ್ಯಾಪ್ರೋಸ್ಕೋಪಿಕ್ ವಿಧಾನದಿಂದ ಶಸ್ತ್ರಚಿಕಿತ್ಸೆ ಮಾಡಿಕೊಂಡಿದ್ದರೆ, ಗರ್ಭನಾಳಕ್ಕೆ ಬ್ಯಾಂಡ್ ಹಾಕಿದ್ದಾಗ ಅಥವಾ ತೆರೆದ ಶಸ್ತ್ರಚಿಕಿತ್ಸೆಯಿಂದ ಗರ್ಭನಾಳವನ್ನು ಚಿಕ್ಕದಾಗಿ ಕತ್ತರಿಸಿದ್ದರೆ (ಮಿನಿಲ್ಯಾಪ್) ಅಂತಹ ಸಂದರ್ಭದಲ್ಲೂ ಸೂಕ್ಷ್ಮ ಶಸ್ತ್ರಚಿಕಿತ್ಸೆಯೊಂದಿಗೆ ಗರ್ಭನಾಳಗಳ ಮರುಜೋಡಣೆ (ರೀಕ್ಯಾನಲೈಸೇಷನ್) ಮಾಡಬಹುದು. ಹೀಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಕೆಲವರಲ್ಲಿ ಮತ್ತೆ ಮಗುವನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಶೇಕಡ ನೂರಕ್ಕೆ ನೂರರಷ್ಟು ಮಗು ಆಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಶೇ 30 ರಿಂದ 50 ರಷ್ಟು ಜನರಲ್ಲಿ ಮತ್ತೆ ಮಕ್ಕಳಾಗುವ ಸಾಧ್ಯತೆ ಇದೆ. ಯಶಸ್ಸಿನ ಪ್ರಮಾಣ ಬೇರೆ ಬೇರೆ ಅಂಶಗಳನ್ನು ಅವಲಂಬಿಸಿರುತ್ತದೆ. ನೀವು ತಜ್ಞರನ್ನು ಭೇಟಿ ಮಾಡಿ ಈ ಬಗ್ಗೆ ತಿಳಿದುಕೊಳ್ಳಿ. ನೀವು ಐವಿಎಫ್(ಪ್ರನಾಳ ಶಿಶು) ಮೊರೆಹೋಗಬಹುದು. ಪ್ರಯತ್ನಿಸಿ.

- **3. ನನಗೆ 28 ವರ್ಷ. ಹಿಂದೊಮ್ಮೆ 3 ತಿಂಗಳ ಗರ್ಭಿಣಿಯಾಗಿದ್ದಾಗ ಫಸ್ ಇನ್‌ಫೆಕ್ಷನ್ (ಕೀವು ಸೋಂಕು) ಆಗಿ ಮಗು ತೆಗೆಸಿದ್ದೆ. ಪುನಃ ಗರ್ಭಿಣಿಯಾದೆ. ಆಗಲೂ ಐದು ತಿಂಗಳಾಗಿದ್ದಾಗ ಮತ್ತೆ ಫಸ್ ಆಗಿ ಮಗು ತೆಗೆಸಬೇಕಾಯಿತು. ಆಗ ಡಾಕ್ಟರ್ ‘ಇದು ಮತ್ತೆ ಮತ್ತೆ ಬರುತ್ತಲೇ ಇರುತ್ತದೆ. ಡೆಲಿವರಿ ನಂತರ ಗ್ಲಾಂಡ್ ರಿಮೂವ್ (ಗ್ರಂಥಿಯನ್ನು ತೆಗೆಯುವುದು) ಮಾಡಬೇಕು. ಹೀಗೆ ಮಾಡುವುದರಿಂದ ಇದು ಮತ್ತೆ ಬರುವುದಿಲ್ಲ’ ಎಂದು ಹೇಳಿದ್ದರು. ಈಗ ನಾನು 5 ತಿಂಗಳು ಗರ್ಭಿಣಿಯಾಗಿದ್ದೇನೆ. ಮತ್ತೆ ಪಸ್ ಇನ್‌ಫೆಕ್ಷನ್ ಬಂದಿದೆ. ದಯವಿಟ್ಟು ಇದಕ್ಕೆ ಸರಿಯಾದ ಸಲಹೆ ಕೊಡಿ. ಡೆಲಿವರಿ ನಂತರವೂ ಇದು ಇರುತ್ತದೆಯೇ? ಇದರಿಂದ ಮಗುವಿಗೆ ಯಾವುದೇ ರೀತಿಯ ತೊಂದರೆ ಅಲ್ಲವೇ? ಪಸ್ ಇನ್‌ಫೆಕ್ಷನ್ ತಡೆಯುವುದು ಹೇಗೆ ತಿಳಿಸಿ.**

**ಹೆಸರು,** ಊರು ತಿಳಿಸಿಲ್ಲ

ನಿಮಗಾಗಿರುವುದು ಬಾರ್ಥೋಲಿನ್ ಗ್ರಂಥಿಯ ಸೋಂಕಷ್ಟೇ. ಬಾರ್ಥೋಲಿನ್ ಗ್ರಂಥಿ ಎಲ್ಲಾ ಮಹಿಳೆಯರಲ್ಲೂ ಯೋನಿ ದ್ವಾರದ ಎರಡೂ ಕಡೆಗೂ ಇರುತ್ತದೆ. ಯೋನಿಯ ಒಳದುಟಿ ಹಾಗೂ ಯೋನಿಪಟಲ ಸಂಧಿಸುವ ಜಾಗದಲ್ಲಿ ಸಣ್ಣ ನಳಿಕೆಯ ಮುಖಾಂತರ ಅವುಗಳ ಗ್ರಂಥಿ ರಸವು ಸ್ರವಿಸಲ್ಪಟ್ಟು ಯೋನಿ ಮಾರ್ಗವನ್ನು ತೇವವಾಗಿಡಲು ಸಹಾಯ ಮಾಡುತ್ತದೆ. ಈ ಗ್ರಂಥಿಯು ಇಕೊಲೈ ಅಥವಾ ಕ್ಲೆಮೀಡಿಯಾ, ಗೊನೋರಿಯಾ ನಂತಹ ಕ್ರಿಮಿಗಳ ಸೋಂಕಿನಿಂದ ಬರುತ್ತದೆ. ನಿಮಗೂ ಹೀಗೆ ಆಗಿರುವ ಸಾಧ್ಯತೆ ಇದೆ. ನೀವು ಗರ್ಭಿಣಿಯಾಗಿರುವುದರಿಂದ ವೈದ್ಯರ ಸಲಹೆ ಮೇರೆಗೆ ನಿಮಗೆ ಸುರಕ್ಷಿತವೆನಿಸುವ ಆ್ಯಂಟಿಬಯಾಟಿಕ್ ಮಾತ್ರೆಗಳನ್ನು ಸೇವಿಸಿ. ದಿನಕ್ಕೆ ಎರಡು ಮೂರು ಬಾರಿ ಸಿಟ್ಸ್‌ಬಾತ್ ತೆಗೆದುಕೊಳ್ಳಿ. (ಬೆಚ್ಚಗಿನ ನೀರು ತುಂಬಿದ ಟಬ್‌ನಲ್ಲಿ 10 ರಿಂದ 15 ನಿಮಿಷ ಕುಳಿತುಕೊಳ್ಳುವುದು. ನೀರಿಗೆ ಸ್ವಲ್ಪ ಉಪ್ಪು ಅಥವಾ ಆ್ಯಂಟಿಬಯಾಟಿಕ್ ದ್ರಾವಣಗಳನ್ನು ಹಾಕಬಹುದು) ಹಲವು ಬಾರಿ ಇದನ್ನು ಮಾಡಿದರೆ ನಿಮ್ಮ ಸಮಸ್ಯೆ ಕಡಿಮೆಯಾಗುತ್ತದೆ. ಕೀವು ಹೊರಹೋದರೆ ಅಥವಾ ಕೀವನ್ನು ತೆಗೆದರೆ ಬೇಗನೆ ಸಮಸ್ಯೆ ಕಡಿಮೆಯಾಗುತ್ತದೆ. ಅದು ಬರೀ ಗುಳ್ಳೆಯ ತರಹ ಆಗಿದ್ದರೆ ಅದನ್ನು ಹೆರಿಗೆ ನಂತರ ಮಾರ್‌ಸುಪಲೈಸೇಷನ್ ಎನ್ನುವ ಚಿಕ್ಕ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಬಹುದು. ಅಪರೂಪಕ್ಕೆ ಈ ಚಿಕಿತ್ಸೆ ಸರಿ ಹೋಗದಿದ್ದಾಗ ಆ ಗ್ರಂಥಿಯನ್ನೇ ತೆಗೆದು ಹಾಕಬೇಕಾಗುತ್ತದೆ. ನೀವು ಈಗ ಗರ್ಭಿಣಿ ಆದ್ದರಿಂದ ಈ ಬಗ್ಗೆ ತುಂಬಾ ಯೋಚಿಸದೇ ಸಾಕಷ್ಟು ಕಾಳಜಿಯಿಂದಿದ್ದು ಮಗು ಪಡೆದ ಮೇಲೆ ಚಿಕಿತ್ಸೆ ಪಡೆದುಕೊಳ್ಳಿ. ಇದರಿಂದ ಮಗುವಿಗೆ ಯಾವುದೇ ರೀತಿಯ ಸಮಸ್ಯೆಯಾಗುವುದಿಲ್ಲ. ಚಿಂತಿಸಬೇಡಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

# ಜಿಡ್ಡು ರಹಿತ ತಿನಿಸುಗಳು

ಕೆ.ವಿ.ರಾಜಲಕ್ಷ್ಮಿ

ನಳಪಾಕ

**ಪರೀಕ್ಷೆಗಳೆಲ್ಲ** ಮುಗಿಯುತ್ತಿವೆ. ಒಂದೆರಡು ದಿನಗಳಲ್ಲೇ ಬೇಸಿಗೆ ರಜೆ ಆರಂಭವಾಗುತ್ತದೆ. ಮಕ್ಕಳು ಪಾಠಕ್ಕೆ ರಜೆ ಹೇಳಿ, ಆಟಕ್ಕಾಗಿ ಮೈದಾನಕ್ಕಿಳಿಯುತ್ತಾರೆ. ಆಟವಾಡಿ ದಣಿದು ಬಂದು, ‘ಅಮ್ಮಾ, ಹಸಿವು. ಏನಾದ್ರು ತಿನ್ನಲು ಕೊಡು’ ಎಂದು ದುಂಬಾಲು ಬೀಳುತ್ತಾರೆ. ಆಗ ತಕ್ಷಣಕ್ಕೆ ಏನು ಮಾಡಿಕೊಡಬೇಕೆಂಬ ಚಿಂತೆ ಶುರುವಾಗುತ್ತದೆ ಅಲ್ಲವಾ? ಅದರಲ್ಲೂ ಬೇಸಿಗೆ ಕಾಲದಲ್ಲಿ, ಏನೇನೋ ತಿಂಡಿ ಮಾಡಿಕೊಟ್ಟರೆ, ಆರೋಗ್ಯಕ್ಕೆ ತೊಂದರೆಯಾಗಬಹುದು ಎಂಬ ಹೆದರಿಕೆಯೂ ಮನಸ್ಸಲ್ಲಿರುತ್ತದೆ, ಹೌದಲ್ಲವಾ?

ಚಿಂತಿಸಬೇಡಿ. ಬೇಸಿಗೆಗೆ ಹಿತವಾಗಿ, ಸುಲಭವಾಗಿ ತಯಾರಿಸಬಹುದಾದ, ಜಿಡ್ಡು ರಹಿತ ರುಚಿಕರ ತಿನಿಸುಗಳನ್ನು ತಯಾರಿಸಿ, ಮಕ್ಕಳಿಗೆ ಕೊಡಿ. ಅರೆ, ಅಂತ ತಿನಿಸುಗಳು ಯಾವುದಿದೆ ಅಂತ ಕೇಳ್ತೀರಾ? ಇಲ್ಲಿವೆ ನೋಡಿ, ಜಿಡ್ಡು ರಹಿತ ತಿನಿಸುಗಳ ರೆಸಿಪಿ..



## ಗುಲ್ಕನ್ ಸಲಾಡ್

**ಬೇಕಾಗುವ ಸಾಮಗ್ರಿಗಳು:** ಸುಲಿದ ಚುಕ್ಕಿ ಬಾಳೆಹಣ್ಣು – 1, ಸೇಬು – 1 , ಒಣದ್ರಾಕ್ಷಿ, ಗೋಡಂಬಿ, ಅಂಜೂರದ ತುಂಡುಗಳು ತಲಾ 15 ರಿಂದ 20, ಗುಲ್ಕನ್ – 2 ಚಮಚ.

**ತಯಾರಿಸುವ ವಿಧಾನ:** ಬಾಳೆ, ಸೇಬುಗಳನ್ನು ಸಣ್ಣಗೆ ಹೆಚ್ಚಿಕೊಂಡು, ಒಣಹಣ್ಣುಗಳೊಂದಿಗೆ ಸೇರಿಸಿ ನಂತರ ಗುಲ್ಕನ್ ಹಾಕಿ ಚೆನ್ನಾಗಿ ಬೆರೆಸಿ. ಗುಲ್ಕನ್ ಸಲಾಡ್ ಸಿದ್ಧ.

## ಬನ್ ಡ್ರೈ ಚಾಟ್

**ಬೇಕಾಗುವ ಸಾಮಗ್ರಿಗಳು:** ಸಿಹಿ ಬನ್ – 2, ಸಣ್ಣಗೆ ಹೆಚ್ಚಿದ ಈರುಳ್ಳಿ, ಟೊಮೆಟೊ – ತಲಾ 1/4 ಕಪ್, ಕೊತ್ತಂಬರಿ ಸೊಪ್ಪು – ಸ್ವಲ್ಪ, ಬೂಂದಿ ಕಾಳು(ಬೇಕಾದರೆ ಬಳಸಿ), ಕಾಳು ಮೆಣಸಿನಪುಡಿ – ಚಿಟಿಕೆ, ಜೀರಿಗೆ ಪುಡಿ, ರುಚಿಗೆ ತಕ್ಕಷ್ಟು ಉಪ್ಪು

**ತಯಾರಿಸುವ ವಿಧಾನ:** ಬನ್‌ನ ಹೊರಪದರ ತೆಗೆದು ಉಳಿದದ್ದನ್ನು ಕೈಯಲ್ಲಿ ಪುಡಿ ಮಾಡಿಕೊಳ್ಳಿ. ಇದಕ್ಕೆ ಮೇಲೆ ಕಾಣಿಸಿದ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈಗ ಬನ್ ಡ್ರೈ ಚಾಟ್ ತಿನ್ನಲು ಸಿದ್ಧ. ಒಂದು ಕಿವಿಮಾತು, ಈ ಚಾಟ್ ತಾಜಾವಾಗಿದ್ದಾಗ ಸೇವಿಸಿದರೆ ಹೆಚ್ಚು ರುಚಿ.





## ಹೆಸರುಕಾಳು, ನೆಲ್ಲಿ ಚಾಟ್

**ಬೇಕಾಗುವ ಸಾಮಗ್ರಿಗಳು:** ಮೊಳಕೆ ಹೆಸರುಕಾಳು – 1 ಕಪ್, ಡೆಲ್ಲಿ ಕ್ಯಾರೆಟ್ ತುರಿ – 1/2 ಕಪ್, ಸಣ್ಣಗೆ ಹೆಚ್ಚಿದ ಈರುಳ್ಳಿ – 1/4 ಕಪ್, 2 ಬೆಟ್ಟದನೆಲ್ಲಿ ಕಾಯಿ ತುರಿ, ಚಾಟ್ ಮಸಾಲ, ಉಪ್ಪು.

**ತಯಾರಿಸುವ ವಿಧಾನ:** ಮಿಕ್ಸಿಂಗ್ ಬೌಲ್‌ನಲ್ಲಿ ಮೇಲೆ ಹೇಳಿದ ಎಲ್ಲ ಪದಾರ್ಥಗಳನ್ನು ಹಾಕಿ. ರುಚಿಗೆ ತಕ್ಕಷ್ಟು ಚಾಟ್ ಮಸಾಲಪುಡಿ ಮತ್ತು ಉಪ್ಪು ಸೇರಿಸಿ. ಚೆನ್ನಾಗಿ ಮಿಶ್ರಣ ಮಾಡಿ. (ಡೆಲ್ಲಿ ಕ್ಯಾರೆಟ್ ಕೆಂಪು ಬಣ್ಣ ಹೊಂದಿದ್ದು, ಮಾಮೂಲಿ ಕ್ಯಾರೆಟ್‌ಗಿಂತ ತೆಳ್ಳಗೆ, ಹೆಚ್ಚು ನೀರಿನಂಶ ಉಳ್ಳದ್ದು). ಈಗ ಹೆಸರುಕಾಳು – ನೆಲ್ಲಿ ಚಾಟ್ ಸವಿಯಲು ಸಿದ್ಧ. ಬೆಟ್ಟದ ನೆಲ್ಲಿಯಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸುವ ಗುಣವಿದೆ. ಮೊಳಕೆ ಬಂದ ಹೆಸರು ಕಾಳು, ಕ್ಯಾರೆಟ್ ಇವೆರಡರಲ್ಲೂ ಪ್ರೊಟೀನ್, ವಿಟಮಿನ್ ಇರುತ್ತದೆ. ಹಾಗಾಗಿ ಈ ಚಾಟ್, ಆರೋಗ್ಯಕ್ಕೆ ಬೊಂಬಾಟ್.